
ಪದ ಪೀಳಿಗೆ

ಅಚ್ಚಿನಲ್ಲಿರುವ ಪ್ರಕಾಶನ:

ದಿಕ್ಕಿಲ್ಲದಿರುವ ಹೆಣ್ಣಿನ ಸುತ್ತಲೂ
ನಾಲ್ಕುಗೋಡೆಗಳ ನಡುವೆ, ಸ್ವಾರ್ಥಸಾಧಕರ
ನೀಚಲಾಲಸೆಯ ಜ್ವಾಲಾವರ್ತುಲದಲ್ಲಿ
— ಬಲಿಯಾದಳು —

ತಬ್ಬಲಿ

ಕಾದಂಬರಿಕಾರ:

ಹೆಚ್. ಕೆ. ವಿಜಯನಾರಸಿಂಹ.

A B Krishna Raja
15 · 4 · 53

ಪಾಪದ ಪೀಳಿಗೆ

ಸಾಮಾಜಿಕ ಕಾದಂಬರಿ

ಸ್ವಾಮಿ, ಮಹಾಮನೆ.

[redacted] ಪ್ರಕಾಶನ
535, ನೆಹರುನಗರ
[redacted]ಗಳೂರು — ೩.

ಮೊದಲನೆಯ ಮುದ್ರಣ 1954

ಮುಖಚಿತ್ರ ರಚನೆ: ಎಸ್. ಆರ್. ಸ್ವಾಮಿ.

ಪಡಿಯಚ್ಚು, ಷಣ್ಮುಗಂ ಪ್ರೊಸೆಸ್ ಸ್ಟುಡಿಯೊ

ಬೆಲೆ: ಹನ್ನೆರಡು ಆಣೆ

ಮುದ್ರಕರು:

ಕಳಾನಿಧಿ ಪ್ರೆಸ್, ಚಿಕ್ಕಪೇಟೆ, ಬೆಂಗಳೂರು ಸಿಟಿ

Proprietors :—

GOLDEN GLORY &

535, NEHRU NA

ನಮಸ್ಕಾರ

ಶ್ರೀ. ಕ. ಮ. ವೀರಭದ್ರಸ್ವಾಮಿ, ಬಿ.ಎಸ್‌ಸಿ. ಯವರು ರಚಿಸಿರುವ “ಪಾಪದ ಪೀಳಿಗೆ” ನಮ್ಮ ಮೂರನೆಯ ಪ್ರಕಾಶನ. ಕೆಲವು ನಾಟಕಗಳನ್ನು ರಚಿಸಿ ಚಿರಪರಿಚಿತರಾಗಿರುವ, ಚಿತ್ರವಾಣಿ ಪ್ರಕಾಶನದವರು ಪ್ರಕಟಿಸಿರುವ ಇವರ ಪ್ರವಾಸ ಕಾದಂಬರಿ “ಮೋಹಿನಿ ಸಾಮ್ರಾಜ್ಯ ಮೊದಲನೆಯದು.” ಇದು ಎರಡನೆಯ ಕಾದಂಬರಿ. ಇದರಲ್ಲಿ ಬರುವ ಒಂದೊಂದು ಪಾತ್ರವೂ ಒಂದೊಂದು ಪಾಪದ ಪೀಳಿಗೆಯ ಬೀಜಗಳು. ಒಂದೊಂದು ಸನ್ನಿವೇಶವೂ ಭೀಷಣ. ಸಮಾಜ ಆದರಲ್ಲಿಯೂ ಗ್ರಾಮವೊಂದರಲ್ಲಿ ಹೀಗೂ ಉಂಟೇ ಎಂದು ವಾಚಕರೂಹಿಸಬಹುದು. ಆದರೆ! ಹೀಗೂ ಉಂಟು. ಹೀಗಾಗಬಾರದು ನಮ್ಮ ಸಮಾಜ.! ಇಂಥ ಪಾಪದಪೀಳಿಗೆ ಆಗಬಾರದು ಎಂದು ಎಚ್ಚರಿಕೆಯನ್ನು ಕೊಡುವ ಉದ್ದೇಶವೇ ನಮ್ಮ ಈ ಕಾದಂಬರಿ.

ಇದನ್ನು ಯಾರಿಗೂ ಹೋಲಿಸಿ ಬರೆದುದಲ್ಲ. ಹಾಗೂ ಹೋಲಿದ್ದರೆ, ಅದಕ್ಕೆ ನಾವು ಹೊಣೆಯಲ್ಲ.

ಇದೊಂದು ಗ್ರಾಮ ಕಥೆ, ಇದರಲ್ಲಿ ಬರುವ ಶಬ್ದಗಳೂ ಸ್ವಲ್ಪ ಗ್ರಾಮ್ಯ. ಅದನ್ನು ಉಪಯೋಗಿಸದೆ ಸಾಧ್ಯವಿಲ್ಲ. ಪ್ರಕೃತ ಕಾದಂಬರಿಯು ನಮ್ಮ ಪ್ರಥಮ ಸಾಮಾಜಿಕ ಕಾದಂಬರಿ.

ಅಂದವಾಗಿ ಅಚ್ಚು ಮಾಡಿ ಕೊಟ್ಟ ಕಳಾನಿಧಿ ಮುದ್ರಣಾಲಯದವರಿಗೆ ನಮ್ಮ ನೆನಕೆ ಸಲ್ಲುತ್ತದೆ ಮತ್ತು ನಮ್ಮ ಪ್ರಕಾಶನಗಳಲ್ಲಿ ನೆರವಾಗಿರುವ ಎಲ್ಲ ಸ್ನೇಹಿತರಿಗೂ ನಮ್ಮ ಕೃತಜ್ಞತೆ.

ಪ್ರಕಾಶಕರು,

ಮೂರ್ತಿ, ಪ್ರಭಾಕರ್.

ಮರವು–ಅರಿವು

"ಒಂದು ಹುಸಿಯ ನುಡಿಯಲಾಗಿ ಮರ್ತ್ಯದಲ್ಲಿ ಹುಟ್ಟಬೇಕಾಯಿತು ನೋಡಾ" ಹುಟ್ಟಿದ ಮಗುವನ್ನು 'ಪಾಪ' ವೆನ್ನುತ್ತೇವೆ. ಪುಣ್ಯವೆನ್ನುವುದಿಲ್ಲ, ತಂದೆಯೂ ತನ್ನ ಪಾಪ ಅನ್ನುತ್ತಾನೆ, ತಾಯಿಯೂ ತನ್ನ ಪಾಪವೆಂದು ಹೇಳುತ್ತಾಳೆ. ಕಂಡಕಂಡವರೆಲ್ಲ ಅದನ್ನು ಪಾಪವೆಂದು ಕರೆಯುತ್ತಾರೆ. ಅಮೃತಾತ್ಮನು ಅರಿವಿನ ಕಪ್ಪುರದಿಂದ ಮರೆವೆಯ ಈ ಧರೆಗೆ ತಲೆಕೆಳಗಾಗಿ ಪಾಪವಾಗಿ ಬಂದು ಬೀಳುತ್ತಾನೆ. ಇಲ್ಲಿ ಸತ್ಯವೇ ಮಿಥ್ಯವಾಗಿ, ಮಿಥ್ಯವೇ ಸತ್ಯವಾಗಿ, ಧರ್ಮವೇ ಅಧರ್ಮವಾಗಿ, ಅಧರ್ಮವೇ ಧರ್ಮವಾಗಿ ಕಾಣುತ್ತದೆ ಅವನಿಗೆ ಅಂಧಕಾರವು ಅವನನ್ನು ಆವರಿಸಿ ಅಜ್ಞಾನಿಯನ್ನಾಗಿ ಮಾಡುತ್ತಿರುತ್ತದೆ. ಮಾಯೆಯೂ ಬಂದಿಸಲೆಳಸುತ್ತದೆ. ಮುಂದಕ್ಕೆ ದಾರಿಯೇ ಕಾಣದಂತಾಗುತ್ತದೆ. ಇಷ್ಟೆಲ್ಲ ಆದರೂ ಪಾಪವಾಗಿ ಭೂಮಿಗೆ ಬಿದ್ದವನು, ಸುಜ್ಞಾನಿಯಾಗಿ ಸತ್ಯಾಸತ್ಯಗಳನ್ನು, ಧರ್ಮಾಧರ್ಮಗಳನ್ನು ಕಂಡುಕೊಂಡು ಸನ್ಮಾರ್ಗದಲ್ಲಿ ಸಾಗಬಹುದು, ಅರಿವಿನ ಕಪ್ಪುರವನೇರಬಹುದು.

ನಾವು **"ಮರೆತ ಮಾನವರಾಗಬಾರದು, ಅರಿತ ಶರಣರಾಗಬೇಕು."** ಸಮಾಜದಲ್ಲಿ ಧರ್ಮಸಂತಾನವಾಗಬೇಕು. ನಮ್ಮದು 'ಪಾಪದ ಪೀಳಿಗೆ' ಆಗಬಾರದು, 'ಶನಿಸಂತಾನ' ಆಗಬಾರದು. 'ಧರ್ಮ ಸಂತಾನವೇ' ಆಗಬೇಕು ಅಂಥ ಪವಿತ್ರವಾದ ಉದ್ದೇಶಕ್ಕೇ ಈ ಸತ್ಯದ ಕೃತಿಯು ನೆರವಾಗಲೆಂಬುದೇ ಕೃತಿಕರ್ತನ ಆಶಯವಾಗಿದೆ. ಪುಸ್ತಕವನ್ನು ಅಂದವಾಗಿ ಪ್ರಚುರಪಡಿಸಿರುವ ಸುವರ್ಣಪ್ರಕಾಶನದವರಿಗೆ ಅಭಾರಿ ನಾನು.

ಕೆ. ಮ. ವೀರಭದ್ರಸ್ವಾಮಿ, ಬಿ.ಎಸ್‌ಸಿ.
ಕೃತಿಕರ್ತ

೧೦—೬—೧೯೫೪
ಮೈಸೂರು

೧

ಸೂರ್ಯನು ಮುಳುಗುತ್ತಾ ಇದ್ದಾನೆ. ಹುಲ್ಲೆಕಟ್ಟೆ ಬೋರೆಯಲ್ಲಿ ಇಬ್ಬರು ಸೈಕಲ್ಲಿನಿಂದ ಕೆಳಗೆ ಇಳಿದರು. ಕಾರಣ ಒಬ್ಬನ ಸೈಕಲ್ಲು ಚೈನು ಕಳಚಿಕೊಂಡಿತು. ಇನ್ನೊಬ್ಬ ತನ್ನ ಸೈಕಲ್ಲನ್ನು ಕೆಳಗಡೆ ಮಲಗಿಸಿ ಇನ್ನೊಂದು ಸೈಕಲ್ಲನ್ನು ಹಿಡಿದುಕೊಳ್ಳಲು, ಆ ಸೈಕಲ್ಲಿನವರು ಕುಕ್ಕರಗಾಲಿನಲ್ಲಿ ಕುಳಿತು ಸೈಕಲ್ಲು ಚೈನು ಹಾಕಿ ಮೇಲೆದ್ದು ಸೈಕಲ್ಲು ಕೈಗೆ ತೆಗೆದುಕೊಂಡ. ಸೈಕಲ್ಲು ಹಿಡಿದುಕೊಂಡಿದ್ದವನು ಕೈ ಬಿಟ್ಟು ಯಡಗೈಯನ್ನು ಜೇಬಿಗೆ ಹಾಕಿ ಬೀಡಿ ಕಟ್ಟು, ಕಡ್ಡಿ ಪೆಟ್ಟಿಗೆ ಹೊರಕ್ಕೆ ತೆಗೆದುಕೊಂಡು. ಬಾಯಿಗೆ ಒಂದು ಬೀಡಿ ಸಿಕ್ಕಿಸಿಕೊಂಡು, ಇನ್ನೊಬ್ಬನಿಗೊಂದು ಕೊಟ್ಟು, ಬೀಡಿ ಕಟ್ಟನ್ನು ಜೇಬಿಗೆ ಹಾಕಿಕೊಂಡ. ಎಡಗೈಲಿದ್ದ ಕಡ್ಡಿಪೆಟ್ಟಿಗೆಯಿಂದ ಕಡ್ಡಿ ತೆಗೆದುಕೊಂಡು ಗೀರಿ ತನ್ನ ಬೀಡಿಯನ್ನೂ ಹತ್ತಿಸಿಕೊಂಡು, ಇನ್ನೊಬ್ಬನ ಬಾಯಲ್ಲಿದ್ದ ಬೀಡಿಯನ್ನೂ ಹತ್ತಿಸಿ, ಕಡ್ಡಿ ಕೆಡಿಸಿ ಬಿಸಾಡಿದ. ಕಡ್ಡಿಪೆಟ್ಟಿಗೆಯನ್ನು ಜೋಬಿಗೆ ಹಾಕಿದ. ಇನ್ನೊಬ್ಬ ಒಂದು ಸಲ ಸೇದಿ ಹೊಗೆ ಬಿಡುತ್ತ,

"ಅಣ್ಣಾ, ವಿಚಾರ ಕೇಳ್ದ" ಅಂದ.

"ಏನು ವಿಚಾರಾನಪ್ಪ ಅದು, ಕೇಳ್ದಾಂತ ನೀ ಕೇಳೋದು"

"ಬೆಂಗಳೂರು ಮಾದಪ್ಪನ ಮಗಳು ಬಸರಿ ಅಂತೆ."

ಇದನ್ನು ಕೇಳಿದನೋ ಇಲ್ಲವೋ! ಬಾಯಿಗಿಡುವುದಕ್ಕೆ ಹೋಗಿದ್ದ ಬೀಡೀನ ಹಾಗೆ ಕೆಳಕ್ಕೆ ಬಿಟ್ಟು ಬಿಟ್ಟ. ಬೆಪ್ಪಾಗಿ ನಿಂತುಬಿಟ್ಟ.

ಇನ್ನೊಬ್ಬ ಬಾಯಲ್ಲಿ ಬೀಡಿಕಚ್ಚಿಕೊಂಡು ಸೇದುತ್ತಾ "ಮಾದಪ್ಪನ ಮಗಳು ಬಸರಿ ಅಂತ ಹೇಳದ್ರೆ ನೀನ್ಯಾತಕ್ಕಣ್ಣಾ ಹಿಂಗೆನಿಂತುಬಿಟ್ಟೆ

"ಅದಕ್ಕಲ್ಲಾ ಕಣಯ್ಯ"

"ಇನ್ಯಾತಕ್ಕೆ ಮತ್ತೆ?"

"ನನ್ನ ಮಗ ಮಲೀಕೊಳೋಕೆ ಅಲ್ಲೀಗೆ ಹೋಯ್ತಿದ್ದ....ಅದ ಕ್ಸಲಾಗಿ"

"ಉಪ್ಪುತಿಂದವನು ನೀರು ಕುಡೀತಾನೆ....ನನಗೂ ನಿನಗೂ ಏನು.........ನಡಿ ಹೋಗೋಣ"

"ಇದೇನು ನಿಜವಾ ನೀ ಹೆಳೋದು?"

"ಇಲ್ಲ ಸುಳ್ಳು ....ಊರುಊರೇ ಕೂಗ್ತಾ ಕೂತದೆ. ನನ್ನನ್ನ ಕೇಳ್ತೀಯಲ್ಲಾ ನೀನು ನಿಜನಾಂತ ಹ್ಯಾಗದೆ!"

"ಹ್ಯಾಗಾದರೂ ಮಾಡಿ ಇದನ್ನ ಹಾಗಾಗೆ ಸರಿಮಾಡಿ ಬಿಡಬೇಕುಕಾಣಯ್ಯ. ಅಲ್ದೇನೆ ಹೋದರೆ ಯಾರ ಯಾರ ತಲೆ ಹೊರಟು ಹೋಗುತ್ತೊ.....ಅಲ್ಲಾ ನಾ ಹೇಳೋದು,ನಿಜ ಅಲ್ವಾ...... ಹೇಳು ? ಸ್ವಲ್ಪದರಲ್ಲೆ ಮುಚ್ಕೊಳ್ದಿ ,ಪರ್ವತವಾಗಿಬಂದು ಮೇಲದೀ ಕೊಳ್ಳುವಾಗ ಏನು ಮಾಡೋಕಾಗುತ್ತೆ ?"

"ಆಮೇಲೆ ಮಾಡೋದೇನು,ಬಾಯಿ ಬಡಕೊಳ್ಳೋದು........... ನಡಿ..........ಸೈಕಲ್ ತಕೊ.......... ಹೋಗೋಣ."ಹೀಗಂದುಸೈಕಲ್ ಕೈಗೆ ತೆಗೆದುಕೊಂಡ. ಇನ್ನೊಬ್ಬ : "ನಾಲಕ್ಕು ಕಾಸು ಖರ್ಚಾ ದರೂ ಪರವಾಗಿಲ್ಲ, ಹ್ಯಾಗಾದರೂ ಇದರಿಂದ ಪಾರು ಮಾಡಿಸಿ ಬಿಡಪ್ಪ ನೀನು......... ನನಗೆ ಇದೆಲ್ಲಾ ತಿಳಿಯೋದಿಲ್ಲ.........ನಿನ್ನ ಮಗನಾಗ್ತೀನಿ" ಹೀಗಂದು ಅನದೂ ಸೈಕಲ್ ತೆಗೆದುಕ್ಕೊಂಡ"

"ಇರಲಿ ಸೈಕಲ್ ಹತ್ತು ....ಊರಿಗೆ ಹೋಗೋಣ ಮೊದಲು"

ಇಬ್ಬರೂ ಸೈಕಲ್ ಹತ್ತಿಕೊಂಡು ಇಳಿಮೋಡಿ(ಇಳಿಜಾರು)ನಲ್ಲಿ ಸರಾಗವಾಗಿ ಹೊರಟರು.

೧

ಊರಿನಿಂದ ನೈರುತ್ಯ ದಿಕ್ಕಿಗೆ ಸ್ವಲ್ಪ ಹೊರಕ್ಕಾದಂತೆ ಮೂರು ದೊಡ್ಡ ಮನೆಗಳಿವೆ. ಒಂದು ಚಿಕ್ಕ ಜುಂಜಪ್ಪನವರದು, ಅದರ ಎಡಕ್ಕೆ ಬೆಂಗಳೂರು ಮಾದಪ್ಪನ ಮನೆ. ಎರಡಕ್ಕೂ ಉತ್ತರಕ್ಕೆ ಬಾಗಿಲು. ಜುಂಜಪ್ಪನವರ ಮನೆ ಎದುರಿಗೆ ಗುಳುಗಟ್ಟದ ಅಮ್ಮನ ಮನೆ. ಬೆಂಗಳೂರು ಮಾದಪ್ಪನ ಮನೆ ಎದುರಿಗೆ ಏನಿಲ್ಲ. ಮಾದಪ್ಪನವರ ಮನೇಗೂ ಜುಂಜಪ್ಪನವರ ಮನೇಗೂ ಮಧ್ಯೆ ಸಣ್ಣ ಓಣಿ. ಓಣೀ [illegible]ದಂತೆ ಎರಡು ಮನೆಗೂ ಅನುಸರಿಸಿಕೊಂಡು ರಸ್ತೆ ಮಗ್ಗುಲಿಗೆ ರಾಟೆ ಬಾವಿ.

ಚಿಕ್ಕೀರಪ್ಪನವರು’ ಚಿಕ್ಕ ಜುಂಜಪ್ಪನವರೂ ಅಣ್ಣತಮ್ಮಂದಿರು. ಚಿಕ್ಕವೀರಪ್ಪನವರ ಹೆಂಡತಿ ಗುಳಗಟ್ಟದವಳು. ಆಕೆ ತಂದೆಗೆ ಒಬ್ಬಳೇ ಮಗಳು. ತಕ್ಕಮಟ್ಟಿನ ಅನುಕೂಲ ಸ್ಥಿತಿ ಇತ್ತು ಅವರಿಗೆ. ಸರಿ, ಚಿಕ್ಕೀರಪ್ಪನವರು ಹುಟ್ಟಿದ ಊರಿನಲ್ಲಿ ತಮ್ಮ ಭಾಗಕ್ಕೆ ಬಂದಿದ್ದ ಪಿತ್ರಾರ್ಜಿತ ಆಸ್ತಿ ಪಾಸ್ತಿಯನ್ನೆಲ್ಲಾ ಮಾರಿಕೊಂಡು, ಕೈಗೆ ಕಾಸು ಮಾಡಿಕೊಂಡು ಹೆಂಡತಿಮನೆ ಸೇರಿಕೊಂಡರು. ಸರಗೂರಿನಲ್ಲಿ ಒಂದು ಬೀದಿಗೆ ಬೀದೀನೇ ಇವರಾಗಿದ್ದರು. ಅಂದರೆ ಅಷ್ಟು ದೊಡ್ಡ ಮನೆತನ ಅವರದು. ಜಮೀನುದಾರರು. ಜೊತೆಗೆ ವರ್ತಕರು, ಶಕ್ತರೂ ಆಗಿದ್ದರು.

ಆ ಬೀದೀನ ‘ತೊಟ್ಟಿ ಬೀದಿ’ ಅನ್ನುತಿದ್ದರು. ಈವತ್ತೂ ಹಾಗೇ ಅನ್ನುತಾರೆ. ಅಲ್ಲಿದ್ದ ಮನೆಗಳೆಲ್ಲಾ ತೊಟ್ಟೀ ಮನೆಗಳು. ಬರ

ಬರುತ್ತಾ ಸತ್ರೂ, ಕೆಟ್ರೂ ಹೋದರು....ಊರುಬಿಟ್ಟು ಬೇರೆ ಊರಿಗೆ ಹೋಗಿಸೇರಿಕೊಂಡವರುಕೆಲವರು.ಕೊನೆಗೆಇವೆರಡು ಮನೆಗಳುಉಳಿದಿತ್ತು. ಚಿಕ್ಕೀರಪ್ಪನವರು ಯಾವಾಗ ಗುಳಗಟ್ಟೆ ಸೇರಿದರೋ, ಇನ್ನು ಇವರ ಜನದ್ದಾಗಿ ಉಳಿದದ್ದು ಚಿಕ್ಕ ಜುಂಜಪ್ಪನವರದ್ದು ಒಂದೇ ಮನೆ. ಮನೇಲಿ ಚಿಕ್ಕ ಪುಟ್ಟ ಹೆಂಡತಿ....ಊರಿನಲ್ಲಿ ತುರುಕರು ಜಾಸ್ತಿ....ಹೋದ ಮಾನ ಮತ್ತೆ ಬರೋಲ್ಲ....ಅದೂ ಅಲ್ಲದೆ ನನ್ನವರು ತನ್ನವರು ಅನ್ನುವವರು ಇರುವಕಡೆ ಇರಬೇಕೇ ಹೊರತು ಹೀಗೆ ಒಂಟಿ ಇರಬಾರದು, ಶೆಟ್ಟಿ ಇದ್ದಕಡೆ ಪಟ್ಟಣ ಎಂದುಕೊಂಡು, ತನ್ನ ಆಸ್ತಿ ಪಾಸ್ತಿಯನೂ ವಿಕ್ರಯಿಸಿ, ಕೈಗೆ ಕಾಸು ಮಾಡಿಕೊಂಡು, ಸರಗೂರಿನಿಂದ ಉತ್ತರಕ್ಕೆ ಮೂರು ಮೈಲಿದೂರದಲ್ಲಿರುವ ಬೊಮ್ಮನಹಳ್ಳಿ ಸೇರಿಕೊಂಡರು.

ಚಿಕ್ಕ ಜುಂಜಪ್ಪನವರು ಬೊಮ್ಮನಹಳ್ಳಿಸೇರಿದಮೇಲೆ, ಊರಿನೊಳಗೆ ಯಾವುದೋಒಂದು ಮನೆಯನ್ನು ಭೋಗ್ಯ ಹಾಕಿಕೊಂಡು ಕೊಂಚ ದಿವಸ ಕಾಲ ತಳ್ಳಿದರು. ಜನಗಳಿಗೆ ಸಾಲ ಸೋಲ ಕೊಟ್ಟುಕೊಂಡು ಲೇವಾ ದೇವಿಯಲ್ಲಿ ಮುಂದುವರಿದರು. ಚಿಕ್ಕ ಜುಂಜಪ್ಪ ಅಂದರೆ ಏಳು ಅಡಿ ಮನುಷ್ಯ ಧೃಡಕಾಯ ಹಾಗಿದ್ರೂ, ಅವರನ್ನ ಹೆಣ್ಣಿಗ ಜುಂಜಪ್ಪಾಂತ ಜನ ಕರೆಯುತ್ತಿದ್ದರು.ಕೂತುಕೊಳ್ಳೋದು ಕೈ ಕುಣಿಸೋದು, ಬಾಯಿ ಕುಣಿಸೋದು ಎಲ್ಲ ಹೆಂಗಸರ ಹಾಗೆ. ಯಾವ ಅಡಿಗೆ ಹ್ಯಾಗೆ ಹ್ಯಾಗೆ ಮಾಡಬೇಕು ಅನ್ನೋದನ್ನ ಹೆಂಗಸರು ಇವರ ಹತ್ತಿರ ಕಲಿತುಕೊಂಡು ಹೋಗಬೇಕು, ಹಪ್ಪಳ ಇಕ್ಕ ಬೇಕಾದರೆ, ಸಂಡಿಗೆ ಇಡಬೇಕಾದರೆ ತಾನೆ ಮುಂದು. ಹೆಂಗಸರಿಗೆ ಅವಕಾಶವನ್ನೇ ಕೊಡುತ್ತಿರಲಿಲ್ಲ. ಲಗ್ನ, ಶುಭ ಶೋಬನದ ಕಾಲಗಳಲ್ಲಿ ಯಾವ ಕಾರ್ಯದಲ್ಲೂ ತಾನೆ. ಗಂಡಸರ ಹತ್ತಿರ ಎಷ್ಟು ನಿಸ್ಸಂಕೋಚವೊ, ಹೆಂಗಸರ ಹತ್ತಿರಲೂ ಅಷ್ಟೇ ನಿಸ್ಸಂಕೋಚ.

ಯಾವನಾದರೂ ಆವರಿಂದ ಸಾಲಾ ತೆಗೆದುಕೊಂಡರೆ ವರ್ಷಾ ಎರಡು ವರ್ಷದಲ್ಲಿ ತೀರಿಸಿದನೋ ಬದುಕಿಕೊಂಡ! ಅಲ್ಲದೆ ಹೋಗಿ ನಾಲ್ಕಾರು ವರ್ಷ ಉಳಿದರೆ, ಇನ್ನವನು ಸಾಲಾ ತೀರಿಸಿ ಋಣ ಮುಕ್ತನಾಗುವ ಹಾಗೂ ಇಲ್ಲ....ಆಸ್ತಿ ಪಾಸ್ತಿ ಉಳಿಸಿಕೊಳ್ಳುವ ಹಾಗೂ ಇಲ್ಲ....ಒಟ್ಟನಲ್ಲಿ ಅವನ ಮನೆ ಮುಳುಗಿತು ಅಂತ್ಲೆ. ಬ್ರಾಹ್ಮಣನಿಗೊಬ್ಬನಿಗೆ ಸಾಲಾ ಕೊಟ್ಟರೆ, ಮತ್ತಿನ್ನು ಯಾರದೇ ಪತ್ರಬರೆಯಿಸಬೇಕಾಗಲಿ,ಪತ್ರಕ್ಕೆ ವಸೂಲು,ಷರಾಕಟ್ಟಿಸಬೇಕಾಗಲಿ ಮುಫತ್ತಾಗಿ ತಾನು ಹೇಳಿದಹಾಗೆ ಆತನ ಕೈಲೆ ಮಾಡಿಸಿಕೊಳ್ಳುತ್ತಿದ್ದರು. ಜಾತಿಯವನೊಬ್ಬನಿಗೆ ಸಾಲಾ ಕೊಟ್ಟರೆ ಊಟ ಉಪಚಾರ ಎಲ್ಲಾ ಅವನ ಮನೆಯಲ್ಲೆ. ಅಸಲು ಅಸಲಾಗೇ ಬರಬೇಕು. ಬಡ್ಡಿ ಬಡ್ಡಿಯಾಗೇ ಬರಬೇಕು. ಒಟ್ಟನಲ್ಲಿ ಅವನ ಮನೆ ತೊಡೆದು ಬಿಡುತ್ತಿದ್ದರು. ಶೂದ್ರಾದಿಗಳಿಗೆ ಕೊಟ್ಟಾನ್ನಿ....ಅವರ ಮನೇಲಿ ಉಣ್ಣೋಕೆ, ತಿನ್ನೋಕೆ, ಉಡೋಕೆ ಆಗೊಲ್ಲ. ಆವಾಗ ಏನು ಮಾಡೊರು ಗೊತ್ತೆ! ಅವನ ಹೊಲದಲ್ಲಿ ಯಾವುದಾದರೂ ಮರ ಇದ್ದರೆ,ಮನೇಲಿ ಸುತರಾಂ ಸೌದೆಇಲ್ಲ ಈಮರ ಹೊಡಿಸಯ್ಯ,ಅಂತ ಆನ್ನುತ್ತಿದ್ದರು. ಆತ ಎರಡಾಳು ಬಿಟ್ಟು ಹೊಡೆಸಿದರೆ, ಇನ್ನೊಬ್ಬನ ಕೈಲಿ ಗಾಡಿ ಕಟ್ಟಿಸಿ ಊರಿಗೆ ಸಾಗಿಸುತ್ತಿದ್ದರು. ಆ ರೈತನ ಮನೆ ಹಿತ್ತಲಿನಲ್ಲಿ ಕುಂಬಳಗಿಡ ಒಂದು ಕುಂಬಳಕಾಯಿ ಬಿಟ್ಟರೆ, ಅದೂ ಚಿಕ್ಕ ಜುಂಜಪ್ಪನವರ ಪಾಲೆ. ನೂರುಕೊಟ್ಟ ಇನ್ನೂರಕ್ಕೆ ಪತ್ರ ಬರೆಯಿಸುತ್ತಿದ್ದರು ಸಾಲ ತಗೊಳ್ಳೋನು, ಪತ್ರ ಬರೆಯಿಸುವಾಗ ತನ್ನ ಪತ್ರ ನೋಡಿದರೆ ಪುನಃ ಅವರ ಮುಖಾನು ಕಾಣ ಏನನ್ನು ಕಾಣ, ಕೊಟ್ಟ ದುಡ್ಡಿಗೆ ವಸೂಲನ್ನಾದರು ಕಟ್ಟುತ್ತಾರೆಯೋ ನೋಡೋಕೆ! "ವಸೂಲಿ ಕಟ್ಟಿಸಿ ಸ್ವಾಮಿ" ಅಂದರೆ "ಪೂರ್ತ ಹಣಾನೆ ಫೈಸಲ್ ಮಾಡಿ ನಿನ್ನ ಪತ್ರವನ್ನೆ ತೆಗೆದುಕೊಂಡು ಹೋಗು"ಅನ್ನು

ತ್ತಿದ್ದರು ಪೂರ್ತ ಅವನೆಲ್ಲಿಂದ ತಂದು ಕೊಡುತ್ತಾನೆ. ಸರಿ ಸುಮ್ಮ ನಾಗುತ್ತಿದ್ದ ಅಷ್ಟೆ. ಏನಾದರೂ ತಿರುಗಿ ಬಿದ್ದನೋ, ಕೊಟ್ಟದ್ದೂ ಕೊಡದೇ ಇದ್ದದ್ದೂ ಎಲ್ಲಾನು ಸೇರಿಸಿ ಒಟ್ಟಿಗೆ ದಾವಾ ಮಾಡಿಬಿಡು ತ್ತಾನೆ. ಅವಾಗಲೂ ಅವನ ಮನೆ ಹಾಳೇಆಗುತ್ತೆ. ಅಂಥಾ ಅಪಾಯ ಕಾರಕ ವ್ಯಕ್ತಿ ಚಿಕ್ಕ ಜುಂಜಪ್ಪ.

ಹೆಣ್ಣಿಗ ಜುಂಜಪ್ಪನವರಿಗೆ ನಾಲ್ಕು ಜನ ಗಂಡು ಮಕ್ಕಳು, ಒಬ್ಬಳೇ ಮಗಳು. ಎಲ್ಲರಿಗೂ ಮದುವೆಯಾಗಿದೆ. ಜುಂಜಪ್ಪನವ ರಿಗೂ ವಯಸ್ಸಾಯಿತು,ಅಂದರೆ ವಯಸ್ಸು ಆರವತ್ತೈದಕ್ಕೆಬಂದಿತು, ಆದರೂ ಊಟಾ ತಿಂಡೀಲಿ ಪ್ರಾಯದವರಂತೆ. ನೋಟಾ ನಡಿ ಗೇಲೂ ಯಾರಿಗೇನು ಕಮ್ಮಿ ಇಲ್ಲ. ಕುಂಟು ನ್ಯಾಯ,ಕುಯುಕ್ತೀಲಿ ಎತ್ತಿದ ಕೈ. ಪ್ರಳಯಾಂತಕ ಘಾಟಿ ಮುದುಕ. ಹೆಂಡತಿ ಸತ್ತು ಹೋದಳು.ಜುಂಜಪ್ಪನವರು,ಗಂಡನಮನೆಯಿಂದ ಮಗಳನ್ನುಕರೆಸಿ ಕೊಂಡರು.ನಾಲ್ಕುಜನ ಗಂಡುಮಕ್ಕಳನ್ನೂ ಕೂರಿಸಿಕೊಂಡು,ಅವರ ಒಪ್ಪಿಗೆ ಪಡೆದು, ಹೆಣ್ಣು ಮಗಳಿಗೆ ಏನು ಕೊಡಬೇಕೊ ಕೊಟ್ಟು, ತಮ್ಮ ಅಜಪಾಲು ಕಸಿದು, ಉಳಿಕೆಯದನ್ನು ನಾಲ್ಕು ಸಮಭಾಗ ಮಾಡಿದರು. ಊರಿನಿಂದ ಹೊರಕ್ಕೆ ಅಂದಹಾಗೆ ಮೂರು ದೊಡ್ಡ ಮನೆಗಳು, ಆದರಲ್ಲಿ ಚಿಕ್ಕಜುಂಜಪ್ಪನವರದ್ದು ಅಂದೆವಲ್ಲಾ ಅದು ಈಚೀಚೆಗೆ ಕಟ್ಟಿದ್ದು. ನಾಲ್ಕುಜನ ಗಂಡುಮಕ್ಕಳಿಗೂ ಅನುಕೂಲ ವಾಗುವಂತೆಯೇ ಅದನ್ನು ಕಟ್ಟಿಸಿದ್ದುದರಿಂದ ಹಾಗೆಹಾಗೇ "ಈ ಭಾಗ ನಿನಗೆ....ಆ ಭಾಗ ಅವನಿಗೆ" ಎಂದು ಕೈ ತೋರಿಸಿದ್ದಾ ಯಿತು.ಆಸ್ತಿ ಭಾಗವಾದಮೇಲೆ ತಮ್ಮ ಅಜ್ಜಪಾಲಿನೊಡನೆ ಮಗಳ ಮನೆ ಸೇರಿಕೊಂಡರು.

ಚಿಕ್ಕೀರಪ್ಪನವರು ಗುಳಗಟ್ಟಕ್ಕೆ ಹೋದಮೇಲೆ ಸುಮಾರಾಗಿ ಆಸ್ತೀನೂ ಸಂಪಾದನೆ ಮಾಡಿದರು. ಇಬ್ಬರು ಗಂಡುಮಕ್ಕಳಾದರು.

ಹಿರಿಯವನಿಗೆ ಮಾತ್ರ ಮದುವೆಮಾಡಿ, ತೀರಿಹೋದರು. ಅವರ ಹೆಂಡತಿ ಗುಳಗಟ್ಟದ ಅಮ್ಮ, ಚಿಕ್ಕಜುಂಜಪ್ಪನವರ ಪ್ರೇರಣೆಯಿಂದ ಮಕ್ಕಳ ಸಮೇತ ಬೊಮ್ಮನಹಳ್ಳಿಗೇ ಬಂದುಬಿಟ್ಟಳು. ಇಲ್ಲಿಗೆ ಬಂದಮೇಲೆ ಇಬ್ಬರು ಮಕ್ಕಳಿಗೂ ಲಗ್ನ-ಶೋಬನ ಎಲ್ಲವನ್ನೂ ಜುಂಜಪ್ಪನವರೆ ನಿಂತು, ಮಾಡಿದರು. ತಮ್ಮ ಮನೆ ಎದುರಿನ ಗುಳಗಟ್ಟದವರ ಮನೆಯನ್ನೂ ಜುಂಜಪ್ಪನವರೇ ನಿಂತು ಕಟ್ಟಿಸಿದರು.

ಬೆಂಗಳೂರು ಮಾದಪ್ಪ ಬೆಂಗಳೂರಿನಿಂದ ಸೀರೆಗಳನ್ನು ತಂದು ಹಳ್ಳಿಗಳಮೇಲೆ ತೆಗೆದುಕೊಂಡುಹೋಗಿ ಮಾರೊನು. ಹೀಗೆ ಮಾರಿ ಹಣ ಸಂಪಾದನೆ ಮಾಡಿದವನು. ಅವನು ಜಮೀನು ಸಮೀನು ಬಹಳ ಕಮ್ಮಿ. ಅವನಿಗೆ ಆದರೂ ಜುಂಜಪ್ಪನವರಮನೆ ಹಾಗೇನೆಮನೆ ದೊಡ್ಡದು. ಕೈನಲ್ಲಿ ಕಾಸು ಚನ್ನಾಗಿದೆ. ಮನೇಲಿ ಚಿನ್ನಾಬಣ್ಣಾದ ನಗಾನಾಣ್ಯ ತಕ್ಕಮಟ್ಟಿಗಿದೆ. ಮಾದಪ್ಪನ ಹೆಂಡತಿ, ಕೈಗೆ ಕೆಂಡ ಸುರಿದರೆ ಸುರಿಸಿಕೊಳ್ಳುವಂಥಾ ಮುಗ್ಧೆ, ಅಂದರೆ ಏನೂಕಂಡವಳಲ್ಲ. ಮಾದಪ್ಪನಿಗೆ ಒಬ್ಬಳೇ ಮಗಳು, ಸೊಗಸಾದ ರೂಪು ಅವಳಿಗೆ. ರಾವಣೀಗೆ ಲಗ್ನವಾಗಿದ್ದು ಒಂದು ಹೆಣ್ಣು ಮಗುವನ್ನು ಹೆತ್ತಳು. ಮಗುವಿಗೆ ಎರಡು ವರ್ಷ ಆಗಲೇಇಲ್ಲ, ಗಂಡ ಸತ್ತುಹೋದ. ತಂದೆ ಮನೆಯನ್ನೆ ಸೇರಿಕೊಂಡಿದ್ದಾಳೆ.

ಚಿಕ್ಕಜುಂಜಪ್ಪನವರ ನಾಲ್ಕು ಮಕ್ಕಳ ಪೈಕೀಲಿ ಹಿರಿಯವನು ತಮ್ಮಯ್ಯ. ಅವನಿಗೆ ಮೊದಲನೇ ಹೆಂಡತಿ ಸತ್ತುಹೋಗಿ ಎರಡನೇ ಮದುವೆ ಮಾಡಿಕೊಂಡಿದ್ದಾನೆ. ಮೊದಲನೆ ಹೆಂಡತೀಗೆ ಒಬ್ಬನೇ ಗಂಡುಮಗ. ಹೆಸರು ಜಯಣ್ಣ, ವಯಸ್ಸು ಹನ್ನೆರಡು. ಎರಡನೇ ಹೆಂಡತಿಗೆ ಇನ್ನೂ ಮಕ್ಕಳಿಲ್ಲ. ಎರಡನೇ ದೊಡ್ಡೀರಶೆಟ್ಟಿಗೆ ಒಬ್ಬನೇ ಗಂಡು ಮಗ. ಹೆಸರು ಶಿವರುದ್ರ. ವಯಸ್ಸು ಹದಿನಾಲಕ್ಕು.

ಒಂದು ಆರುವರ್ಷದ ಹೆಣ್ಣು ಮಗೂನೂ ಇದೆ ಜೊತೆಗೆ. ಮೂರನೆಯವನು ನಾಗಣ್ಣ. ಅವನಿಗೂ ಎರಡನೇ ಮದುವೆ. ಆದರೆ ಮಕ್ಕಳೇ ಇಲ್ಲ. ನಾಲ್ಕನೆಯವನು ಸುಬ್ಬಣ್ಣ. ಅವನಿಗೂ ಇಬ್ಬರು ಹೆಂಡತಿಯರು. ಮೊದಲನೆ ಹೆಂಡತಿ ಐದಾರು ವರ್ಷದ ಹೆಣ್ಣು ಮಗೂನ ಬಿಟ್ಟು ಸತ್ತುಹೋದಳು. ನಾಲ್ಕು ಜನದ ಪೈಕೀಲಿ ಅವನೊಬ್ಬನೇ ಓದಿರುವವನು. ಕನ್ನಡಾ .ಲೋವರ್ ಸೆಕೆಂಡರಿ ಪಾಸು ಮಾಡಿ ಪ್ರೈಮರಿ ಸ್ಕೂಲ್ ಮೇಷ್ಟರು. ಕೆಲಸ ದಲ್ಲಿದ್ದು, ನಾಲ್ಕಾರು ಊರಿನಲ್ಲಿ ನಾಲಕ್ಕಾರು ವರ್ಷಕೆಲಸಮಾಡಿದ. ಕೊನೆಗೆಡಿಸ್‌ಮಿಸ್‌ಆಗಿಹೋಯಿತು.ಯಾತಕ್ಕೆ ಅಂದರೆ,ಶತಪ್ಪೋಲಿ. ಹುಟ್ಟುಹಾದರಗಳ್ಳ. ಕಣ್ಣಿತ್ತಿದ ಹೆಣ್ಣು ಬಿಡಲಿಲ್ಲ. ಹೋದಕಡೆ ಎಲ್ಲಾ ಇದೇ ಕಸಬು. ಹ್ಯಾಗೆ ಉದ್ಧಾರವಾಗುತ್ತಾನೆ?.... ಕೈಲಿದ್ದ ಚಿನ್ನಾಬಣ್ಣಾ, ಕಾಸೂ ಕರೀಮಣಿ ಎಲ್ಲಾ ಹೋಯಿತು. ಕೆಲಸದ ಬಾಯಿಗೂ ಮಣ್ಣುಬಿತ್ತು. ಕೊನೆಗೆ ಮೇಹಜಾಡ್ಯ ಮೈಯ ನ್ನೆಲ್ಲಾ ಆವರಿಸಿತು. ಕೈಕಾಲು ಬೆರಳುಗಳು ತಿಂದುಹೋದವು. ಕಣ್ಣುರೆಪ್ಪೆಗಳ ತುದೀಲಿ ಕೂದಲಿಲ್ಲ. ಮೈಎಲ್ಲಾ ಮಿಣಿಕೆಹಣ್ಣು ಬಿರಿದುಹೋದ ಹಾಗೆ ಬಿರಿದುಹೋಗಿದೆ. ಅಡ್ಡಡ್ಡಲಾಗಿ ಕಾಲು ಹಾಕಿಕೊಂಡು, ವಕ್ರವಕ್ರವಾಗಿನಡೀತಾನೆ ದಾಷ್ಟೀಕದಿಂದ ನಾಲ್ಕು ಹೆಜ್ಜೆ ಎತ್ತಿಹಾಕಲಾರ. ಸ್ವಚ್ಛವಾಗಿ ನಾಲಕ್ಕು ಮಾತು ಆವನ ಬಾಯಿಂದ ಬರೊಲ್ಲ. ನಕ್ಕಾಗ ಸಹ ಮುಖ ನೋಡೋಕಾಗೊಲ್ಲ, ಹಾಗಿದ್ದ.ಉಳಿದವರು ಮೂರು ಜನವೂ ಒಂದು ಕೈ,ಇವನೊಬ್ಬನೇ ಒಂದು.

ಉಳಿದವರು ಮೂವರಲ್ಲಿ ಎರಡನೇ ದೊಡ್ಡೀರಶೆಟ್ಟಿ ಇದಾ ನಲ್ಲಾ ಅವನು ಹೈದರಾಲೀಖಾನ್. ಅಂದರೆ ರುಜು ಮಾಡೋಕೂ ಬರೋಲ್ಲ.ಅವನಿಗೆಬುದ್ಧೀಲಿಮಾತ್ರಪ್ರಳಯಾಂತಕ.ಉಳಿದಿಬ್ಬರಿಗೂ

ಓದೋದೂ ಬರೆಯೋದೂ ಬರುತ್ತೆ. ನಾಲಕ್ಕು ಜನವೂ ಆ ಅಪ್ಪನ ಮಕ್ಕಳೂನ್ನೋದನ್ನ ಮಾತ್ರ ಮರೀಬಾರದು.: ಗುಳಗಟ್ಟದ ಅಮ್ಮನ ಮನೆಯವರಿಗೂ ಈ ಮನೆಯವರಿಗೂ ಈಚೆಗೆ ಹೊಂದಾಣಿಕೆ ಇಲ್ಲ. ಆಕೆಯ ಎರಡು ಮಕ್ಕಳಲ್ಲಿ ಹಿರಿಯವನು ತಾಯಿಯನ್ನು ಅನುಸರಿಸಿಕೊಂಡು ಹೋಗುತ್ತಾನೆ. ಜವಳಿ ವ್ಯಾಪಾರ ಮಾಡುತ್ತಾನೆ. ಕಿರಿಯವನು ಜುಂಜಪ್ಪನ ಮಕ್ಕಳ ಜೊತೆಯಲ್ಲಿ ಭಂಟನಹಾಗೆ ಓಡಾಡಿಕೊಂಡಿದ್ದಾನೆ. ಹಿರಿಯವನೂ ಬೆಂಗಳೂರು ಮಾದಪ್ಪನೂ ಹೊಂದಿಕೊಂಡಿದಾರೆ. ಒಬ್ಬರಿಗೊಬ್ಬರು ಒತ್ತಾಸೆಯಾಗಿದಾರೆ. ಒಬ್ಬರನ್ನೊಬ್ಬರು ಕೇಳದೆ ಮಾಡದೆ, ಯಾರೂ ಏನನ್ನೂ ಮಾಡುವುದಿಲ್ಲ. ಈ ಸ್ಥಿತಿಯಲ್ಲಿ ಆ ಮೂರು ಮನೆಗಳ ವೈವಾಟವಿತ್ತು.

—[]—

೩

ಕಂಟ್ರೋಲ್ ಕಾಲ ಬಂದಿತು. ಕಾಳಸಂತೆ ವ್ಯಾಪಾರದಿಂದ ವ್ಯಾಪಾರಸ್ತರು ಹಣ ಸಂಪಾದನೆ ಮಾಡಲು, ಅದರಿಂದ ಅನುಕೂಲ ವಾಯಿತು. ಹೆಂಗಸರುಗಳೆಲ್ಲ ಆ ವ್ಯಾಪಾರಕ್ಕೆ ಶುರು ಮಾಡಿ ಕೊಂಡರು. ಗುಳಗಟ್ಟದ ಗಂಗಾಧರಪ್ಪ, ಬೆಂಗಳೂರು ಮಾದಪ್ಪ ಇಬ್ಬರೂನು, ಒಂದೇ ವರ್ಷದಲ್ಲಿ ಜವಳಿಯಲ್ಲಿ ಬೇಕಾದ ಹಾಗೆ ದುಡಿದರು. ಆ ವರುಷ ರೂಪಾಯಿಗೆ ರೂಪಾಯಿ ಲಾಭದಂತೆ ಸಂಪಾದನೆ ಮಾಡಿದರು. ಎದುರುಮನೆಯವನೂ, ಪಕ್ಕದ ಮನೆ ಯವನೂ ಹಾಗೆ ಸಂಪಾದನೆ ಮಾಡುತ್ತಿದ್ದರೆ, ಜುಂಜಪ್ಪನವರ ಮಕ್ಕಳುಗಳ ಮನಸ್ಸು ತಡೆಯುತ್ತದೆಯೇ? ಎಂದಿಗೂ ಇಲ್ಲ. ಕಿರಿಯವನಾದ ಸುಬ್ಬಣ್ಣನ ಮಾತು ಬಿಡಿ. ಅವನ ಭೋಗವೆಲ್ಲ ಮುಗಿದು 'ಸೂಳೆ ಮುಪ್ಪಾಗಿ ದಾಸಿಯಾದಂತೆ' ಕೈಯಲ್ಲಿದ್ದುದನ್ನೆಲ್ಲ ಕಳೆದುಕೊಂಡು ಪುರಂದರದಾಸನಾಗಿ ಕುಳಿತಿದ್ದ. ಆದರೂ ಮೂಗರ್ಜಿಗಳನ್ನು ಬರೀತಾನೆ, ಕಿತಾಪತಿ ಹಚ್ಚುತ್ತಾನೆ, ಏನ ನ್ನಾದರೂ ಮಾಡುತ್ತಿರುತ್ತಾನೆ........ಸುಮ್ಮನೆ ಮಾತ್ರ ಕೂರುವವ ನಲ್ಲ ಆತ. ಉಳಿದವರು ಮೂವರೂನು ಸೇರಿಕೊಂಡು ಊರಿ ನೊಳಗೆ ಚಿಲ್ಲರೆ ಅಂಗಡಿಯನ್ನು ಯಾಕೆ ತೆರೆಯಬಾರದೆಂದು ಯೋಚಿಸಿದರು. ತೆರೆಯುವುದೆಂದು ನಿರ್ಧರವಾಯಿತು. ಮೂ ವರೂ ತಲಾ ಎರಡೆರಡು ಸಾವಿರ ರೂಪಾಯಿ, ಒಟ್ಟಿನಲ್ಲಿ ಆರು ಸಾವಿರ ರೂಪಾಯಿನ ಬಂಡವಾಳವನ್ನು ಹಾಕಿಕೊಂಡು ಅಂಗಡಿ

ದುನ್ನು ತೆರೆದರು. ಅಂಗಡಿಯಲ್ಲಿ ತಮ್ಮಯ್ಯ, ದೊಡ್ಡೀರಶೆಟ್ಟಿ ಅವರಿಬ್ಬರೂ ಒಬ್ಬರು ತಪ್ಪಿದರೆ ಒಬ್ಬರು ಕುಳಿತು ವ್ಯಾಪಾರ ಮಾಡುವುದೆಂದೂ, ನಾಗಣ್ಣ ಮೈಸೂರು, ಬೆಂಗಳೂರು ಹೀಗೆ ತಿರುಗಿಕೊಂಡು ಸಾಮಾನು ಸಪ್ಲೈ ಮಾಡುವುದೆಂದೂ ತೀರ್ಮಾನ ವಾಯಿತು. ವಾರಕ್ಕೆ ಮೂರು ಲಾರಿ, ನಾಲ್ಕು ಲಾರಿ ಸಾಮಾನು ಅಂಗಡಿಗೆ ಬಂದು ಬೀಳುವುದಾಯಿತು. ನಾಗಣ್ಣನಿಗೆ ವಿಪರೀತ ತಿರುಗಣೆಯಾಯಿತು. ಈವತ್ತು ಈ ಊರು, ನಾಳೆ ಇನ್ನೊಂ ದೂರು.—ಆಗಲೆ ಊರಿಗೆ ಬಂದ....ಅಂಗಡಿಗೆ ಯಾವಯಾವ ಸಾಮಾನು ಬೇಕು....ಯಾವ್ಯಾವುದನ್ನು ಹ್ಯಾಗೆ ಹ್ಯಾಗೆ ಹಾಕಿದರೆ ಗಿಟ್ಟುತ್ತದೆ......ಎಲ್ಲವನ್ನೂ ವಿಚಾರಿಸಿಕೊಂಡು ಪುನಃ ಬಿಟ್ಟಬಂಡಿ. ಹೀಗಾಗಿ ಊರಲ್ಲಿ ಒಂದು ದಿನವೂ ಉಳಿಯುತ್ತಿರಲಿಲ್ಲ. ಅಂಗಡಿ ಯಲ್ಲಿ ರುಸ್ತುಂ ವ್ಯಾಪಾರ. ದಿನಾ ಎಂಟುನೂರು, ಒಂಬೈನೂರು ರೂಪಾಯಿ ಗಲ್ಲಾ ಏಳುವುದಕ್ಕಾಯಿತು. ಆ ಸುತ್ತಿಗೆಲ್ಲ, ಪ್ರಾಂತ್ಯ ಕ್ಕೆಲ್ಲ ಹೆಸರುವಾಸಿಯಾದ ಅಂಗಡಿಯಾಯಿತು. ಮೈಸೂರು ಪೇಟೆಗೆ ಯಾವಾಗ ಇವರೇ ಸಪ್ಲೈ ಮಾಡುವವರಾದರೋ.... .... ಮೈಸೂರಿಗೆ ಹೋಗಿಬರುವ ಖರ್ಚು ...ಗಾಡಿ ಬಾಡಿಗೆ ಎಲ್ಲ ಉಳಿಯುತ್ತದೆ..... .....ಆದೂ ಅಲ್ಲದೆ ಎರಡು ದಿನ ಅಂಗಡಿ ಬಿಟ್ಟುಹೊರಗಡೆ ಬಾಳುಗೆಡಬೇಕಾಗುವುದೂ ತಪ್ಪುತ್ತದೆ ಎಂದುಕೊಂಡು, ಸುತ್ತಮುತ್ತಿನ ಹಳ್ಳಿಗಳ ಸಣ್ಣ ಪುಟ್ಟ ಚಿಲ್ಲರೆ ಅಂಗಡಿಗಳವರೆಲ್ಲ ಇವರಲ್ಲೇ ವ್ಯಾಪಾರ ಮಾಡುವವರಾ ದರು.

ಮನೆಯಲ್ಲಿ ತಮ್ಮಯ್ಯನ ಹೆಂಡತಿ, ದೊಡ್ಡೀರಶೆಟ್ಟಿ ಹೆಂಡತಿ ಇಬ್ಬರೂ ಹೊಂದಿಕೊಂಡು ಹೋಗುತ್ತಾರೆ. ಆದರೆ ನಾಗಣ್ಣನ ಹೆಂಡತಿ ಮಾತ್ರ ಅವರೊಡನೆ ಬೆರೆಯುವುದಿಲ್ಲ. ಅವರೊಡನೆ

ಏನೂ, ಯಾರೊಡನೆಯೂ ಬೆರೆಯುವುದಿಲ್ಲ ಆಕೆ. ಆಕೆ ಮೂಗೂರಿನವಳು. ಮೂಗೂರಿನವರಿಗೆ ಸ್ವಲ್ಪ ಸಿಡುಕು ಜಾಸ್ತಿ. ಜುಂಜಪ್ಪನವರ ಸೊಸೆಯರಲ್ಲೆಲ್ಲಾ ಆಕೆಯೇ ಸೌಂದರ್ಯವತಿ, ವಿದ್ಯಾವತಿ. ಮೂಗೂರಿನಲ್ಲಿ ಮಿಡಲ್‌ಸ್ಕೂಲಿದೆ, ಹೈಸ್ಕೂಲಿಲ್ಲ. ಆಕೆ ಮಿಡಲ್ ಲೋವರ್ ಸೆಕೆಂಡರಿ ವರೆವಿಗೂ ಓದಿರುತ್ತಾಳೆ. ಬಹಳ ಲವಲವಿಕೆಯಾದವಳು. ಸಣ್ಣ ತರಹ ಹೆಂಗಸಲ್ಲ, ಅಂದರೆ ಕೆಟ್ಟ ಬುದ್ಧಿ ಇಲ್ಲ ಆಕೆಯಲ್ಲಿ. ಉಳಿದ ಇಬ್ಬರಲ್ಲೂ ಸುಬುದ್ಧಿ ಇಲ್ಲವೇ ಇಲ್ಲ. ಕಚ್ಚಾ ಬುದ್ಧಿಯೇ ತುಂಬಿ ತುಳುಕಾಡುತ್ತದೆ. ಹೀಗಿರುವಾಗ ಅವರಿಬ್ಬರೇ ಒಂದು ಜೊತೆ, ಅವಳೊಬ್ಬಳೇ ಒಂಟಿಯಾಗದೆ ಇನ್ನೇನು ?

ಇನ್ನೂ ಚಿಕ್ಕವಳು, ಓದಿದವಳು, ಚೆನ್ನಾಗಿಧಾಳೆ ... ಏನನ್ನೇ ಕೇಳಿದರೂ, ಗಂಡ ಇಲ್ಲಾ ಅನ್ನದೆ ತಂದುಕೊಡುತ್ತಾನೆ. ತಲೆಗಿಲೆ ಬಾಚಿಕೊಂಡು, ಹೂವು ಮುಡಿದುಕೊಂಡು, ಅಚ್ಚುಕಟ್ಟಾಗಿರೊ ಬಟ್ಟೆಬರೆ ಉಟ್ಟುಕೊಂಡು, ಆಭರಣ ತೊಟ್ಟಿರುತ್ತಾಳೆ.

ಬೆಳಿಗ್ಗೆ ಎದ್ದು ಹೊರಗಡೆ ಹೋಗಿ ಬಂದು, ಸ್ನಾನ ಮಡಿ ಮಾಡಿಕೊಂಡು ದೇವರ ಪೂಜೆ ಮಾಡುತ್ತಾಳೆ. ಗಂಡ ಊರಲ್ಲಿದ್ದರೆ, ಅಷ್ಟುಹೊತ್ತಿಗೆಲ್ಲ ಅವನಿಗೆ ಫಲಹಾರಕ್ಕೆ ಏನಾದರೂ ಮಾಡಿ ಕೊಟ್ಟು ಕಳುಹಿಸಿಕೊಡುತ್ತಾಳೆ. ಆತ ಊರಲ್ಲಿ ಇಲ್ಲದೇಹೋದರೆ ತಿಂಡಿ ಮಾಡುವುದಿಲ್ಲ. ಒಂದೇ ಸಲ ಅಡಿಗೆಯನ್ನೇ ಮಾಡಿ, ಹೊತ್ತಿಗೆ ಮುಂಚೆ ಊಟ ಮಾಡಿಕೊಂಡು ಹಾಯಾಗಿರುತ್ತಾಳೆ. ಕಸ ಗುಡಿಸುವುದಕ್ಕೆ, ನೀರು ತುಂಬುವುದಕ್ಕೆ, ಬಟ್ಟೆ ಒಗೆಯುವುದಕ್ಕೆ ಅವುಗಳಿಗೆಲ್ಲ, ಮೂಗೂರಿನಿಂದಲೆ ಒಂದು ಹೆಣ್ಣು ಆಳನ್ನು ಕರೆದು ತಂದು ಇರಿಸಿಕೊಂಡಿದ್ದಾಳೆ.

"ಆರಕ್ಕೋ ಗೊಲ್ಲ ಮೂರಕ್ಕಿರೊಲ್ಲ" ಅನ್ನುತ್ತಾರಲ್ಲ ಹಾಗೆ ತನ್ನ ಕಾರ್ಯವೆಷ್ಟೋ ತಾನೆಷ್ಟೋ, ತನ್ನ ಮನೆಯಾಯಿತು ತಾನಾಯಿತು. ಉಂಡು ಉಟ್ಟು ಆದಮೇಲೆ ಸ್ವಲ್ಪ ಮಲಗಿ ವಿಶ್ರಮಿಸಿಕೊಳ್ಳುತ್ತಾಳೆ. ಎದ್ದು ತಲೆ ಬಾಚಿಕೊಂಡು, ಕೈಕಾಲು ಮುಖ ತೊಳೆದುಕೊಂಡು, ಯಾವುದಾದರೂ ಪುಸ್ತಕ ಹಿಡಿದುಕೊಂಡು ಓದುತ್ತ ಕೂರುತ್ತಾಳೆ. ಪುಸ್ತಕದ ಗೀಳು ಬಹಳ ಅವಳಿಗೆ. ಗಂಡ ಹೆಂಡತಿಯನ್ನು ಬಹಳವಾಗಿ ಅನುಸರಿಸುತ್ತಾನೆ. ಏನು ಕೇಳಿದರೂ ತಂದುಕೊಡುತ್ತಾನೆ. ದೊಡ್ಡ ದೊಡ್ಡ ಸೀರೆ ಕುಪ್ಪಸಗಳನ್ನೇ ಅವಳು ದಿನ ಬಳಕೇಲಿ ಉಪಯೋಗಿಸುತ್ತಾಳೆ. ಇಕ್ಕಿದ ಒಡನೆ ತೆಗೆಯುವುದೇ ಇಲ್ಲ. ಗಂಡ ಒಂದು ಮಾತನ್ನೂ ಅನ್ನುವುದಿಲ್ಲ. ಇನ್ನೂ ಬರುಬರುವಾಗ, ಅವಳಿಗೆ ಅದೂ ಇದೂ ಅಂದುಕೊಂಡು, ಏನಾದರೊಂದನ್ನು ತರುತ್ತಲೇ ಇರುತ್ತಾನೆ. ಅದನ್ನೆಲ್ಲಾ ನೋಡಿಕೊಂಡು ನಿಜವಾಗಿಯೂ ಇನ್ನಿಬ್ಬರು ಓರಗಿತ್ತಿಯರು ಸೈರಿಸಿಯಾರೆ? ಒಂದು ಕಡೆ ಗಂಡಂದಿರ ಕಾಟ, ಇನ್ನೊಂದು ಕಡೆ ಮಕ್ಕಳರೇಜಿಗೆ...ಮೂರ್ಹೊತ್ತೂ ಅವರ ಜೀತಮಾಡುವುದೇ ಆಗುತ್ತದೆ ಅವರಿಗೆ. ಇನ್ನು ಅವರಿಬ್ಬರು ಶಿಸ್ತು ಶೃಂಗಾರ ಮಾಡಿಕೊಂಡು, ನಗುತ್ತಾ ನುಡಿಯುತ್ತಾ ಕೂರುವುದು ಎಲ್ಲಿಂದ ಬಂದೀತು? ಜೊತೆಗೆ ಅವಿದ್ಯಾವಂತರು, ಅನಾಗರೀಕರು. ಬೆಳಗ್ಗೆ ಎದ್ದು, ಎದ್ದ ಮುಖದಲ್ಲೇ ಹೊರಗಲ ಕೆಲಸ, (ಕಸ ಗುಡಿಸುವುದು, ಸಾರಿಸುವುದು, ಬೆಳಗುವುದು ಇತ್ಯಾದಿ) ಒಳಗಿನ ಕೆಲಸ (ಅಡಿಗೆಮಾಡುವುದು) ಎಲ್ಲವನ್ನೂ ಮಾಡಿ, ಮಧ್ಯಾಹ್ನಕ್ಕೆ ಮಕ್ಕರೀಗೆ ಮೈಲಿಗೆ ಹಾಕಿಕೊಂಡು, ಓರಗೆ ಹೆಂಗಸರೊಡನೆ ಇಬ್ಬರೂನು ಊರಿನ ದೊಡ್ಡ ಕೆರೆಗೆ ಹೋಗುತ್ತಾರೆ. ಹೋಗುವಾಗಲೆ ವೀಳೆಯದೆಲೆ, ಹೊಗೆಸೊಪ್ಪು, ಕಡ್ಡಿಪೆಟ್ಟಿಗೆ ಅವುಗಳನ್ನು ನಡುವಿಗೆ

ಸಿಕ್ಕಿಸಿಕೊಂಡು ಹೋಗಿರುತ್ತಾರೆ. ಕೆರೆ ಏರಿಮೇಲೆ ಎಲ್ಲರೂ ಸುಕ್ಕ ರಿಗಳನ್ನು ಇರಿಸಿ, ಎಲ್ಲರೂ ಪೀಕಿ (ಹೊಗೆ ಬತ್ತಿ) ಹತ್ತಿಸಿಕೊಂಡು ಸೇದುತ್ತಾ, ಹೊರಗಡೆ ಹೋಗಿಬಂದು, ನೀರು ಬಳಸಿ, ಬಟ್ಟೆಬರೆ ಒಗೆದುಕೊಂಡು, ಹಲ್ಲುಜ್ಜಿ ಮುಖ, ಮೈತೊಳೆದುಕೊಂಡು, ಒದ್ದೆ ಸೀರೆಯನ್ನೆ ಸುತ್ತಿಕೊಂಡು, ಒದ್ದೆ ರವಕೆಯನ್ನೇ ತೊಟ್ಟು, ಮಕ್ಕ ರಿಯನ್ನು ತಲೆಯಮೇಲಿರಿಸಿಕೊಂಡು, ಊರಕಡೆ ಹೊರಡಬೇಕಾ ದರೆ ಮಧ್ಯಾಹ್ನ ಮೀರಿ ಎಡಹಗಲು. ಅಷ್ಟೊತ್ತಿಗೆ ಮನೆಗೆ ಬಂದು (ಸುಮಾರು ಮೂರು ಘಂಟೆ) ಬಟ್ಟೆಗಳನ್ನೆಲ್ಲಾ ಒಣಹಾಕಿ, ಊಟ ಮಾಡುವುದಕ್ಕೆ ಕುಳಿತುಕೊಳ್ಳುತ್ತಾರೆ. ಆಗಲೂ ಊಟಮಾಡುವ ಅವಕಾಶವಿರುವುದಿಲ್ಲ. ಮಧ್ಯೆ ಮಧ್ಯೆ ಅವರು ಬಂದರು, ಇವರು ಬಂದರು, ಅಂದುಕೊಂಡು, ಅದಕ್ಕೆ ಇದಕ್ಕೆ ಅಂದುಕೊಂಡು ಮೇಲೇ ಳುತ್ತಲೇ ಇರಬೇಕು. ಊಟ ಮಾಡಿ, ಎಲೆ ಅಡಿಕೆ ಹಾಕಿಕೊಂಡು ಅಡಿಗೆ ಮನೆ ಹೊಸಲಮೇಲೆ ತಲೆ ಹಾಕಕೊಂಡು, ಒಳಗಡೆಗೆ ಕಾಲು ನೀಡಿಕೊಂಡು ಮಲಗುತ್ತಾರೆ. ಸರಿಯಾಗಿ ಇಕ್ಕಿಕೊಳ್ಳು ವುದಿಲ್ಲ.....ತೊಟ್ಟುಕೊಳ್ಳುವುದಿಲ್ಲ. ಉಂಡರೆ ಹೋಗುತ್ತೆ, ತಿಂದರೆ ಹೋಗುತ್ತೆ ಅಂದುಕೊಂಡು ಕಾಲ ಹಾಕುವ ಈ ಇಬ್ಬರು ಓರ ಗಿತ್ತಿಯರಿಗೆ, ನಾಗಣ್ಣನ ಹೆಂಡತಿಯನ್ನು ಕಂಡರೆ ಹಾಗೆಹಾಗೇನೇ ಅಂದರೆ ಆಶ್ಚರ್ಯವೇನು ? ನಾಗಣ್ಣನ ಹೆಂಡತಿಗಾದರೂ, ತನ್ನ ವಿಷಯದಲ್ಲಿ ಓರಗಿತ್ತಿಯರು ಅಸೂಯೆಪಡುತ್ತಾರಲ್ಲ-ಎಂಬುದೊಂ ದೂ ಇಲ್ಲ, ಆದರೆ ಆಕೆಗಿರುವುದು ಅವರಿಬ್ಬರಗಂಡಂದಿರುಗಳೂ ಊರಿ ನಲ್ಲೇ ಇರುತ್ತಾರೆ....ತನ್ನವರುಮಾತ್ರ ಯಾವಾಗಲೂ ಮೈಸೂರು ಬೆಂಗಳೂರು ಅಂದುಕೊಂಡು ತಿರುಗಣೆಮೇಲೆಯೇ ಇರುತ್ತಾರಲ್ಲಾ! ವಾರಕ್ಕೆ ಒಂದುದಿವಸವಾದರೂ ಊರಿನಲ್ಲಿ ಉಳಿಯುವುದಿಲ್ಲವಲ್ಲಾ !

ಹೀಗಾದರೆ ಮುಂದಿನಗತಿ ಹೇಗಾಗಬೇಕು ! ಅವರ ಶರೀರ ತಾನೆ ಏನಾಗುತ್ತೆ ! ಕಾಸು ಸಂಪಾದನೆ ಮಾಡೋದು ಒಂದೇನೇ ಮನುಷ್ಯನಿಗೆ ಬೇಕಾದದ್ದು ? ಬೇರೆ ಏನೂ ಇಲ್ವೇ ಇಲ್ವ? ಈವಾಗ ಅವರಿಬ್ಬರಲ್ಲಿ ಅಂಗಡಿ ಮೇಲೆ ಒಬ್ಬರು ಕುಳಿತು ಕೊಂಡು, ಕುಡಿದ ನೀರು ಅಳ್ಳಾಡದಂತೆ ವ್ಯಾಪಾರ ಮಾಡಿಕೊಂಡು ಹೋಗುತ್ತಿದ್ದಾರೆ. ಇನ್ನೊಬ್ಬರು ಇಲ್ಲೀ ಊರೂರು ತಿರುಗಿ ಕೊಂಡು ಇದ್ದಾರೆ. ತನ್ನವರು ಮಾತ್ರ ಬಾಡಿಗೆ ಕತ್ತೆಯ ಹಾಗೆ ಊಟದ ಹೊತ್ತಿಗೆ ಊಟವಿಲ್ಲ, ನಿದ್ರೆ ಹೊತ್ತಿಗೆ ನಿದ್ರೆಯಿಲ್ಲ, ನಿತ್ಯವೂ ಸ್ನಾನವಿಲ್ಲ. ಬಟ್ಟೆ ಬದಲಾಯಿಸೋ ಹಾಗಿಲ್ಲ.... ....ಸುಮ್ಮನೆ ದುಡಿಯುತ್ತಿದ್ದಾರೆ ಹೀಗಂದು ಕೊಂಡು ಇವರಿಗೇನು ಹೆಚ್ಚಿಗೆ ಕೊಡೋದು ಅವರು ! ಅವ ರಂತೆ ಇವರೂ ಒಬ್ಬರು ಪಾಲುದಾರರೇ ಹೊರತು ಹೆಚ್ಚಿನವರೇನೂ ಅಲ್ಲ. ಆದ್ದರಿಂದ ಅವರು ಹೇಗೋ, ಹಾಗೆಯೇ ಇವರೂ ಇದ್ದು ಕೊಂಡು ಹೋಗುವುದು ಬಿಟ್ಟು, ಇದೇನು ಇವರು ಮಾಡುತ್ತಿರು ವುದು ?—ಇದು ಆಕೆಗಿರುವ ಸಂಕಟ. ಗಂಡನ ಕೂಡ ಅದನ್ನೇ ಹೇಳಿದರೆ ಆತ ಈ ಕಿವಿಯಿಂದ ಕೇಳಿ, ಆ ಕಿವಿಯಿಂದ ಬಿಟ್ಟು ಬಿಡುತ್ತಾನೆಯೇ ವಿನಃ ಮನಸ್ಸಿನ ಮೇಲೆ ಪರಿಣಾಮ ಮಾಡಿಕೊ ಳ್ಳುವುದಿಲ್ಲ. ಹೆಂಡತಿಯನ್ನು ಬೈಯುವುದೂ ಇಲ್ಲ. ಹೆಂಗಸರುಗಳಲ್ಲಿ ಭಿನ್ನಾಭಿಪ್ರಾಯವಿದ್ದರೂ ಗಂಡಸರುಗಳಲ್ಲಿಮಾತ್ರ ಐಕಮತ್ಯವಿತ್ತು.

ತಮ್ಮಯ್ಯ ಸಹೋದರರಿಗೆ ಕಂಟ್ರೋಲ್ ಇದ್ದ ಸಾಮಾನುಗ ಳೆಲ್ಲ ಚೆನ್ನಾಗಿ ಕಾಸು ಗಿಟ್ಟಿಸಿಕೊಟ್ಟವು. ಸೀಮೆ ಎಣ್ಣೆ ವ್ಯಾಪಾರ -ಅದರ ಲೈಸನ್ಸು ಇವರಿಗೇ ಇತ್ತು.ಅಂಗಡಿ ಹತ್ತಿರ ದಿನಕ್ಕೆ ಎರಡು ತಬ್ಬ ಒಡೆದರೆ ಸಿಕ್ಕಿದವರಿಗೆ ಸಿಕ್ಕಿತು, ಇಲ್ಲದೇ ಹೋದವರಿಗೆ

ಇಲ್ಲವೇ ಇಲ್ಲ. ಆದರೆ ಸೀಮೆ ಎಣ್ಣೆ ಎಲ್ಲರಿಗೂ ಬೇಕೇಬೇಕು ಅಲ್ಲವೆ? ಸರಿ, ಬ್ಲಾಕ್ ಮಾರ್ಕೆಟ್‌ನಲ್ಲಿ ಇವರ ಹತ್ತಿರವೇ ಕೊಂಡುಕೊಳ್ಳಬೇಕು. ಅಂತೆಯೇ ಸಕ್ಕರೆ, ಸೋಜಿ (ರವೆ), ಅಕ್ಕಿ, ರಾಗಿ, ಜೋಳ, ಇವುಗಳೂ ಕಂಟ್ರೋಲ್ ಸಾಮಾನುಗಳೇ ಆಗಿದ್ದವಾಗಿ, ಅವುಗಳ ವ್ಯಾಪಾರದಿಂದಲೂ ಚೆನ್ನಾಗಿ ಕಾಸು ಕಂಡರು. ದೊಡ್ಡೀರಶೆಟ್ಟಿಯು ಹಳ್ಳಿಗಳಲ್ಲಿ ಮುಂಗಡವಾಗಿ ಆಸಾಮಿಗಳಿಗೆ ಹಣ ಕೊಟ್ಟಿದ್ದು, ಸುಗ್ಗಿ ಕಾಲಕ್ಕೆ ಅಗ್ಗದ ದರದಲ್ಲಿ ದವಸ ಪಡೆದು, ಅದನ್ನು ಕಳ್ಳ ದಾರೀಲಿ, ಕಳ್ಳ ರೀತೀಲಿ, ಉಪಾಯದಿಂದ ಊರಿಗೆ ಸಾಗಿಸುವ ಜವಾಬ್ದಾರಿ ಹೊತ್ತುಕೊಂಡಿದ್ದ. ಮನೆಯಲ್ಲಿ ಮುಂದೆ ಒಳ್ಳೆಣ್ಣೆ, ಕಡಲೇಕಾಯಿ ಎಣ್ಣೆ ಡಬ್ಬಗಳನ್ನು ಜೋಡಿಸಿದ್ದರೆ, ಹಿಂದೆಲ್ಲಾ ಬರೀ ಸೀಮೆ ಎಣ್ಣೆ ಡಬ್ಬಗಳನ್ನೇ ಜೋಡಿಸುತ್ತಿದ್ದರು. ಮುಂದಕ್ಕೆ ಅವರೆ, ಉದ್ದು, ತಡಗುಣಿ, ತೌಡು,ಹತ್ತೀಬೀಜದ ಮೂಟೆಗಳಾದರೆ, ಹಿಂದಕ್ಕೆಲ್ಲ ಕಂಟ್ರೋಲ್ ಇರೋ ಸಾಮಾನುಗಳ ಮೂಟೆಗಳನ್ನು ಜೋಡಿಸುತ್ತಿದ್ದರು. ಮೂರು ಜನವೂ ಕಾಳಸಂತೆ ಖದೀಮರಾಗಿದ್ದರು. ಇವರಂತೆಯೇ ಬೆಂಗಳೂರು ಮಾದಪ್ಪ, ಗುಳಗಟ್ಟದ ಗಂಗಾಧರಪ್ಪ ಅವರೂ ಕಾಳ ಸಂತೆ ಖದೀಮರೇ ಆಗಿದ್ದರು. ಇವರು ಸಂಪಾದನೆ ಮಾಡುತ್ತಾರೆ ಅಂದುಕೊಂಡು ಅವರಿಗೆ ಹೊಟ್ಟೆ ಉರಿ....ಅವರು ಸಂಪಾದನೆ ಮಾಡುತ್ತಾರೆ ಅಂದುಕೊಂಡು ಇವರಿಗೆ ಹೊಟ್ಟೆ ಉರಿಯಾಗಿತ್ತು.

ಅವಿದ್ಯಾವತಿಯರಾದ ತಮ್ಮಯ್ಯ ಮತ್ತು ದೊಡ್ಡೀರಶೆಟ್ಟಿ ಇವರಿಬ್ಬರ ಹೆಂಡತಿಯರಲ್ಲೂ ಅಲ್ಪತನ ಜಾಸ್ತಿ. ಗಂಡಂದಿರುಗಳ ಹತ್ತಿರವೇ ಅಕ್ಕಿ ರಾಗಿ ಕೊಂಡುಕೊಳ್ಳುವುದು. ಅಕ್ಕಿಗೆ

ಕಲ್ಲು, ಮಣ್ಣು. ತೌಡು ಬೆರಸಿ ಮೂಲೆಯಲ್ಲಿ ಸುರಿದುಬಿಟ್ಟು, ಮೇಲೆ ನೀರುಚುಮುಕಿಸಿ ಬಿಟ್ಟರೋದು....ಯಾರಾದರೂ ಹಿಟ್ಟಿಟ್ಟು ಚಟ್ಟಟ್ಟೆಯಾಗಿ, ತುತ್ತಿಗೆ ಘಟ್ಟ ಹತ್ತಿಕೊಂಡು ಬಂದರೆ, ಅವರನ್ನ ಮುಸ್ಸಂಜೆವರ್ಗು ಕಾಯಿಸಿದ್ದು, ಆಮೇಲಿಂದ ಅವನಿಂದ ಮೊದಲು ದುಡ್ಡು ತೆಗೆದುಕೊಂಡು, ಕಮ್ಮಿ ಸೇರು (ಪಿಚ್ಚಿಸೇರು) ಕೈಗೆ ತೆಗೆದುಕೊಂಡು, ಅಳೆದುಕೊಂಡು ಮೊರಕ್ಕೆ ಹಾಕಿಕೊಂಡು ಬಂದು, ದಿಕ್ಕೆಟ್ಟ ಕಾಳಸಂತೆಯಲ್ಲಿ ಕೊಳ್ಳಲು ಬಂದಿರುವವನು ತಲೆಗೆ ಸುತ್ತಿಕೊಂಡಿದ್ದ ಹರಕು ವಸ್ತ್ರವನ್ನೇ, ಹ್ಯಾಗೆ ಹ್ಯಾಗೋ ಜೋಡಿಸಿ ನೆಲದ ಮೇಲೆ ಹಾಸಿದರೆ....ಮೊರದಿಂದ ಅದಕ್ಕೆ ಸುರಿಯುತ್ತಾರೆ ಅವನು ಸರೀನೋಕಮ್ಮೀನೋ ಒಂದೂ ನೋಡದೆ,ಸದ್ಯಸಿಕ್ಕಿತಲ್ಲಾ ಅಂದುಕೊಂಡು ತೆಗೆದುಕೊಂಡು ಹೋಗುತ್ತಾನೆ. ಹೀಗೆ ಸಂಪಾದನೆ ಮಾಡಿ,ಒಬ್ಬೊಬ್ಬಳ ಹತ್ತಿರವೂ ಏನಿಲ್ಲಾ ಅಂದರೂ, ಸುಮಾರು ಎರಡೆರಡು ಸಾವಿರ ರೂಪಾಯಿಗಳಷ್ಟು ಹಣ ಕೂಡಿಟ್ಟಿದ್ದರು. ಊರಿನಲ್ಲಿ ಕೆಲವರು ತಮ್ಮ ಹೆಂಡತಿಯರಿಗೆ "ನೋಡಿ ನೀವು ಇದ್ದೀರಿ, ನಾವು ತಂದುಹಾಕಿದುದನ್ನ ತಿಂದ್ಕೊಂಡು. ಆ ತಮ್ಮಯ್ಯ, ದೊಡ್ಡೀರಶೆಟ್ಟಿ ಅವರ ಹೆಂಡತಿಯರನ್ನ ನೋಡಿಕೊಂಡಾದರೂ ಬಾಳಬಾರದೇ ನೀವು?....ಎಷ್ಟು ಜಾಣೇರು ಅವರು, ಗಂಡಸರು ಹೊರಗೆ ಹ್ಯಾಗೆ ಸಂಪಾದನೆ ಮಾಡುತ್ತಾರೋ, ಹೆಂಗಸರೂನು ಹಾಗೇನೆ ತಾವೂನೂ ಸಂಪಾದನೆ ಮಾಡುತ್ತಾರಲ್ಲಾ! ಅವಲ್ವ ಇರೋದು!" ಹೀಗೆ ಅವರಿಬ್ಬರ ಆದರ್ಶವನ್ನು ತಮ್ಮ ಹೆಂಗಸರ ಮುಂದೆ ಹಿಡಿಯುತ್ತಿದ್ದರು. ತಮ್ಮಯ್ಯ, ದೊಡ್ಡೀರಶೆಟ್ಟಿಯ ಹೆಂಡತಿಯರು ಇಬ್ಬರ ಹತ್ತಿರವೂ ದುಡ್ಡಿತ್ತಲ್ಲ!..........ಆ ದುಡ್ಡನ್ನ ಮೈಸೂರಿಗೆ ಹೋಗಿದ್ದು ಬರುವವರ ಮುಖಾಂತರ

ಹಾಗಷ್ಟು ಹೀಗಷ್ಟು ಚಿನ್ನ. ಬೆಳ್ಳಿ ತರಿಸಿ ಇಟ್ಟುಕೊಂಡಿದ್ದರು. ಗಂಡಂದಿರ ಕಿವಿ ಕಿವಿ ಹತ್ತಿಸದೆ ಚಿನ್ನ ಬೆಳ್ಳಿಯ ನಗನಾಣ್ಯಗಳನ್ನು, ಕಂಚುಮುಟ್ಟನ್ನು ಅಡು ಸಡು ಇಟ್ಟುಕೊಂಡಿದ್ದರು. ಕೆಲವರಿಗೆ ಕೈಸಾಲವನ್ನೂ ಕೊಟ್ಟಿದ್ದರು. ಚಿನ್ನ ಬೆಳ್ಳಿ ಸಾಮಾನಿಗೆ ಆರು ಕಾಸು ಬಡ್ಡಿ, ಕಂಚುಮುಟ್ಟಿನ ಮೇಲೆ ಆಣೆ ಬಡಿ, ಕೈಸಾಲಕ್ಕೆ ಎರಡಾಣೆ ಬಡ್ಡಿ—ಜೊತೆಗೆ ಹಣ ಕೊಡುವಾಗಲೆ ಬಡ್ಡಿಯನ್ನು ಹಿಡಿದುಕೊಂಡೇ ಕೊಡುತ್ತಿದ್ದರು. ಹೀಗೆ ಗಂಡಂದಿರಿಗೂ ಸಂಪಾದನೆ ಹುಚ್ಚು ಹೆಂಗಸರಿಗೂ ಸಂಪಾದನೆ ಹುಚ್ಚು ಹಿಡಿದಿತ್ತು. ನಾಗಣ್ಣನ ಕುಟುಂಬಕ್ಕೆ ಇದೆಲ್ಲ ಸೈರಿಸುತ್ತಿರಲಿಲ್ಲ.

ಊರಿಗೊಬ್ಬ ಅಕ್ಕಸಾಲಿಗ ಹೊಸದಾಗಿ ಬಂದ. ಮೊದ ಮೊದಲು ನಂಬಿಕೆಯಿಂದ ಕೆಲವರೊಡನೆ ವ್ಯವಹರಿಸಿದ. ಊರಲ್ಲೆಲ್ಲ ಅವನ ಕೀರ್ತಿ ಹಬ್ಬಿತು. ಎಲ್ಲರೂ ಅವನಿಗೆ ಒಂದಲ್ಲ ಒಂದು ರೀತಿಯಲ್ಲಿ ಕೊಟ್ಟು ಸಿಕ್ಹಾಕಿಕೊಂಡರು. ತಮ್ಮಯ್ಯ ದೊಡ್ಡೀರಶೆಟ್ಟಿ ಇವರಿಬ್ಬರ ಹೆಂಡತಿಯರೇ ಅಲ್ಲೀಗೆಲ್ಲ ತೀರ ಕೊಟ್ಟು ಸಿಕ್ಹಾಕ್ಕೊಂಡೋರು. ಇಬ್ಬರಿಂದ ಸುಮಾರು ಸಾವಿರ ರೂಪಾಯಿನಷ್ಟು ಸೊಮ್ಮು (ಸ್ವತ್ತು) ಅವನಿಗೆ ಸೇರಿತು. ಹೀಗೆ ಪ್ರಥಮದಲ್ಲಿ ನಂಬಿಕೆ ಹುಟ್ಟಿಸಿ. ಆಮೇಲಾಮೇಲೆ ಗಂಟುಮಾಡಿಕೊಂಡು ಹೇಳದೆ ಕೇಳದೆ ಕಾಲಿಗೆ ಬುದ್ಧಿ ಹೇಳಿದ. ಅವನ ಕೈಗೆ ನಗನಾಣ್ಯ ಮಾಡಿಸಲು ಚಿನ್ನ ಬೆಳ್ಳಿ, ದುಡ್ಡು ಕೊಟ್ಟು ಸಿಕ್ಹಾಕೊಂಡಿದ್ದವರ ಪಾಡು ಹೇಳೋಕಿಲ್ಲ ಅನುಭವಿಸೋಕಿಲ್ಲ ಹಾಗಾಯಿತು. ಒಳಗೇ ನುಂಗಿ ನುಂಗಿ ಅದರಿಂದ ದಹಿಸಿ ಹೋಗುತ್ತಿದ್ದರು. ಕಷ್ಟಪಟ್ಟು ಸಂಪಾದನೆ ಮಾಡಿದುದೇ ನಿಲ್ಲಿಸುವುದು ಕಷ್ಟ, ಇನ್ನು ಹೀಗೆಲ್ಲ ಸಂಪಾದನೆ ಮಾಡಿದುದು ಎಲ್ಲಾದರೂ

ಉಳಿಯುತ್ತದೆಯೇ ? ಖಂಡಿತ ಉಳಿಯುವುದಿಲ್ಲ. ಹ್ಯಾಗೆ ಬಂದಿತೋ ಹಾಗೇ ಹೊರಟುಹೋಯಿತು. ಎಷ್ಟೇ ಮುಚ್ಚ ಬೇಕು ಅಂದರೂ ಸಹ ಹೆಂಗಸರ ಬಾಯಿ ಸುಮ್ಮನಿರೋದು ? ಗಂಡಸರೇ ಅವರಿಂದ ಬಾಯಿ ಬಿಡಿಸದೆ ಇರೋರು ? ಗುಟ್ಟೆಲ್ಲ ರಟ್ಟಾಯಿತು. ಆದರೇನಾಯಿತು ಹೋದ ಬದುಕು ಮತ್ತೆ ಬಂದಂತಾಯಿತೆ ? ಪಾಪಿ ಸಂಪಾದಿಸಿದ್ದು ಪರರಿಗೆ ಅನ್ನೋ ಹಾಗಾಯಿತು.

೪

ಬೆಂಗಳೂರು ಮಾದಪ್ಪ ಸತ್ತುಹೋದ. ಮನೆಯಲ್ಲಿ ಮಾದಪ್ಪನ ಹೆಂಡತಿ, ಮಗಳು, ಮೊಮ್ಮಗಳು ಮೂರೇ ಜನರು. ಮೊಮ್ಮಗಳಿಗೆ ಆರು ವರ್ಷ. ಮಾದಪ್ಪ ಸಾಯುವಾಗ ಗಂಗಾಧರಪ್ಪನನ್ನು ಪಕ್ಕದಲ್ಲಿ ಕೂರಿಸಿಕೊಂಡು, "ಎಲ್ಲಾರೂನು ಮೊದಲಿನಿಂದಲೂ ಹಾಗೆ ಸಾದಿಸೋರೇನೆ. "ಬಿಸಿನೀರಿಗೆ ತಣ್ಣೀರು ಒತ್ತಾಸೆ" ಅನ್ನೋಹಾಗೆ ನಾವಿಬ್ಬರೂ ಇದ್ದೆವು. ಈವಾಗ ನನ್ನ ಕೆಲಸ ಆಗೋಯ್ತು. ನೀನು ಒಬ್ಬಂಟ್ಟಿಗನಾದೆ. ಈ ಹಗೆ ಸಾಧಿಸುವವರ ಮಧ್ಯೆ ನೀ ಹ್ಯಾಗಪ್ಪ ನಿಭಾಯಿಸೋದು. "ಉರಿಯೊಳಗೆ ಸಸಿ ನಿಂತಾತೆ?" ಅನ್ನೋಹಾಗೆ. ಹ್ಯಾಗಾದರೂ ಆಗಲಿ ಧೈರ್ಯವಾಗಿ ಕಾಲಹಾಕು ಗಂಗಾಧರಪ್ಪಾ. ನನ್ನ ಮನೆ ವಿಷಯದಲ್ಲಿ ಮಾತ್ರ ನಾನಿದ್ದಾಗ ಹೇಗಿದ್ದೊ ಹಾಗೇನೆ ಇರಬೇಕು. ನನ್ನ ಹೆಂಡತಿ ಏನೂ ಕಂಡವಳಲ್ಲ. ಮಗಳು ಚಿಕ್ಕವಯಸ್ಸಿನಲ್ಲೆ ಗಂಡನನ್ನು ಕಳೆದುಕೊಡ್ಳು. ಇನ್ನು ಆ ಏನೂ ಅರಿಯದ ಕೂಸು....ನೀನು ನಿನ್ನ ಮನೆಯವರನ್ನು ಕಂಡಂತೆ ಕಂಡುಕೊಂಡು ಹೋಗುತ್ತೀನೆ ಅಂದು ಮಾತುಕೊಟ್ಟರೆ ಮಾತ್ರ ನಾನು ಸುಖವಾಗಿ ಪ್ರಾಣಬಿಡುತ್ತೇನೆ" ಎಂದು ಹೇಳಿ ಕಣ್ಣೀರು ತುಂಬಿಕೊಂಡು ಗಂಗಾಧರಪ್ಪನ ಕೈ ಹಿಡಿದುಕೊಂಡ.

ಗಂಗಾಧರಪ್ಪ ಮಾದಪ್ಪನನ್ನು "ಮಾವ" ಎಂದು ಕೂಗುತ್ತಿದ್ದ. ಮಾದಪ್ಪನ ಮಾತುಕೇಳಿ ಅವನಿಗೂ ದುಃಖ ಉಕ್ಕಿಬಂದಿತು.

"ಆಗಲಿಮಾವ, ನೀವು ಹೇಳಿದಹಾಗೇನೆ ಆಗಲಿ, ನೀವು ನಿರಾಳ ವಾಗಿ "ಶಿವನೇ"ಅಂತ ಅನ್ನಿ ! ಎಂದ. ಈರೀತಿಯಲ್ಲಿ ಗಂಗಾದರಪ್ಪ ನಿಂದ ಮಾತು ತೆಗೆದುಕೊಳ್ಳುವಾಗ ಮಾದಪ್ಪನ ಹೆಂಡತಿ, ಮಗಳು ಎಲ್ಲರೂ ಅಲ್ಲೇಇದ್ದರು.

ಮಾದಪ್ಪ ಪ್ರಾಣಬಿಟ್ಟಮೇಲೆ ಗಂಗಾದರಪ್ಪನು ಮಾದಪ್ಪನವ ರಲ್ಲಿದ್ದ ಜವಳಿಯನ್ನೆಲ್ಲಾ ತನ್ನ ಅಂಗಡಿಗೇನೆ ಹಾಕಿಕೊಂಡು ವ್ಯಾಪಾರವಾಡಿದ. ಮಾದಪ್ಪನಿಗೆ ಬಾಕಿ ಸಾಕಿಯನ್ನೆಲ್ಲ ಗಂಗಾ ಧರಪ್ಪನೇ ವಸೂಲಿಮಾಡಹತ್ತಿದ. ಏನೇಮಾಡಬೇಕಾದರೂ ಗಂಗಾ ಧರಪ್ಪನೇ ಮಾಡುತ್ತಿದ್ದ. ಈಮನೆ ಹೆಂಗಸರು ಆಮನೇಲಿ, ಆಮನೆ ಹೆಂಗಸರು ಈಮನೆಯಲ್ಲಿ ಅಂದರೆ ಅಷ್ಟರಮಟ್ಟಿಗೆ ಸಮರ ಸಭ್ಹಾವ ದಿಂದ ಒಂದು ಮನೆಯವರಂತೆ ನಡೆದುಕೊಂಡು ಹೋಗುತ್ತಿದ್ದರು.

ಜುಂಜಪ್ಪನವರ ಮಕ್ಕಳಿಗೆ ಇದು ಸಹಿಸಲಾರದಾಯಿತು. ಹೇಗಾದರೂ ಇದನ್ನು ಮುರಿಯಬೇಕೆಂದು ನಿರ್ಧರಿಸಿದರು. ಅಪ ಪ್ರಚಾರಕ್ಕೆ ಷುರುಮಾಡಿದರು. "ಇನ್ನೇನಯ್ಯ....ಮಾದಪ್ಪನ ಮನೆ ಯನ್ನು ಎಂದೋ ಮುಳುಗಿಸಿಬಿಟ್ಟ.... ಜವಳಿಯನ್ನು ತಂದು ತನ್ನ ಅಂಗಡಿಗೆ ಹಾಕಿಕೊಂಡ. ಲೇವಾದೇವಿ ತಾನೇ ನೋಡಿಕೊಂಡ. ಮಾದಪ್ಪನ ಮಗಳನ್ನ ಕೈಗ್ಹಾಕ್ಕೊಂಡವ್ನೆ ಪಾಪಿ !" ತಮ್ಮಯ್ಯಾನು ಅನ್ನೋನೆ, ದೊಡ್ಡವೀರಶೆಟ್ಟೇನು ಅನ್ನೋನೆ....ಅವರ ಹೆಂಡತಿ ಯರಿಬ್ಬರು, ಚಿತ್ರಾಂಗಿಣಿಯರಂತು ನಿಂತರೆ ಕೂತರೆ ಇದೇ ಜಪವಾ ಗಿಹೋಯಿತು. ಹೀಗಾಗಿ ಸ್ವಲ್ಪ ದಿನಗಳಲ್ಲಿಯೆ ಆಜಾತಿ ಈಜಾತಿ ಅನ್ನದೆ, ಚಿಕ್ಕವರು ದೊಡ್ಡವರು ಅನ್ನದೆ ಎಲ್ಲರ ಬಾಯಲ್ಲೂ ಇದೇ ಮಾತಾಗಿಹೊಯಿತು. ಊರಿಗೆ ಊರೇ ಕೂಗಿಹೋಯಿತು.ಗಂಗಾ ದರಪ್ಪ ಮಾತ್ರ ಎದೆಗೆಡಲಿಲ್ಲ. ನಿಜವಾಗಿಯೂ ನಿಸ್ಪೃಹನಾಗಿದ್ದ

ನಾಗಿ ಯಾವುದನ್ನು ಕಿವಿಮೇಲೆ ಹಾಕಿಕೊಳ್ಳದೆ, ಕಂಡರೂ ಕೇಳಿದರೂ ಕಾಣಲಿಲ್ಲ ಕೇಳಲಿಲ್ಲ ಅಂದುಕೊಂಡು ತನ್ನಷ್ಟಕ್ಕೆ ತಾನು ಎಂದಿನಂತೆ ಮುಂದುವರಿಯುತ್ತಿದ್ದ. ಆದರೆ ಮಾದಪ್ಪನ ಹೆಂಡತಿಮಾತ್ರ ಜನದ ಕೂಗಿಗೆ ಬೆದರಿಹೋಗಿದ್ದಳು. ಮನೆಯಲ್ಲಿ ಮೂರೊತ್ತು ಅತ್ತುಕೊಂಡು ಕಣ್ಣೀರಿನಲ್ಲಿ ಕೈಕೂಳೆಯುತ್ತಿದ್ದಳು.

ಇದೇ ಮಾತಿಗಾಗಿ ದೊಡ್ಡ ವೀರಶೆಟ್ಟಿ, ನಾಗಣ್ಣ ಇಬ್ಬರೂನು ತಾವೇ ಕಾಲುಕೆರೆದುಕೊಂಡು ಗಂಗಾದರಪ್ಪನ ಸಂಗಡ ಜಗಳವಾಡಿದರು. ಅವನನ್ನು ಚೆನ್ನಾಗಿ ಪೂರೈಸಿ ಬಿಟ್ಟರು. ಪಾಪ ! ಅವನನ್ನು ತಡೆದು ಕೊಳ್ಳುವುದಕ್ಕೂ ಯಾರೂ ಬರಲಿಲ್ಲ. ತಮ್ಮಯ್ಯಪ್ಪ ಪಡಸಾಲೆಯಲ್ಲಿ ನಿಂತೇ ಇದ್ದ. ಮಾದಪ್ಪನ ಮನೆ ಕಡೆಗೆ ತಿರುಗಿಕೊಂಡು ಇನ್ನೊಂದುದಿನ ಏನಾದರು ಮುಂಡೇರು ಅವನಮನೇಗೆ ಹೋಗಲಿ, ಅಥವಾ ಅವನನ್ನ ತಮ್ಮ ಮನೆಗೆ ಸೇರಿಸಲಿ ಆವಾಗ ನೋಡಲಿ, ಮನೆ ಮೇಲೆ ಒಂದು ಹೆಂಚನ್ನೂ ಉಳಿಸುವುದಿಲ್ಲ. ಮುಂಡೆರ್ಗೆ ಮೂಗು ಮುಂದಲೆ ಕೊಯಿಸಿ ಬಿಡ್ತೀನಿ. ಏನು ಏಳೋರು ಕೇಳೋರು ಒಬ್ಬರೂನು ಇಲ್ವೇ ಇಲ್ಲ. ಹೆಂಗೆ ಬೇಕಾದರೂ ಕುಣಿದಾಡಬಹುದೂ ಅಂತ ತಿಳಿದುಕೊಂಡರೇನೊ ರಂಡೇರು !" ಹೀಗೆಇನ್ನೂ ಅನೇಕ ವಿಧವಾಗಿ ಹೀನಾಯದಿಂದ ಅಂದು ಆಡಿದ. ಯಾರೇಬರಲಿ ತಮ್ಮಯ್ಯ ಇವರ ಕಡೆಗೆ ಸಪೋರ್ಟ್ (Support) ಆಗುತ್ತಾರೆಯೇ ಹೊರತು, ಗಂಗಾದರಪ್ಪನವರ ಕಡೆಗಾಗಲಿ, ಮಾದಪ್ಪನ ಮನೆಯವರ ಕಡೆಗಾಗಲಿ ಸೈಡ್ (Side) ಮಾಡೋರು ಒಬ್ಬರೂ ಇಲ್ಲ. ಗಂಗಾದರಪ್ಪನಿಗೆ "ನಿನಗೆ ಯಾವ ತೀಟೆನಯ್ಯ ? ನಿನ್ನ ವ್ಯಾಪಾರವನ್ನ ನೀನುಮಾಡಿಕೊಂಡು ಹೋಗಲಾರ ! ಜನ ಆಡುತ್ತಾ ಇದ್ದರೂ ಪುನಃ ಹೋಯ್ತಿಯಲ್ಲಿ ಎಂಥ ಭಂಡನಯ್ಯ ನೀನು !" ಹೀಗೆಲ್ಲ ಜನ ಅಂದರು.

ತಮ್ಮಯ್ಯನು ವಾಚಾಮ ಗೋಚರವಾಗಿ ಬೈದು ತನ್ನಷ್ಟಕ್ಕೆ ಸುಮ್ಮಿರದೇ ಎಕ್ಸ್‌ಪ್ರೆಸ್ ಗಾಡಿ ಓಡಿಸಿದಂತೆ ಎಡವು ತಡವು ಇಲ್ದೆ ಬೈತಾ ಅನ್ನೆ. ತಮ್ಮಯ್ಯ ತನ್ನ ಎದುರು ಹಾಕಿಕೊಂಡಿದ್ದು ಮಾದಪ್ಪನ ಮನೆಯವರಿಗೆ ಹಾವ್ನ ಚುಚ್ಚಿ ಎಬ್ಬಿಸಿದಂತಾಯಿತು, ಮುಂಡೇರು ಹೀಗೆ ಮಾಡತಾಯಿರ್ಲಿ, ಸಂತೇಲಿ ಅಳ್ದ ಕೇಳ್ತೀನಿ ಅವಮಾನದಿಂದ ನಾಲ್ಗೆಕಿತ್ಕೊಂಡ್ ಸಾಯ್ಲಿ. ಬರ್‍ತಾ ಬರ್‍ತಾ ರಂಡೇರ್ದ್ದು ರಾಜ್ಯ ರಾಥಾಂತಕ್ಕೆ ಬಂತು. ಮನೆಗೆ ಕೊಳ್ಳಿ ಇಟ್ಟು ಉಳಿಬಾಳ್ ಇಲ್ದಂಗ್ ಮಾಡಿ ಬಿಡ್ತೀನಿ.

ಮಾದಪ್ಪನ ಮನೆ ಉದ್ಧಾರವಾಯ್ತು. ಮನೆಗೆ ಮಾರೀರು ಸೇರ್ಕೊಂಡಂಗಾಯ್ತು. ಮನೆ ಮುರ್‍ಕ ಮುಂಡೇರು ಮಾದಪ್ಪನ್ನ ಸ್ಮಸನಕ್ಕೆಕಳುಸಿ ಮನೇನ ಸೂಳ್ಗೇರಿ ಮಾಡ್ತಾ ಅವ್ರೆ.

ತಮಯ್ಯನಿಗೆ ಮೆಣಸಿನಕಾಯಿ ಜೋಂಡ ಹೆದ್ದಂಗೆ ಇರ ಲಾರದ ಉರಿ ಕೋಪಾನಾ ಅವರ ಮೇಲೆ ತೋರಿಸಿ ಬಯ್ದು ಬಯ್ದು ತನ್ಗೆ ಸಾಕಾಗಿ ತಾಮಸವಾದ,

ಅಂತೂ ಇಂತೂ ಅವರ ಗಾಚಾರ ಬಿಡ್ಸಿದ. ಅನ್ಬಾರದನ್ನೆಲ್ಲಾ ಅನ್ನಿಸ್‌ಕೊಂಡು, ಕೇಳಬಾರದನ್ನೆಲ್ಲಾ ಕೇಳಿ ಒಳಗೊಳಗೆ ಗೊಳಾಡ್‌ಕೊಂಡ್ರು.

ತಮ್ಮಯ್ಯ ಈ ಪ್ರಯತ್ನವೆಲ್ಲಯಾಕೆಂದರೆ; ಹ್ಯಾಗಾದರೂ ಮಾಡಿ ಗಂಗಾದರಪ್ಪ ಮಾದಪ್ಪನ ಮನೆಗೆ ಹೋಗದಂತೆ ಮಾಡಿ ಬೇಕು. ತಾನು ಪ್ರವೇಶಮಾಡಬೇಕು. ಕೊನೆಗೆ ಅವನ ಉದ್ದೇಶ ಎಲ್ಲಿಯವರೆವಿಗೂ ಇತ್ತೂ ಅಂದರೆ—: ಮಾದಪ್ಪನ ಮಗಳ ಮಗಳಿ ದೆಯಲ್ಲ ಚಿಕ್ಕಹುಡುಗಿ. ಅದೆಷ್ಟು ವರುಷದ್ದಾದರೂ ಆಗಿರಲಿ, ತನ್ನ ಮಗನಿಗೆ ತಂದುಕೊಳ್ಳಬೇಕು. ಮಾದಪ್ಪನ ಆಸ್ತಿಪಾಸ್ತಿಯ ನ್ನೆಲ್ಲ ತಾನು ಹೊಡಯಬೇಕೆಂಬುದಾಗಿತ್ತು. ಗಂಗಾಧರಪ್ಪನಿಗೆ ಅವನ ತಾಯಿಯು, "ಮಾದಪ್ಪನ ಮನೆ ಹಾಳಾದರೆಷ್ಟು ಊರಾ ದರೆಷ್ಟು.... ಅಥಾಮೀರಿ ನಿನಗೇನಾದರೂ ಒಬ್ಬ ಗಂಡುಮಗ ಇದ್ದಾನ ಆ ಮಾದಪ್ಪನ ಮೊಮ್ಮಗಳನ್ನು ಮದುವೆಮಾಡಿಕೊಳ್ಳು ವುದಕ್ಕೆ,....ನಿನಗಿರುವುವು ಎರಡು ಹೆಣ್ಣುಮಕ್ಕಳು. ನೀಯಾಕಪ್ಪ ಅವರ ದೆಸೆಯಿಂದಲಾಗಿ ಮಾತು ಕೇಳಬೇಕು, ಅವರು ಆಳಿನಲ್ಲಿ ಬಲ, ದುಡ್ಡಿನಲ್ಲೂಬಲವಾದವರು. ನಿನಗೆ ಯಾರಿದ್ದಾರು. ಆದ್ದ ರಿಂದ ಇನ್ನುಮೇಲೆ ಅವರಮನೆ ನ್ಯಾಯಕ್ಕೆ ನೀ ಏನಾದರೂ ಕೈ ಹಾಕಿದರೆ ನಿಮ್ಮ ಅಪ್ಪೆ ತಿಂದುಕೊಂಡಹಾಗೆ ಕಂಡ್ಯಾ? ಎಂದು ಆಣೆ ಇಟ್ಟುಕೊಂಡರು.

ಗಂಗಾದರಪ್ಪನ ತಮ್ಮ ಇದ್ದವನು ಜುಂಜಪ್ಪನವರ ಮನೆಯ ಮಾತುಕಟ್ಟಿಕೊಂಡು ತನ್ನ ಮನೆಯಲ್ಲಿ ಕೂಗಾಡೋದಕ್ಕೆ ಷುರು ಮಾಡಿದ! ನಾಳೆಯಿಂದ ಬಡ್ಡೇರು ನಮ್ಮ ಮನೆಗೆ ಬರ್ಲಿ, ಸೀರೆ ಅಳಿದುಕೊಳ್ಳುತ್ತೇನೆ ಎಂದು ಕೂಗಾಡಿದ.

ಇಷ್ಟೆಲ್ಲಾ ಆದಮೇಲೆ ನಿಜವಾಗಿಯೂ ಮಾದಪ್ಪನ ಹೆಂಡತಿ ಯಾಗಲಿ, ಮಗಳಾಗಲಿ ಗಂಗಾದರಪ್ಪನ ಮನೆಗೆ ಹೋಗಿ ಬರುವು ದುಂಟೆ? ಎಂದಿಗೂ ಸಾಧ್ಯವಿಲ್ಲ. ಕೊನೆಗೆ ಚಿಕ್ಕಹುಡುಗಿ ಆಡುವು

ದಕ್ಕೂ ಸಹ ಹೊರಕ್ಕೆ ಬರುವ್ರದು ತಪ್ಪಿಹೋಯಿತು. ಗಂಗಾಧರಪ್ಪನು ಯಾವುದಕ್ಕಾದರೂ ಅಪೇಕ್ಷಿಸುವುದನ್ನು ಬಿಟ್ಟರು.

ಮೆತ್ತಗೆ ತಮಯ್ಯಪ್ಪ ಮಾದಪ್ಪನ ಮನೆಗೆ ಹೋಗಿಬರುವುದನ್ನು ಷುರುಮಾಡಿದ. ದಿನ ಕಳೆದಂತೆಲ್ಲ ಗಂಗಾಧರಪ್ಪ ಯಾವ ರೀತಿಯಲ್ಲಿ ಮೊದಲಿಗೆ ಆ ಮನೆ ವೈವಾಟವನ್ನೆಲ್ಲಾ ನೋಡುತ್ತಿದ್ದನೋ, ಅದೇರೀತಿಯಲ್ಲಿ ಈವಾಗ ಇವನು ನೋಡತೊಡಗಿದ. ಗಂಗಾಧರಪ್ಪನಿಗೆ ಚಿಕ್ಕಜುಂಜಪ್ಪನವರ ಮನೆಯವರಮೇಲೆ ಮತ್ಸರ ಮನೆಮಾಡಿಕೊಂಡಿತು. ಆದರೆ ಒಬ್ಬಂಟಿಗ, ಯತ್ನವಿಲ್ಲ, ಸುಮ್ಮನಾದ.

೫

ನಾಗಣ್ಣನಿಗೆ ಹುಷಾರು ತಪ್ಪಿತು. ಊರಿನಲ್ಲಿ ಯಾರ ಔಷಧಿಗೂ ಬೊಗ್ಗದೆ ಕೊನೆಗೆ ಮೈಸೂರಿಗೆ ಸಾಗಿಸಿದರು. ಅಲ್ಲಿ ಆಸ್ಪತ್ರೇಲಿ 'ಕ್ಷಯ' ಎಂದು ತಿಳಿಸಿದರು. ಕರೆದುಕೊಂಡು ಹೋಗಿದ್ದವರಿಗೆಲ್ಲ ಎದೆ ಬಿಚ್ಚ್ಹೋಯಿತು. ಸರಿ, ಆಸ್ಪತ್ರೆಗೆ ಸೇರಿಸಿದರು. ತಮ್ಮಯ್ಯನು ಮೈಸೂರು—ಬೊಮ್ಮನಹಳ್ಳಿಯ ದಾರಿ ಸವೆಸಹತ್ತಿದನು. ಹೀಗಾಗಿ ಅಂಗಡಿ ಜವಾಬ್ದಾರಿಯು ಪೂರ್ಣವಾಗಿ ದೊಡ್ಡೀರಶೆಟ್ಟಿ ಮೇಲೆ ಬಿದ್ದಿತು. ಸುಮಾರು ಒಂಭತ್ತು ತಿಂಗಳ ಕಾಲ ನಾಗಣ್ಣನಿಗೆ ದುಡ್ಡು ಅನ್ನುವುದನ್ನು ನೀರಿನಂತೆ ಸುರಿದು, ಚಿಕಿತ್ಸೆ ಮಾಡಿಸಿದ ಮೇಲೆ ಗುಣವಾಯಿತು. ಗುಣವಾದರೂ ಚಕ್ಕಳ ಮೂಳೆ ಎರಡರ ಹೊರತು ಅವನ ಶರೀರದಲ್ಲಿ ಬೇರೇನೂ ಇಲ್ಲ. ಕಳುಹಿಸಿಕೊಡುವಾಗ ಡಾಕ್ಟರು, ಆಹಾರಾದಿಗಳನ್ನು ತೆಗೆದುಕೊಳ್ಳುವುದರಲ್ಲಿ ಬಹಳ ಹುಷಾರು ಇರಬೇಕೆಂದೂ, ಯಾವುದೇ ಕೆಲಸ ಕಾರ್ಯಗಳಿಗೂ ಹೋಗದೆ ಸುಮ್ಮನೆ ವಿಶ್ರಾಂತಿ ತೆಗೆದುಕೊಳ್ಳಬೇಕೆಂದೂ, ಪ್ರಾತಃಕಾಲ ಸಾಯಂಕಾಲಗಳಲ್ಲಿ ಗಾಳಿ ಸೇವನೆಗೆ ಅವಶ್ಯ ಹೋಗಿಬರಬೇಕೆಂದೂ ತಿಳಿಸಿ,........

ತಪ್ಪಿದರೆ ರೋಗ ಮತ್ತೆ ಮರಳಬಹುದೆಂದೂ ಭಯಹುಟ್ಟಿಸಿ, ಟಾನಿಕ್ಕು ಅದೂ ಇದೂ ಕೊಟ್ಟು ಕಳುಹಿಸಿಕೊಟ್ಟಿದ್ದರು.

ನಾಗಣ್ಣನಿಗೆ ಗುಣವಾಗಿ ಆತ ಊರಿಗೆ ಬಂದಮೇಲೆ ದೊಡ್ಡೀರಶೆಟ್ಟಿಯು ಅಂಗಡಿ ಗಲ್ಲಾದ ಮೇಲೆ ಕೂರುವುದು ತಪ್ಪಿತು. ತಮ್ಮಯ್ಯನು ಅಂಗಡಿಯಲ್ಲಿ ಕುಳಿತುಕೊಂಡ ಎಂಟು ಹತ್ತು ದಿವಸಗಳಲ್ಲಿ, ತನ್ನ ಗೈರುಹಾಜರಿಯಲ್ಲಿ ದೊಡ್ಡೀರಶೆಟ್ಟಿಯು ಐದಾರು ಸಾವಿರ ರೂಪಾಯಿನಷ್ಟು ಹಣವನ್ನು 'ಗಪ್' ಮಾಡಿರುವನೆಂಬುದು ಗೊತ್ತಾಯಿತು. ಗೊತ್ತಾದರೂ ಆತನೊಡನೆ ಯಾವ ಪ್ರಸ್ತಾಪವನ್ನೂ ಮಾಡಲಿಲ್ಲ. ಮನೆಯಲ್ಲಿ ನಾಗಣ್ಣನೊಡನೆ ಏಕಾಂತ ಮಾತಾಡಿದ, ಅವನಿದ್ದವನು "ನೋಡಣ್ಣಾ, ಆಡೋರು ಇಬ್ಬರು, ನೋಡೋರು ಹಲವರು' ಅನ್ನೋ ಹಾಗೆ, ನಮ್ಮ ಮನೆ ಗುಟ್ಟನ್ನು ನಾವೇ ಆಚೆಗೆ ಹಾಕಬಾರದು. ಈವಾಗ ಒಂದು ಕೆಲಸ ಮಾಡೋಣ. ನೀನು ನಾಳೆ ಬೆಳಗ್ಗೇನೆ ಅಪ್ಪನ ಹತ್ತಿರಕ್ಕೆ ಹೋಗಿ ವಿಷಯ ಹೀಗಿದೆ ಅಂತ ತಿಳಿಸಿಬಿಟ್ಟು, ಏನ್‌ಮಾಡಬೇಕು ಎಂದು ಕೇಳಿಕೊಂಡು ಬಾ.... ಆಮೇಲಿಂದ ನೋಡೋಣ" ಹೀಗೆ ತಿಳಿಸಲು, ಅದರಂತೆಯೇ ತಮ್ಮಯ್ಯ ಮಾರನೇ ದಿವಸ ಬೆಳಿಗ್ಗೆ ತಂದೆಯಲ್ಲಿಗೆ ಹೊರಟನು. ಅಲ್ಲಿಗೆ ಹೋಗಿ ಅಪ್ಪನಕೂಡ ಹೇಳಿಕೊಳ್ಳಲು ಅವರು ಒಂದೇ ಮಾತಿನಲ್ಲಿ ಮುಗಿಸಿಬಿಟ್ಟರು :—
"ನೋಡಪ್ಪಾ, ನಾನು ಎದೆ ಮುರಿದು ಸಂಪಾದನೆ ಮಾಡಿದ ಆಸ್ತಿಯನ್ನು ನಿರ್ವಂಚನೆಯಿಂದ ಪಾಲು ಮಾಡಿಕೊಟ್ಟು, ಅಜ್ಜಿ ಪಾಲನ್ನು ತೆಗೆದುಕೊಂಡು ಮಗಳ ಮನೆ ಬಂದು ಸೇರಿಕೊಂಡಿದ್ದೇನೆ. ಇಲ್ಲೂ ನಿರಾಳವಾಗಿ ಇರಗೊಡಲ್ರ ?.... ನಿಮ್ಮ ನಿಮ್ಮ ವಿಷಯವನ್ನ ನೀವು ನೀವೇ ಬಗೆಹರಿಸಿಕೊಳ್ಳಬೇಕೇ ಹೊರತು ನನ್ನ ವರೆ

ವಿಗೂ ತರಲೀ ಬೇಡಿ ತಿಳೀತ ? ನೀನೇ ಅಲ್ಲ....ಯಾರೂ ತರ ಬೇಡಿ ಗೊತ್ತಾಯ್ತು ?

ತಂದೆಯವರು ಹೇಳಿದುದನ್ನು ನಾಗಣ್ಣನಿಗೆ ಬಂದು ತಿಳಿಸಿದನು. ಆತ ಇದ್ದವನು: "ಸರಿ, ಇನ್ನ್ಯಾಕಣ್ಣ....ಹ್ಯಾಗು ನಾನು ಕೆಲಸಕ್ಕೆ ಬಾರದವನಾಗಿ ಹೋದೆ. ಅವನು ಹೀಗೆ ಮಾಡಿದ ಅಂತ ಹೇಳುತ್ತೀಯ, ಅಂಗಡೀದನ್ನು ಮೂರು ಜನವೂ ಕೂತು ಕೊಂಡು ಬಗೆಹರಿಸಿಕೊಂಡುಬಿಡೋಣ."

"ಅದೇನೋ ಆಗುತ್ತೆ. ಆದರೆ ಈವಾಗ 'ಗಪ್' ಮಾಡಿ ಬಿಟ್ಟಿದ್ದಾನಲ್ಲ ಅದು ! ?"

"ಅದಕ್ಕೆ ಒಂದು ಕೆಲಸ ಮಾಡೋಣ. ಹ್ಯಾಗು ಅವನು ಅನಕ್ಷರಸ್ಥ. ಅವನು ಎಷ್ಟನ್ನ 'ಗಪ್' ಅಷ್ಟರ ಲೆಕ್ಕವನ್ನೇ ನಾವು 'ಗಪ್' ಮಾಡಿಬಿಡೋದು ಅಷ್ಟೆ."

ಈ ಯೋಚನೆ ತಮ್ಮಯ್ಯನಿಗೂ ಚೆನ್ನಾಗಿ ಹಿಡಿಸಿತು. ಹಾಗೆಯೇ ಮಾಡುವುದೆಂದು ಈರ್ವರೂ ನಿರ್ಧರಿಸಿಕೊಂಡು, ಅದಕ್ಕೆ ಒಂದು ದಿವಸವನ್ನು ಗೊತ್ತುಮಾಡಿ, ಅದನ್ನು ದೊಡ್ಡೀರಶೆಟ್ಟಿಗೂ ತಮ್ಮಯ್ಯನು ತಿಳಿಸಿದನು. ದೊಡ್ಡೀರಶೆಟ್ಟಿಯೂ ಅಣ್ಣನ ಸಲಹೆಗೆ ಒಪ್ಪಿದನಾದರೂ, ತಾನು ಅನಕ್ಷರಸ್ತನಾದುದರಿಂದ ತನಗೆ ಮೋಸ ಮಾಡುವರೆಂಬ ಭಯ ಹುಟ್ಟಿತು. "ಮನವರಿಯದ ಕಳ್ಳತನ ವಿಲ್ಲ." ಅವನು ಒಳಗಿಂದ ಒಳಗೇ ಐದಾರು ಸಾವಿರ ರೂಪಾಯಿ 'ಗಪ್' ಮಾಡಿರುವುದು ಉಳಿದವರಿಗೂ ಗೊತ್ತಾಗದೆ ಇಲ್ಲವೆಂಬುದು ಅವನಿಗೂ ಗೊತ್ತಿತ್ತು. ಅದು ಗೊತ್ತಾಗೇ ಈ ರೀತಿಯ

ನಿರ್ಧಾರಕ್ಕೆ ಬಂದಿರುವರೆಂಬುದು ಗೊತ್ತಾಗುವುದಿಲ್ಲವೇ ? ತಮ್ಮಯ್ಯ ತಂದೆ ಹತ್ತಿರ ಹೋಗಿ ಬಂದದ್ದು, ಅಪ್ಪ ಏನು ಹೇಳಿ ಕಳುಹಿಸಿದರು ಎಲ್ಲವೂ ಆತನಿಗೂ ಗೊತ್ತಾಗಿತ್ತು. ಇದುವರೆಗೆ ಜುಂಜಪ್ಪನವರ ನಾಲ್ಕು ಮಕ್ಕಳ ಪೈಕೀಲಿ ಕಿರಿಯವನಾದ ಸುಬ್ಬಣ್ಣನನ್ನು ಉಳಿದವರು ಕನಿಷ್ಟವಾಗಿ ಕಾಣುತ್ತಿದ್ದರು. ದೂರವಾಗಿಟ್ಟಿದ್ದರು. ಕಾರ್ಯವಾಗಬೇಕಾದಾಗ ಕತ್ತೇ ಕಾಲನ್ನಾದರೂ ಕಟ್ಟಬೇಕಾಗುತ್ತದೆ ಎಂಬಂತೆ, ಈವಾಗ ದೊಡ್ಡೀರಶೆಟ್ಟಿಯು ತನ್ನ ಕೆಲಸಕ್ಕಾಗಿ ಸುಬ್ಬಣ್ಣನನ್ನು ತಾನಾಗಿಯೇ ಮಾತನಾಡಿಸಿಕೊಂಡನು. ಅಲ್ಲಿಗೆ ಈವಾಗ ತಮ್ಮಯ್ಯ, ನಾಗಣ್ಣ ಒಂದು, ದೊಡ್ಡೀರಶೆಟ್ಟಿ, ಸುಬ್ಬಣ್ಣ ಇವರೇ ಒಂದು. ಸುಬ್ಬಣ್ಣ ಚಾಣಿಕ್ಯ ಅನ್ನುವುದು ಎಲ್ಲರಿಗೂ ಗೊತ್ರು. ಆದ್ದರಿಂದ ತಮ್ಮಯ್ಯ ನಾಗಣ್ಣ ಇಬ್ಬರೂನು ಸುಬ್ಬಣ್ಣನಿಗೂ ತಮ್ಮ ನ್ಯಾಯಕ್ಕೂ ಯಾವ ಸಂಬಂಧವೂ ಇಲ್ಲವಾಗಿ, ಆತನು ತಮ್ಮ ವಿವಾದದಲ್ಲಿ ಪ್ರವೇಶಿಸಬಾರದೆಂದು ತಿಳಿಸಿದರು. ದೊಡ್ಡೀರಶೆಟ್ಟಿ ಇದಕ್ಕೆ ಒಪ್ಪಲಿಲ್ಲ. “ ನನ್ನ ರಾಜಿ, ನನ್ನ ಖುಷಿ ಬೇಕಾದವರನ್ನ ಕರೆದುಕೊಂಡು ಬರ್‍ತೀನಿ. ನನಗೆ ಕೊಡೋದನ್ನ ತಾನೆ ನೀವು ಕೊಡೋದು. ಬೇರೆ ಏನು ಹೆಚ್ಚಾಗಿ ಕೊಡೋದಿಲ್ಲವಲ್ಲ” ಎಂದ. ತಮ್ಮಯ್ಯನಿಗೂ ನಾಗಣ್ಣನಿಗೂ ರೇಗಿಹೋಯಿತು. ತಮ್ಮಯ್ಯ ಇದ್ದವನು, “ ಅಲ್ಲ ಕಣೋ ತಾಯಿಗ್ಗಂಡ, ನಾನು ನಾಗಣ್ಣನ ಖಾಯಿಲೇಗೋಸ್ಕರ ವೈಸೂರು ತಿರುಗಣಿಗೆ ನಿಂತುಕೊಂಡರೆ. ನೀನು ಐದಾರುಸಾವಿರ ರೂಪಾಯಿಯನ್ನ ಒಳಗೊಳಗೆ ಮೇದಾಕಿಬಿಡುತ್ತೀಯ ? ”

“ ನನಗಿರೋ ಒಬ್ಬಮಗ, ಅವನನ್ನು ಹಿಡಿದುಕೊಂಡು ಪ್ರಮಾಣ ಮಾಡುತ್ತೀನಿ ಬೇಕಾದ್ರೆ. ಏನೂ ಕಾಣದೇ ಇರೋ ನನಗೆ ನೀ

ವಿಬ್ಬರೂ ಸೇರಿಕೊಂಡು ಮೋಸ ಮಾಡಬೇಕು ಅಂದುಕೊಂಡು ಎಷ್ಟು ದಿವಸದಿಂದ ಹೊಂಚು ಹಾಕಿಕೊಂಡಿದ್ದೀರಿ" ಎಂದನು.

ಇವನು ಯಾವಾಗ ಹೀಗೆ ಷುರು ಮಾಡಿಕೊಂಡನೋ ಇಲ್ಲವೋ, ಇನ್ನು ಅವರಿಬ್ಬರು ಏನು ತಾನೆ ಮಾಡುತ್ತಾರೆ. ಅದು ಇವು ಅವರೂ ಅಂದರು ಆಡಿದರು. ಏನು ಅಂದರೇನು ಆಡಿದರೇನು ಆದ ನಷ್ಟ ಆಯಿತು. ಪಾಪ ಪುಣ್ಯಾನ ಶಿವನೇ ನೋಡಿಕೊಳ್ಳಲಿ ಎಂದುಕೊಂಡರು. ದೊಡ್ಡೀರಶೆಟ್ಟಿಯು ಇಷ್ಟದಂತೆ ಸುಬ್ಬಣ್ಣನನ್ನೂ ಕೂರಿಸಿಕೊಂಡರು. ಅಂಗಡಿ ವಿಷಯವನ್ನು ಬಗೆಹರಿಸಿಕೊಂಡರು. ಉಳಿದ ಇಬ್ಬರಿಗೂ ಏನು ಕೊಡಬೇಕಾಯಿತೋ ಅದನ್ನು ಕೊಟ್ಟುಬಿಟ್ಟು ಅಂಗಡಿಯನ್ನು ತಮ್ಮಯ್ಯನು ವಹಿಸಿಕೊಂಡನು.

●

೬

ದೊಡ್ಡವೀರಶೆಟ್ಟಿಯು ಬೇರೆ ಬಂದಮೇಲೆ ತನ್ನ ಯಾವತ್ತೂ ಕಸುಬನ್ನು ಮತ್ತೆ ಷುರುಮಾಡಿಕೊಂಡ. ಸುತ್ತ ಹತ್ತು ಹಳ್ಳಿಗಳಲ್ಲಿಯೂ ತಂದೆಕಾಲದಿಂದಲೂ ಲೇವಾದೇವಿ ಉಂಟೇ ಉಂಟು. ಚಿಕ್ಕಜುಂಜಪ್ಪನವರ ಲೇವಾದೇವಿಯೆಲ್ಲಿ ತಲೆವಾಸೆ(ದವಸದಬಡ್ಡಿ) ಮೇಲೆಯೇ ನಡೆದಿರುವುದಿಲ್ಲ. ಮಕ್ಕಳಕಾಲಕ್ಕೂ ಅದನ್ನೇ ಮುಂದುವರಿಸಿಕೊಂಡು ಬಂದಿದ್ದಾರೆ. ಆದುದರಿಂದ ವರ್ಷಪ್ರತಿ ಹೊಲ ಗದ್ದೆಯಿಂದಲ್ಲದೆ. ಲೇವಾದೇವಿಯಿಂದಲೂ ರಾಗಿ, ಜೋಳ, ಭತ್ತ ಇತ್ಯಾದಿಯಾಗಿ ದಿನಸು ಸೇರುತ್ತಿತ್ತು. ಆದನ್ನೆಲ್ಲ ಮೂವರೂ ತಮ್ಮ ತಮ್ಮ ಲೆಕ್ಕದಲ್ಲಿ ಅಂಗಡಿಗೂ ಹಾಕಿಕೊಳ್ಳುತ್ತಿದ್ದರು ಬೇರೆಯಾಗಿಯೂ ಮಾರಿಕೊಳ್ಳುತ್ತಿದ್ದರು. ಈವಾಗ ದೊಡ್ಡವೀರ ಶೆಟ್ಟಿಯು ಅಂಗಡಿ ಬಿಟ್ಟ ಮೇಲೆ ಊರೂರು ತಿರುಗುವುದು ಜಾಸ್ತಿಯಾಯಿತು ಲೇವಾದೇವಿ ವಸೂಲಿಜೊತೆಗೆ ಸುಗ್ಗಿಕಾಲದಲ್ಲಿ ದಿನಸಿ ಕೊಂಡು ಶೇಕರಣೆ ಮಾಡುವುದು. ಬ್ಲಾಕ್‌ಮಾರ್ಕೆಟ್‌ನಲ್ಲಿ (ಕಾಳಸಂತೆಯಲ್ಲಿ) ಮಾರುವುದು. ಈ ಕಸುಬನ್ನು ಕೈಗೊಂಡ. ದೊಡ್ಡೀರಶೆಟ್ಟಿಗೆ ಯಾವತ್ತೂ ಕಾಸಿಗೆಕಾಸು ಲಾಭಇರಬೇಕು. ಸಸ್ತಾದಲ್ಲಿ ತೆಗೆದುಕೊಳ್ಳುವುದು.... ಹೆಚ್ಚುವರಿಗೆ ಮಾರುವುದು; ಸುಗ್ಗೀಕಾಲದಲ್ಲಿ ಅಗ್ಗವಾಗಿ ಕೊಂಡು ಶೇಖರಣೆಮಾಡಿದ್ದು, ಬಿತ್ತನೆಕಾಲದಲ್ಲಿ ತಗ್ಗಾಗಿ ಮಾರುವುದು; ಕಂಟ್ರೋಲ್ ಇರುವ ಸಾಮಾನುಗಳನ್ನು ಹೇಗೇಗೊ ಕೊಂಡು ಗುಟ್ಟಾಗಿ ಶೇಖರಣೆ ಮಾಡಿ.....ಬ್ಲಾಕ್

ಮಾರ್ಕೆಟ್ಟಿನಲ್ಲಿ ಮಾರುವುದು...... ವ್ಯಾಪಾರಗಳನ್ನು ಮಾಡಬೇಕು ಅಂದರೆ ಬಹಳ ಖುಷಿ ಅವನಿಗೆ.

ದೊಡ್ಡೀರಶೆಟ್ಟಿಯು ಕೈಕೊಂಡಿರುವ ಉದ್ಯೋಗವು ಅತಿಯಾದ ಲಾಭವನ್ನು ಕೊಡುವುದಾದರೂ ಅಷ್ಟೇ ಅಪಾಯವಾಗಿರುವುದು. ಜನದ ಒತ್ತಾಸೆ ಬೇಕು, ಆದರೆ ಗುಟ್ಟಿರಬೇಕು. ಕಂಚಿಕಂಬಕ್ಕೆಲ್ಲ ದಕ್ಷಿಣೆ ಕೊಡಬೇಕು., ಕೈಮುಗಿಯುತ್ತಿರಬೇಕು. .ಅದೃಷ್ಟ ಕಮ್ಮಿಯಾಗಿ ಎಲ್ಲಾದರೂ ಸಿಕ್ಕಿಕೊಂಡಿತೂ ಅಂದರೆ ವರ್ಷದ ಸಂಪಾದನೆಯೆಲ್ಲಾ ಒಂದೇ ದಿವಸಕ್ಕೆ ಕೊಚ್ಚಿಕೊಂಡು ಹೊರಟುಹೋಗುತ್ತದೆ. ಜೊತೆಗೆ ಮಾನವನ್ನೂ ಕಳೆದುಕೊಳ್ಳಬೇಕಾಗುತ್ತದೆ. ಆದ್ದರಿಂದ ಅಲ್ಲಲ್ಲಿಗೆ ಪೋಲೀಸಿನವರನ್ನು, ಅಧಿಕಾರಿಗಳನ್ನು ಕಟ್ಟಿಕೊಂಡು ಕೆಲಸಮಾಡಬೇಕಾಗುತ್ತದೆ. ಅಂಥ ಕೆಲಸಗರಿಗೆಲ್ಲ ದೊಡ್ಡೀರಶೆಟ್ಟಿ ಅನಾಲಾಯಕ್ ಮನುಷ್ಯ, ಆದೇ ಸುಬ್ಬಣ್ಣ ಇದಾನಲ್ಲ ರುಸ್ತುಮ. ಈ ಕಡೆಯಿಂದ ಹೋಗಿ ಆ ಕಡೆಯಿಂದ ಹೊರಟು ಬಂದಾ ಅನ್ನಿ! ಯಾರ್ಯಾರನ್ನು ಎಲ್ಲೆಲ್ಲಿ ಕಾಣಬೇಕೊ ಅಲ್ಲಲ್ಲಿ ಕಂಡು, ಏನೇನು ಮಾಡಬೇಕೋ ಮಾಡಿ, ಪುನಃ ನೋಡಿದರೆ "ನಾನಲ್ಲ ಗೌರಕ್ಕಾ" ಅಂತ (ಏನೂ ಕಾಣದವನಂತೆ) ಇರುತ್ತಾನೆ. ದೊಡ್ಡೀರಶೆಟ್ಟಿ ಮಾಡುತ್ತಿರುವ ಕಸುಬಿಗೆ ಸುಬ್ಬಣ್ಣನ ನೆರವು ಇಲ್ಲದಿದ್ದರೆ ಸಾಧ್ಯವಾಗುತ್ತದೆಯೇ? ಮೊದಲೇನೇ ತಮ್ಮಯ್ಯ, ನಾಗಣ್ಣ ಅವರ ಸಂಗಡ ಸೇರಿಕೊಂಡು ಸುಬ್ಬಣ್ಣನನ್ನು ದೂರ ಮತ್ತರಿಸಿದ್ದನಾದರೂ ಈವಾಗ ಹೇಗೂ ಇಬ್ಬರೂ ಚೆನ್ನಾಗಿದ್ದಾರಲ್ಲ. ಆದ್ದರಿಂದ ಅವನನ್ನು ತನ್ನ ಜೊತೆಗೆ ಆಡಿಕೊಳ್ಳುವ ಯೋಚನೆ ಮಾಡಿದ. ಅವನೂನು ಕೆಲಸವಿಲ್ಲದೆ ಕಾರ್ಯವಿಲ್ಲದೆ ಆ ಅಂಗಡಿ ಹತ್ತಿರ, ಈ ಅಂಗಡಿ ಹತ್ತಿರ, ಆ ಮನೆ

ಪಡಸಾಲೆ ಈ ಪಡಸಾಲೆ ಕಾಯ್ದುಕೊಂಡು ಕಾಲ ಕಳೆಯುತ್ತಿದ್ದಾನೆ. ಅವನಿಗೂ ಒಂದು ಕೆಲಸ ಕೊಟ್ಟ ಹಾಗೂ ಆಯಿತು..... ಒಟ್ಟು ಸಂಪಾದನೆಯಲ್ಲಿ ಅವನಿಗೂ ಒಂದಿಷ್ಟು ಅಂತ ಅಲ್ಲಲ್ಲಿಗೆ ಕೊಟ್ಟುಬಿಡುವುದು. ಅವನೇನು ಕಾಡಲ್ಲ ಪ್ರೋಲಲ್ಲ, ಹೊಂದಿ ಗುಟ್ಟಿದ ತಮ್ಮ. "ಉಂಡರೆ ಎಂಜಲಲ್ಲ, ಉಟ್ಟರೆ ಮೈಲಿಗೆಯಲ್ಲ" .....ಮಿತಿಮೀರಿ ತನ್ನದೇ ನಾಲ್ಕು ಪಾಸು ಅವನೇ ತಿನ್ನುವುದಾಗಲಿ ಅಥವಾ ಅವನದೇ ನಾಲ್ಕು ಕಾಸನ್ನು ತಾನು ತಿನ್ನುವುದಾಗಲಿ ಬಾಧ್ಯವಿದೆ. ಹೀಗೆ ಯೋಚಿಸಿಕೊಂಡು ಸುಬ್ಬಣ್ಣನ ಹೊಲದ ಹತ್ತಿರ ಕೂಡ ಆಲೋಚನೆ ನಡೆಸಿದನು. ಆತನು ಒಪ್ಪಿದನು, ಮತ್ತು ಆ ಕಸುಬು ಮಾಡಬೇಕಾದರೆ ಅಪಾಯಕ್ಕೆ ಸಿಗಬಾರದು, ಲಾಭ ಅನ್ನುವುದು ತನ್ನಷ್ಟಕ್ಕೆ ತಾನೆ ಬರುತ್ತಿರಬೇಕು. ಅಂಥಂಥ ಐಡಿಯಾಗಳು (Ideas) ತನ್ನ ಹತ್ತಿರ ಇರುವುವೆಂದೂ, ಆವುಗಳನ್ನೆಲ್ಲ ಉಪಯೋಗಿಸಿ ಯಾವತ್ತೋ ಬೇಕಾದಹಾಗೆ ದುಡ್ಡು ಸಂಪಾದನೆ ಮಾಡುತ್ತಿದ್ದೆ, ಆದರೆ ಬಂಡವಾಳ "ನಹಿ" ಆದ್ದರಿಂದ ತೆಪ್ಪನೆ ಮೂಲೆಯಲ್ಲಿ ಕುಳಿತಿರುವಾಗ ಹೇಳಿ, ಈವಾಗ ಅಣ್ಣ ಮಾಡುವ ಉದ್ಯೋಗವು ರುಸ್ತುಂ ಆದುದೆಂದೂ, ಆದರಿಂದ ರುಸ್ತುಂ ದುಡ್ಡು ಮಾಡಬಹುದೆಂದೂ ..... ತನ್ನ ಅಡಿಯಾಳುಗಳನ್ನೆಲ್ಲ ಬಿಸಿನೆಸ್ (Business) ನಲ್ಲಿ ಉಪಯೋಗಿಸುವುದಾಗಿ ಭರವಸೆಯ ಮಾತನಾಡಲು ದೊಡ್ಡೀರಶೆಟ್ಟಿಯು ತಮ್ಮನಮಾತುಗಳನ್ನೆಲ್ಲ ಬಿಟ್ಟ ಬಾಯಿ ಬಿಟ್ಟಹಾಗೆ ಬಿಟ್ಟುಕೊಂಡು, ಬಾಯಿಗೆ ನೊಣ ಹೊಕ್ಕಿಕೊಳ್ಳುವುದನ್ನೂ ಕಾಣದೆ ಕೇಳಿದನು. ಅದಕ್ಕೆ ಕಾರಣ ಅದೆಲ್ಲ ದುಡ್ಡು ಬರುವ ಮಾರ್ಗಗಳಾಗಿದ್ದವು.

ಮನೆಯ ಹಜಾರದಲ್ಲಿ ತಮ್ಮಯ್ಯ ಅಂಗಡಿ ಸಾಮಾನನ್ನು

ತಿರುಗಾಡುವುದಕ್ಕೆ ಮತ್ತು ಮಕ್ಕಳು ಮರಿ ಮಲಗುವುದಕ್ಕೆ, ಕೂರುವುದಕ್ಕೆ, ಅಲ್ಪ ಸ್ವಲ್ಪ ಜಾಗ ಬಿಟ್ಟುಕೊಂಡು ಉಳಿದ ಜಾಗದಲ್ಲೆಲ್ಲ ಬೇಕಿದ್ದರೆ ತಮ್ಮ ಜಮೀನುಗಳಿಂದ ಬರುವಷ್ಟನ್ನು ಜೊತೆಗೆ ತಲವಾಸಿಯಿಂದ ಬರುವುದನ್ನು ಇವರುಗಳೂನು ಅಲ್ಲೇ ಹಜಾರದಲ್ಲಿ ಒಂದು ಕಡೆ ಆಡಿಕೊಳ್ಳಬಹುದಾಗಿದ್ದಿತೇ ಹೊರತು ಇವರು ದಿನಸಿ ವ್ಯಾಪಾರಕ್ಕೆ ನಿಂತುಕೊಂಡು ಅದನ್ನು ಸ್ಟಾಕ್ ಮಾಡುವುದರಿಂದ ಖಂಡಿತವಾಗಿಯೂ ಬೇರೇ ಕಡೆಯೇ ಏರ್ಪಾಡು ಬೇಕಾಯಿತು. ಅದೂ ಅಲ್ಲದೆ ಇವರು ಸ್ಟಾಕ್ ಮಾಡುವುದು ಕಂಟ್ರೋಲ್ ಸಾಮಾನುಗಳಾದುದರಿಂದ ಅವನ್ನು ಬಹಿರಂಗವಾಗಿ ಹಜಾರದಲ್ಲಿ ಇಡುವಂತಿರಲಿಲ್ಲ. ಮರೆಯಾಗಿಡಬೇಕು. ಗುಟ್ಟಾಗಿ ಮಾರಿಕೊಳ್ಳಬೇಕು. ಎಲ್ಲಾ ದೃಷ್ಟಿಯಿಂದಲೂ ಮಾಗಪ್ಪನ ಮನೆ ಅನುಕೂಲವಾಗಿದೆಯೆಂದುಕೊಂಡರು. ಮಾದಪ್ಪನ ಹೆಂಡತಿಯಕೂಡ ದೊಡ್ಡೀರಶೆಟ್ಟಿಯು ತನ್ನ ಅಭಿಪ್ರಾಯವನ್ನು ತಿಳಿಸಿದನು. ಅಭಿಪ್ರಾಯ ಅಂದರೆ ಮನೆಯಲ್ಲಿ ಸರಕು ಹಾಕಿಕೊಳ್ಳಲು ಸ್ವಲ್ಪ ಜಾಗವನ್ನು ಕೇಳಿದುದೆಷ್ಟೋ ಅಷ್ಟೇ ಹೊರತು ಹೆಚ್ಚಿಗೆ ಏನನ್ನೂ ಕೇಳಲಿಲ್ಲ. ಅದಕ್ಕೆ ಆಕೆಯು ಬೇಡವೆನ್ನುವಳೇ ? ಎಂದಿಗೂ ಇಲ್ಲ. "ಏನ್ ಜಾಗವನ್ನು ನಮ್ಮ ತಲೆ ಮೇಲೆ ಹಾಕಿಕೊಂಡು ಹೋಗುತ್ತೀವ ?....ಇಷ್ಟು ಅಗಲಕ್ಕೂ ಏನಃ ಬಿದ್ದು ಒದಾಡುತ್ತೀವ ?..... ಏನೂ ಇಲ್ಲ .... ಉಪಯೋಗ ಮಾಡಿಕೊಳ್ಳಿ ಹೋಗಿ ಅಪ್ಪ" ಎಂದು ಒಪ್ಪಿಗೆ ಕೊಟ್ಟಳು. ಆದರೂ ಒಂದು ಶಂಕೆಯನ್ನು ಮಾತ್ರ ವ್ಯಕ್ತಪಡಿಸಿದಳು. ನಾವು ಹೆಂಗ್‌ಹೆಂಗಸರುಗಳೆ ಇರುವವರು ಕಣಪ್ಪ ಆಮೇಲೆ.....ಸ್ಟೇಷನ್ನು, ಕೋರ್ಟು, ಕಛೇರಿ, ಎಲ್ಲ ಹತ್ತಬೇಕಾಗಿ ಬಂದರೆ ಗತಿ ?"

“ ಅಂಥಾದ್ದೇನನ್ನೂ ತಿಳಿದುಕೊಳ್ಳಬೇಡ ಕಣವ್ವ.... ಭಯ ಪಡಬೇಡ.....ಅಂಥಾದ್ದೇನೂ ಸಂಭವಿಸುವುದಿಲ್ಲ. ಒಂದು ವೇಳೆ ಸಂಭವಿಸಿದರೂ ಕೂಡ ನಾವಿರೋದಿಲ್ವ ? ಎಂದು ದೊಡ್ಡೀರ ಶೆಟ್ಟಿಯು ಸಮಾಧಾನದ ಮಾತುಗಳನ್ನಾಡಿದನು.

“ ಅದು ಸರೀ ಅನ್ನಿ ” ಎಂದು ಆಕೆಯು ಒಪ್ಪಿಗೆಯನ್ನಿತ್ತಳು.

೭

ದೊಡ್ಡವೀರಶೆಟ್ಟಿ, ಸುಬ್ಬಣ್ಣ, ಶಿವರುದ್ರ ಮೂವರಿಗೂ ಪುರಸತ್ತೇ ಇಲ್ಲ. ಬೆಳಗ್ಗೆ ಅಷ್ಟೊತ್ತಿಗೇ ಎದ್ದರೆ ನಾಲ್ಕು ಐದು ಊರು ಐದಾರು ಸುತ್ತಾಕಿಕೊಂಡು ಬರಬೇಕು. ದೊಡ್ಡವೀರಶೆಟ್ಟಿಯದು ಕಾಲು ನಡಿಗೆ. ರಾತ್ರಿ ಹೊತ್ತು ಅವನಿಗೆ ನಿದ್ದೆ ಎಲ್ಲಿ ಹತ್ತುತ್ತದೆ ?... ಮೂರ್ಹೊತ್ತೂ ಲೆಕ್ಕಾಚಾರ. ಮೊದಲನೆ ಕೋಳಿ ಕೂಗುವ ಹೊತ್ತಿಗೆ ಎದ್ದು ಹೊರಟ ಅಂದರೆ ನಾಲ್ಕೂರು, ಐದೂರು ಸುತ್ತಿಕೊಂಡು ಬರುತ್ತಾನೆ....ಬಂದರೂ ಬಂದ, ಬರದೇ ಹೋದರೂ ಇಲ್ಲ. ಅಳೆಯಿಸುತ್ತಾ ಮಾಡುತ್ತಾ ಕೂತುಕೊಂಡರೆ ಒಂದೇ ಸಲ ರಾತ್ರಿ ಊಟದ ಹೊತ್ತು ಕಳೆದುಕೊಂಡು ಊರಿಗೆ ಬರುತ್ತಾನೆ. ಊಟ ಮಾಡಿ ಮಲಗಬೇಕಾದರೆ ಮಧ್ಯರಾತ್ರಿ. ಅವನ ಜೀವಮಾನದಲ್ಲಿ ಒಂದು ದಿನವಾದರೂ ನಿರಾಳವಾಗಿ ಕುಳಿತುಕೊಂಡು ಊಟ ಮಾಡಲಿಲ್ಲ. ನಿಶ್ಚಿಂತನೆಯಿಂದ ನಿದ್ದೆ ಮಾಡಲಿಲ್ಲ. ಯಾವತ್ತೂ ಗಡಿಬಿಡಿ ಗಂಡಸು. ಕಾಸು ಸಂಪಾದನೆ ಒಂದು ಚೆನ್ನಾಗಿ ನಡೆಯುತ್ತಾ ಇದ್ದರೆ, ಊಟ ಬೇಡ, ನಿದ್ರೆಯು ಬೇಡ, ಹೆಂಡತಿ, ಮಕ್ಕಳು, ಮನೆ–ಮಠ, ಒಂದೂ ಜ್ಞಾಪಕ್ಕೇ ಬರುವುದಿಲ್ಲ. ಅವನಿಗೆ ಮೂರು ದಿವಸವಾಗಲಿ ಬೇಕಾಗಿದ್ದರೆ, ಮುಖವನ್ನೇ ತೊಳೆಯದೆ ಕೆಲಸದ ಮೇಲೆ ಇದ್ದುಬಿಡುತ್ತಾನೆ. ಅಂತು ಕಾಸಿನಾಶೆ ಮನುಷ್ಯ ಇವನು.

ರಾಮನಹಳ್ಳಿ ಒಂದು ಗದ್ದೆ ಹಳ್ಳಿ. ರಾಮನಹಳ್ಳಿಯಿಂದ ಈಶಾನ್ಯದಿಕ್ಕಿನಲ್ಲಿ ಸುಮಾರು ಹನ್ನೊಂದು ಮೈಲಿ ದೂರದಲ್ಲಿ ಬೊಮ್ಮನಹಳ್ಳಿ ಇದೆ. ಗರ್ಗೇಶ್ವರಿಯಿಂದ ಮೂಡಲಾಗಿ ಕಾವೇರಿಯು ಉತ್ತರದಿಂದ ದಕ್ಷಿಣಕ್ಕೆ ಹರಿದು ಹೋಗುತ್ತದೆ. ಈಚೆ ಕಡೆಯಲ್ಲಿ (ದಡ) ಗರ್ಗೇಶ್ವರಿ ಆಚೆ ದಡದಲ್ಲಿ ಸೋಸಲೆ ಇದೆ. ಸುಮಾರು ಮೈಲು ದೂರದಲ್ಲಿ ರಾಮನಹಳ್ಳಿಯಿಂದ ದಕ್ಷಿಣಕ್ಕೆ ಮುಂದುವರಿದರೆ ಬಲಕ್ಕೆ ಕಪಿಲಾ ನದಿಗೆ ಸೇತುವೆ, ಎಡಕ್ಕೆ ಕಾವೇರಿಗೆ ಸೇತುವೆ, ದಕ್ಷಿಣದ ಕಡೆಗೆ ಸುಂಕದ ಮನೆ, ಹಿಂದಕ್ಕೆ ತಿರುಮಕೂಡಲು ಊರು. ಇಲ್ಲಿ ಸ್ಫಟಿಕ ಸರೋವರ, ಕಾವೇರಿ ಕಪಿಲಾ ನದಿಗಳ ಸಂಗಮವಾಗುತ್ತದೆ, ತಿರುಮಕೂಡಲು ಸಂಗಮ ಪುಣ್ಯಕ್ಷೇತ್ರವಾಗಿದೆ. ಗರ್ಗೇಶ್ವರಿಯಿಂದ ಬೊಮ್ಮನಹಳ್ಳಿಗೆ ಬರಬೇಕಾದರೆ ಕಾವೇರಿ ಸೇತುವೆ ಮೇಲಿಂದ ಬರಬೇಕು. ಹೀಗೆ ಬಂದರೆ ಸೇತುವೆ ಹತ್ತಿರ ಸುಂಕದ ಮನೆಯಲ್ಲಿ ಸುಂಕ ಕೊಡಬೇಕು. ರಾಮನಹಳ್ಳಿಯಲ್ಲಿ ಭತ್ತದ ಸುಗ್ಗಿಯಲ್ಲಿ ಕಂಟ್ರೋಲ್ ರೇಟಿಗಿಂತ ಸ್ವಲ್ಪ ಹೆಚ್ಚಾಗಿ ಕೊಟ್ಟು ಕೊಂಡರೆ ಕಂಡೀರ್ಷ (condition) ಹೇಗೆ ಅಂದರೆ ಊರು ಕಡಾಯಿಸುವ (ಬಿಡುವ ವರೆಗುಪೆ) ಭಾರ ಅವರದು. (ದಿನಸಿ ಕೊಟ್ಟವರದು) ಆಮೇಲೆ ಅವರ ಜವಾಬ್ದಾರಿ ಇಲ್ಲ. ..... ತೆಗೆದುಕೊಂಡು ಹೋಗುವವರುಂಟು, ಸಾಮಾನುಂಟು, ಯಾವ ಊರಲ್ಲೇ ಆಗಲಿ, ಯಾವುದೇ ಕಂಟ್ರೋಲ್ ಇರುವ ಸಾಮಾನುಗಳನ್ನು ಮಾರುವ ಕೊಳ್ಳುವವರ ನಿಯಮ ಹೀಗೇನೇ.

ಆದ್ದರಿಂದ ಶಿವರುದ್ರ ಏನು ಮಾಡೋನು ಅಂದರೆ ರಾತ್ರಿ ಹೊತ್ತಿನಲ್ಲಿ ರಾಮನಹಳ್ಳಿಯಿಂದ ಹರಗೋಲಿನ (ದೋಣಿ)

ಮೇಲೆ ಹೊಳೆ ದಾಟಿಸಿಬಿಟ್ಟು....ಅಷ್ಟು ಹೊತ್ತಿಗೆ ಆಚೆಕಡೆ ಎಂಟ್ಹತ್ತು ಕತ್ತೆಗಳು ಸಿದ್ಧವಾಗಿರುತ್ತಿದ್ದವು. ಕತ್ತೆಗೆ ಎಪ್ಪತ್ತೈದು ಸೇರು ಅಂತ ಹೊರೆ ಹಾಕಿ ಕಾಲುದಾರಿಯಲ್ಲಿ ಊರು ಸೇರುತ್ತಿದ್ದ. ಈ ಕಾರಣದಿಂದಲೇ ಕಂಟ್ರೋಲಿಗೆ ಮುಂಚೆ ಕತ್ತೆ ಬೆಲೆ ಎರಡು, ಮೂರು ರೂಪಾಯಿ ಇದ್ದುದು.... ಕಂಟ್ರೋಲ್ ಬಂದ ಮೇಲೆ ಇಪ್ಪತ್ತು, ಇಪ್ಪತ್ತೈದು ಕೊನೆಗೆ ಮೂವತ್ತನ್ನೂ ಮುಟ್ಟಿತು. ಯಾವ ಕಾಲದಲ್ಲೂ ಕತ್ತೆಬೆಲೆ ಅಷ್ಟರಮಟ್ಟಿಗೆ ಏರಿರಲಿಲ್ಲ. ಕಂಟ್ರೋಲ್ ಬಂದೇ ಬಂತು, ಎಲ್ಲ ಸಾಮಾನಿಗೂ ಒಂದಕ್ಕೆ ಎರಡರಷ್ಟು, ಮೂರರಷ್ಟು, ಹತ್ತರಷ್ಟು, ಇಪ್ಪತ್ತರಷ್ಟು ಬೆಲೆ ಹೆಚ್ಚಿಬಿಟ್ಟಿತು. ಕತ್ತೆ ಬೆಲೇನೆ ಅಷ್ಟರ ಮೇಲೆ ಇನ್ನು ಮಿಕ್ಕ ಸಾಮಾನುಗಳ ಗತಿ ಏನೆಂಬುದನ್ನು ಸುಲಭದಲ್ಲಿ ಊಹಿಸಬಹುದಾಗಿದೆ.

ಕುನ್ನೂರೂ ಒಂದು ಗದ್ದೆ ಹಳ್ಳಿ. ಕಾವೇರಿಯು ಊರಿನಿಂದ ಪಶ್ಚಿಮಕ್ಕೆ ಸುಮಾರು ಎರಡು ಮೈಲು ದೂರದಲ್ಲಿ ಹರಿದು ಹೋಗುತ್ತದೆ. ಈ ಊರಿನಲ್ಲಿ ಹಸಿ ಭತ್ತ, ಬಿಸಿ ಬೆಲ್ಲ ಮುನ್ನೂರ ಅರವತ್ತು ದಿವಸವೂ ಇಲ್ಲಾ ಅನ್ನುವಂತಿಲ್ಲ ಅನ್ನುತ್ತಾರೆ. ಅಂದರೆ ಐನು ಭತ್ತ ಆದ ಮೇಲೆ ಕಾರು ಭತ್ತ, ಕಾರುಭತ್ತವಾದಮೇಲೆ ಐನು ಭತ್ತ ಹೀಗೆ ಒಂದಾದಮೇಲೊಂದರಂತೆ ಬೆಳೆಯುತ್ತಿರುತ್ತಾರೆ. ಮುನ್ನೂರ ಅರವತ್ತು ಆಲೆಮನೆ ಆಡುತ್ತಲೇ ಇರುತ್ತವೆ. ಹೀಗಾಗಿ ಆ ಊರಿನಲ್ಲಿ ಜಮೀನು ಪಾಳು ಬಿದ್ದಿರುವುದನ್ನು ಕಾಣುವಂತೆಯೇ ಇಲ್ಲ. ಅಂತೆಯೇ ಊರಿನಲ್ಲಿ ಜನರು ಕೆಲಸವಿಲ್ಲದೆ ಕೂರುವಂತೆಯೂ ಇಲ್ಲ. ಕುನ್ನೂರಿನಿಂದ ದಕ್ಷಿಣಕ್ಕೆ ಸೋಸಲೆಗೆ ಪೂರ್ವಕ್ಕೆ ಸುಮಾರು ಅರ್ಧಮೈಲು ದೂರದಲ್ಲಿ ಸಂತೇಮಾಳ. ಈ ಸಂತೇಮಾಳಕ್ಕೂ ಬೊಮ್ಮನಹಳ್ಳಿ ಸಂತೇ ಮಾಳಕ್ಕೂ ಬರಾಬರಿ ಐದು ಮೈಲಿ. ಇದೇ ಸಂತೆಮಾಳದಿಂದ ಸೋಸಲೆಗೆ

ಬಲಿಾಬರಿ ಒಂಭತ್ತು ಮೈಲಿಯಾಗುತ್ತದೆ. (ಮೈಲಿಕಲ್ಲ ಇದೆ) ಕುನ್ನೂರಿನಿಂದ ಸ್ವಲ್ಪ ಈಶಾನ್ಯಕ್ಕಾದಂತೆ ಬೊಮ್ಮನಹಳ್ಳಿ ಇರುವುದು. ಸೋಸಲೆ ಇರುವುದು ಸ್ವಲ್ಪ ಆಗ್ನೇಯಕ್ಕಾದಹಾಗೆ.

ಶಿವರುದ್ರನು ಬೈಸಿಕಲ್ ಮೇಲೆ ಬೊಮ್ಮನಹಳ್ಳಿ, ಬನ್ನೂರು, ಸೋಸಲೆ, ಗರ್ಗೇಶ್ವರಿ ಹೀಗೆ ತಿರುಗುವುದರಲ್ಲಿಯೇ ಆಗಿಹೋಯಿತು. ಸೈಕಲ್ ಬಿಟ್ಟು ಕೆಳಗೆ ಇಳಿಯುತ್ತಲೇ ಇರಲಿಲ್ಲ. ಅಂದರೆ ಅಷ್ಟರ ಮಟ್ಟಿಗೆ ಓಡಾಟ ಜಾಸ್ತಿ.

ಸುಬ್ಬಣ್ಣನದು ಅಷ್ಟಾಗಿ ತಿರುಗಣೆ ಇಲ್ಲವಾದರೂ, ಅವನಿಗೂ ಕೆಲಸ ಏನ್ ಕಮ್ಮಿಯಾಗಿರಲಿಲ್ಲ. ಅವನೂ ಹಳ್ಳಿಗಳ ಮೇಲೆ ಹೋಗಿ ದಿನೆಸಿ ತೆಗೆಯುತ್ತಿದ್ದ. ಆದರೆ ಅವನು ಮಾಡುತ್ತಿದ್ದುದು ಉಳಿದನರಿಬ್ಬರೂ ಮಾಡುವುದರೊಡನೆ ಹೋಲಿಸಿದರೆ ತೀರ ಜುಜುಮಿಯಾಗಿದ್ದಿತು. ಆದರೆ ಸುಬ್ಬಣ್ಣನಿಗೆ ಊರಿನ ಕೆಲಸ ಜಾಸ್ತಿ. ಊರಿಗೆ ಬಂದು ಬಿದ್ದ ದಿನಸಿಯನ್ನ ನೇರ್ಪಾಗಿ ಮಾದಪ್ಪನ ಮನೆ ಸೇರಿಸಬೇಕು. ಶಿವರುದ್ರ ಮಾತ್ರ ಕೊಂಡಿದುದಕ್ಕೂ ಮಾರಿದುದಕ್ಕೂ ಅವನ ಹತ್ತಿರ ಲೆಕ್ಕವಿರುತ್ತಿತ್ತು. ದೊಡ್ಡೀರ ಶೆಟ್ಟಿಯದೆಲ್ಲ ಬಾಯಿಲೆಕ್ಕ. ಅಲ್ಲಲ್ಲಿಗೆ ಸುಬ್ಬಣ್ಣನ ಕೈಲಿ ಹೇಳಿ ಬರೆಯಿಸುತ್ತಿದ್ದ. ಶಿವರುದ್ರನೂ ಚಿಕ್ಕಪ್ಪನಿಗೆ ಅಲ್ಲಲ್ಲಿಗೆ ಲೆಕ್ಕ ಕೊಡುತ್ತಲಿದ್ದ. ಸುಬ್ಬಣ್ಣನ ಹತ್ತಿರ ಒಟ್ಟು ಜಮಾಖರ್ಚೆಲ್ಲ ಸಿಕ್ಕಿಹೋಗುತ್ತಿತ್ತು. ಅವನಿಗೆ ತಿಳಿಸದೆ ಯಾವುದೂ ನಡೆಯುತ್ತಿರಲಿಲ್ಲ.

ಸುಬ್ಬಣ್ಣ ಹೆಚ್ಚೂಕಮ್ಮಿ ಊರಿನಲ್ಲೇ ಇರುತ್ತಿದ್ದ. ದೊಡ್ಡೀರ ಶೆಟ್ಟಿಯು ಎಲ್ಲಿ ಹೋಗಿದ್ದರೂ ರಾತ್ರಿ ಊಟದ ಹೊತ್ತು, ಇಲ್ಲ

ಸ್ವಲ್ಪ ಹೊತ್ತು ಮೀರಿಯಾದರೂ ಊರಿಗೆ ಪೋರಟುಬರುತ್ತಿದ್ದ. ಶಿವರುದ್ರ ಮಾತ್ರ ಊರು ಬಿಟ್ಟು ಹೊರಟರೆ, ಪುನಃ ಊರು ಸೇರುವುದು ಎರಡು ದಿನ, ಮೂರು ದಿನವಾಗುತ್ತಿತ್ತು. ಬಂದರೂ ಕೂಡ ಸುಬ್ಬಣ್ಣನಿಗೆ ಲೆಕ್ಕ ಒಪ್ಪಿಸಿಬಿಡುತ್ತಿದ್ದ........ ಮನೆಗೆ ಹೋಗಿ ತಾಯಿಗೆ ಮುಖ ತೋರಿಸಿ, ಊಟಾಂತ ಮುಗಿಸಿ ಮತ್ತೆ ಸೈಕಲ್ ಹತ್ತಿಕೊಂಡು ಬಂಡಿ ಬಿಟ್ಟುಬಿಡೋನು.

ಕುನ್ನೂರು ಸಂತೇಮಾಳದ ಸಮೀಪದಲ್ಲಿ, ದಾರಿ ಪಕ್ಕಕ್ಕಾದಂತೆ ಒಂದು ಆಲೆಮನೆಯಿತ್ತು. ಅಲ್ಲಿ ಶಿವರುದ್ರ ಬೆಲ್ಲ ತುಂಬಿಸುತ್ತಿದ್ದ. ಆಲೆಮನೆಗೆ ಹತ್ತಿರದಲ್ಲಿ ಆಲದ ಮರದ ಕೆಳಗೆ ಒಬ್ಬಾಕೆಯು ಸಣ್ಣದಾಗಿ ಒಂದು ಬೀಡಿ ಅಂಗಡಿ ಇಟ್ಟುಕೊಂಡಿದ್ದಳು. ಅಂಗಡಿ ಸಾಮಾನೆಲ್ಲ ಸೇರಿದರೂ ಐದಾರು ರೂಪಾಯಿದ ಒಳಪಟ್ಟೇ ಹೊರತು ಅದಕ್ಕಿಂತ ಹೆಚ್ಚಾಗುತ್ತಿರಲಿಲ್ಲ. ಅಂಗಡಿಯಲ್ಲಿ ಕುಳಿತುಕೊಳ್ಳುತ್ತಿದ್ದವಳು ಒಳ್ಳೇ ಪ್ರಾಯದವಳು. ಮದುವೆಯಾಗಿ ಒಂದೇ ಒಂದು ಮಗು ಇರೋದು ಆಕೆಗೆ. ಆಲೆಮನೆಗೆ ಬರುತ್ತಿದ್ದ ಶಿವರುದ್ರ ಬೀಡಿ ಕಡ್ಡಿಪೆಟ್ಟಿಗೆ ತೆಗೆದುಕೊಳ್ಳುವುದಕ್ಕೆ ಅಂದುಕೊಂಡು ಮೆತ್ತಗೆ ಆಕೆಯೊಡನೆ ಸ್ನೇಹ ಬೆಳಸಿದ. ದಿನ ದಿನಕ್ಕೆ ಒಬ್ಬರಿಗೊಬ್ಬರಿಗೆ ಸಲಿಗೆ ಜಾಸ್ತಿಯಾಗಿ ಎಣೆಸಣೆಯ ಇಬ್ಬರೂ ಸರಸದ ಮಾತುಗಳನ್ನು ಪರಸ್ಪರ ಆಡುವ ವರೆಗೂ ಬಂದಿದ್ದರು- ಅಂದು ಆಲೆ ಮನೆಯಿಂದ ಬೀಡಿ ತೆಗೆದುಕೊಳ್ಳಲು ಆಕೆಯ ಬಳಿಗೆ ಹೊರಟನು. ಆಕೆಯು ಆಗತಾನೆ ಪರಂಗೆಹಣ್ಣಿನ ಸಿಪ್ಪೆ ತೆಗೆದು, ಎರಡು ಹೋಳು ಕೊಯ್ದು ಇರಿಸಿದ್ದಳು. ಇನ್ನೂ ಚೂರು ಚೂರಾಗಿ ಕುಯ್ದಿರಲಿಲ್ಲ. ಶಿವರುದ್ರನು ಆಕೆಯನ್ನು

"ಇದೇನು ಪರಂಗಿ ಹಣ್ಣು ಹೋಳುಗಳನ್ನೇ ಇರಿಸಿಬಿಟ್ಟಿದ್ದೀಯಲ್ಲ" ? ಅಂದ.

"ನೀವು ಬರೋದನ್ನ ನೋಡಿಬಿಟ್ಟು ಹಾಗೇ ಮಡಗಿದ್ದೀನಿ ತೆಗೆದುಕೊಂಡು ತಿನ್ನೀ ಸ್ವಾಮಿ"

"ತಗೊಂಡ್ ತಿನ್ನೊನ ಅಂದರೆ ಹಣ್ಣೆಲ್ಲ ಅಳಸಿ ಹೋಗಿದೆ.... ಹಣ್ಣನ್ನ ತಿನ್ನಬೇಕಾದರೆ ಒಳ್ಳೆ ದೋರ್ಗಾಯಿಆಗಿರಬೇಕು.ಆವಾಗ ತಿಂದರೂ ಒಂದು ಚೆಂದ"

"ಸುಮ್ಮನೆ ಬಾಯ್ಲಿ ಅಂದುಬಿಟ್ರೆ ಗೊತ್ತಾಗುತ್ತೆ ಸ್ವಾಮಿ ಹಣ್ಣಿನ ರುಚಿ"ಊಟವಮಾಡಿದರೆ ಗೊತ್ತಾಗುತ್ತೆ?....ಕಡಿದು ನೋಡಿದರೆ ಆ ವಾ ಗ ಗೊತ್ತಾಗುತ್ತೆ ದೋರ್ಗಾಯಿಹಣ್ಣಾಗಿ ಅಳಸಿ ಕೊಂಡಿದೆಯೇ ಅನ್ನುವುದು .."

"ಹೋಗಲಿ ಗಣೇಶ ಬೀಡಿ ಕೊಡು ಒಂದು ಕಟ್ಟನ್ನ....."

"ಕೊಡ್ತಿನಿ ಕೂತ್ಕಳಿ ಸ್ವಾಮಿ ಒಸಿ ಹೊತ್ತು"

"ಕೂತ್ಕೊಳೊಕೆ ಟೈಮಿಲ್ಲ.... ಬೆಲ್ಲ ಪಿಂಡಿಕಟ್ಟೆಸ್ ಬೇಕು ....

ಬೇಗನೆ ಕೊಡು ಹೋಗುತ್ತೇನೆ" ಆಕೆಯು ಉದಾಸೀನವಾಗಿಯೇ ಇದ್ದು "ಕಬ್ಬಿನ ಹಾಲುಕುಡಿದು ಕಟರೆಯಾಯಿತು....ಬಿಸಿ ಬೆಲ್ಲ ತಿನ್ನಿಸಿ ಸಾಕಾಯಿತು ಅಲ್ವ ಸ್ವಾಮಿ"? ಅನ್ನಲು, ಶಿವರುದ್ರನು "ನೀನಿರೋ ಜಾಗಕ್ಕೆತಂದು ಕೊಡುತ್ತಾರ? ಅಂತ ತೀಟೆ ಇದ್ದವಳು ಆಲೆಮನೇಲಿನಾವಿದ್ದ ಹೊತ್ತಿನಲ್ಲಿಬಂದು ಕೇಳಬೇಕಿತ್ತು"ಎಂದವನೆ ಬೀಡಿಗೆ ಕೈ ಹಾಕಿದ. ಆಕೆಯು ಅವನ ಕೈಯನ್ನು ಹೊರಕ್ಕೆತಳ್ಳುತ್ತ "ಚಿ,ಮಾತನಾಡಿ ಸ್ವಾಮಿ ಮೊದಲು..ಬೀಡಿದೇನ್ ಓಡೋಗ್ತಾ.... ಈಸ್ಕೊಂಡ್ ಸೇದೋರಂತೆ ಆಮೇಲೆ" ಅಂದಳು.

"ನಿನ್ನ ಚಪಲ ನಿನಗೆ....ನನ್ನ ಚಪಲ ನನಗೆ"

"ಈವಾಗ ಬ ರಾ ನ....ಕೊಟ್ಟರ್ಯ ಬಿಸಿ ಬೆಲ್ಲನು....ಕಬ್ಬಿನ ಹಾಲನ್ನು"

"ಹು ಅನ್ನಲೇ ಇಲ್ಲ.... ಆಗಲೆ ಬರಾನ ಅಂತಿಯಲ್ಲ....!

ತಾನೆ ಬೀಡಿ ಕಟ್ಟು ತೆಗೆದುಕೊಂಡು, ಅದರಿಂದ ಒಂದು ಬೀಡಿ ಇರಿದುಕೊಂಡು ಬಾಯಿಗೆ ಸಿಕ್ಕಿಸಿ, ಕಟ್ಟನ್ನು ಜೇಬಿಗೆ ಹಾಕಿಕೊಂಡು ಅಂಗಡಿಯಿಂದಲೇ ಹೊಡೆದಿರುವ ಕಡ್ಡಿಪೆಟ್ಟಿಗೆ ತೆಗೆದುಕೊಂಡು ಬೀಡಿ ಹತ್ತಿಸಿಕೊಂಡು, ಕಡ್ಡಿ ಪೆಟ್ಟಿಗೆ ಜೋಬಿಗೆ ಹಾಕಿಕೊಳ್ಳಲು ಹೋಗುವನು. ಅಷ್ಟರಲ್ಲಿ ಆಕೆಯು ಇದೀಗ ಏನಾರೆ ಬುದ್ದಿ ಕಲಿತಿದ್ದೀರಿ ಕಣ್ ಸ್ವಾಮಿ ನೀವು....! ಕಡ್ಡಿ ಪೆಟ್ಟಿಗೆ ಕೈಗ್ಹಾಕಿ.... ಬೀಡಿಕಟ್ಟಿನ ದುಡ್ಕೊಡಿ ಮೊದ್ಲು !" ಅಂದಳು.

"ಕಡ್ಡಿ ಪೆಟ್ಟಿಗೆ ನಿನ್ನದೆ?.... ಬೀಡಿಕಟ್ಟಿನ ದುಡ್ಡನ್ನ ಕೊಟ್ಟಿಲ್ವ?"

"ಅದ್ಯಾಕ ಜ್ಞಾನ ಸರಿಯಾಗಿಲ್ವ ನಿಮಗೆ ?"

"ಸರ್ಯಾಗಿತ್ತು.... ಒಸಿ ಯಾರೋ ಈಸ್ಕಂಡೋಗವ್ರೆ.. ಆದ್ದರಿಂದ ಸ್ವಲ್ಪ ಮದ್ದಿಷ್ಟ ಅಷ್ಟೆ! ಕಡ್ಡಿಪೆಟ್ಟಿಗೆ ಕೆಳಗೆಹಾಕಿ.... ದುಡ್ಡನ್ನು ಎಸೆದು ಮೇಲೆದ್ದು "ನಿನ್ನದುಡ್ಡು ತಗೋಳವ್ವ ಹೋಗ್ತಿನಿ .... ಇಷ್ಟಕ್ಕೆ ಅಷ್ಟೊಂದು ಮಾತನಾಡಿ ಬಿಟ್ಯಾ ನೀನು?" ಅಂದ.

"ಈವಾಗ ಬರ್ಲೊ?.... ಸಂಜೆಯಿಂದ ಬರ್ಲೋ ಸ್ವಾಮಿ?"

"ಈವಾಗ್ಲೂ ಬೇಡ.... ಸಂಜೆಯಿಂದ್ಲೂ ಬೇಡ.... ರಾತ್ರೀಗ್ ಬಾ"

"ಕಬ್ಬಿನ ಹಾಲನ್ನು... ಬಿಸಿ ಬೆಲ್ಲಾನು ಕೊಟ್ಟರ್ಯ ?"

"ಸಕ್ಕರ್ಕಡ್ಡೀನು ಕೊಡ್ತೀನಿ ಬಾ" ಎಂದವನೆ ಹೊರಟ.

ಸುತ್ತಾ ನೋಡಿದಳು. ಅವರಿಬ್ಬರಲ್ಲದೆ ಮತ್ಯಾರೂ ಇರಲಿಲ್ಲ. ಆವನಿಗೆ ರೋಪ್ ಹಾಕಲು ಏನಂದ್ರಿ ಸ್ವಾಮಿ?! ಯಾರಸ್ನಾದ್ರು ಕೂಗಾನಾ ? ಅಂದಳು. ಶಿವರುದ್ರ ಏನ್ ಎದರಲಿಲ್ಲ. ಕೂಗು.... ಕೂಗಿಕೊಂಡರೆ ಹೆದರಿಕೊಳ್ಳೋವವರು ಯಾರು ? ಹೀಗಂದು ಹೊರಟವನನ್ನು ಅವಳೇನೆ 'ಇದ್ಯಾಕ್ ಸ್ವಾಮಿ ಹೊರಟುಬಿಟ್ರಿ .. ಸುಮ್ನೆ" ಅಂದಳು.

ನಿಂತು "ಯಾರನ್ನಾದ್ರುಕೂಗಾನಅನ್ನುತ್ತೀಯಮತ್ತೆ ಇನ್ನೇನ್ ಮಾಡಲಿ ಹೋಗದೆ?....ಎಂದ.

"ಬನ್ನಿ ಸ್ವಾಮಿ ಹೋಗೋರಂತೆ"

ಶಿವರುದ್ರನು ಹೋಗಿ ಕುಳಿತ. ಆಕೆಯು ಪರಂಗಿ ಹಣ್ಣಿನ ಒಂದುಹೋಳನ್ನು ಮಧ್ಯಕ್ಕೆಕುಯ್ದು ಎರಡುಚೂರನ್ನು ನೀಡಿದಳು. ಅವನುಆವಳಕೈಯ್ಯನ್ನು ಹಿಡಿದುಕೊಂಡುಈರ್ವರೂಪರಸ್ಪರ ನೋಡಿದರು. ಕಣ್ ಕಣ್ಣುಗಳು ಕೂಡಿದವು. ಮುಖಗಳು ಬೆವರಾಡಿದವು. ಸ್ವಲ್ಪ ಹೊತ್ತು ಈರ್ವರೂ ಮಾತನಾಡದೇಹೋದರು. ಆಮೇಲೆ ಅವನುಆಕೆಯ ಕೈಯಿಂದಒಂದುಚೂರನ್ನುಮಾತ್ರ ತೆಗೆದುಕೊಂಡ ಬಲಗೈಯಲ್ಲಿಹಿಡಿದಿದ್ದಚಾಕನ್ನುಕೆಳಗಿರಿಸಿ, ಎಡಗೈಯಲ್ಲಿದ್ದ ಹೋಳಿನ ಉಳಿದ ಭಾಗವನ್ನು ಬಲಗೈಗೆ ತೆಗೆದುಕೊಂಡಳು. ತಿನ್ನಲು ಮೊದಮೊದಲುನಾಚಿದಳು. ಆಮೇಲೆತಿಂದಳು. ಶಿವರುದ್ರಮೊದಲೆ ತಿಂದುಬಿಟ್ಟ ಕೈಬಾಯಿತೊಳೆದುಕೊಳ್ಳಲು ಹತ್ತಿರದಲ್ಲೇಇದ್ದ ಕಾಲುವೆಗೆ ಹೋದನು.ಅವನುಹೋದುದನ್ನುನೋಡಿಕೊಂಡುಅವಳೂನು ಸ್ವಲ್ಪಹೊತ್ತು ಬಿಟ್ಟುಕೊಂಡುಎದ್ದು ಆಕಡೆಗೇಹೋದಳು. ಇವಳು ಹೋಗುವ ವೇಳೆಗೆ ಅವನು ಕೈ ಬಾಯಿ ತೊಳೆದುಕೊಂಡು ಉಟ್ಟ ಪಂಚೆಗೇನೆ ಕೈ ಒರಿಸಿಕೊಳ್ಳುತ್ತ ನಿಂತಿದ್ದ. ಕಾಲುವೆ ಎಡಕ್ಕೂ ಬಲಕ್ಕೂ ಕಬ್ಬಿನ ಗದ್ದೆಗಳು. ಇವಳು ಕರೀ ಬನಾತಿನ ಅರತೋಳು ರವಕೆ ಇಕ್ಕಿಕೊಂಡು, ಕೆಂಪು ಕುತ್ನಾಲದ ಸೀರೆ ಉಟ್ಟುಕೊಂಡು, ಬಾಗುತ್ತಾ, ಬಳಕುತ್ತಾ, ಮಿಟಗುತ್ತಾ ಕಾಲುವೆ ಪಕ್ಕದಲ್ಲಿಯೇ ನಡೆದು ಶಿವರುದ್ರನ ಸುಮಾರು ಸಮೀಪದಲ್ಲಿ ಕುಣಕಾಲು ಮಟ್ಟ ನೀರಿಗಿಳಿದು, ಕೈ ಬಾಯಿ ತೊಳೆದುಕೊಳ್ಳಲು ಮುಂದೆ ಬಗ್ಗಿದಳು. ಬಾಯಿಗೆ ನೀರನ್ನು ಹಾಕಿಕೊಂಡು ಮುಕ್ಕಳಿಸುತ್ತಾ, ಹಾಗೆಯೇ

ಮರೆಯಾಗಿ ಶಿವರುದ್ರನ ಕಡೆಗೆ ನೋಡಿದಳು. ಅವನು ನಸು ನಗುತ್ತಾ ಅವಳ ಪಕ್ಕಕ್ಕೆ ನಿಂತನು. ತನ್ನ ಮುಂಡಿಯಿಂದ ಅವಳ ಪುಷ್ಪವನ್ನು ಸ್ವಲ್ಪ ಗುದ್ದರಿಸಿದನು, ಆಕೆಯು ಸರ್‍ರನೆ ಹಿಂತಿರುಗಿದ ವಳೆ...."ಏನಾದರು ನೀರಿಗೆ ಬಿದ್ದಿದ್ರೆ ಗತಿ ! ಅಂದಳು.

"ನಾನಿಲ್ವ ಎಳೆದುಕೊಂಡು ಬರುವುದಕ್ಕೆ" ಅಂದ ಶಿವರುದ್ರ.

"ಹು, ಇದ್ದರಿ .... ಯಾರಾದ್ರು ಕಂಡ್ಕೊಂಡ್ರೆ" ಅಂದಳು. ಇನ್ನ್ಯಾರು ಇದ್ದಾರು, ಕಂಡುಕೊಳ್ಳುವುದಕ್ಕೆ?....ನೀನು ನಾನು ಇಬ್ಬರೇ ಇರೋದು. ಸೆರಗಿನಿಂದ ಕಟಬಾಯಿ ಒರೆಸಿಕೊಳ್ಳುತ್ತಾ ಹಿಂತಿರುಗಿದಳು. ಹು ಇಷ್ಟೆ ಅಂದುಕೊಂಡು ತಿರುಗಿದಳಷ್ಟೇ ಹೊರತು ಕಾಲು ಬರುತ್ತದೆಯೇ ಅವಳಿಗೆ ಮುಂದೆ ಹೋಗಲು.... ಸಲಸಲಕ್ಕೂ ಹಿಂದಕ್ಕೊಂದು ಸಲ ನೋಡುತ್ತಾಳೆ ... ಮುಂದ ಕ್ಕೊಂದುಸಲ ನೋಡುತ್ತಾಳೆ — ಹೀಗೆ ನೋಡುತಾ ಹಿಂದೊಂದು ಮುಂದೊಂದು ಕಾಲು ಹಾಕಿಕೊಂಡು, ಹಿಂದಕ್ಕೂ ಮುಂದಕ್ಕೂ ತೂಯುತ್ತ ಕಾಮದ ಉದ್ವೇಗದಲ್ಲಿ ಹಸಿ ಗರಿಕೆ ಮೆಟ್ಟಿಕೊಂಡು ನಿಂತಿದ್ದವಳ ರಟ್ಟೆಗೆ ಶಿವರುದ್ರ ಕೈ ಹಾಕಿದವನೆ ಸಲೀಸ್ ಕಬ್ಬಿನ ಗದ್ದೆಯೊಳಗಡೆಗೆ ಎಳೆದುಕೊಂಡು ಹೊರಟು ಹೋದ. ಸ್ವಲ್ಪ ಹೊತ್ತಾದ ಮೇಲೆ ಅವಳು ಬಂದು ನೀರು ಬಳಸಿಕೊಂಡು, ಎಡಗೈ ಯಿಂದ ನೆರಿಯನ್ನು ಒತ್ತಿಕೊಳ್ಳುತ್ತಾ ಅಂಗಡಿ ಕಡೆ ಓಡಿದಳು. ಅವಳು ಹೋದ ಯೆಷ್ಟೋ ಹೊತ್ತಿನ ಮೇಲೆ ಈ ರಾಯ ಹೊರಟ ಆಲೆ ಮನೆ ಕಡೆಗೆ.

ಇವರಿಬ್ಬರೂ ಅನುಸರಿಸಿಕೊಂಡುದು ಮೊದಮೊದಲು ಗೋಪ್ಯ ದಲ್ಲೆ ಇದ್ದು, ದಿನಕಳೆದಂತೆಲ್ಲ ಒಬ್ಬರಿಂದ ಒಬ್ಬರಿಗೆ ಗೊತ್ತಾಗಿ, ಆಕೆಯ ಗಂಡನ ವರೆವಿಗೂ ಸುದ್ದಿ ಹೋಯಿತು. ಅವನಿಗೆ ರುಜು

ಮಾತೂ ಆಯಿತು. ಅವನೂ ಅವನ ಭಾವಮೈದ ಇನ್ನೊ ಒಂದು ನಾಲ್ಕೈದು ಜನ ಸೇರಿಕೊಂಡು ಶಿವರುದ್ರನ್ನ ಇಲ್ಲಾ ಅನ್ನಿಸಿ ಬಿಡಬೇಕೆಂದು ತೀರ್ಮಾನಿಸಿದರು. ಈ ವಿಷಯ ಆದೆಂಗೋ ಶಿವರುದ್ರನಿಗೂ ಗೊತ್ತಾಗಿ ಹೇಳದೇ ಕೇಳದೆ ಬೊಮ್ಮನಹಳ್ಳಿಗೆ ಪರಾರಿಯಾದ. ಬೊಮ್ಮನ ಹಳ್ಳಿಗೆ ಬಂದವನೇ ಊರು ಬಿಟ್ಟು ಅಲ್ಲಾಡಲೇ ಇಲ್ಲ. ಏನು ಸಮಾಚಾರಾ ಅಂತ ವಿಚಾರಿಸಿದರು ಬಾಯಿ ಬಿಡಲಿಲ್ಲ. ಸುಬ್ಬಣ್ಣ ಬಾಯಿ ಬಿಡಿಸಿದ. ವಿಷಯ ತಿಳಿದು ಕೊಂಡು ಅಣ್ಣನೊಂದಿಗೆ ತಿಳಿಸಿದ. ಅಣ್ಣ ತನ್ನ ಹೆಂಡತಿಯೊಡನೆ ವಿಷಯ ಸಮಾಲೋಚನೆ ನಡಸಿದಮೇಲೆ ಶಿವರುದ್ರನಿಗೆ ಆಗಿನಿಂದಲೇ ಎಲ್ಲಾದರೂ ಹೆಣ್ಣು ನೋಡಿಕೊಂಡಿದ್ದು ಬರುವ ಲಗ್ನದಲ್ಲಿ ಕಾರ್ಯ ಮುಗಿಸಿ ಬಿಡುವುದೆಂದು ನಿರ್ಧರ ವಾಯಿತು.

೮

ಮೂರು ತಿಂಗಳು ಕಳೆದುಹೋದವು. ಊರಿನಲ್ಲಿ ಪ್ಲೇಗು ಕಾಣಿಸಿಕೊಂಡಿತು.

ಎಲ್ಲರೂ ಊರುಬಿಟ್ಟು ಗುಡಸಲಿಗೆ (ಷೆಡ್ಡಿಗೆ) ಹೋದರು. ದೊಡ್ಡ ವೀರಶೆಟ್ಟಿಯೂ ಹೋದ ಅಲ್ಲೆ ಅವನ ಹೆಂಡತಿಯು ಪ್ಲೇಗಿನಿಂದಾಗಿ ತೀರಿಕೊಂಡಳು. ಷೆಡ್ಡಿನಿಂದ ಊರಿಗೆ ವಾಪಸಾದಮೇಲೆ ಸುಬ್ಬಣ್ಣ ನನ್ನು ಕರೆದುಕೊಂಡು ತಂದೆಯವರ ಹತ್ತಿರ ಹೋದ. ವಿಚಾರ ವನ್ನೆಲ್ಲಾ ಕೇಳಿಕೊಂಡು ಜುಂಜಪ್ಪನವರು ಮಕ್ಕಳ ಸಂಗಡವೇ ಬೊಮ್ಮನಹಳ್ಳಿಗೆ ಹೊರಟುಬಂದರು. ನಾಲ್ಕಾರು ಕಡೆ ಹೋಗಿ ಹೆಣ್ಣುಮಗಳನ್ನು ನೋಡಿಕೊಂಡು ಬಂದರೂ. ಮನಸ್ಸಿಗೆ ಹಿಡಿಸ ಲಿಲ್ಲ. ಕೊನೆಗೆ "ಕೊಟ್ಟಸಾಲು ತಂದಸಾಲಿನಲ್ಲಿ ಹೆಣ್ಣು ಕೊಡು, ತೆಗೆದುಕೊಂಡು. ಹೊಳೆಸಾಲಿನಲ್ಲಿ ಗದ್ದೆ ಮಾಡು' ಬೆಟ್ಟಸಾಲಿನಲ್ಲಿ ಹೊಲತೆಗಿ"ಅನ್ನುತ್ತಾರಲ್ಲ ಹಾಗೇನೆ. ಸಮೀಪದ ಉಕ್ಕಲಗೆರೆಯಲ್ಲಿ ಕಂಡದ್ದು, ಕೇಳಿದ್ದು ಅಂದುಕೊಂಡು ಒಂದು ಮನೆಯಲ್ಲಿ ಹೆಣ್ಣು ನೋಡಿದರು. ಆ ಮನೆಯೇನು ಅಂಥಾ ದೊಡ್ಡ ತೊಟ್ಟಿಮನೆ ಅಲ್ಲ. ಸಾಮಾನ್ಯವಾದ ಕವಳಿಗೆಮನೆ. ಮನೆ ಯಜಮಾನ ತೀರಿಕೋಡು ಏಳೆಂಟು ವರ್ಷಗಳಾಗಿವೆ. ಮನೆಯಲ್ಲಿ ತಾಯಿ ಮಗಳು ಇಬ್ಬರೇನೆ. ತಾಯಿ ಸ್ವಲ್ಪ ದಾರಿತಪ್ಪಿದ್ದಾಳೆ ಅನ್ನೋದನ್ನ ತಿಳಿದು ತಿಳಿದೂ ಚಿಕ್ಕ ಜುಂಜಪ್ಪನವರು ಕಂಡಿದ್ದು, ಕೇಳಿದ್ದು ಕೊಟ್ಟಸಾಲು ತಂದ ಸಾಲು ಅಂದುಕೊಂಡು ಅದೇಮನೆಗೆ ನುಗ್ಗಿದರು. ಆದಕ್ಕೆ ಕಾರಣ

ವಾದರೂ ಇಷ್ಟೇನೆ ಇದ್ದೀತು; ಆಕೆಯ ಹತ್ತಿರ ಸ್ವಲ್ಪ ದುಡ್ಡು ಕಾಸಿದೆ ಎಂದು ವದಂತಿ ಇತ್ತು. ಅಲ್ಪಸ್ವಲ್ಪ ಜಮೀನುಸಮೀನೇನು ಎಲ್ಲರಿಗೂ ಕಂಡಂತೆಯೇ ಇರುವುದಾಗಿತ್ತು. ತಾಯಿಗೆ ಒಬ್ಬಳೇ ಮಗಳಾದುದರಿಂದ, ಆಕೆಯನ್ನು ತಂದುಕೊಂಡರೆ ಸ್ವಲ್ಪ ಆಸ್ತಿ ಪಾಸ್ತೀನು ಸಿಗುತ್ತೆ ಅಂದುಕೊಂಡು ಆ ಮನೆಗೆ ಹೋಗಿರಬೇಕಲ್ಲದೆ ಮತ್ತ್ಯಾವ ಉದ್ದೇಶವನ್ನಿಟ್ಟುಕೊಂಡು ಆ ಮನೆ ಸಂಬಂಧವನ್ನು ಬಯಸಿದ್ದಾರು! ಆಕೆಯ ಮಗಳು ನೆರೆದು ಏಳೆಂಟು ವರುಷವಾಗಿತ್ತು. "ತಾಯಿಯಂತೆ ಮಗಳು, ನೂಲಿನಂತೆ ಸೀರೆ" ಅನ್ನೋ ಹಾಗೆ ಆಕೆಯೂ ಜನ ಅಪವಾದಕ್ಕೆ ಸಿಕ್ಕದೇಏನಿರಲಿಲ್ಲ. ಆದರೂ ನಾವು ಕಾಣದೆ ಮಾಡನೆ ಅನ್ನಬಾರದು. ಲಗ್ನಕ್ಕೆ ಆತಿರುವ (ಬಂದಿರುವ) ಹುಡುಗಿ ಅವರ ಬಾಳಾಟವನ್ನು ತಾವು ಯಾಕೆಮುರಿಯಬೇಕು. ಸುಳ್ಳುಹೇಳಿ ಒಂದು ಕಲ್ಯಾಣ ಮಾಡೂ ಅನ್ನುತ್ತಾರೆ. ಅಂತಾದ್ದರಲ್ಲಿ ಮಾಡಿಕೊಳ್ಳಬಹುದೇ ಅಂತ ಕೇಳಿದರೆ ಹು ಅಗತ್ಯವಾಗಿ ಮಾಡಿಕೊಳ್ಳಿ ಅಂದರೆ ತಮ್ಮ ಅಪ್ಪನಮನೆ ಗಂಟ್ಟು ಹಾಳಾಗುವುದೇನು! ಅಂದುಕೊಂಡು..... ಜುಂಜಪ್ಪನವರು ಆಲೂರಿನಲ್ಲಿ ಯಾರ್‍ಯಾರನ್ನು ವಿಚಾರಿಸಿದರೋ ಅವರೆಲ್ಲಾ ಕಂಡರೂ ಕಾಣದವರಂತೆ ಲಗ್ನಮಾಡಿಸುವುದಕ್ಕೆ ಎಷ್ಟುಬೇಕೊ ಅಷ್ಟು ಮಾತನಾಡಿದರು. ದೊಡ್ಡವೀರಶೆಟ್ಟಿಗೆ ಹೆಂಡತಿ ತೀರಿಕೊಂಡು ಮೂರು ತಿಂಗಳು ತುಂಬುವುದರೊಳಗಾಗಿ, ಉಕ್ಕಲಗೆರೆ ಹೆಣ್ಣನ್ನೆ ತಂದುಕೊಂಡು ಲಗ್ನವಾಯಿತು. ಜುಂಜಪ್ಪನವರು ತಾವೇ ನಿಂತು ಓಡಾಡಿ ಕೆಲಸ ಮಾಡಿದರು. ಕಾರ್ಯವಾದ ಮೇಲೆ ಮತ್ತೆ ಮಗಳ ಮನೆಗೆ ಹೊರಟು ಹೋದರು.

ಲಗ್ನವಾಗಲೇ ಇಲ್ಲ ಅಪ್ಪನಿಗೂ ಮಗನಿಗೂ ಬಂದು ಬಿಟ್ಟಿತು ಚಿಕ್ಕಮ್ಮನ ನೆರಳು ಬಿತ್ತೂ ಅಂದರೆಸಾಕು ಶಿವರುದ್ರಸಿಡಿದುಹೋಗು

ತ್ತಿದ್ದ.ಮನೆಗೆ ಯಾವಾಗಲೋಬರೋದು, ಯಾವಾಗಲೋ ಹೋಗೋದು ಹೇಳೋರಿಲ್ಲ,ಕೇಳೋರಿಲ್ಲ. ಕೊನೆಗೆ ಅಪ್ಪನ ಎದುರಿಗೇನೆ ಕಾಲ ಮೇಲೆ ಕಾಲುಹಾಸಿಕೊಂಡು ಕೂತುಕೊಳ್ಳುವುದು.... ಬೀಡಿ ಸೇದುತ್ತಾ ಇದ್ದು ಅಪ್ಪ ಎದುರಾಗಿ ಬಂದರೆ ಬೀಡಿ ಮರೆಮಾಡಿಕೊಳ್ಳುವುದುಬಿಟ್ಟು ಮತ್ತಷ್ಟೂ ಜೋರಾಗಿ ಸೇದುವುದು ಹೇಗೆಲ್ಲಾ ಷುರುವಾಗಿ ಹೋಯಿತು.... 'ಅರಸಿನ ಅಂಕೆ ಇಲ್ಲ, ದೆವ್ವದ ಕಾಟವಿಲ್ಲ' ಅನ್ನೋಹಾಗಾಯಿತು.

ಒಂದು ದಿನ ರಾತ್ರಿ ಊಟದ ಹೊತ್ತು ವೀರಿ ಮನೆಗೆ ಬಂದ. ಅಪ್ಪ ಏನನ್ನೂ ಅನ್ನಲಿಲ್ಲ. ಆದರೆ ಒಂದೇ ಸಮನೆ ಮಗನನ್ನೇ ನೋಡಿಡ. ಅವನು ನೆಟ್ಟಗೆ ಹೋಗಿ ಹಜಾರದಲ್ಲಿ ತೊಟ್ಟಿ ಬಾಯಲ್ಲಿ ಕಂಬ ಒರಗಿಕೊಂಡು ಕುಳಿತಿದ್ದ. ಕೈಕಾಲು ಮುಖ ತೊಳೆದುಕೊಂಡು ಹಜಾರದಲ್ಲೇ ಊಟಕ್ಕೆ ಕುಳಿತುಕೊಂಡ. ಚಿಕ್ಕಮ್ಮ ಅವನ ಸಂಗಡ ಮಾತನಾಡುತ್ತಿರಲಿಲ್ಲ. ಊಟಕ್ಕೆ ಬಟ್ಟಲು ಇರಿಸಿದ ಮೇಲೆ ಬಡಿಸುವಾಗ ಸುಮ್ಮನೆ ಬಡಿಸುವುದು ಬಿಟ್ಟು ಗೊಣಗುಟ್ಟುವುದಕ್ಕೆ ಮೊದಲು ಮಾಡಿದಳು. ಊಟಕ್ಕೆ ಕೂತಿದ್ದವನಿಗೆ ಸೈರಿಸಲಾಗಲಿಲ್ಲ. ಕೆರಳಿದ. ಎದ್ದುನಿಂತು ತಟ್ಟೆಯನ್ನು ಒದ್ದ ತಟ್ಟೆಯಲ್ಲಿದ್ದ ಅನ್ನ ಚೆಲ್ಲಿತು. ಬಾಯಿಗೆಬಂದಂತೆಲ್ಲ ಅನ್ನಲಾರಂಭಿಸಿದ ಮಗ ಹೀಗೆಲ್ಲ ಅನ್ನುತ್ತಿದ್ದರೆ ತಂದೆ ಕೇಳಿಕೊಂಡು ಸುಮ್ಮನಿರಲಾಗುತ್ತದೆಯೇ ? ಮಗನ ಮೇಲೆ ಕೆಂಡವಾದ, ಘರ್ಜಿಸಿದ, ಬಿಸಿಬಿಸಿಯಾಗಿ ಮಾತನಾಡಿದ. ಆದರೆ ಅದುಯಾವುದು ಮಗನಮೇಲೆ ಪರಿಣಾಮವಾಗಲಿಲ್ಲ. ಮಗನು ತಂದೆಗೆ ಎದುರುಬಿದ್ದ. ಹೇಳುವುದಿಲ್ಲವೆ 'ಅಡ್ಡಿ ಕಡಿಮೆಯಾದ ಮೇಲೆ, ಕಸದ ಕಡ್ಡೀಗಿಂತ ಕಡೆ' ಎಂದು..... ಹಾಗಾಯಿತು ದೊಡ್ಡವೀರಶೆಟ್ಟಿ ಗತಿ. ಜಗಳವನ್ನು ನೋಡುತ್ತಿದ್ದರೂ ತಮ್ಮಯ್ಯನಾಗಲೀ, ನಾಗಣ್ಣನಾಗಲೀ ಎದ್ದು

ಹೋಗಿ ಬಿಡಿಸಲಿಲ್ಲ. ಹಾಗೆ ಹೋಗಿ ಬಿಡಿಸಲೂ ಬಾರದು ಅಲ್ಲವೆ? ಹೇಳಬಹುದು, ನೋಡಿಕೊಂಡು ಸುಮ್ಮನಿರಲಾಗುವುದೆ? 'ಮಧ್ಯಸ್ಥಗಾರರಿಲ್ಲದ ಊರು ಮಧ್ಯಾಹ್ನಕ್ಕೆ ಸರಿ' ಎಂಬ ಗಾದೆ ಮಾತನ್ನು ಕೇಳಿಲ್ಲವೆ ಎಂದು. ಆದರೆ ಗಂಡಹೆಂಡತಿಯರ ಮಾತಿಗೆ, ತಂದೆ ಮಕ್ಕಳ ಮಾತಿಗೆ, ತಾಯಿ ಮಕ್ಕಳ ಮಾತಿಗೆ ಮಧ್ಯ ಪ್ರವೇಶಿಸುವವರಿಗೆ ಬುದ್ಧಿಯಿಲ್ಲ. ಏಕೆಂದರೆ ಇಂದು ಜಗಳಕಾಯುತ್ತಾರೆ, ನಾಳೆ ಒಂದಾಗುತ್ತಾರೆ.....ಬೆಳಗ್ಗೆ ಜಗಳವಾಡಿರುತ್ತಾರೆ ಸಾಯಂಕಾಲಕ್ಕೆಲ್ಲ ಹೊಂದಿಕೊಳ್ಳುತ್ತಾರೆ.... ಮಧ್ಯೆ ಹೋಗಿ ಇಬ್ಬರನ್ನೂ ಬಿಡಿಸಿದ್ದರಲ್ಲ ಅವರೇನೆ ನಿಷ್ಠೂರವಾಗುವವರು. ಈ ಭಾವನೆಯಿಂದಲೆ ತಮ್ಮಯ್ಯನಾಗಲೀ, ನಾಗಣ್ಣನಾಗಲೀ ಎದ್ದುಹೋಗಿ ಜಗಳ ಬಿಡಿಸದೆ ಹೋದುದು. ನಮಗ್ಯಾವ ತೀಟೆ ಎಂದುಕೊಂಡು ನೋಡಿಕೊಂಡು ಕುಳಿತರು.

'ಇನ್ನು ಮೇಲೆ ನೀನು ಮನೆಗೆ ಬರಬೇಡ' ಎಂದ ದೊಡ್ಡ ವೀರಶೆಟ್ಟಿ.

'ನನಗೆ ಕೋಡೋದನ್ನ ಕೊಟ್ಬುಬಿಡು, ಆಮೇಲೆ ನಾನು ಯಾತಕ್ಕಾಗಿ ಬರುವುದಕ್ಕೆ ಹೋಗಲಿ ನಿನ್ನ ಮನೇಗೆ.... ಏನ್ ನಮ್ಮ ತಾಯಿ ಇದ್ದಾಳ? ಅದಕ್ಕೋಸ್ಕರ ಬರಲೇನು'?

'ನಿನಗೇನೋ ಕೊಡೋದು'

'ಏನೂ ಕೊಡೋ ಹಾಗಿಲ್ಲಾ ಅನ್ನು ಹಾಗಾದ್ರೆ?'

'ಕೊಡೋದು ಇಲ್ಲ, ಬಿಡೋದು ಇಲ್ಲ.... ಎದ್ಹೋಗೋ ಮೊದ್ಲು ಮನೆಯಿಂದಾಚೇಗೆ' ಅಂದ. ಮಗ ಅಪ್ಪನ ಮೇಲೆ ಬಿದ್ದ. ಅಪ್ಪನ ಎದೆ ಹಿಡಿದುಕೊಂಡು "ಎನಂದ್ಯೋ, ಕೊಡೋದು ಇಲ್ಲ, ಬಿಡೋದು ಇಲ್ವ.... ಎಲ್ಲ ಆಸ್ತಿಪಾಸ್ತೀನು ನೀನೆ ಎದೆ ಮುರಿದು ಸಂಪಾದನೆ ಮಾಡ್ದೇ ಅನ್ನು! ಈ ಮನೇನು ನೀನೆ ಕಟ್ದಿ ಅನ್ನು?!'

ಇಷ್ಟರಲ್ಲಿ ತಮ್ಮಯ್ಯ ಇದ್ದವನು :ಮಗನನ್ನು **ಬಿಡೋ ಕೈನ!....ಎದೆ ಹಿಡಿದಿದ್ದಾನೆ!** ದೊಡ್ಡಮನುಷ್ಯ!'.... ಎಂದು ಗದರಿಸಿಕೊಳ್ಳಲು ಕೈಬಿಟ್ಟವನೆ, 'ಅಪ್ಪಾ ಅಂತೆ ಅಪ್ಪ.... **ತಿಥಿ ಮಾಡ್ಹಾಕಿ ಬಿಡುತ್ತೀನಿ** ನನ್ನ ತಂಟೀಗೆ ಬಂದರೆ' ಅಂದು ಕೊಂಡು ಹೊರಟು ಹೋದ. ಮಗ ಚಿಕ್ಕವನಾಗಿದ್ದಾಗ ಅವನನ್ನು ಶತೃವಿನಂತೆ ಕಾಣಬೇಕು. ತನ್ನ ಮಗ ಅಂದುಕೊಂಡು ಬರೀ ಮುದ್ದಿಸಿಕೊಂಡು ಕೂರದೆ ಅಂಪರೆ ಅಂಕೆಯಲ್ಲಿ, ಅದ್ದುಬಸ್ತಿ ನಲ್ಲಿಟ್ಟು, ಯೋಗ್ಯ ಶಿಕ್ಷಣವನ್ನು ಅವನಿಗೆ ಕೊಟ್ಟು ಅವನನ್ನು ಬೆಳಸಬೇಕು. ವಯಸ್ಸಿಗೆ ಬಂದಮೇಲೆ ಅದೇ ಮಗನನ್ನು ಮಿತ್ರ ನಂತೆ ಕಾಣಬೇಕು. ದೊಡ್ಡವೀರಶೆಟ್ಟಿಯು ತಾನೇ ಅಶಿಕ್ಷಿತ ನಾದ ಲಾಗಿ, ಮಗನನ್ನು ಯಾವ ಶಿಕ್ಷೆಯಲ್ಲಿ ಬೆಳೆಸಿದ್ದಾನು?.... ಆ ತಂದೆಗೆ ತಕ್ಕಂತೆ ಮಗ ಅವನು. ಮಗನನ್ನು ಮೈಮೇಲೆ ತಂದು ಕೊಳ್ಳಬಹುದೆ?.... ತಂದೆ ಅನ್ನಿಸಿಕೊಳ್ಳುವ ಅವನಿಗೇನಾದರೂ ಬುದ್ಧಿ ಇದೆಯೇ? ಯಾವಾಗ ಮಗ ಸ್ವಲ್ಪ ಎಲ್ಲೆ ಮೀರಿದ ಅನ್ನು ವುದು ಗೊತ್ತಾಯಿತೊ, ಆಗಲೇ ಅವನನ್ನು ಹೇಗೆ ಕಾಣಬೇಕೋ ಹಾಗೆ ಕಂಡುಕೊಂಡು ಹೋಗಬೇಕು. ಅವನು ಕಾದ ಕಬ್ಬಿಣ ಕಾದ ಕಬ್ಬಿಣವನ್ನು ಕೈನಲ್ಲಿ ಹಿಡಿಯುವುದಕ್ಕಾಗುತ್ತದೆಯೇ?ಅದನ್ನು ಇಕ್ಕಳದಲ್ಲಿ ಹಿಡಿಯ ಬೇಕು. ಅವನಿಗೆ ಎಲ್ಲಿ ಬುದ್ಧಿ ಕಲಿಸಬೇಕೊ ಅಲ್ಲಿ ಕಲಿಸಬೇಕು. ಅದಿಲ್ಲ ಸರಿಸಮಕ್ಕೆ ಕರೆದುಕೊಳ್ಳುವುದೆ? ಸ್ವಲ್ಪ ಮಾತು ಕತೆಯಲ್ಲಿ ವ್ಯತ್ಯಾಸವಾದಾಗಲೆ ತಿಳಿದುಕೊಳ್ಳಬೇಕು, ಮಗ ಮಿತಿಮೀರಿದ್ದಾನೆ ಅಂತ. ಸರಿ,ದಾಕ್ಷಿಣ್ಯಕ್ಕೆ ಉದಾಸೀನವೇ ಮದ್ದು ಅಂತ, ಜೋಡು ವತ್ತರಿಸಿದಂತೆ ಅವನನ್ನು ಒತ್ತರಿಸಿ ಬಿಡಬೇಕು. ತೀರ ಮಿತಿಮೀರೇ ಹೋದ ಅವನಿಗೆ ಏನುಕೊಡಬೇಕೊ ಕೊಟ್ಟು ಕಳೆದುಕೊಳ್ಳಬೇಕು ಅವನನ್ನ ಆಮೇಲಿಂದೇನು, ತರಿದುಹಾಕಿದ

ಕಾಲನ್ನು ನಾಯಿಯಾದರೂ ತಿನ್ನಲಿ, ನರಿಯಾದರೂ ತಿನ್ನಲಿ ಅನ್ನುವಂತೆ, ಕೆಟ್ಟರೆ ಅವನು ಕೆಡುತ್ತಾನೆ ಅಷ್ಟೆ.

ಆದರೆ ಇಲ್ಲಿ ದೊಡ್ಡವೀರ ಶೆಟ್ಟಿ ಹೆಂಡತಿ ಸತ್ತಮೇಲೆ, ಮನೆಯಲ್ಲಿ ಲಗ್ನವಾಗುವ ಹುಡುಗನಿರೋವಾಗ, ಅವನಿಗೇ ಲಗ್ನಮಾಡಿ ಸೊಸೆ ಕೈಲಿ ಹಿಟ್ಟೆಕ್ಕಿಸಿಕೊಂಡು ಊಟ ಮಾಡಕೂಡದೆಂದು ಯಾರಾದರೂ ಹೇಳಿದ್ದರೇನು ? ಆವಾಗ ಮಗನೂ ಸರಿಯಾಗಿರುತ್ತಿರಲಿಲ್ಲವೇನು ? ಮಕ್ಕಳು ಕೆಡಬೇಕಾದರೆ ತಂದೆತಾಯಿಗಳಿಂದಲೇ ಅದು ನಿಜ.

ತಂದೆಯೊಡನೆ ಜಗಳವಾಡಿಕೊಂಡು ಹೊರಟ ಶಿವರುದ್ರನು ಅಂದಿನಿಂದ ಜ್ಞಾನ ಹತ್ತಿದಾಗ ಮನೆಗೆ ಬರುತ್ತಿದ್ದ. ಹಾಗೆ ಬಂದವನಿಗೆ ನಾಯಿಗೆ ಹಾಕಿದಂತೆ ಊಟಕ್ಕೆ ಹಾಕಿಬಿಡುತ್ತಿದ್ದರು. ಅವನು ಬೈಕ್ಕೊಂಡ್, ಆಡ್ಕೊಂಡು, ಚೆಲ್ಕೊಂಡು ಮಾಡ್ಕೊಂಡು, ತಿಂದಷ್ಟು ತಿಂದು ಬಿಟ್ಟಷ್ಟು ಬಿಟ್ಟು ಎದ್ದು ಹೊರಟು ಹೋಗುತ್ತಿದ್ದ. ಮನೆ ಒಳಗೆ ಹಜಾರದಲ್ಲಿ ಮಲಗಿಕೊಳ್ಳುತ್ತಿದ್ದವನು ಅದು ಬಿಟ್ಟ ಪಡಸಾಲೆಯಲ್ಲಿ ಒಬ್ಬನೇ ಮಲಗಿಕೊಳ್ಳುವುದು ಮಾಡಿದ.

ಜಯಣ್ಣ ಕನ್ನಡ ಲೋವರ್ ಸೆಕೆಂಡರಿ ಪರೀಕ್ಷೆಯಗೆ ಆರು ಸಲ ಕಟ್ಟಿದ. ಆದರೂ ಉತ್ತೀರ್ಣನಾಗಲಿಲ್ಲ. ವಯಸ್ಸುಮಾತ್ರ ಹತ್ತೊಂಬತ್ತಕ್ಕೆ ಬಂದಿತು. ಯಾರನ್ನು ನೋಡಿದರೂ ಅವನನ್ನು ಪರಿಹಾಸ್ಯ ಮಾಡಲಿಕ್ಕೆ ಮೊದಲು ಮಾಡಿದರು. ವಿದ್ಯಾಭ್ಯಾಸವನ್ನೇನೋ ತೊರೆದನಾದರೂ ಒಂದು ಕೈಯಾಗಿ' ದೊಡ್ಡ ಅಂಗಡಿಯನ್ನು ಬಹು ಶ್ರಮದಿಂದ ನಿಭಾಯಿಸುತ್ತಿದ್ದ ತಂದೆಗೆ ನೆರವಾಗಿ ನಿಲ್ಲಲಿಲ್ಲ. ತಮ್ಮಯ್ಯನೂ ಆತನ ಹೆಂಡತಿಯೂ ಮಗನಿಗೆ ಬೇಕಾದಷ್ಟು ಉಪದೇಶ ಮಾಡಿದರು, ಪ್ರಯೋಜನವಾಗಲಿಲ್ಲ. ಅಂಗಡಿ ಕಡೆಯೇ ಹೋಗುತ್ತಿರಲಿಲ್ಲ ಅವನು. ಶಿವರುದ್ರನೂ, ಜಯಣ್ಣನೂ ಜೊತೆಯಾದರು

ತಮ್ಮಯ್ಯ ಬೆದರಿದ. ಆ ಅಪ್ಪಾಪೋಲಿ ಐದನ (ಹುಡುಗ) ಜೊತೆ ಸೇರಿಕೊಂಡುಹಾಳಾಗಿ ಕೆಟ್ಟುಹೋಗುತ್ತಾನೆ. ತಮ್ಮಯ್ಯನು ನೀನಾದರೂ ಸ್ವಲ್ಪ ವಿವೇಕ ಹೇಳು ನೋಡೋಣ' ಎಂದು ನಾಗ ಣ್ಣನಿಗೆಹೇಳಿದ. ಗೌರಮ್ಮ ಇದ್ದವಳು' ತಂದೆಮಕ್ಕಳ ಮಾತಿಗೆ ನೀವು ಯಾತಕ್ಕೆ ಪ್ರವೇಶಮಾಡುತ್ತೀರಿ ? ಎಂದು ಗಂಡನನ್ನು ಎಚ್ಚರಿಸಿ ದಳು. ಹಾಗೂ ನಾಗಣ್ಣನು ಜಯಣ್ಣನನ್ನು ಕರೆದು ಹತ್ತಿರಕೂಡಿ ಸಿಕೊಂಡುಬೇಕಾದಷ್ಟು ವಿಧದಲ್ಲಿ ಹೇಳಿನೋಡಿದ ಪ್ರಯೋಜನವಾ ಗಲಿಲ್ಲಿ. ಹೇಳುವವರು ಎಲ್ಲಿವರೆವಿಗೆ ಹೇಳಬಹುದು? ಹೇಳಿದುದಕ್ಕೆ ಬೆಲೆ ಸಿಗದೇ ಹೋದಮೇಲೆ ಅಂಥವರ ಕೂಡ ಹೇಳಿತಾನೆ ಏನು ಪ್ರಯೋಜನ? ಶಿವರುದ್ರನೂ, ಜಯಣ್ಣನೂ ಸುಮಾರು ಆರುತಿಂ ಗಳ ಕಾಲ ಸರಿಯಾಗಿ ಊರನ್ನೇ ಸೇರಲಿಲ್ಲ. ಎಲ್ಲೆಲ್ಲೋ ಪೋಲಿ ಪೋಲಿಯಾಗಿ ಅಲೆದುಕೊಂಡು ಕಾಲ ಹಾಕಿದವು. ಮೈಸೂರಿನಲ್ಲಿ ಕಂಡಿದ್ದೆವು ಎಂದುಒಬ್ಬರು ಹೇಳಿದರೆ, ಆಗಲೇ ಇನ್ನೊಬ್ಬರು ತಾವು ಬೆಂಗಳೂರಿನಲ್ಲಿ ಕಂಡುದಾಗಿ ಹೇಳುತ್ತಿದ್ದರು. ಮತ್ತೊಬ್ಬರು ಮಂ ಡ್ಯದಲ್ಲಿ ಅವರು ಹೋಟೆಲಿನಲ್ಲಿ ಕಾಫಿ ಕುಡಿಯುತ್ತಿದ್ದುದನ್ನು ನೋಡಿದುದಾಗಿಹೇಳುತ್ತಿದ್ದರು.ಆವಾಗ,ಯಾರಾದರೂ,ಇಬ್ಬರನ್ನೂ ನೋಡಿದಿರಾ ನೀವು ?ಎಂದು ಕೇಳಿದರೆ, ಅವರು ಹು ಇಬ್ಬರನ್ನೂ ನೋಡಿದೆ ಎಂದುಉತ್ತರ ಹೇಳುವಲ್ಲಿಯೇ ಇನ್ಯಾರಾದರು ಒಬ್ಬರು ಮಧ್ಯೆ ಬಾಯಾಕಿ ಪ್ರಶ್ನೆ ಮಾಡಿದವನನ್ನು ಕುರಿತು ಅವರಿಬ್ಬರು ಎಲ್ಲಿ ಬೇರಾಗುತ್ತಾರಯ್ಯಾ, ನೀನು ಸರ್‍ಯೇ ಹೇಳುವುದು! ಅವ ರವರ ಅಪ್ಪಂದಿರುಗಳಿಗೆ ಹೊಂದಾಣಿಕೆ ಇಲ್ಲದೇ ಹೋದರೂ, ಮಕ್ಕಳುಗಳಲ್ಲಾದರೂ ಇದೆಯಲ್ಲ ಅದೇಳು ! ಎನ್ನುತ್ತಿದ್ದರು.

ಆ ಹೊಂದಾಣಿಕೆ ಹಾಳಾಯಿತು ಅದೆಷ್ಟು ತಾಳೋದು ! ಆ ಬುಡಕಟ್ಟನಲ್ಲಿ ಏಳುಮೂರು ತಲೆವರೆವಿಗೂ ಹಾಗೇ ನೋಡಿಕೊಂಡು

ಬಾ, ಯಾವ ತಲೇಲಿ ಅಪ್ಪಮಕ್ಕಳು, ಅಣ್ಣ ತಮ್ಮಂದಿರು ಹೊಂದಿ ಕೊಂಡು ನಡೆದಿದ್ದಾರೆ ತೋರಿಸು! ಈಮಾತಿಗೆಎಲ್ಲರೂ ' ಅದೇನು ನಿಜಾ ಅನ್ನು ಎಂದು ಸಹಿ ಹಾಕುತ್ತಿದ್ದರು ಸುಮಾರು ಆರುತಿಂಗಳ ಕಾಲ ಬಿಟುಕೊಂಡು, ಕೈಯ್ಯಲ್ಲಿದ್ದುದೆಲ್ಲ ಮುಗಿದ ಮೇಲೆ ಊರಿಗೆ ವಾಪಸಾದರು. ವಾಪಸಾದಮೇಲಾದರೂ ಸರಿಯೆ, ಈರ್ವರೂ ಯೋಗ್ಯರಾಗಿ, ಅವರವರ ಅಪ್ಪಂದಿರುಗಳಿಗೆ ಸಹಾಯಕರಾಗಿ ನಿಲ್ಲಲಿಲ್ಲ ಪುನಃ ಆದೇಗೋಳು ಬೆಳಗ್ಗೆ ಕೆರೆಗೆಹೋಗಿದ್ದು ಒಂದು ಹೋಟೆಲಿನಲ್ಲಿ ನಾಷ್ಟ (ಫಲಹಾರ) ಮಾಡಿಬಿಡುವುದು. ಅಲ್ಲಿಇಲ್ಲಿ ಬೀಡಿಗೀಡಿ ಸೇದ್ಕೊಂಡು, ಇಸ್ಪೀಟುಗಿಸ್ಪೀಟು ಆಡಿಕೊಂಡು ನಿಂತಿದ್ದು ಮಧ್ಯಾಹ್ನ ಕಳೆದುಕೋಂಡು ಮನೆಗೆ ಹೋಗುತ್ತಿದ್ದರು. ಅಲ್ಲಿ ಯಾವುದನ್ನೂ ಮಾತದಾಡದೆ ಇವರು ಹೋದಕೂಡಲೇ ಊಟಕ್ಕಿಟ್ಟರೋ, ಸರಿ ಯಾವುದು ಜಗಳಾನು ಇಲ್ಲ ಕದನಾನು ಇಲ್ಲ ಆದಿಲ್ಲದೆ ಏನಾದರೂ ಮಾತುಗೀತು ಬಂತೊ, ತೀರಿತು ಅಂತಲೇ ತಪ್ಪಲೆ ಚೊಂಬು ಒಂದು ಉಳಿಯುವ ಹಾಗಿಲ್ಲ ಮನೆಯಲ್ಲಿ ತೊಯ್ದು ಬಿಸಾಡುವುದು, ಚೆಚ್ಚಿ ಹಾಕುವುದು, ಸಿಕ್ಕಿಸಿಕ್ಕಿದ್ದರೆ ತಾಯಿ ಅನ್ನುವುದನ್ನೂ ನೋಡದೆ ಬಾರಿಸುತ್ತಿರು ವುದೇ ಆಗಿತ್ತು ಅವರ ಕೆಲಸ. ಇದನ್ನು ನೋಡಿಕೊಂಡು ಅವರು ಬಂದ ತಕ್ಷಣ ಯಾವ ಮಾತಿಗೂ ಅವಕಾಶವನ್ನು ಕೊಡದೆ, ಮಿತಿಮೀರಿ ತಮ್ಮನ್ನೇ ಒಂದು ಮಾತು ಅಂದರೂ ಸಹ ಸೈರಿಸಿ ಕೊಂಡು ಊಟಕ್ಕಿಡುತ್ತಿದ್ದರು. ಊಟಮಾಡಿದ ಕೂಡಲೆ ಬಾಯಿಗೆ ಬಂದಹಾಗೆ ಅಂದುಕೊಂಡು ಈರ್ವರೂ ಹೊರಟು ಹೋಗುತ್ತಿ ದ್ದರು. ರಾತ್ರಿ ಊಟವಾದಮೇಲೆ ಇಬ್ಬರೂ ತೊಲೆಯ ಮೇಲೆ ಸುತ್ತಿರಿಸಿದ್ದ ಹಾಸಿಗೆಗಳನ್ನು ತೆಗೆದುಕೊಂಡು ಹೋಗಿ ಪಡಸಾಲೆ ಯಲ್ಲಿ ಮಲಗುತ್ತಿದ್ದರು. ಹೀಗಿದ್ದಾಗ ಇದ್ದಕ್ಕಿದ್ದಂತೆಯೆ ಜಯ

ಣ್ಣನು ಮೈಸೂರು–ಕೋಡಳ್ಳಿ ಲೈನಿನಲ್ಲಿ ಓಡಾಡುವ ಬಸ್ಸುಗಳಿಗೆ ಟಿಕೆಟ್ ಬುಕ್ಕಿಂಗ್ ಏಜಂಟಾಗಿ ಸೇರಿಕೊಂಡ, ಅದ್ಯಾರ ಪ್ರೇರಣೆಯಿಂದ ಈ ಕೆಲಸ ಮಾಡಿದನೊ, ಅಥವಾ ತನ್ನಲ್ಲಿ ತಾನೇ ತಿಳಿದು ಮಾಡಿದನೊ ಆ ಪರಮಾತ್ಮನಿಗೇ ಗೊತ್ತು. ಅಂತು ಅವನು ಉದ್ಯೋಗಸ್ಥನಾದನು ಕ್ರಮಕ್ರಮದಲ್ಲಿ ಶಿವರುದ್ರನಿಗೂ ಅವನಿಗೂ ಬಾಂಧವ್ಯ ಕಡಿಮೆಯಾಗುತ್ತಾ ಬಂದು ಕೊನೆಗೆ ಈರ್ವರೂ ಎದುರು ಬದರಿಗೆ ಸಿಕ್ಕಿದರೂ ತಮ್ಮ ಪಾಡಿಗೆ ತಾವು ಹೊರಟು ಹೋಗವುದಾಯಿತು. ಮಗನಲ್ಲಿ ಆದಪರಿವರ್ತನೆಯನ್ನು ಕಂಡು ತಂದೆತಾಯಿಗಳಿಗೆ ಬಹಳ ಸಂತೋಷವಾಯಿತು. ಪಡಸಾಲೆಯಲ್ಲಿ ಶಿವರುದ್ರನೊಬ್ಬನೇ ಮಲಗುವುದಾಯಿತು. ಕೆಲಸವಿಲ್ಲ ಕಾರ್ಯವಿಲ್ಲ ತಿನ್ನುವುದು ಪೋಲಿನಾಯಿಯಂತೆ ಅಲೆಯುವುದು ಅದಿಲ್ಲಾ ಅಂದರೆ ನಿಸಿ ಜೋಗಿಯಂತೆ ಪಡಸಾಲೆ ಕಂಬ ಒರಗಿಕೊಂಡುಏನೇನೋ ದುರ್ಯೋಚನೆಗಳನ್ನು ಮಾಡುತ್ತಾ ಕುಳಿತಿರುವುದು ಅವನ ಹಣೇಬರಹವಾಯಿತು. ಬಿದಿಯಲ್ಲಾಗಲಿವ ಾದಪ್ಪನ, ಗಂಗಾದರಪ್ಪನಮನೆಯ ಪಡಸಾಲೆಗಳಲ್ಲಾಗಲಿ ಯಾರೂ ಇರಲಿಲ್ಲ. ಬೆಳಗ್ಗೆ ಹೊತ್ತು ಪಡಸಾಲೆಯಲ್ಲಿ ಶಿವರುದ್ರ ಒಬ್ಬನೇ ಬೀದಿಕಡೆಗೆ ಮುಖ ಮಾಡಿಕೊಂಡು ಕುಳಿತಿದ್ದ. ಗೋಡೆ ಒರಗಿಕೊಂಡು ಮಾದಪ್ಪನ ಮಗಳು ಚಿಲಿಗೆ ಏರಿಕೊಂಡು (ಸಹಿತ) ನೀರು ಸೇಯ್ದುಕೊಳ್ಳಲು ಬಂದಳು. ಪಡಸಾಲೆಯಲ್ಲಿ ಕುಳಿತಿದ್ದ ಶಿವರುದ್ರನನ್ನು ನೋಡಿದಳು ಅವನೂ ಅವಳ ಕಡೆಗೆ ನೋಡಿದ. ಅವಳು ಗಂಡ ಇಲ್ಲದವಳಾದುದರಿಂದ ಹಣೆಯಲ್ಲಿ ಕುಂಕುಮ, ಕೆನ್ನೆಯಲ್ಲಿ ಅರಿಸಿನ, ಕೈನಲ್ಲಿ ಬಳೆ, ಕತ್ತಿನಲ್ಲಿತಾಲಿ ಇವು ಇರಲಿಲ್ಲವಾದರೂ ಅವಳಲ್ಲಿ ಸೌಂದರ್ಯವಿತ್ತು, ಯೌವನವಿತ್ತು, ಅವಳ

ನೋಟದಲ್ಲಿ ಮಿಂಚಿತ್ತು ರಾಟಿಗೆ ಮೊದಲೇ ಹಗ್ಗ ಹಾಕಿತ್ತ ಬಾವಿಕಟ್ಟೆಯ ಮೇಲೆ ಚಲುಗೆಯನ್ನು ಇರಿಸಿಕೊಂಡು, ಅವರ ಕುತ್ತಿಗೆಗೆ ಹಗ್ಗ ಬಿಗಿಯಲು ಹಗ್ಗಕ್ಕಾಗಿ ಬಲಗೈಯನ್ನು ಹಗ್ಗ ರಾಟೆಯಿಂದ ಇಳಿಬಿದ್ದಿರುವ ಕಡೆ ಬಿಟ್ಟು ಎಲ್ಲೆಲ್ಲೊ ಕೈ ಆಡಿಸುತ್ತಿದ್ದಳು–ಕಾರಣ ಒಮ್ಮೆ ಬೀದೀಕಡೆ ನೊಡುವುದು, ಇನ್ನೊಮ್ಮೆ ಶಿವರುದ್ರನ ಕಡೆನೋಡಿ. ಬೀದಿಕಡೆ ನೋಡುವುದು ಹೀಗೆ ಮಾಡುತ್ತಾ ಮಧ್ಯೆ ಮಧ್ಯೆ ಹಿಂದಕ್ಕೆ ಗುಳಘಟ್ಟದವರ ಮನೆಕಡೆಗೂ, ತಮ್ಮ ಮನೆಕಡೆಗೂ ಆಕೆಯ ದೃಷ್ಟಿ ಹೋಗುತ್ತಿತ್ತು ಈ ರೀತಿಯಲ್ಲಿ ಕಾಮುಕಿಯಾಗಿ ನಿಂತವಳ ಕೈಗೆ ಹಗ್ಗ ಸಿಕ್ಕಿ, ಅವಳು ಅದನ್ನು ಹಿಡಿದುಕೊಂಡು, ಚಲುಗಿಯ ಕುತ್ತಿಗೆಗೆ ಬಿಗಿದು, ಭಾವಿಗೆ ಬಿಟ್ಟು ನೀರು ಸೇದುವುದಾದರೂ ಎಂತು ?

ಒಳಗಿನಿಂದ ತಮ್ಮಯ್ಯಪ್ಪನು ಹೊರಗೆ ಬಂದುದನ್ನು ಕಂಡುಕೊಂಡವಳೇ, ನೀರುಗುಣ್ಣಿಕೆಯನ್ನು ತೆಗೆದುಕೊಂಡು. ಚಲುಗೆಯ ಕುತ್ತಿಗೆಗೆ ಬಿಗಿದು ಭಾವಿಗೆ ಬಿಟ್ಟಳು ಹಗ್ಗಬಿಡುತ್ತಾ ತಮ್ಮಯ್ಯಪ್ಪನ ಕಡೆಗೆ ಮತ್ತೆ ಮತ್ತೆ ಕತ್ತೆತ್ತಿ ನೋಡುತ್ತಿದ್ದಳು. ಶಿವರುದ್ರ ಮಾತ್ರ ತನ್ನ ಪಾಡಿಗೆ ತಾನು ಹ್ಯಾಗೆ ಕುಳಿತಿದ್ದನೊ ಹಾಗೆಯೇ ಕುಳಿತಿದ್ದ ತಮ್ಮಯ್ಯಪ್ಪನು ಹಂತವಿಳಿದು, ಆಕೆಯು ನೀರು ಸೇಯ್ದುಕೊಂಡು ಹೋಗುವವರೆವಿಗೂ ಮನೆ ಮುಂದೇನೆ ನಿಂತುಕೊಂಡಿದ್ದನು. ಅವಳು ಭಾವಿಕಟ್ಟೆಯ ಗೂಡಿಗೆ ಎಡಗಾಲನ್ನು ವದಯಾಗಿ (ವತ್ತೆಯಾಗಿ, ಸಹಾಯಕವಾಗಿ) ಇರಿಸಿಕೊಂಡು ಹಗ್ಗ ಸೇಯುವುದನ್ನು ಶಿವರುದ್ರನು ಬಿಟ್ಟ ಕಣ್ಣುಗಳಿಂದ ನೋಡುತ್ತಿದ್ದನು. ತಮ್ಮಯ್ಯಪ್ಪನು ಅದನ್ನು ಗಮನಿಸದೇ ಇರಲಿಲ್ಲ ತಮ್ಮಯ್ಯಪ್ಪ ಒಳ್ಳೇ ಟೈಂನಲ್ಲೇ ಬಂದುಬಿಟ್ಟನಲ್ಲ ! ಬಂದವನು ತನ್ನ ಪಾಡಿಗೆ ತಾನು ಹೊರಟು ಹೋಗಲಿಲ್ಲ ಅಲ್ಲೇ ನಿಂತುಕೊಂಡಿದ್ದಾನೆ !

ಶಿವರುದ್ರ ಅವರ ದೊಡ್ಡಪ್ಪ ಬಂದಮೇಲೆ ಎದ್ದು ಹೋಗಲಿಲ್ಲ ಹೋಗಲಿ ಸುಮ್ಮನೆ ತಲೆ ಬಗ್ಗಿಸಿಕೊಂಡೂ ಕುಳಿತುಕೂಳ್ಳುವುದಿಲ್ಲ. ಒಂದೇಸಮನೆ ಬಿಟ್ಟಕಣ್ಣುಗಳಿಂದ ನೀರು ಸೇಯುವಾಕೆಯನ್ನೇ ನೋಡದೊಡಗಿದರೆ ಆಕೆಯಗತಿ ಏನಾಗಬೇಕು. ಅವಳಿಗೆ ಭಯ ಬಂದಿತು. ಶರೀರದಲ್ಲಿ ನಡುಕ ಹುಟ್ಟಿತು. ಕಾಲು ಬಿಗಿ ತಪ್ಪಿತು ಚೆಲಿಗೆಯನ್ನು ತಾನಃ ಮೇಲಕ್ಕೆ ಎಳೆದುಕೊಳ್ಳುತ್ತಿರುವಳೋ! ಅಥವಾ ಅವಳನ್ನೇ ಚಲಿಗೆಯು ಎಳೆದುಕೊಳ್ಳುತ್ತಿರುವುದೋ ಎಂಬುವ ಅನುಮಾನ ಬಂದಿತು. ಆ ಒಂದು ಚಲಿಗೆ ಸರಿಯಾಗಿ ತುಂಬಿತ್ತೋ ಇಲ್ಲವೇ ಇಲ್ಲವೋ ಹ್ಯಾಗೊ ಸೇಯ್ದು ಆಯಿತೂ ಎನಿಸಿ, ಚೆಲಿಗೆ ಎತ್ತಿಕೊಂಡು ಸದ್ಯ ಬದುಕಿದೆ ಎಂದುಕೊಂಡು ಮನೆಕಡೆ ಹೊರಟಳು. ತಮ್ಮಯ್ಯಪ್ಪನು ಶಿವರುದ್ರನ ಕಡೆ ನೋಡಿ ಎರಡು ಮೂರುಸಲ ಮೊಚಗುಟ್ಟಿಕೊಂಡು ಅಂಗಡಿಕಡೆಗೆ ಹೊರಟ ಶಿವರುದ್ರ ಮಾತ್ರ ಕುಳಿತಲ್ಲೇ ಕುಳಿತಿದ್ದ.

೬

ಅಂದಿನ ದಿವಸವೇನೆ ಮಧ್ಯರಾತ್ರಿ ಮೀರಿಸಿದೆ ಅಮಾವಾಸ್ಯೆ ಕತ್ತಲು. ಊರೆಲ್ಲ ಸದ್ದು ಅಡಗಿದೆ. ಜುಂಜಪ್ಪನವರಮನೆ ಪಡಸಾಲೆಯಲ್ಲಿ ಒಬ್ಬನೇಮಲಗಿದ್ದವನು ಮೆತ್ತಗೆ ಮೇಲೆದ್ದ, ಪಡಸಾಲೆಯಿಂದ ಕೆಳಗಿಳಿದು ನಡುದಾರಿಗೆ ನಡೆದ ಅಲ್ಲಿ ನಿಂತುಕೊಂಡ ಅದೇನುತೋರಿತೊ ಏನೊ ಅಲ್ಲೆ ಒಂದು ನಾಲ್ಕು ಕಲ್ಲು ತೆಗೆದುಕೊಂಡವನೆ ಮಾದಪ್ಪನ ಮನೇಗೆ ತೊಯ್ದು ಬಿಟ್ಟ. ಮನೆ ಒಳಗಿರುವ ಹೆಂಗಸರು ಹೆದರಿ, ಅಪ್ಪಳಿಸಿ ಹೋದರು. ಕಿಟ್ಟನೆ ಕಿರುಚಿಕೊಂಡರು ಇವನು ಓಡಿಹೋಗಿ ಬಾಗಿಲು ತಟ್ಟಿದ. ಅಕ್ಕಾ, ಅಕ್ಕೋ ಬಾಗಿಲುತಗಿಯಕ್ಕಾ ಅಂದ ಧ್ವನಿಯೇನೋ ಅವರಿಗೂ ಪರಿಚಿತವಾದುದೇ ಆಗಿತ್ತು. ಆದರೂ ಬಾಗಿಲು ತೆರೆದಾರೆ ಬಾಗಿಲು ತೆಗೆಯಲಿಲ್ಲ. ಆದರೆ ಸ್ವಲ್ಪ ಹೊತ್ತು ಬಿಟ್ಟುಕೊಂಡು, ಒಳಭಾಗದಲ್ಲಿ ಬಾಗಿಲ ಒತ್ತಿನಲ್ಲಿ ನಿಂತುಕೊಂಡು ಯಾರು? ಅಂದರು. ನಾನುಕಣಕ್ಕ ಕಿಟ್ ಅಂತ ಕೂಗ್ ಕೊಂಡ್ರಲ್ಲ ಪಡಸಾಲೆ ಮೇಲೆ ಮಲಗಿದ್ದವನು ಎದ್ದು ಬಂದೆ ಅಂದ ಒಳಗಿದ್ದವರಿಗೆ ಧೈರ್ಯವಾಯಿತು ನೀನಾ ಎಂದುಕೊಂಡು ಬಾಗಿಲು ತೆರೆದಳು. ಅದ್ಯಾಕಕ್ಕ ಹಾಗೆ ಕೂಗಿಕೊಡ್ರಲ್ಲ ?

‘ನಾವು ನೋಡಿದರೆ ಬರೀ ಹೆಂಗಸರು ಇರೋರು. ಅವೇಳೇಲಿ ಮನೇಗೆಕಲ್ಲು ಬಿದ್ದರೆ ಹಾಗೆ ಕೂಗಿಕೊಳ್ಳದೆ ಇನ್ನೇನುಮಾಡೋಣ? ಸರಿ, ನಾನು ಹಾಸಿಗೆ ಸುತ್ತಿಕೊಂಡು ಎತ್ಕೊಂಡುಬಂದು ನಿಮ್ಮ

ಪಡಸಾಲೇಲೆ ಮಲಗಿಕೊಳ್ಳುತ್ತೇನೆ ಏನು ಗಾಭರಿ ಪಡಬೇಡಿ ಹೋಗಿ ಧೈರ್ಯವಾಗಿ ಮಲಗಿಕೊಳ್ಳಿ

' ಅದ್ಯಾಕಪ್ಪ ಆಚೆ ಮಲಿಕೋತೀಯ, ನೀ ಏನು ಹೊರಗಲವನ? ಹಾಸಿಗೇನ ಎತ್ತಿಕೊಂಡು ಬಾ ಹೋಗು, ಒಳಗೇ ಮಲಗಿ ಕೊಳ್ಳುವಂತೆ' ಮಾದಪ್ಪನ ಹೆಂಡತಿ ಹಾಗೆ ಅಂದಿದ್ದೇ ತಡ, ಸರ್ರಂತ ಹೋದವನೆ ಹಾಸಿಗೆಯನ್ನು ಸುತ್ತಿ ಎತ್ತಿಕೊಂಡು ಮಾದಪ್ಪನ ಮನೆ ಹೋಗಿ ಸೇರಿದ. ಹಜಾರದಲ್ಲಿ ಒಂದು ಕಡೆ ಗಾದಂತೆ ತಾಯಿ ಮಗಳು ಹಾಸಿಕೊಂಡಿದ್ದರು. ಹುಡುಗಿಯು ಇಬ್ಬರ ನಡುವೆ ಮಲಗಿ ನಿದ್ರಿಸುತ್ತಿತ್ತು. ಒಳಗೆ ಹೋದವನು ಅವರಿಗೆ ಸ್ವಲ್ಪ ದೂರದಲ್ಲಿ ಬೀದಿಬಾಗಿಲ ಕಡೆಗಾದಂತೆ ಹಾಸಿ ಕೊಂಡು ಮಲಗಿದನು. ದೀಪ ಕೆಡಿಸಿಬಿಟ್ಟು ತಾಯಿ,ಮಗಳು ಅವರೂ ಮಲಗಿಕೊಂಡರು. ಮಲಗಿ ಬಹಳ ಹೊತ್ತಾದರೂ ಇವನಿಗೆ ಮಾತ್ರ ನಿದ್ರೆ ಬರಲಿಲ್ಲ. ತಲೆ ತುಂಬ ಬರೀ ಕೆಟ್ಟಯೋಚ ನೆಗಳನ್ನೇ ತುಂಬಿಕೊಂಡು ತಲೆಕೆಡಿಸಿಕೊಂಡು ಮಲಗಿರುವಾತನಿಗೆ ನಿದ್ರೆ ಹೇಗೆತಾನೆ ಬರುತ್ತದೆ. ಎದ್ದು ಕುಳಿತು ಜೋಬಿನಿಂದ ಬೀಡಿ ಕಡ್ಡಿಪೆಟ್ಟಿಗೆಯನ್ನು ತೆಗೆದುಕೊಂಡು ಬೀಡಿಯನ್ನು ಕಚ್ಚಿ, ಕಡ್ಡಿ ಗೀರಿ ಹಚ್ಚಿಕೊಂಡನು. ಕಡ್ಡಿ ಗೀರಿ ಬೀಡಿ ಹಚ್ಚಿಕೊಳ್ಳುವಾಗ, ಮಾದಪ್ಪನ ಹೆಂಡತಿ ಅವರೆಲ್ಲ ಮಲಗಿರುವ ಕಡೆಗೆ ನೋಡಿದನು. ಮಾದಪ್ಪನ ಹೆಂಡತಿಯು ಆಕಡೆಗೆ ಮಲಗಿದ್ದಳು ಮಗಳು ತನ್ನ ಕಡೆಗೆ ಮಲಗಿದ್ದಳು ಅದನ್ನು ಕಂಡುಕೊಂಡವನೆ ಒಂದೆರಡು ಸಲ ಸೇದಿ ಬೀಡಿಯನ್ನು ಕೆಡಿಸಿ ಬಿಸಾಡಿ ಮತ್ತೆ ಮಲಗಿವನು. ಮಲಗಿ ಸ್ವಲ್ಪ ಹೊತ್ತಾಗಲಿಲ್ಲ ಮರಳಿ ಮೇಲೆದ್ದ. ಹಾಸಿಗೆ ಬಿಟ್ಟು ನೆಲದ ಮೇಲೆ ಕುಕ್ಕರಗಾಲಿನಲ್ಲಿ ಕುಳಿತುಕೊಂಡು ನೋಡುತ್ತಾನೆ, ಎಲ್ಲಿಂದ ಎಲ್ಲೀವರೆವಿಗೆ ನೋಡಿದರೂ ಏನೊಂದೂ ಕಾಣಿಸುತ್ತಿಲ್ಲ.

ಬರೀಕತ್ತಲು ಎದ್ದುನಿಂತ ಎರಡು ಹೆಜ್ಜೆ ಪಕ್ಕಕ್ಕೆ ಹೋಗಿ ಕಂಬ ಮುಟ್ಟಿದ. ಅಲ್ಲಿ ಸುಮಾರು ಹೊತ್ತು ನಿಂತಿದ್ದು ಮುಂದಕ್ಕೆ ಸುತರಾಂ ಸದ್ದುಕೊಡದೆ ಮೆತ್ತಗೆ ಹೆಜ್ಜೆಯಮೇಲೆ ಹೆಜ್ಜೆಯಿಡುತ್ತಾ ಹೋಗಿ ಇನ್ನೊಂದು ಕಂಬವನ್ನು ಮುಟ್ಟಿದ. ಅಲ್ಲಿ ಮತ್ತೆ ನಿಂತ. ಇನ್ನೊಂದು ನಾಲ್ಕಾರು ಹೆಜ್ಜೆಮುಂದೆ ಹೋದರೆ ಅವರು ಮಲಗಿದ್ದಾರೆ. ಧೈರ್ಯಮಾಡಿ ಮತ್ತೆ ಮೆಲ್ಲನೆ ಹೊರಟ. ಹಾಗೆಯೇ ಅವರು ಮಂದಲಿಗೆ ಕಾಲಿಗೆ ಸಿಗುತ್ತದೆಯೇಎಂದು ನೋಡಿಕೊಳ್ಳುತ್ತಿದ್ದ. ಬಲಗಾಲಿಗೆ ಮಂದಲಿಗೆ ಸಿಕ್ಕಿತು. ಅಲ್ಲಿ ಕುಳಿತ. ಅಲ್ಲಿ ಮಲಗಿರುವವಳು ಮಾದಪ್ಪನ ಮಗಳೊ ಅಥವಾ ಹೆಂಡತಿಯೊ. ಒಂದುವೇಳೆ ಮಾದಪ್ಪನ ಹೆಂಡತಿಯಾಗಿದ್ದರೆ ಗತಿ! ಹೇಗೆ ಹೋದನೋ ಹಾಗೆಯೇ ವಾಪಸಾಗಿ ಹಾಸಿಗೆ ಸೇರಿ ಕುಳಿತನು. ಮಲಗಲು ಮಾತ್ರ ಮನಸ್ಸು ಆಗಲಿಲ್ಲ, ಇದೇನ್ ಕಚ್ಚೋದು ಒಂದೇ ಸಮನೆ ನಿದ್ರೇನೇ ಕೊಡೊದಿಲ್ವಲ್ಲ? ಎಂದುಕೊಂಡು ಎದ್ದು ಕುಳಿತು ಬಲಗೈನಿಂದ ಹಾಸಿಗೆಯನ್ನು ಎರಡು ಮೂರು ಬಾರಿ ಬಡಿದನು. ತಡಿಯಪ್ಪ ಇಲ್ಲಿ ಕಡ್ಡಿಯನ್ನಾದರೂ ಗೀರಿ ನೋಡುತ್ತೀನಿ? ಅಂದುಕೊಂಡು ಕಡ್ಡಿಗೀರಿ ಹಾಸಿಗೆ ನೋಡಿದವನಂತೆ ಮಾಡಿದನು ಕಡ್ಡಿ ಕೆಡುವುದರೊಗಾಗಿ ಮತ್ತೆ ಕತ್ತಲಾಯಿತು. ಕುಕ್ಕರಗಾಲಿನಲ್ಲಿ ಕುಳಿತಿದ್ದವನು ಆ ಕಡೆಗೂ ಅಂದರೆ ಮಾದಪ್ಪನ ಹೆಂಡತಿ ಮಗಳು ಅವಳ ಮಗಳು ಮಲಗಿರುವ ಕಡೆಗೂ ನೋಡಿಕೊಂಡು ಕಡ್ಡಿ ಬಿಸಾಡಿ ಹಾಗೆಯೇ ನೆಪ್ಪಿನ ಮೇಲೆ ತೆವಳಿಕೊಂಡು ಹೆಂಗಸರು ಮಲಗಿದ್ದ ಕಡೆಗೆ ಹೊರಟನು. ಸ್ವಲ್ಪ ದೂರ ಹೋಗುವಲ್ಲಿ ಕಂಬ ಹಣೆಗೆ ಹೊಡೆಯಿತು ತೀರ ಪೆಟ್ಟಾಯಿತು. ಹಣೆಗೆ ಕೈ ಕೊಟ್ಟುಕೊಂಡು ಸ್ವಲ್ಪ ಹೊತ್ತು ಕುಳಿತ. ಮತ್ತೆ ಮುಂದೆ ಹೊರಟ. ಹೊರಡಲೇ ಇಲ್ಲ ಕಂಬದ ಬುಡದಲ್ಲಿರುವ ವಾಸಕಲ್ಲು ಬಲಗಾಲು

ಹೆಬ್ಬಟ್ಟಿಗೆ ಹೊಡೆಯಿತು. ಹೊಡೆದ ತಕ್ಷಣ ಷಾಕ್ (shock) ಹೊಡೆದ ಹಾಗಾಯಿತು. ಹೆಬ್ಬೆಟ್ಟು ಹಿಡಿದುಕೊಂಡು ಸ್ವಲ್ಪ ಹೊತ್ತು ಕುಳಿತಿದ್ದು ಮತ್ತೆ ತೆವಳಿಕೊಂಡು ಮೆತ್ತಗೆ ಸದ್ದುಮಾಡದೆ ಮುಂದೆಹೊರಟ. ಬೇಕಾದಷ್ಟು ದೂರ ನಡೆದು ಹೋದರೂ ಅವರು ಮಲಗಿರುವ ಎಡೆಮಾತ್ರ ಸಿಗಲಿಲ್ಲವಲ್ಲಾ ! ಅನ್ನಿಸಿತು ಅವನಿಗೆ ಕುಳಿತಲ್ಲಿಂದಲೆ ಕೈಗಳನ್ನು ಎಡಬಲಕ್ಕೆ ಹಾಗೂ ಮುಂದಕ್ಕೆ ಚಾಚಿ, ತಪ್ಪರಿಸಾಡಿದ ಎಲ್ಲೂ ಅವರು ಮಲಗಿರುವ ಜಾಗದ ನೆಲ ಕುಲವೇ ತಿಳಿಯಲಿಲ್ಲ. ಇದೇನಿದು ಹೀಗಾಯಿತು ಅಂದುಕೊಂಡು ಮತ್ತೆ ಮುಂದಕ್ಕೆ ಕುಳಿತುಕೊಂಡೆ ಹೊರಟ. ಸ್ವಲ್ಪ ದೂರ ಹಾಗೆಯೇ ತೆವಳಿಕೊಂಡು ಹೋದಮೇಲೆ ಕೈಗಳನ್ನು ಮುಂದೆ ಆಡಿಸಲು ಗೋಡೆ ಸಿಕ್ಕಿತು ಕೈಗೆ. ಅಯ್ಯೋ ಇದೆಲ್ಲಿಗೆ ಬಂದೆನಪ್ಪಾ, ಏನಾದರೂ ತಪ್ಪುದಾರಿ ಹಿಡಿದನೊ ! ಎಂದುಕೊಂಡು ಹಿಮ್ಮುಕನಾದ. ಸ್ವಲ್ಪ ದೂರ ಬರುವಲ್ಲಿ ಕಾಲಿಗೆ ಮಂಲಿಗೆ (ಚಾಪೆ) ದಾರ ಸಿಕ್ಕಿತು. ಬಾಯಾರಿದವನಿಗೆ ತುಂಬಿದ ಕೆರೆ ಕಂಡಂತಾಯಿತು, ಕೈ ಹಾಕಿ ನೋಡಿದ ಮಂದಲಿಗೆ ಸಿಕ್ಕಿತು. ಬಲಗೈ ಬೆರಳುಗಳ ತುದಿಯನ್ನು ಚಾಪೆಯ ಮೇಲಿರಿಸಿ ಕೈ ಬೆರಳುಗಳನ್ನು ಮುಂದೆ ನಡೆಸಿದನು. ಕಂಬಳಿ ಸಿಕ್ಕಿತು ಮತ್ತೆ ಮುಂದಕ್ಕೆ ನಡೆಸಿದನು, ಜಾಡಿಯ ಮೇಲೆ ಕೈ ನಡೆದು ಆಕೆಯ ಕುಂಡಿಯ ಮೇಲೆ ಕೈ ಕೂತಿತ್ತು ಹಾಗೆಯೇ ಕೈಯಿಟ್ಟುಕೊಂಡು ಸುಮಾರು ಹೊತ್ತು ಕುಳಿತಿರುವಲ್ಲಿ ಆಕಡೆಗೆ (ಇನ್ನೊಂದುಕಡೆಗೆ) ಮುಖ ಮಾಡಿಕೊಂಡು ಎಡಮಗ್ಗುಲಾಗಿ ಮಲಗಿದ್ದವಳು ಉಸೋ ಎಂದುಕೊಂಡು ಈ ಕಡೆಗೆ ಹೊರಳಿದಳು. ಅಂದರೆ ಬಲಮಗ್ಗುಲಾದವಳು. ಹೊರಳುವಳೆಂದು ಗೊತ್ತಾದಕೂಡಲೆ ತನ್ನ ಕೈಯ್ಯನ್ನು ಎತ್ತಿಕೊಂಡನು ಆಕೆಯ ಉಸಿರುಯ್ಯುವುದು ಸೊಯ್ ಸೊಯ್

ಎಂದು ಎದ್ದು ಕೇಳಿಸುವುದು ಬಲಗೈ ಸಹಾಯದಿಂದ ಕಂಬಳಿಯನ್ನು ಎಲ್ಲಿಯವರೆಗೆ ಹೊದೆದಿರುತ್ತಾಳೆ ಎಂಬುದನ್ನು ಪತ್ತೆಹಚ್ಚಿದ ತೊಡೆವರೆವಿಗೆ ಮಾತ್ರ ಮೇಲೆಳೆದುಕೊಂಡಿದ್ದಳು ಸ್ವಲ್ಪ ಮುಂದಕ್ಕೆ ತೆವಳಿಕೊಂಡು ತುಸು ಬಗ್ಗಿನೋಡಿದ ಏನೂ ಕಾಣಲಿಲ್ಲ ಆದರೆ ಮೂಗಿಗೆ ಒಂದು ತರಹ ಹೊಸ ಮಾದರಿಯ ವಾಸನೆಯು ಅನುಭವವಾಯಿತು. ಅದು ಸುಗಂಧವೂ ಅಲ್ಲ, ದುರ್ಗಂಧವಾಗಿರಲಿಲ್ಲ ತಿರಸ್ಕಾರವೆಂದಿಗೂ ಆಗಿರಲಿಲ್ಲ ಆದರೆ ಇಂಥದೆಂದು ಹೇಳಲಿಕ್ಕೆ ಮಾತ್ರ ಬರುವಂತಿರಲಿಲ್ಲ. ಸ್ವಲ್ಪ ಆ ವಾಸನಾ ಸುಖವನ್ನು ಆಕೆಯ ಸಾಮಿಪ್ಯ ಸೌಖ್ಯವನ್ನೂ ಅನುಭವಿಸಿದ ಮೇಲೆ ಕೈಗೆ ಸೆರಗು ಸಿಕ್ಕಿತು, ತೀಕ್ಷ್ಣವಾಗಿ ನೋಡಿದರೆ! ರವಕೆ ಗುಂಡಿಯು ಮೆಲಿನ ಗುಂಡಿ ಒಂದು ಮಾತ್ರ ಹಾಕಿತ್ತು ಮೇಲಿನಿಂದ ತೆರೆಯ ಮಾದರಿ ಎರಡು ಎದೆಗಳಮೇಲೂ ಹೊಗಿದ್ದವು. ಹಳದೀವೈ ಎದೆಗೂಡು ಹೇಗೆ ಕಾಣುತ್ತಿತ್ತು ಅಂತೀರಿ! ಹುಣ್ಣಿಮೆ ರಾತ್ರಿಯಲ್ಲಿ ಎರಡು ಗುಡ್ಡಗಳ ನಡುವಣ ಹಗ್ಗ ಪ್ರದೇಶ ಕಾಣುವಂತೆ ಕಾಣೆ ಸುತ್ತಿತ್ತು ಹೊಟ್ಟೆ ಉಸಿರಾಡುವುದು ಚೆನ್ನಾಗಿ ಕಾಣುತ್ತಿತು ಬಲಗೈ ತುದಿ ಬೆರಳುಗಳಿಂದ ಹೊಟ್ಟೆಯನ್ನು ಸ್ಪರ್ಶಿಸಿದನು ಕೂಡಲೆ ಮೈಯ್ಯಲ್ಲೆಲ್ಲಾ ವಿದ್ಯುತ್ ಪ್ರವಾಹವಾದಂತಾಯಿತು. ಕೈ ತೆಗೆಯಲಿಲ್ಲ ಸ್ವಲ್ಪ ಸ್ವಲ್ಪವಾಗಿ ಕೊನೆಗೆ ಪೂರ್ಣ ಹಸ್ತವನ್ನು ಹೊಟ್ಟೆಯ ಮೇಲಿರಿಸಿದನು. ಆಕೆಯು ಉಸಿರಾಡುತ್ತಿದ್ದರೆ ಅವನ ಕೈ ಹಸ್ತವು ಮೇಲಕ್ಕೂ ಕೆಳಕ್ಕೂ ಹೋಗುತ್ತ ಬರುತ್ತಿತ್ತ ಬಾಳೇಕಾಯಿಯ ಅಡಿಯಿಂದ ಒತ್ತಿದಂತೆ ಬಿಸಿಲುಸಿರು ಬರುತ್ತಿತ್ತು ಇದ್ದಕ್ಕಿದ್ದಂತೆ ಕೈಯ್ಯನ್ನು ಒಳಗೆ ಹಾಕಿದ ಹಾಕಿದರೆ ಜೋಬಿನ ಒಳಗೆ ಕೈ ಹಾಕಿದಂತಾಯಿತು. ಆಕೆಗೂ ಎಚ್ಚರವಾಗಿ ತನ್ನ ಎಡಗೈಯ್ಯಿಂದ

ಅವನ ಮುಂಗೈ ಹಿಡಿದು ಮೆತ್ತಗೆ ಯಾರ! ಎಂದಳು ಅವನಿದ್ದವನುಬಲಗೈ ತೆಗೆಯದೆ,ತನ್ನ ಎಡಹಸ್ತವನ್ನು ಮುಖದಮೇಲಿಟ್ಟು, ನಾನೇ, ಕೂಗಬೇಡ ಎಂದು ಪಿಸುಮಾತಿನಿಂದ ಹೇಳಿದನು. ಆಕೆಯಿದ್ದವಳು ಉಸ್ಸೋ! ಎಂದು ಜಾಡಿಯನ್ನು ಮೇಲೆಳೆದುಕೊಂಡಳೇ ಹೊರತು ಅವನ ಕೈ ತೆಗೆಯಿಸಲಿಲ್ಲ. ಅವನಾದರೊ ಆಕೆಯು ಜಾಡಿಯನ್ನು ಮೇಲೆಳೆದುಕೊಂಡಾಗ ತಾನೂ ಅವಳ ಮಗ್ಗಲು ಸೇರಿಕೊಂಡನು.

೧೦

ಎರಡು ಮೂರು ತಿಂಗಳುಗಳಾದ ಮೇಲೆ ಒಂದು ದಿವಸ ಸಾಯಂಕಾಲದ ಸಮಯದಲ್ಲಿ ಬೀದಿ ಬಾವಿಯಲ್ಲಿ ಹೆಂಗಸರು ನೀರು ಸೇಯುತ್ತಿದ್ದಾರೆ. ಮಾಪಪ್ಪನ ಹೆಂಡತಿ ಭಾವಿಹತ್ತಿರವಿದ್ದಾಳೆ. ಮಗಳು ಪಡಸಾಲೆಯ ಮೇಲೆ ಕಂಬ ವರಗಿಕೊಂಡು, ಎರಡು ಕೈಗಳನ್ನೂ ಎತ್ತಿ ಹಿಂದಕ್ಕೆ ಹಾಕಿ ಕಂಬವಿಡಿದುಕೊಂಡು ನಿಂತಿದ್ದಾಳೆ ಸುಬ್ಬಣ್ಣ ಊರಕಡೆಯಿಂದ ಬಂದ. ಬಂದವನೆ ಮನೆ ಹಂತಹೆತ್ತುವಲ್ಲಿ ನಿಂತು ತುಂಬಿದ ಚೆಲುಗೆಯನ್ನು ನಡುವಿನ ಮೇಲಿರಿಸಿಕೊಂಡು ಭಾವಿಯಕಡೆಯಿಂದ ಹೆಂಡತಿಯೊಡನೆ ಮನೆ ಒಳಗಡೆ ನಡೆದ. ಹೆಂಡತಿಯನ್ನು ಕುರಿತು, ‘ ಲೇ ’ ಅಂದ.

“ ಏನು ? ”

“ ಮಾದಪ್ಪನ ಮಗಳನ್ನ ನೋಡ್ದ್ಯ ? ”

“ ಈವತ್ತೀನ್ ಹೊಸದಾಗಿ ನೋಡೀನ ನಾನು ! ನಿಮ್ಮೂರಿಗೆ ಲಗ್ನವಾಗಿ ಬಂದ ದಿವಸಕ್ಕೂ ಈವತ್ತಿಗೂ ನೋಡುತ್ತಲೇ ಇದ್ದೀನಿ ”

“ ಅದಲ್ಲಕಣೇ ಮೂಳಾದವಳೆ, ನೀ ಎತ್ತೆತ್ತಾಗ್ ಮಾತನಾಡೀಯೆ.”

“ ನೀವು ಹೇಳೋದೇನು ? ”

“ ಮಾದಪ್ಪನ ಮಗಳು ಬಸ್ರಿ ”

" ನಿಮ್ಗೆ ಇದ್ತಾನೆ ಕೆಲ್ಸ. ಅವರಿವರ ಮೇಲೆ ಉಬೆ (ಊಹೆ) ಕಟ್ಕೋದು!"

" ಬಡವೆ ಯಾಕಿದ್ದಾಳು ಕಡೇ ಕೊಟ್ಟಿಗೇಲೀಂತ, ಆ ಬಡ ಪಾಯಿಗಳು ಯಾಕಿರಬೇಕು ಹೇಳಿ ನಿಮ್ಮೆಡೇಲಿ!"

ಹೀಗೆ ಹೇಳಿ ಕೋಣೆಗೆ ನಡೆದಳು.

" ಊರಿಗೆ ಬಂದವಳು ನೀರಿಗೆ ಬರ್ಲೇಂತ............ತಾನಾಗೆ ಗೊತ್ತಾಗುತ್ತೆ ಹಾಕು."

ಒಂದಿಷ್ಟು ಮಜ್ಜಿಗೆ ನೀರಿಗೋಸ್ಕರ ಇನ್ನೊಬ್ಬರ ಮನೆಬಾಗಿಲಿನಲ್ಲಿ ಅದರಲ್ಲೂ ಸರಿ ಪೋರಗಿತ್ತಿಯರ ಮನೆ ಹೊಸಲಿನಲ್ಲಿ ನಿಲ್ಲುವುದು ಬಲು ಹೀನಾಯ. ಅದೂ ಒಂದು ದಿವಸ ಸರಿ ಎರಡು ದಿವಸ ಸರಿ, ತಿಂಗಳಾನು ಕಾಲವು ಅದೇ ರಾಮಾಯಣವಾದರೆ ಗೌರವ ಬರುತ್ತದೆಯೆ? ಗೌರವದ ಮನೆ ಹಾಳಾಗಲಿ, ಕೊಟ್ಟಾದರೂ ಕೊಡ್ತಾರ್ಯೆ? ಮೊದಲು ಒಂದೆರಡು ದಿವಸಗಳು ಹೋಗಿ ನಿಂತುಕೊಳ್ಳೋಕೇ ಇಲ್ಲ ಘಟ್ಟಿಯಾಗಿ ಬಿಟ್ಟುಕೊಡುತ್ತಾರೆ. ಆಮೇಲೆ ಒಂದು ನಾಲ್ಕು ದಿವಸ ಸುಮಾರಾಗಿ ಬಿಟ್ಟುಕೊಡುತ್ತಾರೆ ಆಮೇಲೆ ಷುರುವಾಗುತ್ತದೆ ಅವರ ಕಥೆ ಪುರಾಣವೆಲ್ಲ. " ಅದು ಕರಯೋದು ನಮುಗೇ ಸಾಲೊಲ್ಲಾಂತಾಳೆ".... ಆಗ್ಲೂ ತಿಳಿದು ಕೊಳ್ಳದೇ ಹೋದಲೂ ಅನ್ನಿ, ತಿಳಿದುಕೊಳ್ಳದೇ ಏನು ತಿಳಿದು ಕೊಳ್ಳುತ್ತಾಳೆ .... ತಿಳಿದು ತಿಳಿದು ಹೋಗುತ್ತಾಳೆ. ಆವಾಗ ಮಜ್ಜಿಗ್ಗೆ ನೀರು ಬಿಟ್ಟುಕೊಡೋಳು ಹೇಳುತ್ತಾಳೆ " ಈವತ್ತು ಕರುವನ್ನೇ ಸೇರಿಸಿಕೊಡಲಿಲ್ಲಾಂತಲೋ" "ಕೆಚ್ಚಲಿಗೆ ಕೈಯನ್ನೆ ಹಾಕಿಸಗೊಡಲಿಲ್ಲಾಂತಲೊ," " ಕಾಲೆತ್ತಿಬಿಡ್ತು" ಅಂತಲೊ, ಕೊನೆಗೆ " ಈವತ್ತು ಹತ್ತಿರಕ್ಕೇ ಸೇರಿಸಲಿಲ್ಲ ಯಾರನ್ನು" ಅಂತ ಹೇಳಬಿಡುತ್ತಾಳೆ. ಈ ಬಂಡ ಹೆಂಗಸು ಇರುತ್ತಾಳಲ್ಲ ಹೊಸಲಿ

ನಲ್ಲಿ ನಿಂತಿರುತ್ತಾಳೆ ಜಗ್ಗೋದೇ ಇಲ್ಲ. ಅವಳು ಹಾಗೆ ಹೇಳಿ ಬಿಟ್ಟು ಹೊರಟುಹೋಗುತ್ತಾಳೆ. ಸ್ವಲ್ಪ ಹೊತ್ತು ಈಚೆಗೇ ಬರೋದಿಲ್ಲ. ಇವಳು ನಿಂತು ನಿಂತು ಸಾಕಾಗಿ ಕೊನೆಗೆ ನಾನ್ಹೋಗ್ಲೆ ಅಂದರೆ ಅವಳು "ತಡೀರಿ ಈವತ್ತು ಬಂದಿದ್ದಕ್ಕೆ ಸ್ವಲ್ಪ ಹಾಕಿಸಿ ಕೊಂಡ್ಹೋಗಿ" ಎಂದು ದೊಡ್ಡ ಪಾತ್ರೆಯಲ್ಲಿ ನಿಪ್ಪಟ್ಟೆ ನೀರು ಮಜ್ಜಿಗೆಯನ್ನು ತೆಗೆದುಕೊಂಡು ಬಂದು, ಕೊಡೋಕ್ಮುನ್ನ ಅದನ್ನ ತೋರಿಸಿ, "ನೋಡಿದ್ರಾ! ಇಟ್ಕೊಂಡು ಕೊಡಲ್ಲಾಂತೀರ........ ಅಲ್ಲಿ ಕರ್ಯೋದು ನಮುಗೇ ಸಾಲೋಲ್ಲ" ಎಂದು ಹೇಳಿ ಅದರಲ್ಲಿ ಸ್ವಲ್ಪ ಹಾಕಿ ಕಳುಹಿಸಿಕೊಟ್ಟರೂ ಆಯಿತು ಅಥವಾ ಇವಳು "ನಾನ್ಹೋಗ್ಲೆ" ಅಂದಾಗ ಒಳಗಿನಿಂದಲೇ ಮುಖ ತಿರುವಿಕೊಂಡು "ಹೂ, ಹೋಗಿದ್ಬನ್ನಿ" ಅಂದರೂ ಆಯಿತು.

ದೊಡ್ಡವೀರಶೆಟ್ಟಿಯು ಮನೆಯಲ್ಲಿ ಕರಾವು ನಿಂತು ಹೋಗಿ ತಿಂಗಳ ಮೇಲಾಯಿತು. ತಮ್ಮಯ್ಯ, ನಾಗಣ್ಣ ಎರಡು ಮನೆಯವರೂ ಈ ಮನೆಯವರ ಕೂಡ ಮಾತನಾಡುವುದೇ ಇಲ್ಲ. ಆದ್ದರಿಂದ ಇವೆರಡು ಮನೇಲು ಕೇಳುವ ಹಾಗೇ ಇಲ್ಲ. ಸುಬ್ಬಣ್ಣನ ಮನೆಯಲ್ಲಿ ಕರಾವೇ ಇಲ್ಲ. ಮೊದಲನೆ ಹೆಂಡತಿ ತೀರಿ ಕೊಂಡಾಗಿನಿಂದಲೂ ಅವನ ಮನೇಲಿ ಕೊಂಡ ಮಜ್ಜಿಗೆಯನ್ನೇ ಉಪಯೋಗ ಮಾಡೋದು. ಈಚೀಚೆಗೆ ಗಂಗಾದರಪ್ಪನೂ ದೊಡ್ಡವೀರಶೆಟ್ಟಿಯೂ ಮಾತನಾಡಿಸಿಕೊಂಡಿದ್ದಾರೆ. ಅವರ ಮನೆಯಲ್ಲಿ ಕರಾವು ಆಗುತ್ತಾ ಇದೆ. ಕೇಳಿದರೆ ಇಲ್ಲಾ ಅನ್ನುವುದಿಲ್ಲ ಕೊಡುತ್ತಾರೆ. ಆದರೆ ಯಾರೂ ಯಾವತ್ತಿಗೂ ಏನನ್ನೂ ಕೇಳುವುದಿಲ್ಲ. ಯಾಕೆ ಗೊತ್ತೆ! ಗುಳಗಟ್ಟದ ಅಮ್ಮ ಮದ್ದು ಹಾಕುತ್ತಾಳೆ. ಸೊಸೆ ತುಂಬಿದ ಕೆರೆಗೆ ಮರವೆ ಬಿಡುತ್ತಾಳೆ.

ಗೋಸುಂಬೆ ಹೊಡೆದು ಸಾಯಿಸಿ ತೆಗೆದುಕೊಂಡು ಬರೋದು ನೆಲದಮೇಲೆ ಅಡಿಯಲ್ಲಿ ರಾಗಿ ಹಸಿ ಹಿಟ್ಟನ್ನು ಹರಡಿ ಮೇಲೆ ಇದನ್ನು ತಲೆಕೆಳಗುಮಾಡಿ ನೇತಾಕಿಬಿಡೋದು. ಆ ರಕ್ತ ತೊಟ್ಟಿಕ್ಕುತ್ತದಲ್ಲ, ಅದು ಹಸಿಹಿಟ್ಟಿನ ಮೇಲೆ ಬಿದ್ದಾಗ ಸಣ್ಣ ಸಣ್ಣದಾಗಿ ಗೆಡ್ಡೆ ಕಟ್ಟಿಕೊಳ್ಳುತ್ತದೆ. ಅದನ್ನೆಲ್ಲ ಗುಳಿಗೆ ರೂಪದಲ್ಲಿ ಮಾಡಿಕೊಳ್ಳುವುದು. ಮಾಡಿಕೊಂಡು ಯಾವುದಾದರೂ ತಿಂಡಿ ತೀರ್ಥದಲ್ಲಿ ಸೇರಿಸಿ ಆಗದವರಿಗೆ ಬಡಿಸಿ ಉಣಿಸುವುದು. ಇದಕ್ಕೆ "ಮದ್ದು ಹಾಕುವುದು" ಅನ್ನುತ್ತಾರೆ. ಮದ್ದನ್ನು ಯಾರಿಗೆ ಹಾಕಿರುತ್ತಾರೊ ಆ ಮನುಷ್ಯನಿಗೆ ಊಟ ಸೇರೋಲ್ಲ ....ಏನು ಊಟ ಮಾಡಿದರೂ ಜೀರ್ಣವೇ ಆಗೋಲ್ಲ ಹುಳೀತೇಗು ಕಣ್ಣುಗುಡ್ಡೆಗಳು ಪಾತಾಳ ಸೇರಿಹೋಗುತ್ತವೆ. ಕೈಕಾಲುಗಳು ತುಂಬ ಸೋಲುತ್ತವೆ. ಒಂದು ನಾಲ್ಕು ಹೆಜ್ಜೆ ಹೋಗಿದ್ದು ಬರುವುದಕ್ಕೆ ಆಗೋದಿಲ್ಲ. ದಿನೇ ದಿನೇ ಸಂಕಟ, ಸುಸ್ತು ಜಾಸ್ತಿಯಾಗುತ್ತಿರುತ್ತದೆ. ಇದು ಮದ್ದೇ ಹಾಕಿರೋದು ಮತ್ತೇನು ಅಲ್ಲ ಅಂತ ನಿರ್ಧರಿಸಿಕೊಳ್ಳುವುದಕ್ಕೆ ಕೆಲವು ಸಾಧನಗಳಿವೆ. ಹುರುಳಿಕಾಳು ಅಥವಾ ಅಗಸೇ ಬೀಜ ಒಂದುನಾಲ್ಕನ್ನು ದವಡೇಗೆ ಒತ್ತರಿಸಿಕೊಂಡು ರಾತ್ರಿ ಮಲಗಿಕೊಳ್ಳೋದು. ಬೆಳಿಗ್ಗೆ ಎದ್ದಾಗ ಅವು ಮೆತ್ತಗಾಗಿದ್ದರೆ ಮದ್ದನ್ನು ಹಾಕಿಲ್ಲವೆಂತಲೂ, ಹಾಗಲ್ಲದೆ ಹ್ಯಾಗೆ ಹಾಕಿಕೊಂಡರೋ ಹಾಗೇನೆ ಇದ್ದರೆ ಮದ್ದನ್ನು ಹಾಕೇ ಇದ್ದಾರೆ ಎಂದು ನಿರ್ಧರವಾಗಿ ಹೇಳಬಹುದು. ಮದ್ದು ಹಾಕಿರುವುದು ನಿರ್ಧರವಾದಮೇಲೆ ಅದನ್ನು ತೆಗೆಯಿಸಬೇಕಾದರೆ ವರ್ಷದೊಳಗಾಗಿ ತೆಗೆಯಿಸಬೇಕು. ವರ್ಷ ತುಂಬಿದ ಮೇಲೆ ಅವರಮೇಲೆ ರೋಮ ಹುಟ್ಟುತ್ತದಂತೆ ಆಮೇಲೆ ತೆಗೆಯಲಾಗುವುದೇ ಇಲ್ಲವೆನ್ನುತ್ತಾರೆ. ವರ್ಷ ತುಂಬುವುದರೊಳಗಾಗಿ ತೆಗೆಯಿಸ ಬೇಕಾ

ದರೂ ಬಹಳ ಗುಟ್ಟಿರಬೇಕು. ಯಾರಿಗೂ ಗೊತ್ತಾಗಬಾರದು. ಏಕೆಂದರೆ ಒಬ್ಬರಿಂದ ಒಬ್ಬರಿಗೆ ಹೋಗಿ ಕೊನೆಗೆ ಮದ್ದು ಹಾಕಿರುತ್ತಾರಲ್ಲ ಅವರಿಗೆ ವಿಷಯ ತಿಳಿದರೆ, ಅವರೇನಾದರು ಉಟ್ಟ ಸೀರೆಯನ್ನು ಅಳಿದು (ಬಿಚ್ಚಿ) ಮತ್ತೆ ಅದನ್ನೆ ಮೇಲು ಕೆಳಗೆ ಮಾಡಿ ಉಟ್ಟುಕೊಂಡರೂ ಅಂದರೆ, ಮುಗೀತು ಇವನ ಕೆಲಸ ಇಲ್ಲಿ. ಈ ಭೂಲೋಕವನ್ನೆಲ್ಲ ತಿರುಗಿ ಬಂದರೂ ಅದನ್ನು ಬೇರೆ ತೆಗೆಯಿಸುವುದಕ್ಕಾಗುವುದಿಲ್ಲ. ಅದಕ್ಕೆ ಗುಟ್ಟಿನಿಂದ ಕೆಲಸಮಾಡಬೇಕು ಎನ್ನುವುದು ಇವಕ್ಕೆ ಔಷಧಿ ಮಾಡುತ್ತೇವೆ ಅಂದುಕೊಂಡು ನ್ಯೈಲುತುತ್ತ ಕೊಟ್ಟುಬಿಡುತ್ತಾರೆ. ಇದರಿಂದಲೆ ಮೊದಲೇ ನಿರ್ಬಲರಾಗಿರುತ್ತಾರೆ ಶಾಂತಿ ಮಾಡಲಾರದೆ ಪ್ರಾಣವನ್ನೇ ಬಿಟ್ಟುಬಿಡುತ್ತಾರೆ ಕೆಲವರು.

ಇದು ನಿಜವೇ, ಇದು ನಿಜವಾದರೆ ಇಂಥ ಹೇಯವಾದ ಕೆಲಸವನ್ನು ಮಾಡಬಹುದೆ?..........ಇದಕ್ಕೇನಾದರೂ ಮದ್ದು ಉಂಟೆ? ಅಂದರೆ.

ಸುಳ್ಳು ಅನ್ನುತ್ತಾರೆ ಕೆಲವರು, ನಿಜ ಅನ್ನುತ್ತಾರೆ ಹಲವರು. ಜನ ಈ ಹೆಸರಿನಿಂದ ನರಳುವವರನ್ನು ನೋಡುತ್ತೇವೆ. ಅಂಥಾದ್ದರಲ್ಲಿ ಇದು ಸುಳ್ಳು ಮೂಢನಂಬಿಕೆ ಎನ್ನುವುದಕ್ಕೆ ಬರುವುದಿಲ್ಲ. ಅನೂಚೂನವಾಗಿ ಈ ಪ್ರಪಂಚದಲ್ಲಿ ನಡೆದು ಬಂದಿರುವ ಪಾಪದ ಕೆಲಸಗಳಲ್ಲಿ ಇದೂ ಒಂದು ಅನ್ನಬೇಕು ಅಷ್ಟೆ. ಆಡು ಎಲ್ಲಾ ತರಹದ ಜಾತಿ ಸೊಪ್ಪನ್ನೂ ತಿನ್ನುತ್ತದೆ. ಆದರೆ ಆಡೂ ಕೂಡ ಒಂದು ಬಗೆಯ ಸೊಪ್ಪನ್ನು ತಿನ್ನುವುದಿಲ್ಲ ಅದರ ಹೆಸರು "ಆಡು ಮುಟ್ಟದ ಸೊಪ್ಪು" ಎಂದು. ಆಡುಮುಟ್ಟದಸೊಪ್ಪಿನ ಗಿಡದ ಬೇರನ್ನು ತೆಗೆದುಕೊಂಡು ಬರುವುದು.. ಕಲ್ಲಮೇಲೆ ಇರಿಸಿಕೊಂಡು ಸ್ವಲ್ಪ ನೀರನ್ನು ಚುಮುಕಿಸಿಕೊಂಡು ಚೆನ್ನಾಗಿ ಕುಟ್ಟಬೇಕು. ಆಮೇಲೆ ಅದನ್ನು ಆಡಿನ ಹಾಲು ಅಥವಾ ಹಸುವಿನ

ಹಾಲಿನಲ್ಲಿ ಹಾಕಿ ಸೋಸಬೇಕು ಸೋಸುವಾಗ ಎಷ್ಟು ಬಾರಿ ಸೋಸಿದರೆ ಅಷ್ಟು ಭಾರಿ ವಾಂತಿಯಾಗುತ್ತದೆ. ಕೊನೆಯ ಸಲ ವಾಂತಿ ಮಾಡಿದ್ದರಲ್ಲಿ ಮದ್ದು ಬೀಳುತ್ತದೆ. ಹಾಕಿ ಎಷ್ಟು ದಿವಸ ವಾಗಿರಲಿ ಯಾವ ತಿಂಡಿಯಲ್ಲಿ ಹಾಕಿರುತ್ತಾರೆ, ಉಪ್ಪಿನಕಾಯಲ್ಲಿ ಹಾಕಿದ್ದರೆ ಉಪ್ಪಿನಕಾಯಿಹಾಗೇನೆ, ಇಡ್ಲಿಯಲ್ಲಿ ಹಾಕಿದ್ದರೆ ಇಡ್ಲಿ ಚೂರು ಹಾಗ್ಹಾಗೇನೆ ಬಿದ್ದುಬಿಡುತ್ತದಂತೆ. ಅದೇನು ಬೀಳು ತ್ತದೊ, ಅದ್ಹೇಗೆ ಬೀಳುತ್ತದೋ ಏನೋ ಆ ಪರಮಾತ್ಮನಿಗೇ ಗೊತ್ತು. ಮದ್ದು ಹಾಕುವವರು ಯಾರಿಗಾದರೂ ಹಾಕುತ್ತಲೇ ಇರಬೇಕಂತೆ ಕೊನೆಗೆ ಯಾರೂ ಸಿಗಲಿಲ್ಲ ಅಂದರೆ ಕೈಹಿಡಿದ ಗಂಡ ನಿಗೇನೆ, ಹೊಟ್ಟೆಯಲ್ಲಿ ಹುಟ್ಟಿದ ಮಕ್ಕಳಿಗೇನೆ ಮದ್ದು ಹಾಕುತ್ತಾ ರಂತೆ. ಹಾಗೇನಾದರೂ ಒಂದು ವೇಳೆ ಯಾರಿಗೂ ಹಾಕದೇ ಹೋದರೆ ಹೊಟ್ಟೆಶೂಲೆ ಬಂದು ಹೋಯಿತ್ಬಂತು ಅನ್ನಿಸಿಬಿಡುತ್ತ ದಂತೆ. ಗುಳಗಟ್ಟ ಅಮ್ಮನು ತನ್ನ ಗಂಡನಿಗೇ ಅದೆಷ್ಟೋ ಸಲ ಹಾಕಿದ್ದಾಳಂತೆ ಮತ್ತೆ ಅವಳೇ ತೆಗೆಯುತ್ತಿದ್ದಳಂತೆ. ಮಗನಾದ ಗಂಗಾದರಪ್ಪನಿಗೂ ಕೂಡ ಆಗಾಗ್ಗೆ ಹಾಕುತ್ತಿರುತ್ತಾಳೆ ತೆಗೆಯು ತ್ತಿರುತ್ತಾಳೆ, ಹೀಗಾಗಿ ಅವನು "ಊರಿಗೆ ಒಕ್ಕಲಲ್ಲ ಸ್ಮಶಾನಕ್ಕೆ ಹೆಣವಲ್ಲ" ಹಾಗಿದ್ದಾನೆ.

ಅತ್ತೆಯನ್ನು ನೋಡಿದರೆ ಹೀಗಿದ್ದಾಳೆ, ಅವಳ ಸೊಸೆ ಅಂದರೆ ಗಂಗಾದರಪ್ಪನ ಹೆಂಡತಿ ಕೆರೆಗೆ 'ಮರವೆ' ಬಿಡುತ್ತಾಳೆ. ಕೆರೆಗೆ ಮರವೆ ಬಿಡುವುದು ಮಹಾ ಪಾಪದ ಕೆಲಸ. ಊರಿನಲ್ಲಿ ದೊಡ್ಡದೊ, ಚಿಕ್ಕದೊ ಕೆರೆ ಇರುತ್ತದೆ. ಆ ನೀರನ್ನು ಊರಿನವರು ಸ್ನಾನಮಾಡುವುದಕ್ಕೆ, ಕುಡಿಯುವುದಕ್ಕೆ ಇತ್ಯಾದಿಯಾಗಿ ಉಪ ಯೋಗಿಸುತ್ತಿರುತ್ತಾರಲ್ಲ, ಅಂಥ ಕೆರೆಗಳಿಗೆ ಪಾಪಿಷ್ಟ ರಂಡೇರು ಮರವೆ ಕರೆಯುತ್ತಾರೆ. ಬೆಳಿಗ್ಗೆ ಅಷ್ಟುಹೊತ್ತಿಗೇನೆ ಎದ್ದು,

ಯಾರನ್ನೂ ನೋಡದೆ ಮಾಡದೆ ಸೀದ ಕೆರೆಗೆ ಹೋಗಿ ಎರಡು ತೊಟ್ಟು ಎದೆ ಹಾಲು ಕರೆದು ಬರುತ್ತಾರೆ. ಸರಿ ಹಿಂದೇನೆ ಕೆರೆ ನೀರೆಲ್ಲ ಹಸರು ಪಾಚಿ ಯಾಗುತ್ತದೆ. ಯಾವುದಕ್ಕೂ ಉಪಯೋಗವಿಲ್ಲದಂತಾಗುತ್ತದೆ. ಊರಿನವರ ತೊಂದರೆಯನ್ನು ಅರಿತುಕೊಂಡು ಯಾವಳಾದರೂ ಪುಣ್ಯಾತ್ಮಳು ಮೊದಲಿನವಳಂತೆಯೇ ಅಪ್ಪೊತ್ತಿಗೇನೆ ಎದ್ದು ಯಾರನ್ನೂ ನೋಡದೆ ಮಾಡದೆ ಸೀದ ಆ ಮರವೆಬಿಟ್ಟಿರುವ ಕೆರೆಗೆ ನಡೆದು ಎರಡು ತೊಟ್ಟು ಎದೆಹಾಲು ಕರೆದು ಬರುತ್ತಾಳೆ, ಮರವೆ ಮರೆಯಾಗಿ ನೀರು ಪನ್ನೀರಿನಂತಾಗುತ್ತದೆ. ಮದ್ದು ಹಾಕುವವರು ಅದನ್ನು ಯಾರಿಗಾದರೂ ಹಾಕದೇ ಹೋದರೆ ಅವರಿಗೆ ಹೇಗೆ ಹೊಟ್ಟೆಶೂಲೆ ಬಂದು ವಿಪರೀತವಾಗಿ ತೊಂದರೆ ಕೊಡುತ್ತದೆಯೋ ಆದೇ ರೀತಿಯಲ್ಲಿ ಮರವೆ ಹಾಕುವವರೂ ಅದನ್ನು ಮಾಡದೆ ಹೋದರೆ ತೀರತೊಂದರೆ ಪಡಬೇಕಾಗುತ್ತದಂತೆ.

ಒಂದೇ ಮನೆಯಲ್ಲಿ ಅತ್ತೆ ಸೊಸೆಯರು ಇಬ್ಬರೂ ಹೀಗಿರಬೇಕಾದರೆ ಅವರ ಮನೆಯಲ್ಲಿ ಯಾವ ಬದುಕನ್ನೇ ಆಗಲಿ ಯಾರು ತಾನೆ ಧೈರ್ಯವಾಗಿ ಕೇಳಿ ತೆಗೆದುಕೊಳ್ಳುತ್ತಾರೆ? ಒಂದು ವೇಳೆ ಅವರೇ ಕರೆದುಕೊಟ್ಟರೆ ತಾನೆ ಯಾರು ಮುಟ್ಟುತ್ತಾರೆ?

ದೊಡ್ಡವೀರಶೆಟ್ಟಿ ಮನೆಯಲ್ಲಿ ಕರಾವಿಲ್ಲದೆ, ಹಾಲು ಮೊಸರಿಗೆ ತುಂಬಾ ತೊಂದರೆಯನ್ನು ಪಡುತ್ತಿದ್ದರು. ಅವನೂ ಎಲ್ಲೆಲ್ಲೋ ನೋಡಿದ ಸರಿಬೀಳಲಿಲ್ಲ. ಕೊನೆಗೆ ಸುಬ್ಬಣ್ಣನನ್ನೂ ಜೊತೆಗೆ ಕರೆದುಕೊಂಡು ಇಬ್ಬರೂ ಸೈಕಲ್‌ಮೇಲೆ ಮೇಗಳಪುರಕ್ಕೆ ಹೋದರು. ಅಲ್ಲೂ ವ್ಯಾಪಾರ ಕುದರಲಿಲ್ಲ. ಬಂದ ದಾರಿಗೆ ಸುಂಕವಿಲ್ಲ ಅಂದುಕೊಂಡು ವಾಪಸು ಊರಿಗೆ ಹೊರಟರು ಹಾಗೆ ಹೊರಟು ಬರುವಾಗ ಹುಲ್ಲೇಕಟ್ಟೆಯ ಬೋರೆಯಲ್ಲಿ ಈರ್ವರೂ ಸೈಕಲ್ಲಿನಿಂದ ಕೆಳಗಿಳಿದರು. ಕೆಳಗಿಳಿದ ಮೇಲೆ ಏನು

ನಡೆಯಿತೆಂಬುದನ್ನು ಮೊದಲೇ ತಿಳಿದಿರುತ್ತೇವೆ.

ಊರಿನಲ್ಲಿ ಡಿಸ್ಟ್ರಿಕ್ಟ್‌ಬೋರ್ಡ್ ಆಸ್ಪತ್ರೆ ಇದೆ. ಆಸ್ಪತ್ರೆ ಬಂದು ಮೂರು ವರುಷವಾಯಿತು. ಈ ಮೂರು ವರುಷಕ್ಕೆ ಈಗಿರುವವರಲ್ಲದೆ ನಾಲ್ಕು ಜನ ಡಾಕ್ಟರುಗಳಾದರು. ಯಾರೇ ಬರಲಿ ಆರು ತಿಂಗಳು, ಎಂಟು ತಿಂಗಳು ಹೀಗಿದ್ದು ಹೊರಟು ಹೋದವರು. ಇದಕ್ಕೆ ಕಾರಣ ಊರಿನಲ್ಲಿ ಕಿತಾಪತಿ ಜಾಸ್ತಿ. ಮೂಗು ಅರ್ಜಿಗಳನ್ನು (Ananymous letters) ಬರಿಯುವುದು ಬಹಳ. ಅದೇ ಅಲ್ಲದೆ ಇತರರೇ ಅನೇಕ ವಿಧವಾಗಿಯೂ ಅವರಿಗೆ ಕಿರುಕುಳವನ್ನು ಕೊಡುವುದೂ ಉಂಟು. ಹೀಗಾಗಿ ಅವರೇನೆ, ಎಷ್ಟು ಹೊತ್ತಿಗೆ ಆ ಊರಿನಿಂದ ಹೊರಟು ಹೋಗುತ್ತೇವಪ್ಪಾ! ಅಂದುಕೊಂಡಿರುತ್ತಾರೆ. ಊರಿನ ಕಿತಾಪತಿ ಜನಗಳು ಅಂದರೆ ಪ್ರೂಟ್‌ಲಾಯರುಗಳು ಇರುತ್ತಾರಲ್ಲ ಅವರುಗಳು ಮೇಲೆ ಸಿದ್ಧೇಶ್ವರ ಸಹಾಯ ಅಂತಲೋ, ಬೀರೇಶ್ವರ ಪ್ರಸನ್ನ ಅಂತಲೊ, ಶ್ರೀ ವೇಂಕಟೇಶ್ವರಕೃಪಾ ಪ್ರಸನ್ನ ಅಂತಲೋ ಹೀಗೆ ಏನೋ ಬರೆದು, ಅದರ ಕೆಳಗೆ ಆ ಡಾಕ್ಟರ್ ಮೇಲೂ, ಮೇಷ್ಟರ ಮೇಲೂ ಏನೇನೋ ಇಲ್ಲದಾದ, ಉಂಟಾದ ಅಪವಾದಗಳನ್ನೆಲ್ಲ ಹೊರಿಸಿ ಹೆಸರಿಲ್ಲದ ಅರ್ಜಿ ಕೊಟ್ಟಿರುತ್ತಾರೆ ಸರಿ, ವರ್ಗ ಸಿಕ್ಕಿತೂ ಅಂದರೆ ಸಾಕು, "ಬದುಕಿದೆಯಾ ಬಡ ಜೀವವೇ" ಎಂದುಕೊಂಡು ಅಲ್ಲಿಂದ ಮೊದಲು ಹೊರಟು ಹೋಗುತ್ತಾರೆ. ಪುನಃ ಅವರ ಜನ್ಮದಲ್ಲಿ ಇನ್ನೊಂದು ಸಲ ಆ ಊರಿಗೆ ಬರಬೇಕು ಅನ್ನುವ ಮನಸ್ಸು ಅವರಿಗಿರುವುದೇ ಇಲ್ಲ. ಹ್ಯಾಗೆ ತಾನೆ ಇರುತ್ತದೆ ಅಂಥ ಊರಿನಲ್ಲಿ ನರಸಿಂಗರಾಯರು ಮೇಲೆ ಹೇಳಿದ ಡಿಸ್ಟ್ರಿಕ್ಟ್‌ಬೋರ್ಡ್ ಆಸ್ಪತ್ರೆಗೆ ಡಾಕ್ಟರ್ ಆಗಿ ಬಂದು ಹೆಚ್ಚುಕಮ್ಮಿ ವರುಷವಾಯಿತು. ಇಷ್ಟು ದಿವಸ ಆ ಊರಿನಲ್ಲಿ ಕೆಲಸಮಾಡಿದವರೂ ಅಂದರೆ ಅವರೊಬ್ಬರೆ.

ಇದಕ್ಕೆ ಕಾರಣವಾದರೂ ಇಷ್ಟೇನೆ, ನರಸಿಂಗರಾಯರು ಸುಮಾರು ನಲ್ವತ್ತು, ನಲ್ವತ್ತೈದು ವರುಷದವರು. ಚೆನ್ನಾಗಿ ದೇಶನೋಡಿದ ಮನುಷ್ಯ ಮಾತುಗಾರ. ಕೈನಲ್ಲಿ ಕೆಲಸ ಸುಮಾರಾಗಿದ್ದರೂ ಅವ ನನ್ನು ಬಿಟ್ಟರೆ ಇನ್ನಿಲ್ಲ ಅನ್ನುವಂತೆ ಡಬ್ಬು ತೋರಿಸುತ್ತಾನೆ. ಮಹಾವಾಚಾಳಿ ಎಂಥವರನ್ನಾದರು ಮಾತಿನಲ್ಲಿ ಮರಳು ಮಾಡಿ ಬಿಡುತ್ತಾನೆ ಆ ಊರಿಗೆ ಬಂದಮೇಲೆ ಇಲ್ಲಿಲ್ಲಾ ಅಂದರೂ ಐದಾರುಸಾವಿರ ರೂಪಾಯಿ ಸಂಪಾದನೆ ಮಾಡಿದ್ದರು. ಸುತ್ತ ಹತ್ತು ಹಳ್ಳಿಗಳಲ್ಲಿ ಹೆಸರಾದವರಾಗಿ ಹೋದರು. ಇನ್ನು ಸಂಪಾ ದನೆ ಕೇಳಬೇಕೆ? ನರಸಿಂಗರಾಯರು ಊರಿಗೆ ಬರಲೇ ಇಲ್ಲ ಊರಿಗೆ ಮುಂದಾದವರು, ಈ ತುಂಟರು ಪಂಟರುಗಳನ್ನೆಲ್ಲ ಅನು ಸರಿಸಿಕೊಂಡರು. ಅದು ಏನಾಯಿತೂ ಅಂದರೆ ಅವರು ಅಷ್ಟರ ಮಟ್ಟಿಗೆ ಹೆಸರುವಾಸಿಗೆ ಬರುವುದಕ್ಕೆ ಕಾರಣವಾಯಿತು. ಕಾಸು ಸಂಪಾದನೆ ಮಾಡುವುದಕ್ಕೆ ಸಹಾಯಕವಾಯಿತು. ಡಾಕ್ಟರ್ ನರಸಿಂಗರಾಯರು ಯಾರ ಸಂಗಡವಾದರೂ ತನಗೆ ವರ್ಗವಾಗಿದೆ ಆದ್ದರಿಂದ ಇನ್ನೊಂದು ಸ್ವಲ್ಪ ದಿವಸಗಳಲ್ಲಿ ಹೊರಟುಹೋಗು ತ್ತೇನೆ. ಅಂದರೆ ಸಾಕು, ಆಗಲೇನೆ ಅದ್ಯಾವನ ಸ್ವಾಮಿ! ನಿಮ್ಮ ವರ್ಗಮಾಡೋ ಗಂಡು!" ಎನ್ನುತ್ತಾರೆ. ಅಂದರೆ ಊರಿನ ವರನ್ನು, ಸುತ್ತ ಹತ್ತು ಊರಿನವರನ್ನು ಅಷ್ಟರಮಟ್ಟಿಗೆ ಜೋಬಿಗೆ ಹಾಕಿಕೊಂಡು ಕೆಲಸಮಾಡುತ್ತಿದ್ದಾರೆ ನರಸಿಂಗರಾಯರು ಎಂಬು ದನ್ನು ಗೊತ್ತಾಗುತ್ತದೆ. ಇವರು ಊರುಬಿಟ್ಟು ಬೇರೆ ಕಡೆಗೆ ವರ್ಗವಾಗಿ ಹೋಗುವುದು ಯಾರಿಗೂ ಇಷ್ಟವಿಲ್ಲ. ಮೇಗಳ ಪುರದಿಂದ ಊರಿಗೆ ಬಂದ ಕೂಡಲೆ, ದೊಡ್ಡವೀರಶೆಟ್ಟಿ ಮಾತ್ರ ಮನೆಗೆ ಹೋದ. ಸುಬ್ಬಣ್ಣ ಹಾಗಿಂದಹಾಗೆ ಡಾಕ್ಟರ್ ಮನೆಗೆ ಹೋದ. ಡಾಕ್ಟರ್‌ರವರಿಗೂ ಸುಬ್ಬಣ್ಣನಿಗೂ ತೀರ ವಿಶ್ವಾಸ,

ಮನೆಯಲ್ಲಿ ಡಾಕ್ಟರ್ ಇದ್ದರು. "ಏನ್ ಸುಬ್ಬಣ್ಣ, ಏನ್ ಬಂದೆ ಅಂದರು."

"ಹೀಗೆ ನಿಮ್ಮ ಹತ್ತಿರ ಔಷಧಿ ಇದಿಯೆ ಸ್ವಾಮಿ ? ಅಂದ ಸುಬ್ಬಣ್ಣ."

"ಅಲ್ಲ ಸುಬ್ಬಣ್ಣ, ಡಾಕ್ಟರ್ ಅಂದಮೇಲೆ, ಅವರ ಹತ್ತಿರ ಔಷಧಿ ಇಲ್ಲವೆ?....ಯಾರಿಗೆ ಯಾವ ಖಾಯಿಲೆಗ...ಹೇಳು ನೋಡೋಣ ? "

"ನಾಕೇಳೊ ಖಾಯಿಲೆಗೆ....ಸ್ವಾಮಿ."

"ಹೇಳಯ್ಯ.......ಅದನ್ನೆ ನಾನು ಕೇಳೋದು........ಯಾವ ಖಾಯಿಲೇಗೇಂತ."

"ಅದು ಇಲ್ಲಿ ಮನೇಲಿ ಹೇಳೊ ಮಾತಲ್ಲ ಸ್ವಾಮಿ. ಹೊರಗಡೆ ಬನ್ನಿ....ಹೇಳ್ತೀನಿ"

ಡಾಕ್ಟರ್ ಮತ್ತು ಸುಬ್ಬಣ್ಣ ಇಬ್ಬರೂ ಪಡಸಾಲೆಗೆ ಬಂದರು. ಮುಂಬಾಗಿಲನ್ನು ಮುಂದಕ್ಕೆಳೆದುಕೊಂಡರು. ಡಾಕ್ಟರ್ ಕೇಳಿದರು; ' ಯಾವ ಖಾಯಿಲೇನಯ್ಯ? ಯಾರಿಗಯ್ಯ?

"ಖಾಯಿಲೇನು ಇಲ್ಲ ಕಸಾಲೇನೂ ಇಲ್ಲ ಸ್ವಾಮಿ....'

"ಇನ್ನೇನಯ್ಯ ಮತ್ತೆ? "

"ಬೆಂಗಳೂರು ಮಾದಪ್ಪನ ಮಗಳು ಬಸರಿ "

"ಯಾರಿಗೆ ? "

"ನಮ್ಮ ಅಣ್ಣನ ಮಗನಿಗೆ ಅದಲ್ಲದೆ''

"ಅದಲ್ಲದೆ ?"

"ಅದು ಜನ ಅನ್ನೋ ಮಾತು ಅಷ್ಟೇ ಹೊರತು ಕಣ್ಣಾರ ಕಂಡೋರ್‍ಯಾರೂ ಇಲ್ಲ."

"ಏನದು ಆ ಜನ ಅನ್ನೋಮಾತು ?"

" ಅಪ್ಪ ಮಗ ಇಬ್ಬರೂನು ಉಂಟೂಂತ."

" ಆ ಗಂಡಸತ್ತ ಮುಂಡೆ, ಮಾದಪ್ಪನ ಮಗಳ ಜೊತೇಲಿ"

" ಅದೆಲ್ಲ ಇರಲಿ ಸ್ವಾಮಿ, ಈವಾಗ ನಿಮ್ಮ ಹತ್ತಿರ ಆದಕ್ಕೆ ಔಷಧಿ ಇದೆಯೇ ಸ್ವಾಮಿ? ....ನೀವು ಕೊಡುತ್ತೀರ ಅಷ್ಟುಹೇಳಿ ಮಿಕ್ಕ ಮಾತಿದ್ದರೆ ಆಮೇಲಿಂದ ಮಾತನಾಡೋಣ."

" ಎಷ್ಟು ತಿಂಗಳು ಅವಳಿಗೆ ಈವಾಗ?"

" ಗೊತ್ತಿಲ್ಲ"

" ಅದನ್ನು ತಿಳಿದುಕೊಳ್ಳದೆ ಅದ್ಹೇಗೆ ಬಂದೆಯಪ್ಪಾ ನೀನು? ಹೋಗು ತಿಳಿದುಕೊಂಡುಬಾ."

ತಿಳಿದುಕೊಂಡು ಬರಲು ಸುಬ್ಬಣ್ಣ ಡಾಕ್ಟರ ಮನೆಯಿಂದ ಹೊರಟು ಮನೆಗೆ ಬಂದ. ದೊಡ್ಡವೀರಶೆಟ್ಟಿ ಬಾಗಿಲಿನಲ್ಲೆ ಕಾಯ್ದುಕೊಂಡು ಕೂತಿದ್ದ. ಬಂದ ತಕ್ಷಣವೇ ಸುಬ್ಬಣ್ಣನನ್ನು ಕೇಳಿದ: 'ಏನಾಯಿತಪ್ಪ ಹೋದ ಕೆಲಸ, ... ಡಾಕ್ಟರ್ ಇದ್ರ? ಆಗಲಿ ಅಂದ್ರ?'

" ಮಾದಪ್ಪನ ಮಗಳಿಗೆ ಎಷ್ಟು ತಿಂಗಳಣ್ಣ ಈವಾಗ?"

" ಗೊತ್ತಿಲ್ಲಾಪ್ಪ."

" ನಡಿ ಹಾಗಾದರೆ, ಹೋಗಿ ತಿಳಿದುಕೊಂಡುಬಾ ಹೋಗು ಬೇಗನೆ."

" ಅದ್ಹೇಗಯ್ಯ ಹೋಗಿ ಕೇಳೋದು?"

" ಅದು ಹೇಗಯ್ಯ ಅಂದರೆ, ನನಗೇನು ಗೊತ್ತು .... ಹೋಗಿ ಕೇಳಬೇಕಪ್ಪ"

" ಅದು ಗೊತ್ತಾಗದೆ ಔಷಧಿ ಕೊಡೋಕಾಗೋದಿಲ್ಲವಂತೆ?"

" ತಿಳ್ಕೊಂಡು ಬಾ ಹೋಗೂ ಅಂದರು, ನೀ ತಿಳಿದು ಹೇಳು ಇಲ್ಲದೇ ಇದ್ದರೆ ಬಿಡು."

ದೊಡ್ಡವೀರಶೆಟ್ಟಿಗೆ ಸುಬ್ಬಣ್ಣನ ಮಾತು ಭೇದಿಗೆ ಕೊಟ್ಟ ಹಾಗಾಯಿತು. ಹೋಗಿ ಕೇಳುವುದು ಹೇಗೆ? .... ಕೇಳದೇ ಇದ್ದರೂ ಸಾಧ್ಯವಿಲ್ಲ. ಸುಬ್ಬಣ್ಣನನ್ನೂ ಸಂಗಡ ಬಾರೆಂದು ಕರೆದುಕೊಂಡು ಮಾದಪ್ಪನ ಮನೆಗೆ ಹೋದ. ಅನು ಹೇಗೆ ಅವಳನ್ನ 'ನಿನಗೆ ಎಷ್ಟು ತಿಂಗಳು' ಅಂತ ಹೇಗೆ ಕೇಳುವುದು! ಇದು ಅವನಿಗೆ ಬಗೆ ಹರಿಯದ ಸಮಸ್ಯೆ ಆಯಿತು. ಕೊನೆಗೆ ಸುಬ್ಬಣ್ಣನನ್ನು ಕರೆದುಕೊಂಡು ಮಾದಪ್ಪನ ಮನೆ ಪಡಸಾಲೆಗೆ ಬಂದ. ಸುಮ್ಮನೆ ಎರಡು ಕೈಗಳನ್ನೂ ಹಿಡಿದುಕೊಂಡು 'ನಿನ್ನ ದಮ್ಮಯ್ಯ ಅಂತೀನಿ .... ನೀನೆ ಎಷ್ಟು ತಿಂಗಳೂ ಅಂತ ಅವಳನ್ನ ಕೇಳಿ ತಿಳಿದುಕೊಂಡು .... ನನ್ನನ್ನು ಹ್ಯಾಗಾದರೂ ಬಚಾವ್ ಮಾಡಿಬಿಡಪ್ಪ ನಿನ್ನ ದಮ್ಮಯ್ಯಾ ಅನ್ನುತ್ತೀನಿ ನಿನ್ನ ಕಾಲ್ಕಟ್ಟೋ ತೀನಿ.' ಹೀಗೆ ಏನೇನೋ ಹೇಳಿಕೊಂಡದ್ದರಮೇಲೆ ಸುಬ್ಬಣ್ಣ ಮನೆ ಒಳಗಡೆಗೆ ಹೋದ. ದೊಡ್ಡವೀರಶೆಟ್ಟಿಯು ಪಡಸಾಲೆಯ ಲ್ಲಿಯೇ ಗೋಡೆ ಒತ್ತಿಗೆ ತಲೆಗೆ ಕೈ ಕೊಟ್ಟುಕೊಂಡು ಕುಳಿತ.

ಒಳಗೆ ಬಂದ ಸುಬ್ಬಣ್ಣನು ಮಾದಪ್ಪನ ಮಗಳನ್ನು ಅವಳ ತಾಯಿ ಎಲ್ಲಿ ಎಂದು ಮೆತ್ತಗೆ ಕೇಳಿದನು. ಆಕೆಯು ತನ್ನ ತಾಯಿ ಒಳಗೆ ಕೋಣೆ (ಅಡಿಗೆಮನೆ) ಯಲ್ಲಿರುವುದಾಗಿ ಹೇಳಿ ದಳು. ಸುಬ್ಬಣ್ಣನು ಮುಂಬಾಗಿಲಿಗೆ ಅವಳನ್ನು ಕರೆಯಲು ಅವಳು ಬಂದಳು. ಬಂದವಳಿಗೆ ಮೆತ್ತಗೆ ಹೇಳಿದನು. ನೀನು ಅರಿತೇ ಮಾಡಿದ್ದರೂ ಅರಿಯದೆಯೇ ಮಾಡಿದ್ದರೂ ಅದು ನಿನಗೆ ಸೇರಿದ್ದು 'ನಿನ್ನ ಪಾಪ ನಿನ್ನ ಮಡಲಲ್ಲೇ ಕಟ್ಟಿಕೊಂಡ ಹಾಗೆ' ಇರುತ್ತೆ ಹೊರತು ಬೇರೆಯವರಿಗೇನೂ ಅದರಿಂದ ಎಳ್ಳಿನಷ್ಟೂ ಏನೂ ಆಗೋಲ್ಲ .... ಅದೆಲ್ಲ ಇರಲಿ ಈವಾಗ ನಾನು ಕೇಳುವ ಪ್ರಶ್ನೆಗೆ ಸಲೀಸಾಗಿ ನೀನು ಉತ್ತರ ಕೊಟ್ಟರೆ .... ನಿನ್ನ ಕೆಲಸ ಕೂಡ

ಹಾಗೆ ಸಲೀಸಾಗಿ ಆಗುತ್ತೆ .... ಏನು ಹೇಳು, ಸಲೀಸಾಗಿ ಉತ್ತರ ಹೇಳ್ತೀಯ ?

" ಅದೇನು ಕೇಳು ಸುಬ್ಬಣ್ಣ."

" ಏನೂ ಇಲ್ಲ ನಿನಗೆಷ್ಟು ತಿಂಗಳು ಈವಾಗಾಂತ .... ಅಷ್ಟೆ '

ಉತ್ತರ ಕೊಡದೆ ಹ್ಯಾಪ್ ನಗೆ ನಗುತ್ತ ತಲೆ ಬಗ್ಗಿಸಿಕೊಂಡು ಕಾಲು ಉಂಗುಷ್ಠದಿಂದ ನೆಲವನ್ನು ಬೆಂಟುತ್ತ ನಿಂತಳು. ಸುಬ್ಬಣ್ಣ ಸುಮ್ಮನಾಗಲಿಲ್ಲ, ನಿನಗೆ ಒಳ್ಳೆಯದು ಮಾಡಬೇಕೆಂದು ನಾನು ಬಂದಿರೋದು. ನೀನು ನನ್ನ ಸಂಗಡ ಹೀಗೆ ' ಹ್ಯಾ ಹೇ ' ಅಂತ ಹ್ಯಾಪ್ ಹ್ಯಾಪರಹಾಗೆ ಆಡುತ್ತಾ ಮಾಡುತ್ತಾ ನಿಂತು ಕೊಂಡರೆ .... ನನ್ನಿಂದ ಏನೂ ತಪ್ಪಿಲ್ಲ ನಾನು ಹೊರಟುಹೋಗು ತ್ತೀನೆ ಅಂದ. ತಕ್ಷಣವೇ ' ದಿನ ಆಗಿದೇ ಕಣ್ ಸುಬ್ಬಣ್ಣ ' ಎಂದು ಉತ್ತರ ಕೊಟ್ಟಳು.

ಇವರಿಬ್ಬರೂ ಮುಂಬಾಗಿಲಿನ ಬಳಿ ನಿಂತು ಮಾತನಾಡುವಾಗ ಕೋಣೆಯಲ್ಲಿದ್ದ ಮಾದಪ್ಪನ ಹೆಂಡತಿಯು ಕೋಣೆ ಬಾಗಿಲಿಗೆ ಬಂದು ನಿಂತುಕೊಂಡು ಇವರ ಮಾತುಗಳನ್ನೆಲ್ಲ ಕೇಳಿಸಿಕೊಂಡಳು ಮಗಳು ' ದಿನ ಆಗಿದೆ ಕಣ್ ಸುಬ್ಬಣ್ಣ ' ಎಂದು ಹೇಳಿದ ಮಾತು ಅವಳಿಗೆ ಕರ್ಣಕಠೋರವಾಯಿತು, ಹೊಟ್ಟೆಗೆ ಕಿಚ್ಚು ಹಾಕಿದಂತಾಯಿತು, ಕಣ್ಣೀರು ಕರೆದಳು. ಇನ್ನು ಬದುಕುವು ದಕ್ಕಿಂತಲೂ ಪ್ರಾಣ ಕಳೆದುಕೊಳ್ಳುವುದೇ ಲೇಸೆನಿಸಿತು. ಮಾದ ಪ್ಪನ ಹೆಂಡತಿಯು ಸರಸರ ಎಂದು ಬೀದಿಕಡೆಗೆ ಹೊರಟಳು. ಬಾಗಿಲಿನಲ್ಲೆ ನಿಂತಿದ್ದ ಸುಬ್ಬಣ್ಣನು ' ಇದ್ಯಾಕಕ್ಕ ಇಷ್ಟು ಹೊತ್ತಿ ನಲ್ಲಿ ಎಲ್ಲಿಗೆ ಹೋದಯಕ್ಕಾ ? ' ಎಂದು ಕೇಳಿದ. ಅದಕ್ಕೆ ಅವಳು ಕಣ್ಣೀರು ಹಾಕುತ್ತಾ, ಕಿಚ್ಚಿನಿಂದ ಈ ಜಾತಿಕೆಟ್ಟವಳು ಮಾಡಿರೊ ಕೆಲಸದಲ್ಲಿ, ನಾನು ಇನ್ನು ಜೀವ ಮಡಿಕೊಂಡು

ಇರಬೇಕ ಭೂಮಿಮೇಲೆ? ಹೋಗ್ತೀನಿ .... ನೀರ್ಪಾಲಾಗೋಕೆ! ಎಂದು ಹೇಳಿದಳು. ಸುಬ್ಬಣ್ಣ ತಕ್ಷಣ ಅವಳ ಕಾಲುಗಳ ಮೇಲೆ ಬಿದ್ದ, ಕಾಲು ಕಟ್ಟಿಕೊಂಡ. ಮುಗ್ಧೆಯು ಬೆಚ್ಚಿದಳು. ಹಿಂದಕ್ಕೆ ಸರಿದು ನಿಂತು 'ಇದೇನು ಸುಬ್ಬಣ್ಣ, ನೀ ಮಾಡೋಕೆಲಸ?' ಎಂದಳು. ಸುಬ್ಬಣ್ಣ ಮಲಗಿದ್ದ ಹಾಗೆಯೇ ತಲೆ ಎತ್ತಿಕೊಂಡು 'ಅಲ್ಲ ಕಣಕ್ಕಾ, ನಿನ್ನ ಮಗಳು ಮಾಡಿದ ತಪ್ಪಿಗೆ ನೀ ಏತಕ್ಕೆ ಪ್ರಾಣ ಕಳೆದುಕೊಳ್ಳಬೇಕು. ಅವಳ ಪಾಪಕ್ಕೆ ಅವಳು ಹೋಗು ತ್ತಾಳೆ ನಿನಗೇನು? ನಾನು ಉಪ್ಪು ತಿಂದರೆ ನೀನು ನೀರು ಕುಡೀ ತೀಯ? ಎಂದಿಗೂ ಇಲ್ಲ ನಾನೇ ನೀರು ಕುಡಿಯುವವನು. ನನ್ನನ್ನ ಮಹಾ ಪೋಲಿ ಅಂತ ಎಲ್ಲರೂ ಕೂಗಾಡುತ್ತಾರೆ. ಆದರೆ ನಾನು ಇಂತ 'ಗೋತ್ರ ಚೋದಿ' ಕೆಲಸಾನ ಎಲ್ಲೂ ಮಾಡಲಿಲ್ಲ. ಈವಾಗ ನೀನು ಪ್ರಾಣ ಕಳೆದುಕೊಂಡೆ ಅನ್ನು .... ಈವಾಗ ಆಗಿರೋದು ತಪ್ಪಿ ಹೋಗುತ್ತ? .... ಆಯಸ್ಸು ತುಂಬಿ ಸಾಯು ಬೇಕು .... ಈವಾಗ ನೀರಿಗೆ ಬಿದ್ದು ಪ್ರಾಣ ಕಳೆದುಕೊಂಡರೆ ಭೂತವಾಗಿ ಪಿಶಾಚಿಯಾಗಿ ನಿನ್ನ ಆಯಸ್ಸು ತುಂಬಿಬರುವವರೆಗೂ ಕಾಲ ಕಳೆಯಬೇಕು. ಜಲಭಾದಿಗೆ ಹೋದಾಗ ಸಿಡಿಯುತ್ತದಲ್ಲ ಅದನ್ನ ಸೇವನೆ ಮಾಡಿಕೊಂಡು ಉಳಿಯಬೇಕು. ಯ್ಯಾರ್‍ಯ್ಯಾರ ಕೈಯಲ್ಲಿ ಏನೇನು ಕೇಳಬೇಕಾಗುತ್ತೊ! .... ನೀನು ನೀರಿಗೆ ಬಿದ್ದುಕೊಂಡೆ ಅನ್ನು, ನಿನ್ನ ಮಗಳು ಬಸುರಾಗಿರೋದು ಟಾಂ ಟಾಂ ಆಗ್ಹೋಗುತ್ತೆ. ಸುತ್ತ ಹತ್ತೂರು ಕೂಗಿಬಿಡುತ್ತೆ. ಆದ್ದ ರಿಂದ ಇದರಿಂದೆಲ್ಲ ಏನಾಗುತ್ತಕ್ಕ.... ನಮ್ಮದನ್ನ ನಾವ್ರನೋಡಿ ಕೊಂಡು ಹೊರಟು ಹೋಗಬೇಕೆ ಹೊರತು 'ಹಸು ಸಾಯೋವಾಗ ಕರೂಗೆ ಹುಲ್ಲು ನೋಡುತ್ಯ?.... ಹಾಗೆ ಅವರವರು ಮಾಡಿದ್ದಕ್ಕೆ ಅವರವರು ಅನುಭವಿಸುತ್ತಾರೆ, ನೀನು ಕಂಡರೂ ಕಾಣದವಳಾಗೆ

ಇದ್ದು ಬಿಡು ಅಷ್ಟೇ, ನಿನ್ನ ಕಾಲ ದಿನ ತುಂಬಿಸಿಕೊಂಡು ಶಿವನ ಪಾದ ಸೇರಿಕೊ ಅಷ್ಟೆ.... ಹೀಗೆ ಇನ್ನೂ ಅನೇಕಾನೇಕ ವಿಧವಾಗಿ ಹೇಳಿ ನೀರುಪಾಲಾಗಲು ಹೊರಟಿದ್ದ ಆಕೆಯನ್ನು ಮತ್ತೆ ಒಳಕ್ಕೆ ಕಳುಹಿಸಿಕೊಟ್ಟು ಮಾದಪ್ಪನ ಮಗಳಿಗೆ, ಆಕೆಯ ತಾಯಿಯನ್ನು ಹುಷಾರಾಗಿ ನೋಡಿಕೊಳ್ಳಲು ತಿಳಿಸಿ ಡಾಕ್ಟರ್ ಮನೆಗೆ ಹೊರಟು ಹೋದನು.

ಡಾಕ್ಟರ್ ಅವಳಿಗೆ 'ದಿನ ಆಗಿದೆಯಂತೆ' ಎಂದು ತಿಳಿಸಲು, ಅವರಿದ್ದವರು 'ಹಾಗಿದ್ದಮೇಲೆ ಅದಕ್ಕೆ ಡಿಲಿವರೀನೇ Delivery ಔಷಧಿ ಎಂದು ಉತ್ತರಕೊಟ್ಟರು. ದೊಡ್ಡವೀರಶೆಟ್ಟಿಗೆ ಈ ಸುದ್ದಿ ತಂದು ಕೊಡಲು 'ನಾನು ಏನುಮಾಡಲಯ್ಯ ಹಾಗಾದರೆ, ನಾಲ್ಕು ಕಾಸು ಖರ್ಚಾದರೂ ಆಗಲಿ ಕಣಪ್ಪ. ನನ್ನನ್ನ ಹ್ಯಾಗಾದರೂಮಾಡಿ ಬಚಾವ್ ಮಾಡಿಬಿಡಪ್ಪ.... ನಿನ್ನ ಮಗನಾಗ್ತಿನಿ, ಎಂದ. ಸರಿ ಹಾಗಾದರೆ, ಈವಾಗ ಒಂದು ಇನ್ನೂರು ರೂಪಾಯಿ ಕೊಟ್ಟಿರಣ್ಣ ನಾನು ಕೋಡಿಹಳ್ಳಿಗೆ ಹೋಗಿ ಔಷಧಿ ಮಾಡುವವರನ್ನ ಜೊತೆಯಲ್ಲಿಯೇ ಕರೆದುಕೊಂಡು ಬರುತ್ತೀನೆ, ಅಂದ ಸುಬ್ಬಣ್ಣ

ಈವಾಗಲೇ ಆಗಬೇಕ ದುಡ್ಡು?.... ಬಂದಮೇಲೆ ಕೊಟ್ಟರೆ ಆಗೋದಿಲ್ವ? ಹಾಗೂ ಉಂಟೇನಣ್ಣ, ಈಗ ದರದು ಇರೋದು ನಮಗೋ ಅವರಿಗೋ, ಇಷ್ಟು ಅಂತ ಮಾತನ್ನಾಡಿ ಅಡ್ವಾನ್ಸ್ (Advance) ಅಂತ ಅವರ ಕೈಗೆ ಒಂದು, ಸ್ವಲ್ಪ ಕೊಟ್ಟು ಕರೆದುಕೊಂಡು ಬರಬೇಕು.

ಇನ್ನೂರು ರೂಪಾಯಿ ಬೇಕ ಈವಾಗ!

ಬೇಕಾ ಅಂದರೆ, ಏನ್ ನನಗೇನಾದರೂ ಕೊಡುತ್ತಿದ್ದೇನಣ್ಣ ನಿನ್ನ ದರದಿಗೆ ನೀನು ಕೊಡುತ್ತೀಯ, ನಾನು ತೆಗೆದುಕೊಂಡು ಹೋಗಿ ಅವರಿಗೆ ಕೊಡುತ್ತೇನೆ—ನಿನಗೆ ಇಷ್ಟ ಇದ್ದರೆ ಕೊಡು,

ಇಲ್ಲದೆ ಹೋದರೆ ಬಿಡು — ನನಗೇನು.

ಸುಬ್ಬಣ್ಣನಮಾತಿಗೆ ದೊಡ್ಡವೀರಶೆಟ್ಟಿಯು ತಡಬಡಾಯಿಸಿ ಹೋದ, ತಡಿಯಪ್ಪಾ ತಂದುಕೊಡ್ತೀನಿ, ಎಂದು ಒಳಕ್ಕೆ ಎದ್ದು ಹೋದ. ದೊಡ್ಡವೀರಶೆಟ್ಟಿಯು ಪೇಟಾರಿ ಬಾಗಿಲು ತೆರೆದನಂತರ ನೋಟು ಎಣಿಕೆ ಮಾಡುತ್ತಿರಬೇಕಾದರೆ, ಅವನ ಹೆಂಡತಿಯು — ನೋಡಿದಿರಾ, ಮಗಮಗಾ ಅನ್ನುತ್ತಿದ್ದರಲ್ಲ — ಮಗ ಮಾಡಿದುದನ್ನ ನೋಡಿದರೇನು ಈವಾಗ? ಎನಲು. 'ಹೋಗಲಿ ಸುಮ್ಮನಿರು ನೀನು — ಇಲ್ಲಿ ಟಾಂ ಟಾಂ ಮಾಡಬೇಡ, ಎಂದು ದೊಡ್ಡವೀರಶೆಟ್ಟಿಯು ಹೇಳಿ ಪೇಟಾರಿ ಬಾಗಿಲು ಹಾಕಿಕೊಂಡು ಪಡಸಾಲೆಗೆ ಬಂದ. ಇವನು ಹಾಗೆ ಬರುತ್ತಿರಬೇಕಾದರೆ ಹೆಂಡತಿಯು 'ಟಾಂ ಟಾಂ ನಾನೇಕೆ ಮಾಡಲಿ — ಅದೇ ಟಾಂ ಟಾಂ ಆಗಿರೋವಾಗ, ಎಂದುಕೊಂಡಳು.

ದೊಡ್ಡವೀರಶೆಟ್ಟಿಯು ಹೊರಗಡೆ ಬಂದು ನೋಡುತ್ತಾನೆ-ಪಡಶಾಲೆಯಲ್ಲಿ ಸುಬ್ಬಣ್ಣ ಇರಲಿಲ್ಲ. ಎಲ್ಲೋ ಹೋಗಿದ್ದಾನೆ, ಬರುತ್ತಾನೆ ಎಂದುಕೊಂಡು ಕುಳಿತುಕೊಂಡ. ಹಾಗೆಯೆ ಕುಳಿತುಕೊಂಡು ಸ್ವಲ್ಪ ಹೊತ್ತಿನಮೇಲೆ ಸುಬ್ಬಣ್ಣನು ಮಾದಪ್ಪನ ಮನೆ ಕಡೆಯಿಂದ ಬಂದ. ಬಂದವನನ್ನು ಕುರಿತು ದೊಡ್ಡವೀರಶೆಟ್ಟಿಯು 'ಎಲ್ಲಿಗೆ ಹೋಗಿದ್ದೆ? ಎಂದು ಕೇಳಿದನು. ಅದಕ್ಕೆ ಅವನು 'ಛ್, ಇಲ್ಗೆ ಹೋಗಿದ್ದೆ' ಎಂದು ಉತ್ತರಕೊಟ್ಟ.

ದೊಡ್ಡವೀರಶೆಟ್ಟಿಯು ಆಗ ದುಡ್ಡನ್ನು ತರುವುದಕ್ಕಾಗಿಯೇ ಮನೆಯ ಒಳಕ್ಕೆಹೊರಟು ಹೋದಾಗಲೆ, ಆಗ ಸುಬ್ಬಣ್ಣನೂ ಸಹ ಮಾದಪ್ಪನ ಮನೆಯ ಕಡೆಗೆ ಹೊರಟಿದುದು, ಅಲ್ಲಿಗೆ ಹೋಗಿ ಮಾದಪ್ಪನ ಮಗಳು ಕೈಗಳಿಂದ ಚಿನ್ನದ ಗೊಲಸುಗಳನ್ನು ಕಳೆದು ಸುಬ್ಬಣ್ಣನಿಗೆ ಕೊಟ್ಟು, "ನನ್ನಷ್ಟ ನಿನ್ನ ಹೊಂದಿಗುಟ್ಟಿದ ತಂಗಿ

ಎಂದು ತಿಳಿದುಕೊ ಸುಬ್ಬಣ್ಣಾ, ಹೀಗೆ ತಿಳಿದುಕೊಂಡು ನನ್ನ ಮಾನ ಕಾಪಾಡು ಕಂಡ್ಯಾ" ಎಂದು ಗೋಗರೆದುಕೊಂಡಳು. ಸುಬ್ಬಣ್ಣ, ಗೊಲಸುಗಳನ್ನು ತೆಗೆದುಕೊಂಡು, "ಅಲ್ಲಮ್ಮ ನಿನ್ನ ಅದೃಷ್ಟ ಚೆನ್ನಾಗಿದ್ದಿದ್ರೆ ನೀನು ನಿನ್ನ ಗಂಡನನ್ನೇ ಉಳಿಸಿಕೊಳ್ಳು ತ್ತಿದ್ದೆ...ಗಂಡಸತ್ತಮೇಲೆ ಹ್ಯಾಗೆ ಮಾನವಾಸೆ ಇವ್ದು ಕಾಲ ಹಾಕಬೇಕೋ ಹಾಗೆ ಹಾಕದೆ, ಹೀಗು ಮಾಡುತ್ತ್ಯಾರ್ಯ?" ಅಂದ "ಏನೊ ಆಗ್ಹೋಯಿತು. ನನ್ನ ಬುದ್ಧಿ ಹೀಗಾಗಿಬಿಟ್ಟಿತು. ಇನ್ನೆಷ್ಟು ಹೇಳಿದರೆ ತಾನೆ ಏನು ಪ್ರಯೋಜನ" ಅದೆಲ್ಲ ಇರ್ಲಿ, ನಮ್ಮ ಅಣ್ಣನೊಂದಿಗೊ ಅಥವಾ ಮಗನೊಂದಿಗೊ ಸಂಬಂಧ ಇಟ್ಟು ಕೊಂಡಿದ್ದುದು ನೀನು ನಿಜಹೇಳು? .ನೋಡು ನಾಚಿಕೊಂಡು ನಿಂತ್ಕೋಬೇಡ....ನನ್ನೊಂದಿಗೆ ಎಂಥ ನಾಚಿಕೆನಮ್ಮ .ನಿನಗೇ— ಹೇಳು ಯಾವ್ರದಿದ್ದರೂನು—"ಆಕೆಯು ಹೇಳಲಾರದೆ ಹೇಳ ಲಾರದೆ ಕೊನೆಗೆ ಹೇಳಿಯೇಬಿಟ್ಟಳು. "ಇಬ್ಬರೊಂದಿಗೂನು"

"ಅಪ್ಪ, ಮಗ ಇಬ್ಬರ ಕೂಡಾನು —ಅಯ್ಯೋ ಪ್ರಪಂಚಾನೆ! ನಿನ್ನನ್ನ ನೋಡಿದರೆ ಗಂಡಸತ್ತ ಮುಂಡೆ. ಒಂದು ಹೆಣ್ಣು ಮಗುವಿನ ತಾಯಿ, ಮನೇಲಿ ನೋಡಿದರೆ ಏನೂ ಕಾಣದ ನಿನ್ನ ತಾಯಿ— ಬೇರ್‍ಯಾರೂ ಇಲ್ಲ— ನಮ್ಮಣ್ಣ ಚಂಡಾಳ ಹೆಂಡತಿ ತಿಂದುಕೊಂಡ ಮೇಲೆ ಪ್ರಾಯಸಮರ್ಥನಾದ ಮಗಇದ್ದೂ ಅವನಿಗೆ ಲಗ್ನ ಮಾಡದೆ ತಾನೇ ಮಾಡಿಕೊಂಡ....ಮಗ ನಿಸ್ಥತ್ರ ಬಂದ ಅಪ್ಪನೂ ನಿನ್ನ ತ್ರಾನೆ ಬಂದ ಅಂದರೆ! ಈ ಪ್ರಪಂಚದಲ್ಲಿ ಇನ್ನೇನು ತಾನೆ ಉಳಿ ದಿದೆ?—ಆಗದೇ ಇದ್ದುದೆಲ್ಲ ಆಗಿಹೋಯಿತು—ಆಗಲಿ ಕಣಮ್ಮ ಕರೆದುಕೊಂಡು ಬರುತ್ತೇನೆ ಔಷಧಿ ಕೊಡುವವಳನ್ನ ನೀಮಾತ್ರ ನಿಮ್ಮ ತಾಯಿ ವಿಷಯದಲ್ಲಿ ಕಣ್ಣಿನಲ್ಲಿ ಕಣ್ಣಿಟ್ಟುಕೊಂಡು ಕಾಯ ಬೇಕು—ಎಚ್ಚರವಿರಲಿ!—"

ಇಷ್ಟು ಹೇಳಿ ಸುಬ್ಬಣ್ಣನು ಮನೆಗೆ ಹೋಗಿ ಅಣ್ಣನ ಕೈಯಿಂದ ದುಡ್ಡನ್ನು ತೆಗೆದುಕೊಂಡು ಮಾದಪ್ಪನ ಮಗಳ ಕೈಗೊಲಸು ಮತ್ತು ಕೊಟ್ಟ ಹಣ ಎರಡನ್ನು ತನ್ನ ಹೆಂಡತಿಯ ಕೈಗೆ ಕೊಟ್ಟು ಅದರಲ್ಲಿ ಇಪ್ಪತ್ತೈದು ರೂಪಾಯಿಗಳನ್ನು ಮಾತ್ರ ತೆಗೆದು ಜೋಬಿಗೆ ಹಾಕಿಕೊಂಡು ಸೈಕಲ್ ಕೈಗೆ ತೆಗೆದುಕೊಂಡು ಅಣ್ಣನ ಸಂಗಡ ಕೋಡಿಹಳ್ಳಿಗೆ ಹೋಗಿಬರುವುದಾಗಿ ಹೇಳಿದ. ಆಗ್ಲಿ ಹೋಗಿದ್ದು ಬಾರಪ್ಪ, ಒಂದು ಕಾಸು ಹೆಚ್ಚುಕಮ್ಮಿಯಾಗಿ ಮಾತನಾಡಿಕೊಂಡು ನಿನ್ನ ಜೊತೇಲೆ ಕರೆದುಕೊಂಡು ಬಂದುಬಿಡು ಸುಬ್ಬಣ್ಣ, ದಿನ ಬೇರೆ ಆಗ್ಹೋಗದೇ ಅಂತ ಈವಾಗ ಹೇಳ್ತಾಳೆ—ಚೆ, ಹೋಗಪ್ಪಾ ಎಂದು ಹೇಳಿ ದೊಡ್ಡವೀರಶೆಟ್ಟಿಯು ಸುಬ್ಬಣ್ಣನನ್ನು ಕಳುಹಿಸಿಕೊಟ್ಟನು.

ಕೋಡಹಳ್ಳಿಯ ಪರಿವಾರದ ಜಾತಿಯ ಬೂಪಳ್ಳಿ ಸಿದ್ಧಿ ಅಂದರೆ ಆ ಪ್ರಾಂತ್ಯಕ್ಕೆಲ್ಲ ಹೆಸರುವಾಸಿಯಾದವಳು, ಹಾದರದಲ್ಲೆ ಮುಪ್ಪಾದವಳು. ಒಬ್ಬ ಸಿದ್ಧಮಾದ ಅಂತ ಇದ್ದ. ಒಕ್ಕಲಿಗರ ಜಾತಿಯವನು. ಸಾದನೆಮಾಡಿಕೊಂಡಿದ್ದ ಅವನು, ಅತಿಸೊಗಸಾದ ಮೈ ಅವನಿಗೆ. ಕತಪುಂಡನಾಗಿದ್ದ, ಅವನ ಪುಂಡಾಟವ ಎಲ್ಲಿಯವರೆವಿಗೂ ಹೋಗಿತ್ತು ಅಂದರೆ ಆ ಊರು ಊರಿನಿಂದ ಕೋಡಹಳ್ಳಿಗೆ ಹೆಂಗಸರು — ಮಕ್ಕಳು — ಯಾರೆ ಗಂಡಸರೇ ಆಗಲಿ ಒಬ್ಬೊಬ್ಬರೇ ಬರುವುದಕ್ಕಾಗಲೀ, ಹೋಗುವುದಕ್ಕಾಗಲೀ ಬಹಳವಾಗಿ ಭಯಪಡುತ್ತಿದ್ದರು. ಹಾಲು ಮೊಸರು ತೆಗೆದುಕೊಂಡು ಬರುತ್ತಿದ್ದರೆ ಅದನ್ನು ಕಿತ್ತುಕೊಂಡು ಕುಡಿದುಕೊಳ್ಳುವುದು, ಬೆಣ್ಣೆ ಇದ್ದರೆ ಕಿತ್ತು ತಿಂದುಕೊಳ್ಳುವುದು — ಕಾಸು ಕೇಳುವುದು — ಹೀಗೆಲ್ಲಾ ಆಗಿ ಅವನ ಹಾವಳಿಯು ಹೇಳತೀರದಾಗಿತ್ತು, ಅವನು ಮೇಲೆ ಹೇಳಿದ ಸಿದ್ಧಿಯನ್ನು ಇಟ್ಟುಕೊಂಡಿದ್ದ, ಇದ್ದಕ್ಕಿದ್ದ

ಹಾಗೇನೆ ಇಬ್ಬರಿಗೂ ತಿಸರ (ಮನಸ್ತಾಪ)ವು ಬಂದುಬಿಟ್ಟಿತು. ರಾತ್ರಿಹೊತ್ತಿನಲ್ಲಿ ಸಿದ್ಧಮಾದ ಮನೆಯಲ್ಲಿ ಊಟಮಾಡಿಕೊಂಡು ಮಲಗುವುದಕ್ಕೆ ಸಿದ್ದಿಯಮನೇಗೇ ಹೋಗುತ್ತಿದ್ದ. ಅಂದೂ ಹೋಗಿದ್ದ, ಆದರೆ ಅಂದು ಅವನು ಮಲಗಿರುವಾಗ ಅವನ ತಲೆಯಮೇಲೆ ರಾಗಿಕಲ್ಲನ್ನು ಎತ್ತಿಹಾಕಿ ಅವನನ್ನು ಕೊಂದುಬಿಟರು. ಈ ಸಂದರ್ಭದಲ್ಲಿ ಭಾರಿ ಕ್ರಿಮಿನಲ್ ಕೇಸ್ ಆಗಿತ್ತು. ಆವಾಗ ಆ ಸುತ್ತಿನಲ್ಲೆಲ್ಲ ಯಾರ ಬಾಯಲ್ಲಿ ನೋಡಿದರೂ ಸಿದ್ಧಮಾದನ ಕೊಲೆ ಮತ್ತು ಸಿದ್ದಿ ಮಾತು ಇವೆರಡರ ಹೊರತು ಬೇರೆ ಯಾವುದೂ ಮಾತೇ ಇರುತ್ತಿರಲಿಲ್ಲ. ಹೀಗಾಗಿ ಸಿದ್ದಿ ಹೆಸರು ಆ ಪ್ರಾಂತದಲ್ಲೆಲ್ಲ ವಿಖ್ಯಾತವಾಗಿತ್ತು. ಆವಾಗ ಅವಳ ಪರವಾಗಿ ಹುಚ್ಚೀರಪ್ಪನ ಸುಬ್ಬಣ್ಣ, ಸತ್ತೀಗಾಲದ ಮಾದಪ್ಪನವರೆಲ್ಲ ನಿಂತುಕೊಂಡು ನ್ಯಾಯ್ಯ ಸಾಜ್ಯಮಾಡಿ ಆ ಕೇಸನ್ನ ವಜಾಮಾಡಿಸಿಕೊಂಡರು. ಬಹಳ ಭಜಾರಿ ಯಾರಿಗೂ ಹೆದರುವವಳಲ್ಲ, ಇನ್ಸ್ಪೆಕ್ಟರ್ ಅವರಿಗೇನೆ ನಡು ತಬ್ಬಿದ್ದಳಂತೆ ನೋಡಿಕೊಳ್ಳಿ ಇನ್ನೆಷ್ಟು ಗಂಡುಬೀರಿ ಇದ್ದಿರಬಹುದು ಆಕೆ. ಅವಳಿಗೆ 'ರೂಟಿ' ಎಂಬ ಇನ್ನೊಂದು ಹೆಸರುಂಟು. ಸಿದ್ದಿಯು ಬೂದಳ್ಳಿಯವಳು, ಅವಳು ಲಗ್ನವಾಗಿ ಕೋಡಳ್ಳಿಗೆ ಬಂದ ಒಂದು ವರ್ಷದಲ್ಲಿ ಸತ್ತಿಗಾಲದ ಮಾದಪ್ಪನು ಅವಳನ್ನು ಕೈಗೆ ಹಾಕಿಕೊಂಡ .... ಅವಳು ಬೆಸ್ತರವಳು ಮಾದಪ್ಪ ಲಿಂಗಾಯಿತರವನೆ ಇರಬಹುದು. ಆದರೆ ಗಂಡಹೆಂಡತಿಯರಿಗಿಂತಲೂ ಹೆಚ್ಚಾಗಿದ್ದರು. ಅವಳಿಗೆ ನಲವತ್ತೈದಾಯಿತು. ಅವನಿಗೂ ಐವತ್ತಾಯಿತು. ಆದರೆ ಇಬ್ಬರಿಗೂ ಆ ಕೋಕಿ ಮಾತ್ರ ಅಳಿಯಲಿಲ್ಲ. ದಿನರಾತ್ರಿ ಮಾದಪ್ಪನು ಮಲಗಿಕೊಳ್ಳಲು ಅವಳ ಮನೆಗೆ ಹೋಗಬೇಕು. ಊರಿನಲ್ಲಿ ಇದ್ದೂ ಹೋಗದೆ ಒಂದು ದಿವಸವೇನಾದರೂ ತಪ್ಪಿಸಿಕೊಂಡರೆ ಬೆಳಿಗ್ಗೇಗೆ ತುಂಬಿದ

ಅಂಗಡೀ ಬೀದೀಲೇ ಕೇಳುತ್ತಿದ್ದಳು. ಅದ್ಯಾಕ ನಿನ್ನೆ ರಾತ್ರಿ ಮಲೀಕೊಳೋಕೆ ಬರಲಿಲ್ಲ .... ಅಣ್ಣನಿಗೆ ಸಾಕಾಯಿತೇನೋ, ಎಂದು. ಇಷ್ಟರವುಟ್ಟಿಗೆ ಕೇಳಿದರೆ ಅವನ ಪುಣ್ಯಾ ಅನ್ನಬಹುದು ಬಹಳ ಅಶ್ಲೀಲವಾಗಿ ಕೇಳುತ್ತಿದ್ದಳು. ಆದ್ದರಿಂದ ದೇವರ ತಲೇ ಮೇಲೆ ಹೂವು ತಪ್ಪಿದರೂ ನಿತ್ಯವೂ ಮಾದಪ್ಪ ಸಿದ್ಧಿ ಮನೇಗೆ ಹೋಗುವದು ಮಾತ್ರ ಉಳಿಯುತ್ತಿರಲಿಲ್ಲ.

ಸಿದ್ದಿಗೆ ಕೆಂಚಿ ಎಂಬ ಮಗಳು ಇದ್ದಳು. ಕೆಂಚಿಯು ತೆಳ್ಳಗೆ ಬೆಳ್ಳಗೆ ಕಡಲೇ ಹಿಟ್ಟಿನ ಗರಿ ಇದ್ದಹಾಗೆ ಚೆನ್ನಾಗಿದ್ದಳು. ಅವಳನ್ನು 'ಕೆಂಚಿಪುಟ್ಟಿ' ಎಂದು ಎಲ್ಲರೂ ಕರೆಯುತ್ತಿದ್ದರು. ಅವಳ ಲಗ್ನವಾಗಿ ಎಂಟು ವರುಷವಾಗಿತ್ತು. ಸಿದ್ದಿಯು ಮಗಳನ್ನು ಒಂದೇ ಊರಿಗೆ ಕೊಟ್ಟು ಮನೆವಾಳಿತನಕ್ಕೆ ಲಗ್ನವಾಡಿ ಅಳಿಯ ಮಗಳನ್ನು ಮನೆಯಲ್ಲಿಯೇ ಇರಿಸಿಕೊಂಡಳು ಮಗಳನ್ನು ಅವಳ ಕಸುಬಿಗೆ ತಿರುಗಿಸಿದಳು,

ಸುಬ್ಬಣ್ಣ ಕೋಡಿಹಳ್ಳಿಯಲ್ಲಿಯೂ ಮೇಷ್ಟರಾಗಿದ್ದ, ಕೆಂಚಪುಟ್ಟಿಯು ಸುಬ್ಬಣ್ಣನ ಕೈಕೆಳಗೆ ಓದಿದವಳು. ಅವಳು ಓದಿರುವುದಾದರೂ ಕನ್ನಡ ಎರಡನೇ ಕ್ಲಾಸಿನವರೆವಿಗೆ ಮಾತ್ರ. ಸಿದ್ಧಿಯು ಎಂಥವಳೆಂಬುದು ಸುಬ್ಬಣ್ಣನಿಗೆ ಗೊತ್ತಾಗಿತ್ತು. ಒಂದು ದಿವಸ ಸಾಯಂಕಾಲದ ಸಮಯದಲ್ಲಿ ಕಟ್ಟೆಕಡೆ ಹೋಗಿದ್ದು ಸುಬ್ಬಣ್ಣ ಊರಿಗೆ ವಾಪಸಾಗುತ್ತಿರಬೇಕಾದರೆ ಸಿದ್ಧಿಯು ಊರ ಮುಂದಿನ ಚಾವಡಿಮನೆ ಹತ್ತಿರ ಸಿಕ್ಕಿದಳು. ತಾನೆ ಮಾತನಾಡಿಸಿದಳು

"ಏನು ಮೇಷ್ಟರೆ, ನಮ್ಮ ಹೆಣ್ಣು ಚೆನ್ನಾಗಿ ಓದಿದೇಳ?"

"ಸಾಲೊದಿಲ್ಲ ಕಣಮ್ಮ—ಹೀಗೆ ಬುಟ್ಬುಟ್ರೆ ಮುಂದಲ ವರುಷಾನೂನೆ ಅದೇ ಕಳಾಸಿನಲ್ಲಿ (class) ಇರಬೇಕಾಗುತ್ತೆ"

"ಚ್, ಹಗ್ ವಾಡಬೇಡಿ ಕಣ್ ಸ್ವಾಮಿ, ಸ್ವಲ್ಪ ಮುತುವರ್ಜಿ ವಹಿಸ್ಕಂಡು ಪಾಠ ಹೇಳಿ ಸ್ವಾಮಿ—"

"ಅದೆಂಗ್ಯಮ್ಮ ನಿನ್ನ ಮಗಳೊಬ್ಬಳಿಗೇ ಮುತುವರ್ಜಿವಹಿಸಿ ಕೊಂಡು ಪಾಠ ಹೇಳೋದು!....ಎಲ್ಲಾರಿಗೂ ಹೇಳುವ ಹಾಗೆ ನಿನ್ನ ಮಗಳಿಗೂ ಹೇಳುತ್ತೇವೆ ಅಷ್ಟೆ. ಹಾಗೆ ನಿನ್ನ ಮಗಳಿಗೇ ಬೇರೆ ಮುತುವರ್ಜಿವಹಿಸಿ ಪಾಠ ಹೇಳಬೇಕೂ ಅಂದರೆ ಮನೆ ಪಾಠ ಹೇಳಿಸಬೇಕು ಅಷ್ಟೆ."

"ಹಾಗೆ ಆಗ್ಬುಟ್ರೆ ಸ್ವಾಮಿ, ನೀವೆ ದಿನಾ ಸಂಜೆಹೊತ್ತಿಗೆ ಬಂದ್ ಬಂದು ಓದ್ಸಿ.....ಏನಾರ ಈಸ್ಕಳೋರಂತೆ"

ಹೀಗೆ ಕೆಂಚಿ ಪುಟ್ಟಿಗೆ ಪಾಠ ಹೇಳುವ ನೆಪದಿಂದ ಸಿದ್ಧಿಮನೆಗೆ ಪ್ರವೇಶಿಸಿದ ಸುಬ್ಬಣ್ಣನು ಕೊಂಚಕಾಲ ಅಂದರೆ ಸುಮಾರು ಎರಡು ವರುಷಕಾಲ ಸಿದ್ಧಿಯನ್ನ ಮನೆ ಹೆಂಡತಿಯಂತೆ ಕಂಡುಕೊಂಡಿದ್ದ ಅಷ್ಟೊಂದು ಚೆನ್ನಾಗೂ ಇದ್ದಳು ಅವಳು. ಒಳ್ಳೆ ದೊಡ್ಡ ಹುಟ್ಟಿನ ಹೆಣ್ಣು....ಒಳ್ಳೆ ಬಣ್ಣ. ಒಳ್ಳೆ ಮೈಕಟ್ಟು, ಒಳ್ಳೆ ಆಯ, ಬಹಳ ಸ್ಫುರದ್ರೂಪಿಯಾದ ಹೆಂಗಸು ಆದ್ರೆ ಈವಾಗ ಅಷ್ಟು ವಯಸ್ಸಾಗಿದ್ದರೂ ಕೂಡ ಅವಳಿಗೆ ಸರಿಯಾಗಿ ಉಡುಗೆ ತೊಡುಗೆ ಹಾಕಿ ಅಲಂಕಾರ ಮಾಡಿದರೆ ಹಸೆಮೇಲಿನ ಹೆಣ್ಣು ಕಂಡಹಾಗೆ ಕಾಣು ತ್ತಾಳೆ. ಮಗಳಿಗೆ ಪಾಠ ಹೇಳುವ ನೆಪದಿಂದ ಸುಬ್ಬಣ್ಣನು ಆಕೆಯ ಮನೆಯನ್ನು ಪ್ರವೇಶಿಸಿದಂತೆಯೇ, ಅವಳೂನು ಮಗಳ ಪಾತನ್ನು ನೆಪಮಾಡಿಕೊಂಡು ಅವನೊಡನೆ ಮಾತನಾಡಿಸಿದಳು. ಹೀಗಿರುವಾಗಅವರಿಬ್ಬರೂ ಹೊಂದಿಕೊಂಡರೆಂದರೆ ಆಶ್ಚರ್ಯವೇನು?

ಈವಾಗ ಸುಬ್ಬಣ್ಣ ಕೋಡಳ್ಳಿಗೆ ಬಂದು ಸಿದ್ಧಿಯನ್ನು ಕಂಡನು ವಿಷಯವನ್ನೆಲ್ಲ ತಿಳಿಸಿದನು. ಆಕೆಯು ಎಲ್ಲವನ್ನೂ ಕೇಳಿಕೊಂಡು ಆಗಲಿ ಸುಬ್ಬಣ್ಣ....ಮಾಡಿಕೊಡುತ್ತೇನಿ" ಅಂದಳು. ಸುಬ್ಬಣ್ಣನು ನೋಡು ಸಿದ್ಧಿ, ನಿನ್ನ ಕೈನಲ್ಲಿ ಆಗುತ್ತಿದ್ದರೆ ಆಗಲೀ ಅನ್ನು.... ಸಾಧ್ಯವಾಗದಿದ್ದರೆ ಖಂಡಿತವಾಗಿ ಈಗ್ಲೆ ಇಲ್ಲ ಅಂದುಬಿಡು....

ದುಡ್ಡಿನ ಆಶೆಗೆ ಹು, ಆಗಲಿ ಅಂದುಬಿಟ್ಟೆ....ಆಮೇಲಿಂದ ಅವಳನ್ನು ಮುಗಿಯಿಸುವ ಕೆಲಸ ಮಾಡಬೇಡ ಹೀಗೆಂದು ಎಚ್ಚರಿಸಿದನು. ಸಿದ್ಧಿಯು ಸುಬ್ಬಣ್ಣನಿಗೆ ಅಂಥಾದ್ದೇನು ತಿಳಿದುಕೊಳ್ಳಬೇಡ, ನಡಿ ಸುಬ್ಬಣ್ಣ ಮಾಡಿಕೊಡುತ್ತೀನಿ ಎಂದು ಪೂರ್ಣ ಭರವಸೆಯನ್ನು ಕೊಟ್ಟಳು. ಸುಬ್ಬಣ್ಣನು ತಂದಿದ್ದ ಇಪ್ಪತ್ತೈದು ರೂಪಾಯಿನಲ್ಲಿ ಇಪ್ಪತ್ತು ರೂಪಾಯಿಗಳನ್ನು ಅವಳಿಗೆ ಅಡ್ವಾನ್ಸ್ ಕೊಟ್ಟು ಉಳಿದುದನ್ನ ಊರಿನಲ್ಲಿ ಕೊಡುವುದಾಗಿ ಹೇಳಿದನು. ಸಿದ್ಧಿಯು ಅದಕ್ಕೆ ಒಪ್ಪಿಕೊಂಡಳಾದರೂ "ಉಕ್ಕಲಗೆರೆ ಚೆನ್ನಮಲ್ಲಪ್ಪನ ಮಗ ಮಾಡಿದ ಹಾಗೆ ಮಾಡ್ಬೀಡ್ ಬಿಟ್ಟೀಯ ಸ್ವಾಮಿ!" ಅಂದಳು. ಚೆನ್ನಮಲ್ಲಪ್ಪನು ದೊಡ್ಡವೀರಶೆಟ್ಟಿಯ ಎರಡನೇ ಹೆಂಡತಿಗೆ ಸೋದರಮಾವನಾಗಬೇಕು. ಆದ್ದರಿಂದ ಅವನ ಮಗ ಸಿದ್ಧಿಗೆ ಏನು ಮಾಡಿದನೆಂಬುದನ್ನು ತಿಳಿದುಕೊಳ್ಳುವ ಕುತೂಹಲವುಂಟಾಯಿತು ಸುಬ್ಬಣ್ಣನಿಗೆ.

ಚೆನ್ನಮಲ್ಲಪ್ಪನ ಮಗನು ಬೆಣ್ಣೆವ್ಯಾಪಾರ ಮಾಡುತ್ತಿದ್ದ. ಊರು ಊರುಗಳಲ್ಲಿ ಅವರಿಗೆ ಇವರಿಗೇ ಅಂತ ಗೊತ್ತಿರುವವರಿಗೆ ಎಮ್ಮೆ ತೆಗೆದುಕೊಳ್ಳುವುದಕ್ಕೆ ಹಣಕೊಡೋದು. ಅವರು ಇವನಿಗೆ ಬೆಣ್ಣೆ ಇಕ್ಕಿ ಸಾಲತೀರಿಸುವುದು. ಇವನ ಹಣಕ್ಕೆ ಬಡ್ಡಿಯಿಲ್ಲ. ಆದರೆ ಅವರು ಬೆಣ್ಣೆಯನ್ನು ಇತರರಿಗೆ ಯಾರಿಗೂ ಮಾರ ಕೂಡದು.... ಮತ್ತು ಎಲ್ಲರೂ ಕೊಡುವುದಕ್ಕೆ ಪಾವು ಹೆಚ್ಚಾಗಿ ಕೊಡಬೇಕು ಅಂದರೆ ರೂಪಾಯಿಗೆ ಸೇರು ಬೆಣ್ಣೆ ಮಾಡುತ್ತಿದ್ದರೆ ಇವನಿಗೆ ಸೇರು ಪಾವಿನಹಾಗೆ ಇಕ್ಕಬೇಕು. ಹೀಗೆ ಸುತ್ತ ಹತ್ತಾರು ಊರುಗಳಲ್ಲಿಯೂ ಕೇರಿ ಮನೆಗಳಲ್ಲಿ ಬೆಣ್ಣೆ ಎತ್ತಿ ಮಂಡ್ಯದಿಂದ ರೈಲಿನಮೇಲೆ ಪರಸ್ಥಳಗಳಿಗೆ ರವಾನೆ ಮಾಡುವ ಉದ್ಯೋಗ ಅವನದು. ಅವನ ಹತ್ತಿರ ಈ ಸಿದ್ಧಿಯೂ ಕೂಡ ಎಮ್ಮೆ ಕೊಂಡು

ಕೊಳ್ಳಲಿಕ್ಕಾಗಿ ಹಣ ಸಾಲತೆಗೆದುಕೊಂಡಿದ್ದಳು. ಸತ್ತೀಗಾಲದ ಮಾದಪ್ಪನೇ ಹತ್ತಾರು ಕಡೆ ತಿರುಗಿಮಾಡಿ ತಂದುಕೊಟ್ಟಿದ. ಚೆನ್ನಮಲ್ಲಪ್ಪನ ಮಗನಿಗೆ ಅವಳು ದಿನವೂ ಕೂಡಾಕಿಕೊಂಡು ಮೂರು ದಿನಕ್ಕೆ ಒಂದುಸಲ ಬೆಣ್ಣೆ ಇಕ್ಕುತ್ತಿದ್ದಳು. ಉಕ್ಕಲಗೆರೆ ಚೆನ್ನಮಲ್ಲಪ್ಪನವರ ಮಗನಿಗೆ ಈವತ್ತೆಲ್ಲ ಇಪ್ಪತ್ತೈದು ವರುಷ ಇರಬಹುದು ಅಷ್ಟೆ. ಈ ವ್ಯಾಪಾರಕ್ಕೆ ಬಂದು ಆರೇಳು ವರುಷ ವಾಯಿತು ಅಷ್ಟೆ. ಅದಕ್ಕೆ ಮುಂಚೆ ಅವನ ತಂದೆಯವರೇನೆ ಮಾಡುತ್ತಿದ್ದರು. ಅವರಿಗೂ ತುಂಬ ವಯಸ್ಸಾದುದರಿಂದ "ಮೂಲೆಗೆ ತಟ್ಟಾಗಿ" ಕುಳಿತುಕೊಂಡರು....ಮಗನೇ ನೋಡಿಕೊಳ್ಳಬೇಕಾ ಯಿತು. ಚೆನ್ನಮಲ್ಲಪ್ಪನವರ ಮಗ ಬೆಣ್ಣೆ ಇಕ್ಕಿಸಿಕೊಳ್ಳಲು ಸಿದ್ಧಿ ಮನೆಗೆ ಹೋದ. ಬೆಣ್ಣೆ ಡಬ್ಬವನ್ನು ಹೆಗಲಿಗೆ ಸೇಯ್ದುಕೊಂಡು "ಸಿದ್ದಮ್ಮ'' ಎಂದು ಕೂಗಿಕೊಂಡು. ಬಾಗಿಲು ತಳ್ಳಿಕೊಂಡು ಮನೆ ಒಳಗಡೆಗೆ ಹೋದನು. ಸಿದ್ಧಿ ಇದ್ದವಳು "ಬನ್ನಿ ಸ್ವಾಮಿ" ಎಂದು ಕರೆದು, ತಾನು ಮಾತ್ರ ಹೊರಕ್ಕೆ ಬಂದು ಬಾಗಿಲನ್ನು ಎಳೆದುಕೊಂಡು ಹೊರಗಡೆ ಚಿಲ್ಕ ಹಾಕಿಕೊಂಡು ಹಂತದ ಕಲ್ಲ ಮೇಲೆ ಕುಳಿತುಕೊಂಡಳು. ಚೆನ್ನಮಲ್ಲಪ್ಪನವರ ಮಗನು ಈ ನಡವಳಿಕೆ ನೋಡಿ ದಿಗ್ಭ್ರಾಂತನಾದನು. ಬೂದಳ್ಳಿ ಸಿದ್ಧಿ ಯಾರೆಂದು ಸಂಪೂರ್ಣವಾಗಿ ಅವನಿಗೂ ಗೊತ್ತಿತ್ತಾದರೂ, ಅವನ ವಿಷಯದಲ್ಲಿ ಹೀಗೆ ನಡೆದುಕೊಳ್ಳುವಳೆಂದು ಅವನು ತಿಳಿದಿಗಲಿಲ್ಲ. ಇರಲಿ ಆಯ್ತುಲ್ಲ....ಒಳಗಡೆ ಕಿರುಮನೆಯಿಂದ ಕೆಂಚಿ ಪುಟ್ಟಿ ಬಂದಳು, "ಇದ್ಯಾಕೆ ಸ್ವಾಮಿ, ನಿಂತೇ ಇದ್ದೀರಿ ಕೂತ್ಕೊಳಿ ಚಾಪೆ ಮೇಲೆ" ಎಂದು ತೊಲೆಮೇಲೆ ಇರಿಸಿದ್ದ ಚಾಪೆಯನ್ನು ತೆಗೆದು ಕೊಂಡು ಗೋಡೆವರಿಗೆ ಹಾಸಿದಳು. ಈವಾಗ ಸಿದ್ಧಿಯ ಉದ್ದೇಶ ವೇನೆಂಬುದು ಸಂಪೂರ್ಣವಾಗಿ ಗೊತ್ತಾಯಿತು ಆತನಿಗೆ.

"ನಾನು ನಿಮ್ಮ ಅಟ್ಟೀಗೆ ಬಂದಿರೋದು ಚಾಪೆಹಾಸ್ಕೊಂಡು ಕುಳಿತುಕೊಳ್ಳೋಕೊ, ಬೆಣ್ಣೆ ಇಕ್ಕಿಸಿಕೊಂಡು ಹೋಗುವುದಕ್ಕೊ? ನಾನು ಒಳಕ್ಕೆ ಬರಲೇ ಇಲ್ಲ, ನಿಮ್ಮವ್ವ ಆಚೇಗೋಗಿ ಚಿಲ್ಕ ಹಾಕ್ಕೊಂಡಳಲ್ಲ....ಆಗಬಹುದೇ?...."

"ಈವಾಗ ಏನಾಯ್ತು ಸ್ವಾಮಿ?"

"ಇನ್ನೇನಾಗಬೇಕು....ಈವಾಗಾಗಿರೋದು ಸಾಲ್ದ ?"....

ಕೆಂಚಿ ಪುಟ್ಟಿಯು ಲಜ್ಜೆಯಿಂದ ತುಸು ತಲೆ ತಗ್ಗಿಸಿ "ಸ್ವಾಮಿ ನಿಮ್ಮ ಜೊತೇಲಿ ಮಾತನಾಡಬೇಕೇಳಿ" ಎಂದಳು. ಚೆನ್ನಮಲ್ಲಪ್ಪ ನವರ ಮಗ ಅಂದರೆ ಮಹಾ "ಘಾಖ" (ಕಿಲಾಡಿ), "ಹಾಗ, ಹೋಗು ಹಾಗಾದರೆ, ಹಾಸಿಗೆ ತೆಗೆದುಕೊಂಡುಬಂದು ಹಾಸು ಹೋಗು" ಎಂದ. ಕೆಂಚಿಪುಟ್ಟಿಯು ಖುಷಿಯಾಗಿ ಹೋದಳು. ಹಾಸಿಗೆತರಲು ಕಿರುಮನೆಗೆ ಹೋದಳು ಅವಳು ಹೋಗಿ ಬರುವು ದರೊಳಗಾಗಿ ಈತ ಸರ್‍ರಂತ ಮೇಲೆದ್ದು, ಜೋಬಿನಿಂದ ಪಾಕೆಟ್ (purse) ಅನ್ನು ತೆಗೆದು ಮೇಲೆ ತೋಲೆಯಮೇಲೆ ಇರಸಿ ಮತ್ತೆ ಏನೂ ಅರಿಯದವನಂತೆ, ಮೊದಲು ಹ್ಯಾಗೆ ಕುಳಿತಿದ್ದನೊ ಹಾಗೇನೆ ಕುಳಿತುಕೊಂಡ. ಅವಳು ಹಾಸಿಗೆ ತೆಗೆದುಕೊಂಡು ಬಂದು ಹಾಸಿದಳು. ಇವನು ಕೋಟುತೆಗೆದು ಮೊಳೆಗೆ ತಗಲಿ ಹಾಕಿದ, ಕೆಲಸವಾದಮೇಲೆ ಇವನು ಕೋಟು ಕೈಗೆ ತೆಗೆದು ಕೊಂಡು ದಿನಾಲು ನನ್ನ ಜೇಬಿನಲ್ಲಿ ಅಷ್ಟೊಂದ್ ದುಡ್ಡಿರೋದು ಈವತ್ತೇ ನನ್ನ ಜೇಬಿನಲ್ಲಿ ದುಡ್ಡಿಂಬೇಡವಾ? ಅಂದ. ಕೆಂಚಿ ಪುಟ್ಟಿಗೆ ಗಾಬರಿಯಾಯಿತು. ಆದರೂ ಅದನ್ನು ವ್ಯಕ್ತಪಡಿಸದೆ, "ನಿಮ್ಮಂತ ಸಾಹುಕಾರರುಗಳೆ ಹಿಂಗ್ ಅದುಬಿಟ್ಟರೆ ಆಮೇಲೆ ಬಲು ಚೆಂದಾಯಿತು....ತೆಗೀರಿ ಸ್ವಾಮಿ, ಪಾಕೀಟ್ನ ಒಳಜೋಬಿ ನಿಂದ!" ಅಂದಳು. ಆತ ಇದ್ದವನು ಕೋಟನ್ನೆ ಅವಳಕೈಗೆ

ಗೆದುಕೊಟ್ಟನು ಅವಳು ಆ ಜೋಬು ಈ ಜೋಬಾಂತ ಎಲ್ಲಾ
ಹುಡುಕಿದಳು. ಅಲ್ಲೇನಿದೆ ಮಣ್ಣು !....ಕೋಟನ್ನ ವಾಪಸು
ಮಾಡಿದಳು "ಪಾಕೇಟನ್ನ ನಡೀಗೆ (ನಡುವಿಗೆ) ಸೇರಿಸಿ
ಕೊಂಡಿದ್ದೀರಿ" ಎಂದಳು. ಪಂಟು ಎತ್ತಿ ತೋರಿಸಿದ. ಅಲ್ಲೂ
ಇಲ್ಲ. ಅವಳು ಪೆಚ್ಚಾಗಿ ನಿಂತುಕೊಂಡಳು. ಅವನಿದ್ದವನು
ಕೋಟಿನ ಜೋಬಿಗೆ ಎಡಗೈಹಾಕಿ ಇದ್ದ ಚಿಲ್ಲರೆದುಡ್ಡನ್ನು ತೆಗೆದು
ಕೊಂಡು ಅವಳ ಮುಖಕ್ಕೆ ಹಿಡಿದ. ಅಲ್ಲಿಷ್ಟಿತ್ತು !....ಐದಾರು
ಆಣೆ ಅಷ್ಟು ಚಿಲ್ಲರೆ ದುಡ್ಡಿತ್ತು. ಅವಳೇನೊ ದೊಡ್ಡದಾಗಿ ನಂಬಿ
ದ್ದಳು. ಅದು ಹೀಗಾಗಿ ಅವಳ ಆಸೆ ಮೋಸವಾಯಿತು. ಹಾಸಿಗೆ
ಎತ್ತಿ ಕಿರುಮನೆಗೆ ತೆಗೆದುಕೊಂಡು ಹೋದಳಲ್ಲ ಆವಾಗ ತೊಲೆ
ಮೇಲಿರಿಸಿದ್ದ ಪಾಕೆಟ್‌ಅನ್ನ ತೆಗೆದು ನಡುವಿಗೆ ಸೇರಿಸಿದ. ಅವಳು
ಕಿರುಮನೆಯಿಂದ ಬಂದಮೇಲೆ " ಈ ಚಿಲ್ಲರೆ ದುಡ್ಡನಾದರೂ
ಯಾಗೊ ಮಾಳ್ಪಾದವಳೆ'' ಅಂದ. ಅವಳು ಹೋಗಿ ಸ್ವಾಮಿ,
ನಮಗೆ ಸಾಚಿಕೆ ಆಗೋದಿಲ್ವೆ ಹಾಗನ್ನೋದಿಕ್ಕೆ ಅಂದಳು.
ಅವನು ಅದನ್ನೂ ತೆಗೆದು ಜೋಬಿಗೆ ಹಾಕಿಕೊಂಡು "ಬಾಗಿಲು
ತೆಗಿಸು ಮತ್ತೆ....ಹೋಗುತ್ತೇನೆ'' ಅಂದ "ಬಾಗಿಲ್ನಂತೆ ತಗಿಯುವ್ವ
ದೊರಕೊಳ್ಳೀಗ್ಲಿ .... ಶೆಟ್ರು .... ಅಂದಳು ಕೆಂಚಿಪುಟ್ಟಿ ಸಿದ್ದಿಯು
ಬಾಗಿಲು ತೆಗೆದುಕೊಂಡು ಒಳಗೆ ಬಂದಳು. "ಏನ್ ಬೋವಾನ
ಮಾಡಿದರಮ್ಮಿ ಕೂಸೆಶೆಟ್ರು" ಎಂದು ಮಗಳನ್ನು ಕೇಳಿದಳು.
ಅವಳು ನಡೆದಸಂಗತಿ ಹೇಳಿದಳು. ಸಿದ್ದಿಗೆ" ನೆಚ್ಚಿದ ಎಮ್ಮೆ
ಕೋಣನನ್ನು ಈದ ಹಾಗಾಯಿತು. ಸುಳ್ಳು ಬಲ್ಲ ಸಿಂಪಿಗ, ಎಳ್ಳು
ಬಲ್ಲ ಗಾಣಿಗ, ಎಲ್ಲಾ ಬಲ್ಲ ಬಣಜಿಗ ಅಂತ ಬಲಗೈನಲ್ಲಿ ಭಾಷೆ
ಕೊಟ್ಟರೂ ಬಣಜಿಗರನ್ನ ಮಾತ್ರ ನಂಬಬಹುದಾ ಸ್ವಾಮಿ ?''
ಅಂದಳು. ಇಷ್ಟಾದಮೇಲೂ ಆವತ್ತು ಬೆಣ್ಣೆ ಇಕ್ಕಿಸಿಕೊಂಡು

ಹೋದ ಅಂದಮೇಲೆ ಅವನಲ್ಲವೆ ಖಿಲಾಡಿ! ಈ ಕಥೆಯನ್ನು ಸಿದ್ಧಿಯ ಬಾಯಗಾರ ಸುಬ್ಬಣ್ಣ ಕೇಳಿ ಖುಷಿಪಟ್ಟ. ತಾನೇನು ಹಾಗೆ ಮಾಡುವುದಿಲ್ಲವೆಂದೂ, ಉಳಿಕೆ ಹಣವನ್ನು ಊರಿಗೆ ಹೋದಕ್ಷಣ ಕೊಡುವುದಾಗಿ ಹೇಳಿ ಮಾತಿನ ಭರವಸೆಕೊಟ್ಟ. ಕೋಡಳ್ಳಿಯಲ್ಲಿ ಕತ್ತಲು ಆದಮೇಲೆ ಸೈಕಲ್ ಹಿಂದುಗಡೆ ಕ್ಯಾರಿಯರ್ ಮೇಲೆ ಆವಳನ್ನು ಕೂರಿಸಿಕೊಂಡು, ಡಬ್ಬಲ್‌ರೈಡಿಂಗ್ ಮಾಡಿಕೊಂಡು ಹೊರಟ.

೧೧

ಬೊಮ್ಮನಹಳ್ಳಿ ಇರುವದು ಮೈಸೂರು ಕೋಡಳ್ಳಿರೋಡ್ ಸ್ಟೇಡಿನಲ್ಲಿ ಅಡ್ಡರಸ್ತೆ ಮುಗ್ಗಲಿಗೆ ಬೊಮ್ಮನಹಳ್ಳಿ ಸಂತೆಮಾಳ ಅಂದರೆ ಸಂತೆಕಟ್ಟುವ ಜಾಗ. ಅಡ್ಡರಸ್ತೆಯಿಂದ ಉತ್ತರದಕಡೆಗೆ ಹೊರಟರೆ ಸುಮಾರು ಫರ್ಲಾಂಗು ದೂರದಲ್ಲಿ ಅಡ್ಡಲಾಗಿ ದೊಡ್ಡ ಕಾಲುವೆ ಕಲ್ಲುಸೇತುವೆ ಸಿಗುತ್ತದೆ. ಕಾಲುವೆಯು ಪಶ್ಚಿಮದಿಂದ ಪೂರ್ವದಕಡೆಗೆ ಹೋಗುತ್ತದೆ. ಇದು ಇರ್ವಿನ್ ಕೆನಾಲ್ ಮುಂದೆ ಹೊರಟರೆ ಎಡಕ್ಕೂ ಬಲಕ್ಕೂ ಬೇಲಿ. ಬೇಲಿ ಒಳಗೆ ಹೊಲ. ಊರಿಗೆ ಮಲ್ಲೇರಿಯ ಬರುತ್ತದೆ ಎಂದುಕೊಂಡು ಊರಮುಂದಿನ ಹೊಲಗಳಿಗೆ ನೀರುಕೊಡುವುದಿಲ್ಲ. ಮುಂದೆ ಗುಮ್ಮನ ಹುಂಡಿ. ಅದಾದಮೇಲೆ ಸುಮಾರು ಎರಡು ಫರ್ಲಾಂಗ್ ದೂರದಲ್ಲಿ ಬೊಮ್ಮನ ಹಳ್ಳಿ. ಅಡ್ಡರಸ್ತೆಯಿಂದ ಊರಿಗೆ ಸುಮಾರು ಒಂದು ಮೈಲಿ ಆಗುತ್ತದೆ. ಹೀಗೆ ಹೋಗುವಾಗ ಊರಿನ ಮೊದಲಲ್ಲೆ ಎಡಗಡೆ ಚಿಕ್ಕ ಜುಂಜಪ್ಪ, ಬೆಂಗಳೂರು ಮಾದಪ್ಪ, ಚಿಕ್ಕೀರಪ್ಪ ಈ ಮೂವರ ಮನೆಗಳು ಸಿಕ್ಕುತ್ತವೆ. ಬೊಮ್ಮನಹಳ್ಳಿ ಅಡ್ಡರಸ್ತೆಗೂ ಕೋಡಳ್ಳಿಗೂ ಕರೆಕ್ಟ್ ಎಂಟು ಮೈಲಿ. ಸುಬ್ಬಣ್ಣ ಕೋಡಳ್ಳಿ ಯಿಂದ ಬೂದಳ್ಳಿ ಸಿದ್ದಿಯನ್ನು ಸೈಕಲ್‌ಹಿಂದೆ ಕೂರಿಸಿಕೊಂಡು ಡಬ್ಬಲ್‌ರೈಡ್ ಮಾಡಿಕೊಂಡು ಹೊರಟನಲ್ಲ, ಸೀದ ಅವಳನ್ನೂ ಕರೆದುಕೊಂಡು ಊರಿಗೆ ಬರಲಿಲ್ಲ. ಮಧ್ಯೆ ಗುಡಿಕೊಪ್ಪಲು

ಅನ್ನುವಕಡೆ ಅವಳನ್ನು ಇಳಿಸಿಬಿಟ್ಟ. ಗುಡಿಕೊಪ್ಪಲಿಗೂ ಬೊಮ್ಮನಹಳ್ಳಿಗೂ ರಸ್ತೆಯಲ್ಲಿ ಬಂದರೆ ಅಡ್ಡರಸ್ತೆಗೆ ಒಂದು ಮೂರು, ಅಡ್ಡರಸ್ತೆಯಿಂದ ಊರಿಗೆ ಒಂದು, ಒಟ್ಟು ನಾಲ್ಕು ಮೈಲಿಗಳು. ಅದೆ ಕಾಲುದಾರಿಯಲ್ಲಿ ಬಂದರೆ ಎರಡೂವರೆ ಮೈಲಿ ಆಗುತ್ತದೆ. ಕಾಲು ದಾರಿಯಲ್ಲಿ ಸೈಕಲ್ಲೂ ಬರಬಹುದು. ಗುಡಿಕೊಪ್ಪಲಿನಲ್ಲಿ ಸಿದ್ದಿಗೆ ಸೋದರತ್ತೆ ಮನೆ ಇದೆ. ಅವಳೂ ಸಿದ್ದಿ ಕಸುಬಿನವಳೆ ಆಗಿದ್ದಳು. ಅಲ್ಲಿ ಅವಳನ್ನು ಇಳಿಸಿಬಿಟ್ಟು, ಮೂರನೆಯದಿನ ಮಧ್ಯಾಹ್ನದ ಮೇಲೆ ಬಂದು ಅವಳನ್ನು ಕರೆದುಕೊಂಡು ಹೋಗುವುದಾಗಿ ತಿಳಿಸಿ ಊರಿಗೆ ಒಬ್ಬನೇ ಬಂದ. ಊರಿಗೆ ಬಂದಮೇಲೆ ಅಣ್ಣನಕೂಡ ನಡೆದ ವಿಷಯವನ್ನೆಲ್ಲ ತಿಳಿಸಿ ಇನ್ನೂ ಮುನ್ನೂರು ರೂಪಾಯಿ ಕೊಡಬೇಕಾಗುತ್ತದೆಂದು, ಅವಳ ಕೈನಲ್ಲಿ ಮುನ್ನೂರು ರೂಪಾಯಿ ಇಟ್ಟ ಹೊರತು ಅವಳು ಗುಡಿಕೊಪ್ಪಲಿನಿಂದ ಹೊರಡುವುದಿಲ್ಲವೆಂದು ತಿಳಿಸಿದ. ದೊಡ್ಡವೀರಶೆಟ್ಟಿಯು ಹೂ ಅನ್ನಲಾರ, ಇಲ್ಲ ಅನ್ನಲೂಲಾರ ಕೊನೆಗೆ ಆಗಲಿ ಅಂದ. ಇನ್ನೇನು ಮಾಡುತ್ತಾನೆ ಅನ್ನದೆ! ಅವನೂ 'ಹೂ' ಅನ್ನಬೇಕು ಅವರಪ್ಪನೂ 'ಹೂ' ಅನ್ನಬೇಕು.

ಮೂರನೆಯದಿನ ಅಣ್ಣನ ಕೈನಲ್ಲಿ ಮುನ್ನೂರು ರೂಪಾಯಿ ಈಸಿಕೊಂಡು, ಅದರಲ್ಲಿ ಇನ್ನೂರಐವತ್ತು ರೂಪಾಯಿಗಳನ್ನು ಹೆಂಡತಿ ವಶಕ್ಕೆ ಕೊಟ್ಟು ಐವತ್ತು ರೂಪಾಯಿಗಳನ್ನು ಮಾತ್ರ ಜೇಬಿಗೆ ಹಾಕಿಕೊಂಡು, ಸುಮಾರು ಐದು ಘಂಟೆ ಹೊತ್ತಿಗೆ ಬೊಮ್ಮನಹಳ್ಳಿ ಗುಡಿಕೊಪ್ಪಲಿಗೆ ಹೊರಟ.

ಆರು ಆರೂವರೆ ಹೊತ್ತಿಗೆ ಗುಡಿಕೊಪ್ಪಲು ಮುಟ್ಟಿದ. ಕತ್ತಲಾಗುವವರೆವಿಗೂ ಊರುಮುಂದೆ ಅಷ್ಟುದೂರದಲ್ಲಿ ಒಂದು ಬಸರಿ ಮರದ ಕೆಳಗೆ ಬೀಡಿಗೀಡಿ ಸೇಯುತ್ತ ಕುಳಿತಿದ್ದು, ಆಮೇಲೆ

ಊರಿನೊಳಕ್ಕೆ ಹೋದ. ಸಿದ್ದಿ ಮನೆಗೆ ಹೋಗಿ ಅವಳನ್ನು ಹೊರ ಡಲು ಹೇಳಿದ. ಸಿದ್ದಿಯು ಸೋದರತ್ತೆಯ ಮಾತಿನ ಮೇರೆಗೆ ಮೊದಲು ತಾನು ಹೊರಟಳು, ಅವಳು ಹೋದ ಎಷ್ಟೋ ಹೊತ್ತಿನ ಮೇಲೆ ಸುಬ್ಬಣ್ಣ ಹೊರಟ. ಹಾಗೂ ಪಟೇಲ ಸಿಕ್ಕಿದ ಅವನಿಗೆ ದಾರಿಯಲ್ಲಿ 'ಇದೆಲ್ಲಿಗೆ ಬಂದಿದ್ರಿ ಶೆಟ್ರಿ?' ಅಂದ. 'ಇಲ್ಲೇ ಬಂದಿದ್ದೆ ಕಣಯ್ಯ .... ಸ್ವಲ್ಪ ಕೆಲಸ ಇತ್ತು ಅಂತ' ಅದು ಇದು ಹೇಳಿ ಹ್ಯಾಗೊ ಅವನಿಂದ ಬಿಡಿಸಿಕೊಂಡು ಮುಂದಕ್ಕೆ ಹೊರಟ. ಊರುಬಿಟ್ಟು ಸುಮಾರು ಒಂದು ಫರ್ಲಾಂಗಿಗೂ ಹೆಚ್ಚಾಗಿ ಬಂದ ಮೇಲೆ ಸಿದ್ದಿ ಸಿಕ್ಕಿದಳು. ಅಲ್ಲಿ ಮರದ ಕೆಳಗೆ ಕತ್ತಲಿನಲ್ಲಿ ಕುಳಿತುಕೊಂಡು ಎಲೆ ಅಡಿಕೆ ಕಡ್ಡಿಪುಡಿ ಹಾಕಿಕೊಂಡು ಮೆಲ್ಲುತ್ತಾ ಕುಳಿತಿದ್ದಳು. ಸುಬ್ಬಣ್ಣನಿಗೆ ಕಾಣದೆ ಇನ್ನೂ ಮುಂದೆ ಕೂತಿರ ಬಹುದು .... ಅಥವಾ ಹೋಗುತ್ತಾ ಇರಬಹುದು ಎಂದುಕೊಂಡು ಮುಂದೆ ಹೊರಟುಹೋಗುತ್ತಲಿದ್ದ. ಅಷ್ಟರಲ್ಲಿ ಅವನನ್ನೇ ಸಿದ್ದಿ ಕೂಗಲಾಗಿ ಸೈಕಲ್ಲಿನಿಂದ ಕೆಳಗಿಳಿದ ಸಿದ್ದಿಯನ್ನು ಹಿಂದುಗಡೆ ಕೂರಿಸಿಕೊಂಡು ಬರುವಾಗ ಅವನು ಬಂದುದು ಕಾಲುದಾರಿಯಲ್ಲಿ ಈವಾಗ ಕತ್ತಲಾದುದರಿಂದ ಸ್ವಲ್ಪ ಬಳಸಾದರೂ ಪರವಾಯಿಲ್ಲ ಅಂದುಕೊಂಡು ರಸ್ತೆಯಲ್ಲೇ ಹೊರಟ.

ಗುಮ್ಮನಹುಂಡಿ ಹತ್ತಿರಕ್ಕೆ ಬಂದಾಗ ಊಟದ ಹೊತ್ತು. ಇನ್ನೂ ಹುಂಡಿ ಸ್ವಲ್ಪ ದೂರದಲ್ಲಿದೆ ಅನ್ನೋವಾಗಲೆ ಅವಳನ್ನು ಕೆಳಗೆ ಇಳಿಸಿಬಿಟ್ಟ. ತಮ್ಮ ಮನೆಗೂ ಬೆಂಗಳೂರು ಮಾದಪ್ಪನ ಮನೆಗೂ ಮಧ್ಯೆ ಇರುವ ಓಣಿಗೆ ಹಿಂಭಾಗದಿಂದ ಹೊಲದಮೇಲೆ ಬರುವುದಕ್ಕೆ ಹೇಳಿ ತಾನೊಬ್ಬನೆ ಹೊರಟ. ಮನೆ ಸೇರಿದಮೇಲೆ ಹಜಾರದಲ್ಲಿ ತನ್ನ ಕಡೆಗಾದಂತೆ ಗೋಡೆ ಒತ್ತಿನಲ್ಲಿ ಮಂಡಿಸಂದಿಗೆ ತಲೆಸೇರಿಸಿಕೊಂಡು ಕುಳಿತಿದ್ದ ದೊಡ್ಡವೀರಶೆಟ್ಟಿಯ ಕೂಡ್ಯ

ಸಿದ್ದಿಯನ್ನು ಕರೆದುಕೊಂಡು ಬಂದಿರುವುದಾಗಿ ಮತ್ತೆ ಹೇಳಿದ ದೊಡ್ಡವೀರಶೆಟ್ಟಿಗೆ ಸ್ವಲ್ಪ ಜೀವ ಬಂದಂತಾಯಿತು. ಈರ್ವರೂ ಪಡಸಾಲೆಗೆ ನಡೆದರು. ದೊಡ್ಡವೀರಶೆಟ್ಟಿ ಹೆಂಡತಿಯು "ಮಗ ಒಳ್ಳೆಯವನು ಒಳ್ಳೆಯವನೆಂತ ಅಂತಾ ಇದ್ದುದಕ್ಕೆ ಅನುಭವಿಸಲಿ ಹೇಳು ಅಂತ ಗೊಣಗುಟ್ಟುತ್ತಿದ್ದಳು. ನಾಗಣ್ಣ ತನ್ನ ಭಾಗದ ಕಿರುಮನೆಯಲ್ಲಿ ಹಾಸಿ ಮಲಗಿಕೊಂಡಿದ್ದವನು ಒಂದೇ ಸಮನೆ ಕೆಮ್ಮುತ್ತಿದ್ದಾನೆ. ಅವನ ಹೆಂಡತಿಯು ಗಂಡನ ಪಕ್ಕಕ್ಕೆ ಕುಳಿತು ಕೊಂಡು ಉಪಚರಿಸುತ್ತಿದ್ದರೂ ನಿಗಾಮಾತ್ರ ಈಕಡೆಗೇನೆ. "ಈ ಮನೇಲೆಲ್ಲ ಇದೇ ಆಗೋಯಿತು....ಹೇಳೋರಿಲ್ಲ ಕೇಳೋರಿಲ್ಲ" ಹೀಗೆ ಹೆಂಡತಿ ಅಂದರೆ ನಾಗಣ್ಣ ಕೆಮ್ಮು ತಡೆದುಕೊಂಡು "ಯಾರು ಏನಾದರೂ ಮಾಡಿಕೊಳ್ಳಲೇಳು....ಅದರಿಂದ ನಿನಗೂ ನನಗೂ ಆಗಬೇಕಾಗಿರುವುದೇನು." ಎಂದು ಹೇಳಿದ. ಒಳಗಡೆ ಒಳತೊಟ್ಟಿಯಲ್ಲಿ ಕೈಕಾಲು ಮುಖತೊಳೆದುಕೊಳ್ಳಲು ತಮ್ಮಯ್ಯ ತೊಟ್ಟಿಗಿಳಿದಿದ್ದಾನೆ. ಹೆಂಡತಿಯು ಕೈನಲ್ಲಿ ಚಂಬಿಡಿದು ತೊಟ್ಟಿ ಕಲ್ಲಮೇಲೆ ನಿಂತುಕೊಂಡು ಗಂಡನಕೈಗೆ ನೀರು ಹಾಕುತ್ತಿದ್ದಾಳೆ. ತಮ್ಮಯ್ಯನನಿಗೆ ಕೈಕಾಲು ಮುಖ ತೊಳೆಯುವ ಕಡೆಗಿಲ್ಲ. ಈ ಪಡಶಾಲೆಗೆ ನಡೆದ ಇಬ್ಬರ ಕಡೆಗೇನೆ ಅವನ ನಿಗಾನು ಕೂಡ. "ಸೂಳೆ ಮಕ್ಕಳಿಗೆ ಜೈಲ್ ಆಗೋಗುತ್ತೆ....ಜೈಲು!" ಎಂದ ಹೆಂಡತಿ ಇದ್ದವಳು "ನಿಮಗೇನಾಗಬೇಕು ಅದರಿಂದ, ಜೈಲಾದರೆ ಅನುಭವಿಸುತ್ತಾರೆ....ನಿಮ್ಮ ಪಾಡಿಗೆ ನೀವು ಮುಖ ತೊಳೆದು ಕೊಂಡು, ಮಡಿ ಉಟ್ಟುಕೊಂಡು ಶಿವಪೂಜೆಮಾಡಿ ನಡೆಯಿರಿ. ಎಂದು ಸ್ವಲ್ಪ ಬಿರುಸಾಗಿಯೇ ಮಾತನಾಡಿದಳು. ಗಂಗಾದರಪ್ಪ ಇನ್ನೂ ಅಂಗಡಿಯನ್ನು ಪೂರ್ಣವಾಗಿ ಮುಚ್ಚಿರಲಿಲ್ಲ. ಒಂದೇ ಒಂದು ಸರಳುಗೆಯನ್ನು ತೆಗೆದುಕೊಂಡು ಲೆಕ್ಕನೋಡುತ್ತಾ ಕುಳಿ

ತಿದ್ದ. ದೊಡ್ಡವೀರಶೆಟ್ಟಿ, ಸುಬ್ಬಣ್ಣ ಇಬ್ಬರೂ ಸೇರಿಕೊಂಡು ತಮ್ಮ ಮನೆಮುಂದೆ ಬಲಗಡೆಗೆ ನಿಲ್ಲಿಸಿದ್ದ ಕಾಲಿ ಬಂಡಿಯನ್ನ ಭಾವಿಮುಂದಕ್ಕೆ ಎಳೆದು ನಿಲ್ಲಿಸಿದರು. ಇದರಿಂದ ಗಂಗಾಧರಪ್ಪನ ಪಡಸಾಲೆಗೆ ಸ್ವಲ್ಪ ಮರೆಯಾಯಿತೆಂದು ಅವರು ತಿಳಿದರೇನೊ. ಸುಬ್ಬಣ್ಣ ಮಾದಪ್ಪನ ಮನೆಗೆಹೋಗಿ ವಿಷಯವನ್ನೆಲ್ಲ ತಾಯಿ ಮಗಳ ಕೂಡ ತಿಳಿಸಿದ. ಮಗುವನ್ನು ಮಾತ್ರ ಮೊದಲು ಮಲಗಿಸಿಬಿಡುವುದಕ್ಕೆ ಹೇಳಿದ. ತಾಯಿಯು ಯಾವ ರೀತಿಯಲ್ಲಿ ಸುಬ್ಬಣ್ಣ ಹೇಳಿರುವ ಮಾತುಗಳನ್ನೆಲ್ಲ ಕಿವಿಗೊಟ್ಟುಕೇಳಿದ್ದಾಳು. ಕೇಳಿದ್ದರೂ ಸಾಧ್ಯವಿಲ್ಲ. ಆತ್ಮ ಹತ್ಯವನ್ನು ಮಾಡಿಕೊಳ್ಳು ವಂತಿಲ್ಲ. ಅವಳ ಸ್ಥಿತಿಯು "ಸೀಗೆಯೊಳಗಣ ಬಾಳೆ" ಅನ್ನು ತ್ತಾರಲ್ಲ ಹಾಗಾಗಿದೆ. ಸುಬ್ಬಣ್ಣ ಪಡಸಾಲೆಯ ಕೊನೆಗೆ ಹೋಗಿ ಗೋಡೆ ಹಿಡಿದುಕೊಂಡು ಓಣಿಯಲ್ಲಿ ಇಣುಕಿ ನೋಡಿದನು. ಸಿದ್ದಿಯು ಬಂದಳು ಅವಳನ್ನು ಆಕಡೆಯಿಂದಲೆ ಪಡಸಾಲೆಗೆ ಹತ್ತಿಸಿಕೊಂಡು ಒಳಕ್ಕೆ ಕರೆದುಕೊಂಡುಹೋದನು. ಗಂಗಾ ಧರಪ್ಪನು ಲೆಕ್ಕನೋಡುತ್ತಾ ಕುಳಿತಿದ್ದರೂ ಸಹ ಲಕ್ಷ್ಯವಿಲ್ಲ ಮಾದಪ್ಪನ ಮನೆಯ ಕಡೆಗೇ ಇದ್ದಿತು. ಸಿದ್ದಿಯು ತಾಯಿ ಮಗಳನ್ನು ಏನೇನೋ ಕೇಳಲು ಷುರುಮಾಡಿಳು. ಮಾದಪ್ಪನ ಮಗಳನ್ನ ಸುಬ್ಬಣ್ಣ,ದೊಡ್ಡವೀರಶೆಟ್ಟಿ ಅಲ್ಲೇ ಇದ್ದುದರಿಂದ ಅವಳು ನಾಚಿದಳು ಹೆಂಗಸರು ಕಿರುಮನೆಗೆಹೋದರು. ಹಜಾರದಲ್ಲಿ ಗೋಡೆ ಒತ್ತಿಗಾದಂತೆ ಹಾಸಿದ್ದ ಚಾಪೆಯಮೇಲೆ ಮಗು ಮಲಗಿ ದ್ದಿತು. ದೊಡ್ಡ ವೀರಶೆಟ್ಟಿ, ಸುಬ್ಬಣ್ಣ ಹಜಾರದಲ್ಲಿಯೇ ಉಳಿದರು ಬೀಡಿ ಹಚ್ಚಿಕೊಂಡು ಸೇಯುತ್ತ ತೊಟ್ಟಬಾಯಲ್ಲಿ ಕುಳಿತರು. ಕಿರುಮನೆಯಲ್ಲಿ ಎದುರುಗೋಡೆಗಾದಂತೆ ನಾಲ್ಕು ಕಾಲಿನ ದೊಡ್ಡ ಮಣೆ (ಮಂಚದಂತೆ)ಅದರಮೇಲೆ ತಲೆಗೆ ಒಂದು ದಿಂಬುಕೊಟ್ಟು

ಮಾದಪ್ಪನ ಮಗಳನ್ನು ಹುಟ್ಟಿದ ನಿರ್ವಾಣದಲ್ಲಿ ಅಂತರಕವಾಗಿ ಮಲಗಿಸಿದರು. ಸಿದ್ದಿಯು ಹೊರಗೆ ಬಂದು ಪಡಸಾಲೆಗೆ ನಡೆದಳು ಸುಬ್ಬಣ್ಣನೂ ಹಿಂಬಾಲಿಸಿದನು. ಪಡಸಾಲೆ ಹತ್ತುವಾಗ ಪಡಸಾಲೆ ಕಲ್ಲಮೇಲೆ ತೊಪ್ಪೆ (ಸಗಣಿ) ಯನ್ನು ಇರಿಸಿಬಂದಿದ್ದಳು. ಅದನ್ನು ತೆಗೆದುಕೊಂಡು ಪುನಃ ಒಳಕ್ಕೆ ನಡೆದಳು. ಸುಬ್ಬಣ್ಣನು " ಅದೇ ನಮ್ಮ ಅದು ನೀನು ತೆಗೆದುಕೊಂಡದ್ದು " ಅಂದ "ಎಮ್ಮೆ ತೊಪ್ಪೆ ಕಣ್ ಸುಬ್ಬಣ್ಣ " ಎಂದವಳೆ ಒಳಗಡೆ ಹೊರಟುಹೋದಳು. ಸುಬ್ಬಣ್ಣನು ಪಡಸಾಲೆಯಲ್ಲಿಯೇ ಬೀಡಿ ಸೇಯುತ್ತ ನಿಂತು ಕೊಂಡು ಗಂಗಾದರಪ್ಪ ಇನ್ನೂ ಅಂಗಡಿ ಬಾಗಿಲು ಹಾಕೇ ಇಲ್ಲ. ದೀಪ ಉರಿಸಿಕೊಂಡು ಲೆಕ್ಕ ನೋಡುತ್ತಲೇ ಇದ್ದಾನೆ. ಗಂಗಾ ದರಪ್ಪ ಏನಾದರು ಮಾತನಾಡಿಸಿಬಿಟ್ಟನು ! ಎಂದುಕೊಂಡು ಸುಬ್ಬಣ್ಣನು ಒಳಗೆ ಹೋಗಿ ಬಾಗಿಲು ಹಾಕಿಕೊಂಡ.

ಸುಬ್ಬಣ್ಣಿ ದೊಡ್ಡವೀರಶೆಟ್ಟಿ ಇಬ್ಬರೂನು ತೊಟ್ಟಿ ಬಾಯಲ್ಲಿ ಕುಳಿತಿದ್ದರು ಅಲ್ಲಿಗೇ ಹೋದಳು. ಸುಬ್ಬಣ್ಣಯಿದ್ದವನು 'ಏನಾಯ್ತಮ್ಮಾ ?' ಅಂದ. 'ಆಯ್ತದೆ ಸುಮ್ಮನಿರು ಸುಬ್ಬಣ್ಣ .... ನೀಯಾಕೆ ಇಷ್ಟೊಂದು ಗಾಭರಿ ಪಡುತ್ತೀಯ .... ಮದ್ದು ಕುಡಿದ ತಕ್ಷಣಾನೆ ಯಾರೂ ಎದ್ದು ಕುಳಿತುಕೊಳ್ಳುವದಿಲ್ಲ' ಎಂದಳು ಸಿದ್ದಿ.

ಕಿರುಮನೆಯಲ್ಲಿ ಮಾದಪ್ಪನ ಹೆಂಡತಿಗೆ ಮಗಳನ್ನು ನೋಡಿ ಎಲ್ಲೂ ಇಲ್ಲದ ದುಃಖ ಬಂದಿತು. ಕಣ್ಣಿನಲ್ಲಿ ಗಳಗಳ ಎಂದು ಒಂದೇ ಸಮನೆ ಕಣ್ಣೀರು ಕಿಳ್‌ಹರಿಯಿತು. ಇವಳನ್ನು ಹೊತ್ತು ಹೆತ್ತು ಸಾಕಿ ಸಲಹಿ ಮದುವೆಮಾಡಿ ನೋಡಬೇಕು ಅಂದರೆ ಶಿವ ಅದಾಬಾಯಿಗೆ ಮಣ್ಣಾಕಿದ. ಗಂಡ ಸತ್ತಮೇಲೆ ಮನೆಗೆ ಕರೆದು ಕೊಂಡು ಬಂದೆವಲ್ಲ....ಏನೊ 'ನನ್ನ ಹಣೇಬರಹ ಹೀಗಾಯಿತು' ಅಂದುಕೊಂಡು, ಇದ್ದ ಒಂದು ಹೆಣ್ಣುಮಗುವನ್ನೆ ನೋಡಿಕೊಂಡು

‘ಶಿವನೇ ಗುರುವೇ’ ಅಂತ ಕಾಲಹಾಕಿ ಕಣ್ಣುಮುಚ್ಚಿಕೊಳ್ಳದೆ.... ಇದೇ ಇವಳು ಮಾಡುವುದು! ಇದು ಯಾವ ಹಣೇಬರಹ ಹೀಗೆ ಬರೀ ಬೆತ್ತನೆ. ಇಪ್ಪತ್ತನಾಲ್ಕು ಗಂಟೆಕಾಲವೂ ಮಲಗಿರೋಕೆ ನಾನು ಇನ್ಯಾವ ಪುಣ್ಯ ಸಂಪಾದನೆ ಮಾಡೋದಿಕ್ಕೋಸ್ಕರ ಇದನ್ನೆಲ್ಲ ನೋಡಬೇಕೊ ನಾನು ಬೇರೆ ಕಾಣೆ. ಹೀಗೆ ಏನೇನೋ ಹೇಳಿಕೊಂಡು ಸಂಕಟ ಪಟ್ಟಳು. ಇದನ್ನೆಲ್ಲ ಮಗಳು ನೋಡದೆ ಏನಿಲ್ಲ ಎಲ್ಲವನ್ನೂ ನೋಡುತ್ತಲೇ ಮಲಗಿದ್ದಳು

೧೨

ಕಳೆದ ರಾತ್ರಿ ಸುಮಾರು ಊಟದ ಹೊತ್ತು ಮೀರಿತ್ತು, ಆವಾಗ ಮಾದಪ್ಪನ ಮಗಳು ಕಿರುಮನೆಗೆ ಹೋಗಿ ಮಂಚದ ಮೇಲೆ ನಿರ್ವಾಣದಲ್ಲಿ ಅಂತಃಕವಾಗಿ ಮಲಗಿಕೊಂಡವಳು ಇಂದು ರಾತ್ರಿ ಊಟದ ಹೊತ್ತಾಗುತ್ತಾ ಬಂದರೂ ಮೇಲೆದ್ದಿಲ್ಲ. ತಾಯಿಯು ಪಕ್ಕದಲ್ಲೆ ತಲೆಗೆ ಕೈಕೊಟ್ಟುಕೊಂಡು ಕುಳಿತಿದ್ದಾಳೆ. ಹೊರಗಡೆ ಹಜಾರದಲ್ಲಿ ತೊಟ್ಟಿಬಾಯಲ್ಲಿ ದೊಡ್ಡವೀರಶೆಟ್ಟಿ, ಸುಬ್ಬಣ್ಣ ಮತ್ತು ಸಿದ್ದಿ ಕುಳಿತಿದ್ದರು. ಮಾದಪ್ಪನ ಹೆಂಡತಿಯು ಒಳ ಬಾಗಿಲಿಗೆ ಬಂದು ಸಿದ್ದಿಯನ್ನು ಕೂಗಲು ಸಿದ್ದಿಯು ಎದ್ದು ಹೋದಳು. ಹೋದವಳೊಂದಿಗೆ ‘ಏನಮ್ಮ ನಿನ್ನೆ ರಾತ್ರಿ ಮಲಗಿಕೊಂಡವಳು ಇನ್ನೂ ಏನೂ ಕಾಣೆ’ ಅಂದಳು. ಸಿದ್ದಿಯು ಆಕೆಯ ಕಡೆಗೆ ತನ್ನ ಕೈಗಳನ್ನು ತೋರಿ “ಅಲ್ಲ ಕಣವ್ವಾ, ಈ ಕೈಯಲ್ಲಿರುವ ಬಳೇನ ತೊಟ್ಟುಕೊಂಡಿದ್ದು ಆಗಿಹೋಯಿತು. ಈವಾಗ ಅದನ್ನು ಕಳೆಯಬೇಕಾದರೆ ಎಷ್ಟು ಕಷ್ಟವಿದೆ. ಹಾಗೂ ಬಳೆ ಒಡೆದು ಹೋಗುತ್ತದೆ, ಅಂಥಾದ್ದರಲ್ಲಿ ಇದು ಒಳಗಿನ ಕೆಲಸ .... ಬಹಳ ಕಷ್ಟ ಅದೆ.” ‘ಇನ್ನೂ ಏನೂಕಾಣೆ, ಏನೂಕಾಣೆ’ ಅಂದರೆ .... ಆಗಬೇಕೊ ಬೇಡವೊ, ಒಳಗಿನ ಕಲಾಂಸ (ಕಲ್ಮಷ) ವೆಲ್ಲ ಹೊರಕ್ಕೆ ಬಂದು ಆಮೇಲೆತಾನೆ .... ಅದು ಬರುವುದು ....

ಹೋಗಲಿ ಸರ್ರಂತ ಒಂದು ಗಳಾಸಿ (ಗ್ಲಾಸು) ನಷ್ಟು ಜೀರಿಗೆ ಕಷಾಯ ಕಾಯಿಸಿಕೊಂಡು ಬಾಹೋಗವ್ವ" ಎಂದು ಹೇಳಲು ಆಕೆಯು ಅಡಿಗೆಮನೆಗೆ ಹೋದಳು .... ಆವಳು ಕಾಯಿಸಿಕೊಂಡು ಬರುವವರೆಗೂ ಸಿದ್ದಿಯು ಕಿರುಮನೆಯಲ್ಲಿಯೇ ಮಾದಪ್ಪನ ಮಗಳ ಪಕ್ಕದಲ್ಲೆ ಕುಳಿತಿದ್ದಳು. ಮಾದಪ್ಪನ ಹೆಂಡತಿಯು ಜೀರಿಗೆ ಕಷಾಯವನ್ನು ತಂದಳು. ಸಿದ್ದಿಯು ಮಾತಿನಂತೆ ಮಗಳ ತಲೆದೆಸೆಯಲ್ಲಿ ಕುಳಿತುಕೊಂಡು ಮಲಗಿದ್ದ ಮಗಳನ್ನು ಮೇಲೇಳಸದೆ ಹಾಗೆಯೇ ಮಲಗಿದ್ದಂತೆಯೇ ಕಷಾಯವನ್ನು ಕುಡಿಸಿದಳು ಸಿದ್ದಿಯು ಎದ್ದು ಹೊರಗೆ ಬಂದು ಸುಬ್ಬಣ್ಣ, ದೊಡ್ಡವೀರಶೆಟ್ಟಿ ಕೂತಿದ್ದ ಕಡೆ ಬಂದು ಕುಳಿತಳು.

ಸುಬ್ಬಣ್ಣ—ಅದೇನು ಮಾದಪ್ಪನ ಹೆಂಡತಿ ತೆಗೆದುಕೊಂಡು ಬಂದದ್ದು ಕಿರುಮನೆಗೆ?

ಸಿದ್ದಿ—ಜೀರಿಗೆ ಕಷಾಯ .... ಅವಳಿಗೆ ಕುಡಿಸುವುದಕ್ಕೆ.... ಇನ್ನೇನು ಒಂದೆರಡು ಗಂಟೆ ಟೇಮಿ(time)ನ ಮಾತು....ಅಷ್ಟೆ.

ಬೆಂಗಳೂರು ಮಾದಪ್ಪನ ಮಗಳು ಕದ್ದು ಬಸುರಾಗಿರುವುದು ಬೊಮ್ಮನಹಳ್ಳಿ ಊರಿಗೆ ಊರೆ ಕೂಗುತ್ತಿರುವಾಗ ಎದರು ಮನೆ ಗಂಗಾಧರಪ್ಪನಿಗೆ ಅದು ತಿಳಿಯದೆ ಇದೆಯೇ? .... ಅವನಿಗೆ ಎಲ್ಲವೂ ಗೊತ್ತು ಹಿಂದಿನ ರಾತ್ರಿ ಅವನು ಒಂದೇ ಒಂದು ಕದವನ್ನು ತೆಗೆದುಕೊಂಡು ದೀಪ ಉರಿಸಿಕೊಂಡು ಅಂಗಡಿಯಲ್ಲಿ ಲೆಕ್ಕ ನೋಡುವ ನೆಪದಲ್ಲಿ ಮಾದಪ್ಪನ ಮನೆಯ ಚಟುವಟಿಕೆಗಳನ್ನೆಲ್ಲ ಗಮನಿಸಿದ್ದನು. ಮಾದಪ್ಪನ ಮಗಳಿಗೆ ದಿನ ತುಂಬಿರುವುದರಿಂದ ಹೆರಿಗೆಗಾಗಿ ಸೂಲಗಿತ್ತಿಯನ್ನು ಕರೆದುಕೊಂಡು ಬಂದಿರುವುದಾಗಿ ತಿಳಿದನು. ಬೆಳಿಗ್ಗೆ ಎದ್ದು ಕಟ್ಟೆಗೆ ಹೋದಾಗ ಅಲ್ಲಿ ದಾರಿಉದ್ದಕ್ಕೂ, ಆಮೇಲೆ ಊರಿನಲ್ಲೂ ಆ ಜಾತಿ ಈ ಜಾತಿಯವರೆನ್ನದೆ ತನಗೆ

ಬೇಕಾದವರೊಂದಿಗೆಲ್ಲ ಸಂಗತಿಯನ್ನು ಅರುಹಿದನು. ಅವರಲ್ಲಿ ಕೆಲವರು ಗಂಗಾದರಪ್ಪ ಅಂಗಡಿಯ ಬಾಗಿಲು ತೆಗೆದ ಮೇಲೆ ಅಲ್ಲಿ ಸೇರಿವರು .... ಮಾದಪ್ಪನ ಮನೆ ಒಳಗಡೆ ಸೂಲಗಿತ್ತಿ ಇದ್ದಾಳೆ. ಹೆಂಗೆ ಆದವೇಲೆ ಮೊಗು ಉಳಿಯಲಿ, ಅಳಿಯಲಿ ಅದನ್ನು ಏನಾದರೂ ಮಾಡಲಿ ಇವಳು ಮಾತ್ರ ಆಚೆಗೆ ಬಂದೇ ಬರಬೇಕು. ಆವಾಗ ಅವಳನ್ನು ಹಿಡಿದುಕೊಂಡು ನ್ಯಾಯ ಹಾಕಬೇಕು. ಈ ಯೋಚನೆಯನ್ನು ಮಾಡಿಕೊಂಡು ಗುಂಪು ಗಂಗಾದರಪ್ಪನ ಅಂಗಡಿ ಪಡಸಾಲೆ ಬಿಟ್ಟು ಅಳ್ಳಾಡಲೇ ಇಲ್ಲ. ಒಬ್ಬ ತಿಂಡಿಗೋ ಊಟಕ್ಕೋ ಹೋಗಿದ್ದು ಬಂದಮೇಲೆ ಇನ್ನೊಬ್ಬ ಹೋಗೋನು. ಅಂತು ಹೆಣ ಕಾಯ್ದ ಹಾಗೆ ಕಾಯ್ದುಕೊಂಡು ಕುಳಿತರು. ರಾತ್ರಿ ಎಲ್ಲರೂ ಪಡಸಾಲೆಯಲ್ಲಿಯೇ ಮಲಗಿಕೊಂಡರು. ಗಂಗಾದರಪ್ಪನಿಗೆ ಹಳೆಯ ಜಿದ್ದನ್ನು ತೀರಿಸಿಕೊಳ್ಳಲು ಸರಿಯಾದ ಸಮಯ ದೊರಗಿದಂತಾಯಿತು. ಇದನ್ನೆಲ್ಲ ಚಿಕ್ಕ ಜುಂಜಪ್ಪನ ಮಕ್ಕಳು ಗಮನಿಸದೆಯೇ ಇರಲಿಲ್ಲ. ಆದರೆ "ಯಾತಕ್ರಯ್ಯ .... ಎಲ್ಲ ಗುಂಪು ಸೇರಿದ್ದೀರಿ?" ಅಂತ ಕೇಳುವುದಕ್ಕಾಗುತ್ತದೆಯೆ ಅವರನ್ನ ಕೇಳಬಹುದೇ? ಕೇಳಿದರೆ ಅವರ ಐಬನ್ನು ಅವರಾಗಿಯೇ ತೋರಿಸಿಕೊಟ್ಟಂತಾಗುವುದಿಲ್ಲವೆ? ದೊಡ್ಡ ವೀರಶೆಟ್ಟಿಗಂತು ಜಂಗಾಬಲ ಬಿದ್ದುಹೋಯಿತು. ಅವನ ಪಾಲಿಗೆ ಸರ್ವರೀತಿಯಲ್ಲೂ ಸುಬ್ಬಣ್ಣನೇ ರಕ್ಷಕನೆಂದು ನಂಬಿಕೊಂಡಿದ್ದನು.

ಸಮರಾತ್ರಿ ಸಮಯ ಕಿರುಮನೆ ಒಳಬಾಗಿಲಿಗೆ ಬಂದು ಸುಬ್ಬಣ್ಣನನ್ನು ಕರೆದಳು. ಸುಬ್ಬಣ್ಣನು ಹೋಗಲು ಗಂಡು ಮಗು ಜನನವಾಗಿರುವುದಾಗಿಯೂ, ಗಂಡಿನಗೂಳಿ ಇದ್ದ ಹಾಗೆ ಇರುವುದೆಂದೂ ತಿಳಿಸಿ .... ಏನು ಮಾಡಬೇಕೆಂದು ಕೇಳಿದಳು. ಸುಬ್ಬಣ್ಣ ಏನು ಉತ್ತರ ಕೊಟ್ಟಾನು! ಸುಬ್ಬಣ್ಣನೇ ಅಲ್ಲ

ಯಾರು ತಾನೆ ಏನೊಂದು ಉತ್ತರವನ್ನು ಕೊಡುವುದಕ್ಕಾದೀತು! ಸಿದ್ದಿಯ ಮಾತುಗಳನ್ನು ಕೇಳಿ ಸುಬ್ಬಣ್ಣನು ದಿಗ್ಭ್ರಾಂತನಾಗಿ ನಿಂತುಕೊಂಡನು.

ಮಾದಪ್ಪನಿಗೆ ಒಬ್ಬಗಂಡು ಮಗ ಅನ್ನಿಸಿಕೊಳ್ಳುವವನು ಇದ್ದಿದ್ದರೆ ಗಂಗಾದರಪ್ಪ, ತಮ್ಮಯ್ಯ, ದೊಡ್ಡವೀರಶೆಟ್ಟಿ ಇವರೆಲ್ಲ ಮಾದಪ್ಪನ ಮನೆ ಮೇಲೆ ತಮ್ಮ ಕೈವಾಡ ನಡೆಸಲಾಗುತ್ತಿತ್ತೆ? ಎಂದಿಗೂ ಇಲ್ಲ. ಮಾದಪ್ಪನೇ ಎಷ್ಟೋಸಲ ಮಗಳನ್ನು ಕುರಿತು 'ನೀನಾದರೂ ಗಂಡಾಗಿದ್ರೆ ಚ್? ಹೀಗೆಂದು ಮೊಚಗುಟ್ಟಿದ್ದ. ಬೇರೆಯವರ ಸಂಗಡಾಲೂ 'ದೇವರು ನಮಗೆ ಒಂದು ಗಂಡು ಮಗುವನ್ನೂ ಕೊಡಲಿಲ್ಲ .... ಏನೂ ಬೇಡ ಈ ಹೆಣ್ಣು ಮಗಳಾದರೂ ಗಂಡು ಮಗನಾಗಿದ್ದರೆ ಸಾಕಾಗಿತ್ತು' ಹೀಗೆಂದು ಬೇಕಾದವರ ಎದುರಿಗೆಲ್ಲ ಬೇಕಾದಷ್ಟು ಸಲ ಹೇಳಿಕೊಂಡಿದ್ದ. ಇವಳು ಗಂಡನನ್ನು ಕಳೆದುಕೊಂಡು ವಿಧವೆಯಾದಮೇಲಂತೂ ದಿನಕ್ಕೆ ಒಂದು ಹತ್ತುಸಲ ಅದೇ ಮಾತನ್ನೇ ಹೇಳುತ್ತಿದ್ದ. 'ಹ್ಯಾಗೂ ಗಂಡಸತ್ತ ಮುಂಡೆಯಾಗಿ ಮಗಳು ಮನೆಗೆ ಬಂದಳು .... ಗಂಡ ಮಗನಾಗಿದ್ದಿದ್ರೆ .... ಚ್' ಮೊಮ್ಮಗಳನ್ನು ನೋಡಿ ಅದನ್ನು ಬಾಚಿ ತಬ್ಬಿಕೊಂಡು ಹೋಕ್ಕೊಳ್ಳಿ ಯಾವುದೂ ಬೇಡ, ನೀನಾದರೂ ಗಂಡಾದೆಯಾ? ಎಂದು ಹೇಳಿಕೊಂಡು ಸಂಕಟಪಡುತ್ತಿದ್ದ ಈವತ್ತು ಮಾದಪ್ಪನ ಮಗಳೆ --- ಒಂದು ಗಂಡು ಮಗುವನ್ನು ಹಡೆದಿದ್ದಾಳೆ --- ಸಿದ್ದಿ ಒಳಬಾಗಿಲಿಗೆ ಬಂದು ಸುಬ್ಬಣ್ಣನನ್ನು ಕರೆದು 'ಏನು ಮಾಡಬೇಕು?' ಎಂದು ಕೇಳುತ್ತಿದ್ದಾಳೆ.

ಗರತಿಗೆ ಹುಟ್ಟುವ ಮಗು ಒಂದು ತರಹ. ಗುಡ್ಸಟ್ಟೇಗೆ ಹುಟ್ಟುವ ಮಗೂ ಇನ್ನೊಂದು ತರಹವೆ? ಸಿದ್ದಿ ಒಳಬಾಗಿಲಿಗೆ ಬಂದು ಸುಬ್ಬಣ್ಣನನ್ನು ಕರೆದು 'ಏನು ಮಾಡಬೇಕು' ಎಂದು

ಕೇಳುವ ಮಗು. ಏತಕ್ಕಾಗಿ! .... ಯಾರ ಅಪರಧಕ್ಕಾಗಿ! ಆ ಮಗುವಿನ ಅಪರಾಧಕ್ಕಾಗಿ ಅಲ್ಲ. ತಂದೆ ತಾಯಿಗಳು ಶ್ರೀಮಂತ ಬಡವ, ವಿದ್ಯಾವಂತ, ಅವಿದ್ಯಾವಂತ, ಒಳ್ಳೆಯವನು, ಕೆಟ್ಟವನು, ಯಾವನೋ ಒಬ್ಬನಿಗೆ ಒಪ್ಪಿ ಲಗ್ನ ಮಾಡಿದರಲ್ಲ ಅವನಿಗೆ ಹುಟ್ಟಿದ ಮಗುವಲ್ಲ ಇದು. ಹಾಗೆ ಯಾರಿಗೆ ಮಂಬತ್ತು ಕಂಬ ಕುಂಭ ಸಾಕ್ಷಿಯಾಗಿ, ಅಗ್ನಿ ಸಾಕ್ಷಿಯಾಗಿ, ಗುರುಹಿರಿಯರ ಸಾಕ್ಷಿಯಾಗಿ ತಾಳಿಕಟ್ಟಿದ ಲಗ್ನವಾಗಿತ್ತೋ ಆತ ಸತ್ತುಹೋದ. ಅವನಿಂದಾಗಿ ಒಂದು ಹೆಣ್ಣು ಮಗುವಿದೆ. ಆ ವಂಶಕ್ಕೆ ಹೆಣ್ಣೂ ಅದೆ, ಗಂಡೂ ಅದೇನೆ. ಗಂಡಸತ್ತ ಮುಂಡೆಯಾದವಳು, ಮನೆಯಲ್ಲಿ ಅಪ್ಪ ಇಲ್ಲ, ಕೈಹಿಡಿದ ಗಂಡನಿಲ್ಲ, ಉಣ್ಣುವುದಕ್ಕೆ ತಿನ್ನುವುದಕ್ಕೆ ದೇವರು ಯಾವ ಭಾಗದಲ್ಲೂ ಕಮ್ಮಿ ಮಾಡಿಲ್ಲ ಅಂದುಕೊಂಡು, ತಿಂದ ಹಿಟ್ಟು ಇರಲಾರದೆ, 'ತನ್ನ ಇಚ್ಛೆ ಬಡ್ಡಿ ಹದಿನಾರು ಬಾಳು ಬಿದ್ದಳೂ' ಅನ್ನುವಂತೆ ಯಾರ ಹತ್ತಿರಾನೊ ಹೋಗಿ, ಒಂದು ಗಂಡು ಮಗು ಹೆತ್ತರೆ ಅದು ಯಾರ ವಂಶದ ಹೆಸರು ಹೇಳುತ್ತದೆ. ಅಪ್ಪನ ತೇಜಸ್ಸೇ ಮಗನಲ್ಲಿ ಬರುತ್ತದಾಗಿ ಇದು ಯಾರ ವಂಶದ ಕೊನೆಯಾಗುತ್ತದೆ. 'ಸೂಳೆಗೆ ಹುಟ್ಟಿದ ಆ ಕೂಸಿಗೆ ಅಪ್ಪನ ಹೆಸರೊ ಅಮ್ಮನ ಹೆಸರೊ' ಎಂಬಂತೆ, ಈ ಗಂಡು ಮಗುವಿಗೆ ಮಾದಪ್ಪನ ಮಗಳೇ ತಾಯಿಯಾದರೂ ಕೂಡ ತಂದೆಯಾರೋ? ಅವಳೇ ಹೇಳುತ್ತಾಳೆ ದೊಡ್ಡವೀರಶೆಟ್ಟಿ ಮತ್ತು ಇಬ್ಬರೊಂದಿಗೂ ತಾನು ಉಂಟೆಂದು .... ಇನ್ನು ಹ್ಯಾಗೆ ತಾನೆ ಅದು ಯಾರ ಮಗುವೆಂದು ಹೇಳಲಾಗುವುದು? ತಾಯಿಯು ಪವಿತ್ರವಾಗಿರಲಿ ಅಪವಿತ್ರವಾಗಿರಲಿ ಮಗುವಿಗೆ ಅವಳೇ ತಾಯಿಯೆನಿಸುವಳು, ಗಂಡಸು ಮಾರ್ಗದಲ್ಲೇ ಇರಲಿ, ಅಪಮಾರ್ಗದಲ್ಲೇ ಇರಲಿ, ಹೆಂಡತಿಯಾದವಳು ಪತಿವ್ರತೆಯಾಗಿದ್ದರೆ ಪಾಪದ ಸಂತಾನವಾಗುವುದಿಲ್ಲ.

ಹೆಂಗಸು ಪತಿವ್ರತೆಯಾಗಿ ಬಾಳಲು ಗಂಡು ಗುಂಪು ನೇರ ವಾಗಿರಬೇಕು

ಈವಾಗ ಮಾದಪ್ಪನ ಮಗಳು ದೊಡ್ಡವೀರಶೆಟ್ಟಿ, ಅವನ ಮಗ ಇಬ್ಬರಕೂಡಿಯೂ ತಾನು ಉಂಟೇದು ಒಪ್ಪಿಕೊಂಡಾಗ್ಲೂ, ಆ ಇಬ್ಬರಲ್ಲಿ ಯಾರೊಬ್ಬರೂ ಈ ಕೂಸು ತಮ್ಮದೆಂದು ಒಪ್ಪಿಕ್ಕೊಳ್ಳಲು ಮುಂದೆ ಬರುವುದಿಲ್ಲ. ಈಕೆಯಾದರೊ ತನ್ನ ಕೂಸೆಂದು ಎತ್ತಿಕೊಂಡು ಉಳಿಯುವಂತಿಲ್ಲ. ಈನಾಗ ಏನು ಮಾಡಬೇಕು? ಹ್ಯಾಗೊ ಡಾಕ್ಕರ್ ಮೂಲಕ ತಲೆ ತೊಳೆದುಕೊಳ್ಳೋಣ ಅಂದರೆ ದಿನ ಬೇರೆ ತುಂಬಿಹೋಗಿತ್ತು. ಅದಾಯಿತು ಬೂದಳ್ಳಿ ಸಿದ್ದಿಯನ್ನು ಕರೆದುಕೊಂಡು ಬಂದುದಾಯಿತು. ಈವಾಗ ಪಲೀಸ್ ಹೆಂಗೇನೇ ಮಾಡಿಸಿದಹಾಗಾಯಿತು. ಈವಾಗ ತಪ್ಪಿಸಿಕೊಳ್ಳೊ ಹಾಗೇನೇ ಇಲ್ಲ. ಮಾದಪ್ಪನ ಮಗಳು ದೊಡ್ಡವೀರಶೆಟ್ಟಿ ಅವನ ಮಗ ಮೂವರೂನು ಉಳಿದುಕೊಳ್ಳಬೇಕಾದರೆ ಆ ಮಗುವನ್ನು ಏನು ಮಾಡಬೇಕು ? ಉಳಿಸಿಕೊಳ್ಳುವುದೇ ಮುಗಿಸಿಬಿಡುವುದೇ ಎರಡರಲ್ಲಿ ಏನಾದರೊಂದನ್ನು ಮಾಡಲೇ ಬೇಕು .... ಇಲ್ಲ ಉಳಿಸಿಕೊಳ್ಳಲಾಗದು ಏನಾದರೂ ಮಾಡಿ ಮುಗಿಸಲೇ ಬೇಕು — ಏನು ಮಾಡಬೇಕು ?

ಮಾದಪ್ಪನ ಹೆಂಡತಿಯು ಮಗುವನ್ನು ನೋಡುವುದು ಅಳುವುದು, ನೋಡುವುದು ಅಳುವುದು ಹೀಗಾಗಿ ಕಣ್ಣೀರಿನಲ್ಲಿ ಕೈ ತೊಳೆಯುತ್ತಿದ್ದಳು. ಸುಬ್ಬಣ್ಣನು ದೊಡ್ಡವೀರಶೆಟ್ಟಿಯನ್ನು ಕರೆಯಲು ಅವನು ಕುಳಿತಿದ್ದವನು ಎದ್ದು ಬಂದನು. ಹಾಗೆ ಎದ್ದು ಬಂದವನಿಗೆ ಸುಬ್ಬಣ್ಣನು ಸಿದ್ದಿಯ ಕೈಯಲ್ಲಿದ್ದ ಮಗುವನ್ನು ತೋರಿಸುತ್ತಾ, ನೋಡಿದೆಯೇನಣ್ಣಾ....ಎಂದು ಕೇಳಿದನು.

" ಏನನ್ನ "

"ನಿನ್ನ....ನಿನ್ನ ಮಗನ ಪಾಪವನ್ನ !.... ಸಿದ್ದಿ ಕೈಯಲ್ಲಿರುವ ಪಾಪವನ್ನ !"....ನೋಡು ಗಂಡುಮಗು!... ಬದುಕಿದೆಯಂತೇ ! ....ಗಂಡಿನಗೂಳಿ ಇದ್ದ ಹಾಗಿದೆ.... ಏನು ಮಾಡಬೇಕೂ ಅಂತ ಕೇಳುತ್ತಾಳೆ....ಏನು ಮಾಡಬೇಕೂ ನೀನೆ ಹೇಳು."

ಸುಬ್ಬಣ್ಣನ ಈ ಮಾತಿಗೆ ದೊಡ್ಡವೀರಶೆಟ್ಟಿಯು ನಡುಗಿದನು ಬಾಯಿ ತೊದಲು ಹುಟ್ಟಿತು. "ನಾಯೇನ್ ಹೇಳಲಿ ಸುಬ್ಬಣ್ಣ"

"ಇನ್ನೇನು ನಾನ್ ಹೇಳ್ಳ?....ನೀನೆ ಹೇಳ್ಬೇಕು....ಈ ಪಾಪಕ್ಕೆ ಯಾರು ಕಾರಣವೊ ಅವರು ತಾನೆ ಹೇಳಬೇಕು....ನೀನು ಉಪ್ಪುತಿಂದು, ನಾನು ನೀರು ಕುಡೀಲ?....ನೀನು ಪರವಾಇಲ್ಲ ಚೆನ್ನಾಗಿ ಮಾತನಾಡುತ್ತೀಯು ಕಣಣ್ಣ....

ಅದೇನೊ ಮಾದಪ್ಪನ ಮಗಳು ನಿನ್ನನ್ನೆ ಕೇಳುವುದಕ್ಕೆ ಹೇಳಿದಳಂತೆ....ಹೀಗ್‌ಮಾಡಿ ಅಂತ ನಿನ್ನ ಬಾಯಾರ ಹೇಳಿಬಿಡು ಹೋಗಲಿ....ಅವಳು ಯಾತಕ್ಕೆ ನಿಂತಿರಬೇಕು ಮಗು ಹಿಡಿದು ಕೊಂಡು."

ದೊಡ್ಡವೀರಶೆಟ್ಟಿಯು ಏನು ಹೇಳಬಲ್ಲ. ನಿಂತುಕೊಳ್ಳ ಲಾಗಲಿಲ್ಲ ಅವನಿಂದ. ಕುಕ್ಕರ ಬಡಿದ. ಸುಬ್ಬಣ್ಣನು ಸಿದ್ದಿಯನ್ನು "ಹೋಗಲಿ ಇವನ ಕೆಲಸ ಹೀಗಾಯಿತು. ಅವಳಕೈಗೆ ಕೊಟ್ಟು ಏನ್ ಮಾಡೀಯೊ ಮಾಡು ಅನ್ನು ಹೋಗು!....ಅಂದನು. ಸಿದ್ದಿಯು ಅದೇ ಪ್ರಕಾರವಾಗಿ ಮಗುವನ್ನು ತೆಗೆದುಕೊಂಡು ಹೋಗಿ ಇದೊ ಕರೆದುಕೊಳ್ಳವ್ವ ನಿನ್ನ ಮೊಗಾನ, ಅದೇನೊ ನಿನಗೆ ಹ್ಯಾಗೆ ತೋರಿದೊ ಹಾಗಂತೆ ಮಾಡವ್ವ! ಎಂದು ಹೇಳಿ ಮಾದಪ್ಪನ ಮಗಳ ಕೈಗೆಕೊಟ್ಟಳು. ಅವಳು ಮಗುವನ್ನು ತೆಗೆದುಕೊಂಡು ತನ್ನ ಮುಖಕ್ಕೆ ಒತ್ತಿಕೊಂಡು ಮೊರ್ರೋ ಎಂದು ರೋಧಿಸುವುದಕ್ಕಾರಂಭಿಸಿದಳು. ಮಾದಪ್ಪನ ಹೆಂಡತಿಯು ಕಿರು

ಮನೆ ಮನೆಯಲ್ಲಿ ಕುಳಿತುಕೊಂಡು " ಎಂಥಾ ಸ್ಥಿತಿ ಏನಾಗಿ ಹೋಯಿತು. ಈ ಹಾಳ ಒಬ್ಬ ಹೆಣ್ರಂಡೆಯಿಂದ ಎಂದು ಅದೊಂದೇ ವಿಷಯವನ್ನು ಬಗೆ ಬಗೆಯಾಗಿ ಯೋಚಿಸಿ ಯೋಚಿಸಿ ಸಂಕಟಪಡುತ್ತಿದ್ದಳು. ಮಾದಪ್ಪನ ಮಗಳು ಹೊರ್ರ್ಯೋ ಎಂದು ರಾಗತೆಗೆಯಲು ಸುಬ್ಬಣ್ಣನು ಕಿರುಮನೆ ಒಳಗೆ ನುಗ್ಗಿ ಅವಳನ್ನ ಸಿಕ್ಕಾಪಟ್ಟೆ ಅಂದುಬಿಟ್ಟ. " ಯಾರ್ಯ್ಯಾರ ಮಾನ ತೆಗೀಬೇಕು ಅಂತ ಮಾಡಿದ್ದೀಯ ನೀನು---ಊವತ್ತು ಇಷ್ಟೊಂದ್ ಕ್ಯಾಣ್ಣರ. ತೋರಿಸುವವಳು ಆವತ್ತೇನೆ ಸ್ವಲ್ಪ ಖೃಡಾಗಿ ಇದ್ದು ಬಿಟ್ಟಿದ್ದರೆ!.... ಇಷ್ಟೆಲ್ಲ ರಾಮಾಯಣ ಯಾಕಾಗುತ್ತಿತ್ತು?....ಆವತ್ತು ಚೆನ್ನಾಗಿ ತ್ತೇನೊ!----ಈವತ್ತು ಅಳೊಹಾಗ್ ಆಯ್ತೇನೊ!....ಬಾಯಿತೆಗ್ ಗಿದ್ದೀಯ: ಹುಷಾರು! ಗಂಗಾದರಪ್ಪನ ಪಡಸಾಲೇಲಿ ಯಾರ್ಯಾರೊ ತುಂಡಾಡಿಗಳು ಗುಂಪುಕಟ್ಟಿಕೊಂಡು ಹೆಣ ಕಾಯ್ದಹಾಗೆ ಕಾಯ್ಕೊಂಡು ಮಲಗಿದ್ದಾರೆ---ಇವಳು ಇಲ್ಲಿ ಗಂಟಲು ಜೋರಾ ದೇಂತ ರಾಗತೆಗಿತಾಳೆ!...."

ಮಾದಪ್ಪನ ಮಗಳು ಕೈಗಳಲ್ಲಿ ಮಗುವನ್ನು ಸುಬ್ಬಣ್ಣನನ್ನು ಬಹಳ ಆರ್ತದೃಷ್ಟಿಯಿಂದ ನೋಡುತ್ತಾ "ಸುಬ್ಬಣ್ಣ...." ಎಂದು ಕಣ್ಣೀರು ಕಚ್ಚಿಕೊಂಡು, ಕಣ್ಣೀರು ಕಣ್ಣುಗಳಿಂದಲೇ ಸುಬ್ಬಣ್ಣ ನನ್ನು ಅತಿದೀನ ದೃಷ್ಟಿಯಿಂದ ನೋಡಿದಳು. ಸುಬ್ಬಣ್ಣನಿಗೂ ಮನ ಕರಗಿತು. ಆದರೆ ಮಗುವನ್ನು ಹೀಗೆಮಾಡು ಎಂದು ಯಾವ ಬಾಯಿಂದತಾನೆ ಹೇಳಲು ಸಾಧ್ಯ ಅವನಿಗೆ! ಧೈರ್ಯ ತಂದುಕೊಂಡು "ನೋಡಮ್ಮಾ ಸುಬ್ಬಣ್ಣ ಅಂದರೆ ಸುಬ್ಬಣ್ಣ ಏನ್ ಮಾಡಬಲ್ಲ---ನಿನ್ನ ಕಷ್ಟತಕೋ ಬಲ್ಲನೇನು?....ಎಂದಿಗೂ ಹಾಗೆ ತಿಳಿದುಕೊಳ್ಳಬೇಡ---ಯಾರಿಗೆ ಯಾರೂ ಆಗೊಲ್ಲ---ಕೆಟ್ಟು ಹೋದ ವರಿಗೆ ಪ್ರಪಂಚದಲ್ಲಿ ಯಾರೂ ಇಲ್ಲ. ನೀನು ಹೊತ್ತಹೆತ್ತ ಪಾಪ

ನಿನ್ನ ಕೈಯ್ಯಲ್ಲಿದೆ....ಸಿದ್ಧಿ ಕೊಟ್ಟಾಗ ನೀ ಬೇಡಾ ಅನ್ನಲಿಲ್ಲ ಕರೆದು ಕೊಂಡೆ....ಅದೆ ನಮ್ಮಣ್ಣ ಆಕಡೆ ನೋಡಲೂ ಇಲ್ಲ....ಇಷ್ಟರಲ್ಲೆ ತಿಳ್ಕೊ ಹುಚ್ಚೀ ಇಷ್ಟರಲ್ಲೆ ತಿಳ್ಕೊ....ಅವನೇನೆ ಈ ಮಗೂನ ಏನ್ ಮಾಡಬೇಕೂ ಅಂತ ಕೇಳಿದ್ದಕ್ಕೆ ಹೇಳಲಿಲ್ಲ....ಇನ್ನು ನಾನು ಹೇಳುತ್ತೀನಾ....ನಾನು ಹೇಳಿ ಆ ಪಾಪಕ್ಕೆ ನಾನು ಹೋಗು ತ್ತೇನಾ....ಎಲ್ಲಾದರೂ ಉಂಟೆ ಅದು ?....ಮಾಡು ಮಾಡು....ನಿನ್ನ ಕೆಲಸ ನೀನು ಮಾಡು....ನಿನಗೆ ತೋರಿದ ಹಾಗೆ ನೀನು ಮಾಡು....

ಇಷ್ಟುಹೇಳಿ ಹೊರಗೆ ಬಂದು ದೊಡ್ಡವೀರಶೆಟ್ಟಿಯ ಪಕ್ಕಕ್ಕೆ ನಿಂತುಕೊಂಡ ದೊಡ್ಡವೀರಶೆಟ್ಟಿಯು ಬಗ್ಗಿಸಿದ ತಲೆಯನ್ನು ಮೇಲೆತ್ತದೆ ಹಾಗೆಯೇ ಮುಚ್ಚಿಕೊಂಡು ಕುಳಿತಿದ್ದ ವಸ್ತ್ರದಿಂದ ಮುಖವನ್ನು.

ಸ್ವಲ್ಪ ಹೊತ್ತಿನಲ್ಲೆ ಪುನಃ ಸಿದ್ಧಿಯು ಒಳಬಾಗಿಲಿಗೆ ಬಂದವಳೆ “ ಆಯಿತುಕಣ್ ಸುಬ್ಬಣ್ಣ ” ಸುಬ್ಬಣ್ಣ ಅತ್ತ ನೋಡುತ್ತಾನೆ!.... ಅದೇ ಮಗುವನ್ನು ಬಟ್ಟೆಸುತ್ತಿ ಕೈಯಲ್ಲಿ ಹಿಡಿದಿದ್ದಳು.

“ ಜೀವ ಇದೆಯ ಮಗೂಗೆ ? ” ಎಂದು ಕೇಳಿದ ಸುಬ್ಬಣ್ಣ.

“ ಗೋಣು ಮುರಿಯಿಸಿಕೊಂಡಮೇಲೆ ಇನ್ನೆಲ್ಲಿದೆ ಜೀವ ! ” ಅಂದಳು ಸಿದ್ಧಿ.

“ ಅಯ್ಯೋ ಹೆಣ್ಣೆ, ನಿನ್ನನ್ನ ಹ್ಯಾಗಪ್ಪ ನಂಬೋದು ! ಹಜಾರ ದಲ್ಲಿ ಮಲಗಿರುವ ಆ ಹೆಣ್ಣುಮಗುವೂ ನೀನೆ ಹಡೆದದ್ದು.... ಅದನ್ನು ಸಾಕಿ ಸಲಹುತ್ತಾ ಇದ್ದೀಯ....ಈ ಗಂಡುಮಗುವನ್ನು ಹಡೆದವಳು ನೀನೆ....ನೀನೆ ಗೋಣುಮುರಿದು ಜೀವತೆಗದೆ ಎಂದ ಮೇಲೆ ಇನ್ನೇನು ಹೇಳಬೇಕು....ನೀನೆ ನಾರಿ, ನೀನೆ ಮಾರಿ ಅಪ್ಪೆ ”

ಅಣ್ಣನನ್ನು ಕುರಿತು “ ಇದ್ಯಾಕಣ್ಣ, ನಿಸಿಜೋಗಿ ಹಾಗೆ ಮಂಡಿಸಂದಿಗೆ ತಲೆ ಸಿಕ್ಕಿಸಿಕೊಂಡು ಹೀಗ್ ಕುಳಿತುಕೊಂಡೆ

ನೀನು ?....ಏಳು....ಮೇಲಕ್ಕೆದ್ದು ಒಂದು ಗೋಣಿಚೀಲ ತಗೊಂಡು ಈ ಮೊಗ ಈಸ್ಕೊಂಡು, ಅದರೊಳಕ್ಕೆ ಹಾಕಿಕೊಂಡು ಸುತ್ತಿಕೊ ಹೋಗು!---ಹು,ಎದ್ದೇಳು ಕಾಲಕಳೆಯುವ ಹೊತ್ತು ಇದಲ್ಲ"?

ದೊಡ್ಡ ವೀರಶೆಟ್ಟಿಯು ಮೇಲೆದ್ದು ತಮ್ಮ ಮನೆಗೆ ಹೋದ ಗೋಣಿಚೀಲ ತೆಗೆದುಕೊಂಡುಬರಲು ಹೋಗುತ್ತಿದ್ದವನನ್ನು ಸುಬ್ಬಣ್ಣನು "ಹಾಗೇನೆ ದಬ್ಬಳ ಸುತ್ತಲಿಯನ್ನು ತಗೊಂಡ್ ಬಾರಣ್ಣ" ಅಂದ. ದೊಡ್ಡವೀರಶೆಟ್ಟಿಯು 'ಹು' ಎಂದುಕೊಂಡು ಹೊರಟ. ಸುಬ್ಬಣ್ಣನೂ ಹೊರಗಡೆ ಪಡಸಾಲೆಗೆ ಹೋಗಿ ನಿಂತು ಕೊಂಡ ಬೀಡಿಸೇಯುತ್ತ ನಿಂತ, ಗಂಗಾಧರಪ್ಪನ ಪಡಸಾಲೆಯಲ್ಲಿ ಮಲಗಿರುವವರೆಲ್ಲ ಎಚ್ಚರವಾಗಿಯೇ ಎಲ್ಲವೂ ಗಮನಿಸಿಕೊಂಡು ಕಾಯುತ್ತಿದ್ದಾರೆ. ಅವರ ಪೈಕಿ ಒಬ್ಬ ಮೇಲೆದ್ದು ಪಡಸಾಲೆಯಿಂದ ಕೆಳಗಿಳಿದು ಸ್ವಲ್ಪ ದೂರ ಹೋಗಿ .... ಬಂದು ಮತ್ತೆ ಪಡಸಾಲೆ ಹತ್ತಲು ಹೋಗಿದ್ದವನು, ಮಾದಪ್ಪನ ಮನೆ ಕಡೆಗೆ ನೋಡಿ "ಯಾರ ?--- ನಿಂತಿರೋದು ?" ಅಂದ.

ಸುಬ್ಬಣ್ಣ ಇದ್ದವನು "ನಾನೇಕಣೊ ಮಾದಯ್ಯ"

"ಇದ್ಯಾಕ ಸ್ವಾಮಿ ನಿಂತಿದ್ದೀರಿ ಅಲ್ಲಿ?" ಮಧ್ಯರಾತ್ರಿ ಮಿಾರೊಗೋಗದೆ....ಇನ್ನೂ ನಿಮಗೆ ಮಲಗುವುದಕ್ಕೆ ಹೊತ್ತಾಗಿಲ್ವೆ?"

"ನಾಳೆ ಸೋಮವಾರ ಅಲ್ಲವ ?---ನರಸೀಪುರದ ಸಂತೆಗೆ ಹೋಗೋಣಾಂತ ಅಣಿ (ಸಿದ್ಧ) ಮಾಡಿಕೊಳ್ಳುತ್ತಾ ಇದ್ದೇವೆ ಕಣಯ್ಯ"

ಅಷ್ಟರಲ್ಲಿ ದೊಡ್ಡವಿರಶೆಟ್ಟಿಯು ತನ್ನ ಮನೆಯಿಂದ ಹೊರ ಬಿದ್ದ. ಸುಬ್ಬಣ್ಣನೂ ಒಳಕ್ಕೆ ಹೊರಟ. ದೊಡ್ಡವೀರಶೆಟ್ಟಿಯು ಮಾದಪ್ಪನ ಮನೆ ಒಳಕ್ಕೆ ಹೋಗಿ ಬಾಗಿಲು ಹಾಕಿಕೊಂಡ. ಹೊರಗೆ ಹೋಗಿದ್ದವನು. ಪಡಸಾಲೆ ಹತ್ತಿ, "ನಾಳೆ ನರಸೀ

ಪುರೆದ ಸಂತೇಗೆ ಹೋಗುವುದಕ್ಕೆ ಅಣಿ ಮಾಡಿಕೊಳ್ಳುತ್ತಾ ಇದಾ ರಂತೆ....ಮಾಡಿಕೊಳ್ಳಲಿ" "ಊರಿಗೆ ಬಂದವಳು ನೀರಿಗೆ ಬರ ಲ್ವೇಂತ....ಬೆಳಕು ಹರಿಯುವುದರೊಳಗಾಗಿ ಗೊತ್ತಾಗುತ್ತವೆ ಇದ್ದೆ ಹ್ಯಾಗಿದ್ದರೂ....ಈಗ್ಯಾಕೆ ಬರಲಿ, ಆ ಸೂಲಗಿತ್ತಿ ಹೊರಗಡೆ.... ಆವಾಗ ಇರೋದು ಮಜ!" ಎಂದುಕೊಂಡು ಮಲಗಿದ. ಮಲಗಿ ಕೊಂಡರೂ ಮಾದಪ್ಪನ ಮನೆಯ ಕಡೆ ಪೂರ್ಣ ಎಚ್ಚರಿಕೆಯಿಂದ ನೋಡಿಕೊಳ್ಳುತ್ತಲಿದ್ದ.

ಸುಬ್ಬಣ್ಣ, ದೊಡ್ಡವೀರಶೆಟ್ಟಿ ಇಬ್ಬರೂ ಕಿರುಮನೆ ಮುಂದೆ ಹೋಗಿ ನಿಂತರು. ಸಿದ್ದಿಯು ಅಲ್ಲಿ ನೆಲದಮೇಲೆ ಬಟ್ಟೆಯಲ್ಲಿ ಸುತ್ತಿರಿಸಿದ್ದ ಪಾಪವನ್ನು ತಂದು ಸುಬ್ಬಣ್ಣನ ಮುಂದೆ ಹಿಡಿದಳು ಸುಬ್ಬಣ್ಣನಿದ್ದವನು ಸಲ ಸಲಕ್ಕೂ "ನನ್ನ ಮುಂದೇನೆ ಯಾಕ ತಂದಿಡೀತಿಯ ನೀನು?" ಎಂದು ಗದರಿಸಿಕೊಂಡು, ಅಣ್ಣನನ್ನು "ಈಸಿಕೊಳ್ಳಣ್ಣಾ ಎಂದು ಅಪ್ಪಣೆ ಮಾಡಿದ. ದೊಡ್ಡವೀರ ಶೆಟ್ಟಿಯು ಈಸಿಕೊಳ್ಳಲಾರದೆ, ಬಿಡಲೂಲಾರದೆ .... ಸುಮ್ಮನೆ ನಡುಗುತ್ತಾ ನಿಂತ ಕಡೇನೆ. "ನೋಡಣ್ಣಾ, ನೀನು ಹೀಗೆಲ್ಲ ಮಾಡುತ್ತಾ ನಿಂತುಕೊಂಡರೆ....ನಾನು ಹೊರಟು ಹೋಗುತ್ತೇನೆ. ನೀವು ನೀವು ನಿಮಗೆ ತೋರಿದಹಾಗೆ, ಹ್ಯಾಗೆಬೇಕೊ ಹಾಗೆ ಮಾಡಿಕೊಳ್ಳಿ ಅಷ್ಟೆ" ಸುಬ್ಬಣ್ಣ ಯಾವಾಗ ಹೀಗಂದನೋ ಇಲ್ಲವೊ ದೊಡ್ಡವೀರಶೆಟ್ಟಿಯು ಕೈಯಲ್ಲಿದ್ದ ಗೋಣಿಚೀಲವನ್ನು ಕೆಳಗೆ ಹಾಕಿ ತನ್ನವೆರಡು ಕೈಗಳನ್ನು ಮುಂದೆ ನೀಡಿದನು ಸಿದ್ದಿಯ ಕಡೆಗೆ. ವದರುತ್ತಾನೆ ಒಂದೇ ಸಮನೆ. ಬೆಪ್ಪಾಗಿ ಸಿದ್ದಿ ಯನ್ನೆ ನೋಡುತ್ತಾನೆ. ಸಿದ್ದಿಯು ಪಾಪನನ್ನು ಅವನ ಕೈಗಳಲ್ಲಿ ಟ್ಟಳು. ಒಳಗಡೆ ತಾಯಿ ಮಗಳು ಇಬ್ಬರೂ ರೋದನ ಮಾಡು ವುದು ಜೋರಾಯಿತು. ಸುಬ್ಬಣ್ಣನು ಒಳಬಾಗಿಲಿಗೆ ಹೋಗಿ ಗದರಿಸಿಕೊಳ್ಳಲು ನಿಲ್ಲಿಸಿದರು. ಆದರೂ ಪೂರ್ಣವಾಗಿ ನಿಲ್ಲಲಿಲ್ಲ.

ದೊಡ್ಡವೀರಶೆಟ್ಟಿಯು ಪಾಪನನ್ನು ಕೈಗಳಲ್ಲಿರಿಸಿಕೊಂಡು ಗಡ ಗಡ ನಡಗುತ್ತಾ, ಕಂಪಿತ ಸ್ವರದಲ್ಲಿ 'ಸು....ಬ್ಬ....ಣ್ಣಾ' ಅಂದ. ಸುಬ್ಬಣ್ಣನು ಅವನ ಕಡೆಗೆ ತಿರುಗಿ ಹಾಕಿಕೊಳ್ಳಣ್ಣಾ ಗೋಣಿ ಚೀಲಕ್ಕೆ!....ಚೀಲಕ್ಕೆ ಹಾಕಿಕೊಂಡು ಸುತ್ತಿಕೊ!' ಅಂದ. ಸುಬ್ಬಣ್ಣನ ಕೈಗೆ ಸಿಕ್ಕಾಕೊಂಡು ದೊಡ್ಡವೀರಶೆಟ್ಟಿಗೆ ಎಳು ಹೆನ್ನೊಂದು ತುಂಬಿಹೋಗುತ್ತಿದೆ. ಕಳಗೆ ಕುಕ್ಕರಗಾಲಿನಲ್ಲಿ ಕುಳಿತು ಪಾಪನನ್ನು ಕೆಳಗಿರಿಸಿ, ಗೋಣಿಚೀಲವನ್ನು ತನ್ನ ಕಡೆಗೆ ಎಳೆದುಕೊಂಡು, ಅದರ ಬಾಯನ್ನು ಎಡಗೈನಿಂದ ತೆರೆದು, ಬಲಗೈಯಿಂದ ಪಾಪನನ್ನು ಒಳಗೆ ಸೇರಿಸಿದನು. ಆ ಚೀಲಕ್ಕೆ ಚುಚ್ಚಿದ್ದ ಸುತ್ತಲಿಪೋಣಿಸಿದ ಆ ದಬ್ಬಳವನ್ನು ಹೊರಕ್ಕೆಳೆದು ತೆಗೆದನು. ಚೀಲವನ್ನು ಸುತ್ತಿದನು. ಮೇಲೆ ದಬ್ಬಳವನ್ನು ಒಂದು ಪಕ್ಕಕ್ಕಾದಂತೆ ಚುಚ್ಚಿದನು. ಸುಬ್ಬಣ್ಣನ ಕಡೆ ನೋಡಿದನು. 'ಏನ್ ನೋಡುತ್ತೀಯ ತೆಗೆದುಕೊಳ್ಳಣ್ಣಾ....ತಲೆ ಮೇಲಿರಿಸಿಕೊ ನಿನ್ನ ಪಾಪವನ್ನ....ನಡಿ ಹೋಗೋಣ' ಅಂದ ಸುಬ್ಬಣ್ಣ ತಮ್ಮನ ಒಂದೊಂದು ಮಾತೂನ್ನು ಅಣ್ಣ ಜೀವಸಹಿತ ಇರಿದುಕೊಳ್ಳಬೇಕು ಹಾಗೆ ಮಾತನಾಡುತ್ತಾನೆ. ಆದರೆ ಅನ್ನುವುದಕ್ಕಿಲ್ಲ ಅನುಭವಿಸು ವುದಕ್ಕಿಲ್ಲ ಹಾಗಾಗಿದೆ ಅಣ್ಣನ ಸ್ಥಿತಿ. ಇನ್ನು ಎಷ್ಟುಕೇಳಿದರೂ ಅಷ್ಟೆ ಅಂದುಕೊಂಡು, ಪಾಪನನ್ನು ಕೈಗೆ ತೆಗೆದುಕೊಂಡು ಮೇಲೆದ್ದು ನಿಂತ. 'ನಡಿಯಣ್ಣಾ' ಎಂದು ಸುಬ್ಬಣ್ಣ ಹೊರಡ ಬೇಕು, ಅಷ್ಟರಲ್ಲಿ ಸಿದ್ದಿಯು ಸುಬ್ಬಣ್ಣನನ್ನು 'ನನ್ನ ಕಲಸಮಾಡಿ ಬಿಡಪ್ಪ....ನಾನೂ ಹೊರಟುಹೋಯ್ತೀನಿ' ಅಂದಳು.

"ಈವಾಗ ಈ ಕತ್ತಲಿನಲ್ಲಿ ಎಲ್ಲಿಗೆ ಹೋಗುತ್ತೀಯ ನೀನು? ಇರು ನಾಳೆ ತಾನೆ ನೀನು ಹೋಗೋದು!"

'ಇಲ್ಲಪ್ಪ, ನಾಳೆವರೆವಿಗು ನನಗೇನು ಕೆಲಸ ಇಲ್ಲಿ, ಈವಾಗಲೆ ನನ್ನನ್ನು ಕಳುಹಿಸಿಕೊಟ್ಟುಬಿಡಿ ಹೊರಟುಹೋಗುತ್ತೇನೆ."

ಸುಬ್ಬಣ್ಣನು ಸಿದ್ದಿಯನ್ನು ಗೋಡೆಬತ್ತಿಗೆ ಕರೆದುಕೊಂಡು, ಹೋಗಿ ಅವಳಿಗೆ ಏನೇನೋ ಹೇಳಿ ಸಮಾಧಾನಪಡಿಸಿ ಮಾರನೆ ದಿವಸದವರೆವಿಗೂ ಉಳಿಯುವಂತೆ ಮಾಡಿದನು. ಬೀದಿಬಾಗಿಲಿಗೆ ತಾನೊಬ್ಬನೆ ಹೋಗಿ, ಬಾಗಿಲನ್ನು ಸ್ವಲ್ಪ ತೆರೆದು ಹೊರಗೆ ಬಗ್ಗಿ ನೋಡಿದನು ಗಂಗಾಧರಪ್ಪನ ಅಂಗಡಿ ಪಡಸಾಲೆ ಕಡೆಗೆ. ಎಲ್ಲರೂ ಮಲಗಿದ್ದರು. ಯಾರೂ ಎದಿರಲಿಲ್ಲ. ಅಣ್ಣನು ಅಲ್ಲೆ ಇರಲು ಹೇಳಿ ಸುಬ್ಬಣ್ಣನು ಹೊರಗೆ ಬಂದ. ಆಕಾಶದಲ್ಲಿ ಬೆಳ್ಳಿಮೂಡಿತ್ತು.

"ಇವೇನಣ್ಣ ಬೆಳ್ಳಿ ಮೂಡಿದೆ ಆಗಲೇ" ಅಂದ.

ದೊಡ್ಡವೀರಶೆಟ್ಟಿಯು ಹೊರಗೆಬಂದು ಹಂತದಕಲ್ಲಮೇಲೆ ನಿಂತುಕೊಂಡ. ಸುಬ್ಬಣ್ಣನೇ ಮತ್ತೆ 'ಬೆಳ್ಳಿ ಮೂಡಿದೆ ಆಗಲೆ' ಎನಲು, ಅಣ್ಣನು ಹಂತವಿಳಿದು ಮುಂದೆ ದಾರಿಗೆಹೋಗಿ ನಿಂತ. ಕಂಕಳಿನಲ್ಲಿ ಮುದರಿದ ಗೋಣಿಚೀಲವಿತ್ತು. ಮೇಲೆ ಆಕಾಶದ ಕಡೆಗೆ ನೋಡಿ ಬೆಳ್ಳಿ ಮೂಡಿರುವುದನ್ನು ಕಂಡುಕೊಂಡು, ಸುಬ್ಬಣ್ಣನ ಕಡೆಗೆ ತಿರುಗಿ, ಉಗುಳುನುಂಗಿಕೊಂಡು ಪ್ರಯಾಸದಿಂದ 'ಹು....ಮೂಡಿದೆ' ಎಂದ

"ಹೊತ್ತಾಗಡೆ ಕಣಣ್ಣಾ. ಇನ್ನೇನು ಮೊದಲನೆ ಕೋಳಿ ಕೂಗೊ ಸಮಯ....ನಡಿ ಹೋಗೋಣ"

"ಹು ನಡಿಯಪ್ಪ"

ಹೊರಡುವ ಮುನ್ನ ಸುಬ್ಬಣ್ಣನು ನಿಂತಲ್ಲಿಂದಲೆ 'ಅಕ್ಕೋ, ಬಾಗಿಲು ಹಾಕಿಕೊಳ್ಳಕ್ಕ....ನಾವು ಹೋಗುತ್ತೇವಿ' ಎಂದು ಜೋರಾಗೆ ಕೂಗಿಹೇಳಿದ. ಬಾಗಿಲನ್ನು ಹಾಕಿಕೊಂಡರು. ಆದರೆ ಹಾಗೆ ಹಾಕಿಕೊಂಡವರು ಮಾದಪ್ಪನ ಹೆಂಡತಿಯಲ್ಲ—ಬೂದಳ್ಳಿ ಸಿದ್ದಿ. ಅಣ್ಣ ತಮ್ಮ ಹೊರಟರು, ಪೂರ್ವಮುಖವಾಗಿಸ್ವಲ್ಪ ದೂರ ಹೋಗುವಲ್ಲಿ ಬಲಕ್ಕೆ ತಿರುಗಿಕೊಂಡು ಹುಂಡಿಕಡೆಗೆ ಹೊರಟರು.

———

೧೩

ಅಣ್ಣತಮ್ಮಂದಿರು ಗುಮ್ಮನಹುಂಡಿಕಡೆಗೆ ತಿರುಗಿಕೊಂಡರು, ಗಂಗಾದರಪ್ಪನ ಅಂಗಡಿ ಪಡಸಾಲೆಯಲ್ಲಿ ಮಲಗಿದ್ದವರು ಒಬ್ಬೊಬ್ಬರಾಗಿ ಎದ್ದು ಕುಳಿತರು. ಅಂಗಡಿಮನೆ ಕದಲಿಗೆ ಹಾಕಿಬಿಟ್ಟು, ಗಂಗಾದರಪ್ಪನೂ ಕೂಡ ಹಾಸಿಗೆ ಗೀಸಿಗೆ ಯಾವುದನ್ನೂ ಹಾಸಿಕೊಳ್ಳದೆ ಹೆಗಲಮೇಲಿದ್ದ ಟವಲಿಂದ ನೆಲಧೂಳು ಹೊಡೆದು, ಬರೀ ನೆಲದಮೇಲೆ ಟವಲನ್ನೆ ಸುತ್ತಿ ತಲೆಗೆ ಇಟ್ಟುಕೊಂಡು ಅವನೂನು ಹೊರಗಡೇನೆ ಮಲಗಿದ್ದ. ಅವನೂ ಎದ್ದು ಕೂತ, ಎಲ್ಲರೂ ಸಮಾಲೋಚನೆಗೆ ಶುರುಮಾಡಿದರು.

ಇನ್ನೇನು ಮೊದಲನೆ ಕೂಗೊ ಹೊತ್ತಾಯಿತು, ಅಂದಲ್ಲಪ್ಪ ಮೊದಲನೆ ಕೋಳಿ ಕೂಗುವುದಕ್ಕೆ ಇನ್ನು ಎಷ್ಟುಹೊತ್ತು ಬೇಕು ಮಧ್ಯರಾತ್ರಿಗೆ ಸ್ವಲ್ಪಹೊತ್ತು ಮೀರಿದೆ ಅಷ್ಟೆ. ಮೊದಲು ಹೀಗೆಂದು ಗಂಗಾದರಪ್ಪ ಚುಮ್ಮಿಕ್ಕಿಕೊಟ್ಟ. ಸುಬ್ಬಣ್ಣನನ್ನು ಮಾತನಾಡಿಸಿದ್ನಲ್ಲ ಅವನಿದ್ದವನು ... ‘ನಾಳೆ ಸೋಮವಾರ ಅಲ್ವ ಗಂಗಾದರಪ್ಪ, ನರಸೀಪುರದ ಸಂತೇಗ್ಹೋದರು.

ಇನ್ನೊಬ್ಬ—ಸಂತೆಗೆ ಹೋಗಬೇಕಾದರೆ ಇಷ್ಟು ಹೊತ್ತಿನಿಂದಲೂ ಹೋಗಬೇಕಾಗಿತ್ತ ಅವರು.

ಮತ್ತೊಬ್ಬ—ಹೆರಿಗೆ ಆಗೋಗಿರಬೇಕು.

ಕರೀಂಖಾನ್—ಹೆರಿಗೆ ಎಲ್ಲಿ ಆಗ್ತೈತೆ! ಹೆರಿಗೆ ಆಗಿದ್ರೆ ಪಾಪ ಅಳಬೇಡಾ? .... ಈಗ ಅಳ್ತಾ? ನೀನು ಸರ್‍ಯೆ ಹೇಳೋದು!

ಮಗು ಆಗಿ ಅದನ್ನೇನಾದರೂ .... ಇವರಿಬ್ಬರೂ ತೆಗೆದುಕೊಂಡು ಹೊರಟರೊ ಹ್ಯಾಗೊ ಅಂತ ಅನುಮಾನ ಪಟ್ಟ ಗಂಗಾದರಪ್ಪ. ಈ ಅನುಮಾನಕ್ಕೆ ಉಳಿದವರ ಸಹಕಾರ ಸಹಾನುಭೂತಿ ದೊರೆಯಲಿಲ್ಲ. ಏಕೆಂದರೆ 'ಮಾದಪ್ಪನ ಹೆಂಡತಿಯು ಏನೂ ಕಂಡವಳಲ್ಲ .... ಮುಗ್ಧೆ. ಒಂದು ವೇಳೆ ಗಂಗಾದರಪ್ಪ ಹೇಳುವಂತೆ ಮಾದಪ್ಪನ ಮಗಳಿಗೆ ಮಗುವಾಗಿ ಅದನ್ನು ಈವಾಗ ಹೋದವರಿಬ್ಬರೂ ತೆಗೆದುಕೊಂಡು ಹೊರಟಿದ್ದರೆ,—ಮಾದಪ್ಪನ ಮಗಳಿದ್ದಾಳ್ಳ ಆ ಚಂಡಾಳಿ ಬೇಕಾದರೆ ಕೈಯ್ನಿಂದ ಮಗುವನ್ನು ಎತ್ತಿಕೊಟ್ಟು ಸಮಾಧಾನವಾಗಿದ್ದಾಳು, ಆದರೆ ಮಾತ್ರ ಮಾದಪ್ಪನ ಹೆಂಡತಿ ಬಾಯಿ ಬಡಿದು ಬಿಟ್ಟಾಳು' — ಈ ಅಭಿಪ್ರಾಯದವರು ಬಹು ಮಂದಿ ಇದ್ದರಾಗಿ ಹೋದವರಿಬ್ಬರನ್ನು ಹಿಂಬಾಲಿಸುವ ಕೆಲಸಕ್ಕೆ ಯಾರೂ ಹೋಗಲಿಲ್ಲ. ಗಂಗಾದರಪ್ಪನಿಗೆ ತಾನೊಬ್ಬನೇ ಆಗಲಿ ಅಥವಾ ಜೊತೆಗೆ ಇಬ್ಬರನ್ನು ಕರೆದುಕೊಂಡಾದರೂ ಹೋಗಿ ಬರುವ ಧೈರ್ಯವಿಲ್ಲ.

ಕರೀಂಖಾನ್ ಎದ್ದುಹೋಗಿ ಬಾವಿ ಹಿಂದಲ ಓಣಿಯಲ್ಲಿ ಹೋಗಿ ಮಾದಪ್ಪನ ಮನೆ ಗೋಡೆಗೆ ಕಿವಿಗೊಟ್ಟುಕೊಂಡು ಒಳಗಡೆ ಮಾತು ಕಥೆಗಳನ್ನೆಲ್ಲಾ ಸ್ವಲ್ಪಹೊತ್ತು ಕೇಳಿಸಿಕೊಂಡ. ಕರೀಂಖಾನ್ ಗಂಗಾದರಪ್ಪನ ಪಡಸಾಲೆಗೆ ನಡೆದ. ಒಳಗಡೆ ಅಳುತ್ತಾರೆ ಕರೆಯುತ್ತಾರೆ ಸಂಕಟಪಡುತ್ತಾರೆ .... ಒಬ್ಬರ ಮೇಲೊಬ್ಬರು ರೇಗಾಡುತ್ತಾರೆ ಯಾರೊ ಮೂರು ಜನ ಮಾತನಾಡಿದ ಹಾಗೆ ಆಯಿತು ಎಂದು ಹೇಳುತ್ತನೆ ಎಲ್ಲರ ಕಿವಿಗಳೂ ನೆಟ್ಟಗಾದವು. ಮೂರು ಜನ ಯಾರು ಎಂಬುದು ಎಲ್ಲರಿಗೂ ಸಮಸ್ಯೆಯಾಯಿತು. ಎಲ್ಲರೂ ಬಲ್ಲಹಾಗೆ ಮನೆಯಲ್ಲಿರುವವರು ಮಾದಪ್ಪನ ಹೆಂಡತಿ, ಅವಳ ಮಗಳು ಇನ್ನೊಂದು ಚಿಕ್ಕ ಹುಡುಗಿ.

ಇವರ್ಯಾರು ಮೂರುಜನ ಒಬ್ಬರಮೇಲೊಬ್ಬರು ರೇಗಾಡೋರು! ಎಲ್ಲರೂ ಓಣಿಗೆ ಹೊರಟರು. ಸಾಲಾಗಿ ಮಾದಪ್ಪನ ಮನೆಯ ಗೋಡೆಗೆ ಕಿವಿಕೊಟ್ಟುಕೊಂಡು ನಿಂತರು.

ಒಳಗಡೆ ಏನಾಗಿದೆ ಅಂದರೆ—ಸುಬ್ಬಣ್ಣ, ದೊಡ್ಡವೀರಶೆಟ್ಟಿ ಇಬ್ಬರೂ ಹೊರಟಮೇಲೆ ಕಣ್ಣೀರಿನಲ್ಲಿ ಕೈ ತೊಳೆಯುತ್ತ ಕಿರು ಮನೆ ಮೂಲೆಯಲ್ಲಿ ಕುಕ್ಕರ ಬಡಿದಿದ್ದ ಮಾದಪ್ಪನ ಹೆಂಡತಿಯು ಕಿಚ್ಚಿನಿಂದ ಮೇಲೆದ್ದು ಮಗಳನ್ನು ಹೀನಾಮಾನವಾಗಿ ಅಂದು ಆಡಿದಳು. ಮಗಳೂನು ಕೇಳುವವರೆಗೂ ಕೇಳಿ ಕೊನೆಗೆ ತಾಯಿಗೆ ತಿರುಗಿಬಿದ್ದಳು. ಇಬ್ಬರ ನಡುವೆ ಸಿದ್ದಿಯು ಪ್ರವೇಶಿಸಿ ಈರ್ವರನ್ನೂ ಸಮಾಧಾನ ಪಡಿಸುತ್ತಿದ್ದಳು.

ಓಣಿಯಲ್ಲಿ ಗೋಡೆಗೆ ಕಿವಿಕೊಟ್ಟುಕೊಂಡು ಕೇಳುತ್ತಿದ್ದವರಿಗೆಲ್ಲ ನಡೆದಿರುವ ರಾಮಾಯಣವೆಲ್ಲ ಗೊತ್ತಾದಹಾಗಾಯಿತು. ಕೇಳಿದರು ಹಾಗೆಯೇ ಮುಂದೆ ಹೊರಟು ಮಾದಪ್ಪನ ಮನೆ ಹಿಂದಕ್ಕೆ ಹೋದರು ಕಲ್ಲುಗಳನ್ನು ಕೈಗೆ ತೆಗೆದುಕೊಂಡು ಮಾದಪ್ಪನ ಮನೆಗೆ ಕಲ್ಲಿನ ಮಳೆ ಕರೆದರು. ಅಪ್ಪಿತಪ್ಪಿ ಕೆಲವು ಚಿಕ್ಕಜುಂಜಪ್ಪನ ಮನೆಗೂ ಬಿತ್ತು. ತಕ್ಷಣ ಮನೆ ಒಳಗಿನಿಂದ ತಮ್ಮಯ್ಯ, ಅವನ ಮಗ ಕೂಗಿಕೊಂಡು ಕೈನಲ್ಲಿ ದೊಣ್ಣೆ ಹಿಡಿದು ಹೊರಗೆ ಬಂದರು. ನಾಗಣ್ಣನೂ ಹೊರಗೆ ಬಂದ, ಗಂಗಾದರಪ್ಪನ ತಮ್ಮನೂ ಬಂದ. ಇವರೂನು ಕೂಗಿಕೊಂಡು ನೂಡಿಕೊಂಡು ಮನೆ ಹಿಂದಕ್ಕೆ ಹೋಗಿ ನೋಡುತ್ತಾರೆ ಯಾರೂ ಇಲ್ಲ. ಇವರು ಯಾವಾಗ ಕೂಗಾಡಿಕೊಂಡು ಹೊರಟರೋ ಅವರೆಲ್ಲ ಹಾಗ್ಹಾಗೆ ಪರಾರಿಯಾಗಿ ಹೋದರು.

ಸೂಳೆಮಕ್ಕಳು ನಮ್ಮ ಮನೆಗೆ ಕಲ್ಲು ಹೊಡೆಯುವಹಾಗಾಯಿತಲ್ಲಾ! .... ಏನು ಗುಡ್ಸೆಟ್ಟಿಯರ ಮನೆ ಅಂತ ತಿಳಿದುಕೊಂಡ

ರೇನೊ ! .... ಬಲಿ ಹುಯ್ದುಬಿಡ್ತೀವಿ! .... ಬಲೀನ! ....
ಪಕ್ಕದ ಮನೆ ಬಡ್ಡೀರು ಹದವಾಗಿದ್ದರೆ ಇಷ್ಟೆಲ್ಲ ಯಾಕಾಗೋದು!
ಅವರು ಹದಗೆಟ್ಟದ್ರೆ ಅವರ ಮನೆಗೆ ಬೀರು ಕಲ್ಲನ್ನ ! .... ನಮ್ಮ
ಮನೆಗೆ ಕಲ್ಲು ಬೀಳೋಕೆ ಕಾರಣ? ಎಂದು ಗುಡುಗಿ ನಾಗಣ್ಣ
ನನ್ನು ಕುರಿತು 'ನಮ್ಮ ಮನೆ ಹಲಾಲ್ಕೋರು ಆ ದೊಡ್ಡೀರ್ನು....
ಆ ಕುಷ್ಮದವನು ನೇರವಾಗಿದ್ದಿದ್ರೆ ನಮ್ಮ ಮನೇಗ್ಯಾಕಯ್ಯಾ ಕಲ್ಲು
ಬೀಳುತ್ತಿತ್ತು? ಅಂದನು.

"ಅದು ನಿಜಾ ಅನ್ನ"

ಗಂಗಾದರಪ್ಪನ ತಮ್ಮನು ತಮ್ಮಯ್ಯನನ್ನು 'ಯಾರ್ ಮಾವ
ಕಲ್ಹೊಡಿದವರು? ನಿಮ್ಮ ಮನೆಗೂ ಬಿದ್ವೊ ಅನ್ನಿ ?' ಎಂದು
ಕೇಳಿದ.

"ಬೀಳಬೆ ಎದ್ದು ಬಂದಿದ್ದೀವ ಕೈನಲ್ಲಿ ದೊಣ್ಣೆ ತೆಗೆದು
ಕೊಂಡು ? .... ಕಲ್ಲೆಸೆದುಬಿಟ್ಟು ಓಡ್ಹೋಗಬೇಕ ? .... ಅಂತ
ನಾಮರ್ದಾ ಕೆಲಸವನ್ನ ಯಾಕೆ ಮಾಡಬೇಕು?.... ಗಂಡಸರಾದರೆ
ಎದರೆದುರಿಗೇ ಬರಬೇಕು .... ಗುದ್ದಾಡಬೇಕು."

"ಹೋಗ್ಲಿ ಹೋಗು ಮಾವ .... ಯಾರು ಕಲ್ಹೊಡವರು
ಅನ್ನೋದನ್ನ ಪತ್ತೆ ಯಾಡೋಣ ಬೆಳಿಗ್ಗೇಗೆ."

"ಪತ್ತೆ ಏನಯ್ಯ ಅಲ್ಲಿ ಮಾಡೋದು! .... ರಾತ್ರಿ ನಿಮ್ಮ
ಮನೆ ಪಡಸಾಲೇಲಿ ಯಾರ್ಯಾರು ಮಲಗಿದ್ದರೊ ಅವರುಗಳೆ ಈ
ಕೆಲಸ ಮಾಡಿರೋದು. ಇನ್ಯಾರು ಬರುತ್ತಾರೆ ನಾವೇನು ತುತ್ತನ್ನ
ಕಿವೀಗೆ ತೆಗೆದುಕೊಂಡು ಹೋಗೋದಿಲ್ಲ .... ನಮಗೂನು ಗೊತ್ತಾ
ಯ್ತುದೆ. ರಾತ್ರಿ ನಾನು ಒಂದಾವಾಡಲಿಕ್ಕೆ ಹೊರಕ್ಕೆ ಎದ್ದು
ಬಂದಿದ್ದೆ.... ಆವಾಗ ಎಲ್ಲ ಮಲಗಿದ್ರು.... ಈವಾಗ ಯಾರು ಇಲ್ಲ
ಏನು ಬೆಳಕು ಹರಿದುಹೋಯಿತ ಈವಾಗ ?" ತಪ್ಪುಕಂಡರೆ

ಯಾರ ಮನೇಗೆ ಹೊಡೀಬೇಕು .... ಹೊಡೀಸು ಕಲ್ಲನ್ನ ! .... ಯಾರ್ಯಾರ್ದೋ ಮನೆಗೆಲ್ಲ ಹೊಡಿಯಿಸುತ್ತೀಯ ? .... ಹೊಡೆಯಿಸುವೆ ಗೊತ್ತಾಯ್ತದೆ .... ಈಗ್ಯಾಕೆ ಮಾತು ನಾಗಣ್ಣನು ಅಣ್ಣ ನನ್ನ ' ಮಾಡೋಕಡೆ ಮಾಡಿಬಿಡಬೇಕು, ಆಡಿ ತೋರಬಾರದು ಬಾರಣ್ಣ ಒಳಗಡೆಗೆ ಇನ್ನ .... ಹೋಗಯ್ಯ ನೀನು ಮಲಕ್ಕೋ ಹೋಗು ಯಾವುದಿದ್ದರೂ ಬೆಳಿಗ್ಗೇಗೆ ಮಾತನಾಡೋಣಂತೆ, ಇಷ್ಟುಹೊತ್ತಿನಲ್ಲಿ ಈ ಅವೇಳೆಯಲ್ಲಿ ಎಂಥ ಮಾತು ಎಂದವನ ಒಳಗಡೆ ನಡೆದ. ತಮ್ಮಯ್ಯ ಅವನ ಮಗ ಅವರೂ ಹೊರಟರು.

ಮಾದಪ್ಪನ ಮನೆಯಲ್ಲಿರುವ ನಾರಿಯರು ಕಲ್ಲು ಬಿದ್ದಾಗಲೇ ಹೆದರಿ ಅಪ್ಪಳಿಸಿಹೋದರು. ಆಮೇಲೆ ತಮ್ಮಯ್ಯನಪ್ಪ ಕೂಗಾಡಿದ್ದು. ನಾಗಣ್ಣ ಹೇಳಿದ್ದು ಎಲ್ಲವನ್ನೂ ಬಾಗಿಲ ಮರೆಯಲ್ಲಿ ನಿಂತು ಕೇಳಿಸಿಕೊಂಡರು. ಕೇಳಿಸಿಕೊಂಡರೇನಾಯಿತು, ಹೊರಗೆ ಬರುವ ಧೈರ್ಯವಿದೆಯೇ? ಎಂದಿಗೂ ಇಲ್ಲ. ಮನೆಯಲ್ಲಿ ಅಡಗಿಕೊಂಡರು.

ನರಸೀಪುರದ ಸಂತೆ ಎಷ್ಟರಮಟ್ಟಿಗೆ ಕಟ್ಟುವುದಿಲ್ಲವಾದರೂ ಸುಮಾರು ದೊಡ್ಡಸಂತೆ ಅಂತಲೇ ಅನ್ನಬಹುದು. ನರಸೀಪುರಕ್ಕೂ ಬೊಮ್ಮನಹಳ್ಳಿಗೂ ಸುಮಾರು ಎಂಟು ಮೈಲಿಯಾಗುತ್ತದೆ ವಾರಾ ವಾರಾ ಜನ ಸಂತೆಗೆ ಹೋಗುತ್ತಲೇ ಇರುತ್ತಾರೆ. ಬೊಮ್ಮನ ಹಳ್ಳಿಯಲ್ಲಿರುವ ಸಾಬರು ಲಬ್ಬೆ ಜಾತಿಯವರು ಊರಿನಲ್ಲಿ ಕಟುಕರ ಅಂಗಡಿಗಳು ನಾಲ್ಕಾರು ಇವೆ. ಅವರು ವಾರಾವಾರ ಏನು ತಪ್ಪಿದರೂ ಸಂತೆಗೆ ಹೋಗುವುದು ಮಾತ್ರ ತಪ್ಪುವುದಿಲ್ಲ. ದನಕರುಗಳನ್ನು ತರುತ್ತಿರುವುದು, ಕತ್ತರಿಸುತ್ತಿರುವುದು ಇದೇ ಕೆಲಸ. ಇನ್ನೂ ಕೆಲವರು ಬೆಲ್ಲದ ವ್ಯಾಪಾರ ಮಾಡುತ್ತಾರೆ. ಬೆಲ್ಲದ ಹೇರನ್ನು ಎತ್ತಿನ ಮೇಲೆ ಹೇರಿಕೊಂಡು ಹೋಗಿ ವ್ಯಾಪಾರ ಮಾಡಿಕೊಂಡು ಬರುತ್ತಾರೆ. ಹಾಗೆ ಬೆಲ್ಲದ ವ್ಯಾಪಾರ ಮಾಡುವ ಒಬ್ಬ ಲಬ್ಬೆ ತುರುಕ ಎತ್ತಿನಮೇಲೆ ಹೇರನ್ನು ಹಾಕಿ, ಅದ್ದರಿಸಿ (ಮುಂದಕ್ಕೆ ಹೋಗುತ್ತಿರುವಂತೆ) ತಾನು ತನ್ನ ಹೆಂಡತಿಯ ಕೈಯಲ್ಲಿ ದುಡ್ಡು ಗಿಡ್ಡು ಈಸಿಕೊಂಡು, ಮಾತು ಕತೆ ಮುಗಿಸಿಕೊಂಡು ಹೊರಟ ಅಡ್ಡರಸ್ತೆವರೆವಿಗೂ ಹೋದ ಹೇರು ಸಿಗಲೇ ಇಲ್ಲ. ಗಾಬರಿಯಾಯಿತು, ಹಿಂದಕ್ಕೆ ಹೊರಟ. ಎಡ ಬಲ ನೋಡಿಕೊಂಡು ಓಡಿ ಓಡಿ ಬರುತ್ತಿದ್ದಾನೆ. ಅಲ್ಲಲ್ಲಿಗೆ ನಿಂತು ಹಿಂದಕ್ಕೂ ನೋಡುತ್ತಾನೆ, ಮತ್ತೆ ಮುಂದಕ್ಕೆ ಓಡಿಬರುತ್ತಾನೆ.

ಈ ಕಡೆಯಿಂದ ದೊಡ್ಡವೀರಶೆಟ್ಟಿ, ಸುಬ್ಬಣ್ಣ ಇಬ್ಬರೂ ಹೋಗುತ್ತಿರುತ್ತಾರೆ. ದೊಡ್ಡವೀರಶೆಟ್ಟಿ ತಲೆಯಮೇಲೆ 'ಪಾಪದ

ಚೀಲ' ಇದೆ. ಎದುರಾಗಿ ಓಡಿಬರುತ್ತಿರುವವನನ್ನು ಕಂಡು ದೊಡ್ಡವೀರಶೆಟ್ಟಿಯು ಎಡಗಡೆ ಬೇಲಿ ಹಾರಿಬಿಟ್ಟ. ಸುಬ್ಬಣ್ಣನಿಗೂ ಗಾಬರಿಯಾಯಿತಾದರೂ ಕ್ಷಣಾರ್ಧದಲ್ಲಿ ಸರಿಹೋದ. ಯಾರವನು ಹಾಗೆ ಓಡಿಬರುತ್ತಿರುವನೆಂಬ ಕುತೂಹಲ ಮಾತ್ರ ಕಾಡುತ್ತಲೇ ಇತ್ತು. ಸುಬ್ಬಣ್ಣನ ಹತ್ತಿರಕ್ಕೆ ಬಂದವನೆ 'ಕ್ಯಾ ಶೆಟ್ಟಿ, ಮೇರೆ ಬೈಲ್ಕು ದೇಖೆ ಕ್ಯಾ?' ಎಂದು ಕೇಳಿದ. ಸುಬ್ಬಣ್ಣ ಸ್ವಲ್ಪವೂ ತಡಮಾಡದೆ, ಹಿಂದೇನೆ ಉತ್ತರಕೊಟ್ಟ. 'ಅರೆ ಜಲ್ದಿ ಜಾರೆ, ಹುಂಡೀಕೆ ಪಾಸ್ ಜಾತಾಹೈ .... ಜಲ್ದಿ ಜಾರೆ.'

ಸಾಬಿಯು ಹಿಂದು ಮುಂದು ಎಡಬಲ ಎತ್ತಲೂ ನೋಡದೆ ನೆಟ್ಟಗೆಒಂದೇ ಉಸಿರಿಗೆ ಓಡಿದ. ಅವನ ಹೇರು ಅಲ್ಲೆ ಎಡಗಡೆಗೆ ದೊಡ್ಡವೀರಶೆಟ್ಟಿ ಬೇಲಿ ಹಾರಿದನಲ್ಲ ಆ ಹೊಲದಲ್ಲೇ ಮೇಯುತ್ತಲಿತ್ತು. ಸುಬ್ಬಣ್ಣ ಅದನ್ನು ನೋಡಿರಲಿಲ್ಲ. ಏನೋ ಅವನು ಕೇಳಿದ ಅವನು ಅಲ್ಲಿ ನಿಲ್ಲಬಾರದು ಹೊರಟುಹೋಗಬೇಕು ಅಷ್ಟಕ್ಕಾಗಿ ಆ ರೀತಿಯಲ್ಲಿ ತಕ್ಷಣ ಉತ್ತರ ಕೊಟ್ಟ. ದೊಡ್ಡವೀರಶೆಟ್ಟಿಯನ್ನ, 'ಇದ್ಯಾಕಣ್ಣ ಬೇಲಿ ಹಾರಿಬಿಟ್ಟಿ? .... ಬಾ ಹೋಗೋಣ ಮುಂದಕ್ಕೆ' ಎಂದು ಕರೆದ. ಎಲ್ಲಿಂದ ಬರೋದು ದೊಡ್ಡವೀರಶೆಟ್ಟಿ! ಹೊರಕ್ಕೆ ಬರಬೇಕಾದರೆ ಬೇಲಿಗೆ ಅಲ್ಲೆಲ್ಲೂ ಕನ್ನ ಇದ್ದಹಾಗೆ ಕಾಣಲಿಲ್ಲ. ಬೇಲಿ ಹಾರಿ ಬರಲಿ ಅಂದರೆ ಅದು ಆಳು ಮೇಲಿದೆ ಎತ್ತರದಲ್ಲಿ. ಈ ಕಡೆಯಿಂದ ಅದ್ಯಾವ ಶಕ್ತಿಯಿಂದ ಹಾರಿದನೋ ಏನೊ! ಯಾವಶಕ್ತಿ ಏನು ಹುಚ್ಚು, ಗಾಭರಿಯಾಗಿ ಹಿಂದೂ ಮುಂದು ಏನೂ ಯೋಚನೆ ಮಾಡದೆ ಏಕಾಏಕಿ ಹಾರಿಬಿಟ್ಟ. ಹಾರಿಬಿಟ್ಟರೆ ಏನಾಗಿದೆ! ಬಟ್ಟೆಯೆಲ್ಲ ಹರಿದು ಹೋಗಿದೆ ಮೈಕೈಗೆಲ್ಲ ಮುಂಡುಗಳ್ಳಿ ಮುಳ್ಳು ಮುರಿದು ಕೊಂಡಿದೆ. ಬೇಲಿ ನೆಗೆಯುವ ಕಾಲದಲ್ಲಿ ಅವನಿಗೆ ಯಾವುದೂ ಗೊತ್ತಾಗಲಿಲ್ಲ,

ಸಾಬಿ ಹೋದ ಮೇಲೆ, ಸುಬ್ಬಣ್ಣ ಕರೆದಾಗ ಮೇಲೇಳುವುದಕ್ಕೆ ಹೋಗುತ್ತಾನೆ .... ಕೈಕಾಲುಗಳೆಲ್ಲ ಹಿಡಿದುಕೊಂಡಹಾಗಾಗಿದ್ದೆ ಮೈಯೆಲ್ಲವು ನೋವಾಗಿತ್ತು, ಬಹಳ ಕಷ್ಟದಿಂದ ಮೇಲೆದ್ದ. ನೋಡಿದರೆ ಬೇಲಿ ಅವನ ಮೇಲಿದೆ, ಅದುಹೇಗೆ ಹಾರಿಬಂದೆ ನೆಂದು ತನಗೆ ತಾನೆ ಆಶ್ಚರ್ಯಪಟ್ಟುಕೊಂಡ. ಬೇಲಿ ಒತ್ತಿನಲ್ಲೆ ಮುಂದಕ್ಕೆ ಹೊರಟ. ಸುಬ್ಬಣ್ಣ ರಸ್ತೆಯಲ್ಲಿ ಹೋಗುತ್ತಿದ್ದರೆ, ದೊಡ್ಡವೀರಶೆಟ್ಟಿಯು ತಲೆಯ ಮೇಲೆ 'ಪಾಪದ ಚೀಲ' ಹೊತ್ತು ಕೊಂಡು ಕಲ್ಲು, ಮುಳ್ಳು, ದಸಿ ಇವುಗಳನ್ನು ತುಳಿದುಕೊಂಡು ಬೇಲಿ ಒತ್ತಿನಲ್ಲೆ ಹೋಗುತ್ತಿದ್ದಾನೆ. ಜೊತೆಗೆ ಹಾವು, ಹಲ್ಲಿ ಇದ್ದು ಕಚ್ಚಿದರೆ ಗತಿ ಏನು? ಇಂಥ ಯಾವುದೇ ಯೋಚನೆ ದೊಡ್ಡವೀರಶೆಟ್ಟಿ ತಲೆಗೆ ಬರಲೇ ಇಲ್ಲ.

ಪಾಪದ ಹಾದಿಯು ರಾಜರಸ್ತೆಯಲ್ಲ. ಕಲ್ಲುಮುಳ್ಳುಗಳಿಂದ ಹಾವು ಚೇಳುಗಳಿಂದ ತುಂಬಿರುತ್ತದೆ. ಭಯಂಕರವಾಗಿರುತ್ತದೆ. ಆದಾರಿಯನ್ನು ಯಾರೇ ಆಗಲಿ ತುಳಿಯಲು ಬಾರದು. ಯಾವತ್ತೂ ಸತ್ಯ ಜೀವಿಗಳಾಗಿರಬೇಕು. ಸತ್ಯದ ಪಥದಲ್ಲಿ, ಶಿವ ಪಥದಲ್ಲಿರು ವವರಾಗಬೇಕು. ಶ್ರೀರಾಮಚಂದ್ರ ಹದಿನಾಲ್ಕು ವರುಷ ವನ ವಾಸಕ್ಕೆ ಹೋದ. ಸೀತೆಯನ್ನು ರಾವಣ ಕದ್ದುತೆಗೆದುಕೊಂಡು ಹೋದ. ಎಂತೆಂಥ ಕಷ್ಟಪರಂಪರೆಗಳನ್ನು ಎದುರಿಸಿದ ಆದರೂ ಶ್ರೀರಾಮನು ಎಲ್ಲವನ್ನೂ ಜಯಿಸಿ ಸತಿ ಸೋದರನೊಡಗೂಡಿ ಪಿತೃವಾಕ್ಯಪರಿಪಾಲನೆಮಾಡಿ, ಮರಳಿ ಆಯೋಧ್ಯೆಗೆ ಸುಖವಾಗಿ ಬಂದು ಸೇರಿದನು. ಯಾವುದು ಶ್ರೀರಾಮನನ್ನು ಆ ಕಷ್ಟಕಾಲ ದಲ್ಲಿ ಕಾಪಾಡಿದುದು? ಅಂದರೆ, ಶ್ರೀರಾಮಚಂದ್ರನು ಯಾವ ಧರ್ಮವನ್ನು ಪರಿಪಾಲಿಸಿಕೊಂಡು ಬಂದನೊ ಆಧರ್ಮವೇ ಶ್ರೀರಾಮಚಂದ್ರನನ್ನೂ ಕಾಪಾಡಿತು. "ಹರನೆಂಬುದೇ ಸತ್ಯ,

ಸತ್ಯವೆಂಬುದೇ ಹರನು" ಇವರೆಡು ಬೇರೆ ಬೇರೆಯಲ್ಲವೆಂದು ತಿಳಿದು ಸತ್ಯಕ್ಕಾಗಿ ಬಾಳಿದ ಹರಿಶ್ಚಂದ್ರನು ಅದನ್ನು ಉಳಿಸಿ ಕೊಳ್ಳಲು ವಿಶ್ವಾಮಿತ್ರನಿಂದಾಗಿ ಎಷ್ಟೊಂದು ಕಷ್ಟಗಳನ್ನು ಎದು ರಿಸಬೇಕಾಯಿತು. ರಾಜ್ಯವನ್ನು ಕಳೆದುಕೊಂಡ, ಕಾಶಿಪಟ್ಟಣ ವನ್ನು ಸೇರಿದ, ಸತೀ ಸುತರನ್ನು ವಿಕ್ರಯಿಸಿದ, ಕೊನೆಗೆ ತನ್ನನ್ನು ತಾನೆ ಚಂಡಾಳನಿಗೆ ಮಾರಿಕೊಂಡ, ಮಗನನ್ನು ಕಳೆದುಕೊಂಡ.... ತನ್ನ ಕೈಹಿಡಿದ ಹೆಂಡತಿಯನ್ನು ತಾನೇ ಕೊಲ್ಲುವಂಥ ಪರೀಕ್ಷೆ ಗಳನ್ನೆಲ್ಲ ಎದುರಿಸಿದ ಆದರೆ ಸತ್ಯ ಭ್ರಷ್ಟನಾಗಲಿಲ್ಲ. ಯಾವ ಸತ್ಯಕ್ಕಾಗಿ ಹರಿಶ್ಚಂದ್ರ ಬಾಳಿದನೊ ಆಸತ್ಯವೇ ಹರಿಶ್ಚಂದ್ರನನ್ನು ಕಾಪಾಡಿತು.

ಅನುಸೂಯೆಯನ್ನು ಕೆಣಕುವುದಕ್ಕಾಗಿ ಹರಿಹರ ತ್ರಿಮೂರ್ತಿ ಗಳು ಬಂದರು. ಆದರೆ ಪರಮ ಪತಿವ್ರತೆಯಾದ ಆಕೆಯು ಪತಿಯ ಪಾದೋದಕವನ್ನ ಅವರಮೇಲೆ ಪ್ರೋಕ್ಷಿಸಿ, ತ್ರಿಮೂರ್ತಿ ಗಳನ್ನು ತೊಟ್ಟಿಲಿಗೆ ಹಾಕಿಕೊಂಡು ತೂಗಿದಳು. ಅವಳ ಪತಿ ಭಕ್ತಿಯೇ, ಪಾತಿವ್ರತ್ಯವೇ ಆವಳ ಮಾನ ಸಂರಕ್ಷಣೆಮಾಡಿತು.

ಈ ಪ್ರಪಂಚದಲ್ಲಿ ಯಾವುದೂ ನಿತ್ಯವಲ್ಲ ಎಲ್ಲವು ಮಿಥ್ಯ.... ಇದ್ದು ಹೋಗುವುದು ಅಂದಮೇಲೆ ಪ್ರಾಪಂಚಿಕ ಸುಖವು ಶಾಶ್ವತ ವಾದ, ಅಮರಸುಖವೆ? ಎಂದಿಗೂ ಸುಖವಲ್ಲ. ಇದನ್ನು ಕಡೆ ಗಂಡು ನಿತ್ಯವಾದ ಸತ್ಯವಾದ ಅಮರಾನಂದವನ್ನು ಪಡೆಯುವ ಜ್ಞಾನಿಗಳ ಮಾತು ಈಗಬೇಡ. ಪ್ರಾಪಂಚಿಕರಾಗಿ ಬಾಳಬೇಕಾ ದರೆ ಹೆಣ್ಣಾಗಲಿ ಗಂಡಾಗಲಿ ಪಾಪ ಕೃತ್ಯಗಳಿಗೆ ಅಂಜಬೇಕು, ಸತ್ಯವನ್ನ, ಧರ್ಮವನ್ನ ಅವಶ್ಯವಾಗಿ ಪರಿಪಾಲಿಸಬೇಕು. ಪಾಪವು ಮೊದಲು ಬಲು ಮೋಹಕವಾಗಿ ಕಾಣುತ್ತದೆ. ಸವಿ ಯಲು ಬಲು ಸವಿಯಾಗಿ ಕಾಣುತ್ತದೆ. ಆಮೇಲಾಮೇಲೆ ಪಾಪವು

ನಿಮಗೆ" ಲೇಪಿಸಿಕೊಳ್ಳುತ್ತದೆ. ನಿಮ್ಮ ಚರ್ಮವನ್ನು ಸುಲಿಯುತ್ತದೆ. ಆತ್ಮವನ್ನು ಆವರಿಸುತ್ತದೆ. ಪಾಪತ್ಮರನ್ನಾಗಿಮಾಡುತ್ತದೆ. ಅಲ್ಲಿಗೆ ಮುಗಿಯಿತು ನಿಮ್ಮ ಹಣೇಬರಹ. ಪಾಪದ ದೆಸೆಯಿಂದ ದೇಹಕ್ಕೂ ಸುಖವಿಲ್ಲ. ಆತ್ಮಕ್ಕೂ ಸುಖವಿಲ್ಲ. ನಿಮ್ಮನ್ನು ಇಹಕ್ಕೂ ಇಲ್ಲ, ಪರಕ್ಕೂ ಇಲ್ಲವೆನಿಸುತ್ತದೆ. ಅದು ಬಿಟ್ಟು ನೀವು ಸತ್ಯ ಜೀವಿಗಳಾದರೆ ಮೇಲೆ ಕಾಠಿಣ್ಯವಾಗಿ ಕಂಡರೂ, ಆಚರಣೆಗೆ ಅಸಾಧ್ಯವಾಗಿ ಕಂಡರೂ ನೀವು ಅದನ್ನು ಆಚರಣೆಗೆ ಇಟ್ಟು ಕೊಂಡಂತೆಲ್ಲ, ಸತ್ಯಜೀವಿಗಳಾಗಿ, ಸತ್ಯವಂತರಾಗಿ; ಪುಣ್ಯ ಜೀವಿಗಳಾಗಿ, ಪುಣ್ಯವಂತರಾಗಿ, ಪುಣ್ಯಾತ್ಮರಾಗಿ,ಧನ್ಯಾತ್ಮರಾಗುತ್ತೀರಿ ಸಾಕ್ಷಾತ್ ಶಿವನೇ ನೀವಾಗುತ್ತೀರಿ.

ಪಾರಮಾರ್ಥ ಸಾಕು, ಕಥೆಗೆ ಬರೋಣ:

ಕಾಲುವೆ ಹತ್ತಿರ ಬೇಲಿಯು ಕೊನೆಯಾಯಿತು. ಅಣ್ಣ ತಮ್ಮಂದಿರು ಸೇರಿದರು. ದೊಡ್ಡವೀರಶೆಟ್ಟಿ ಎರಡು ಕಾಲು ಹಸ್ತಗಳನ್ನೂ ಪೂರ್ತಮುಳ್ಳಿನ ಮಾಯವಾಗಿ, ನೆಲದಮೇಲೆ ಹಸ್ತ ಮಡಗಿ ಹೆಜ್ಜೆ ಹಿಡಲಾರ. ಹಿಡಲಾರ ಅಂದರೆ ಕೇಳುವವರು ಯಾರು? ಇಬ್ಬರೂ ಕಾಲುವೆ ಏರಿಯಮೇಲೆ ಪೂರ್ವಕ್ಕೆ ನಡೆದರು ಬಲಕ್ಕೆ ಕಾಲುವೆ, ಕಾಲುವೆ ಆಚೆಕಡೆಗೆ ಗದ್ದೆಗಳು. ಎಡಕ್ಕೆ ಮೊದ ಮೊದಲು ಹೊಲಮಾಳವೇ ಸಿಕ್ಕರೂ, ಆಮೇಲಾಮೇಲೆ ಗದ್ದೆಗಳು ಕಾಣುತ್ತವೆ. ಸುಮಾರು ಅರ್ಧಮೈಲು ಸಾಗಿದಮೇಲೆ ಎಡಕ್ಕೆ ಖಾದರ್‌ಸಾಬರ ಗದ್ದೆ. ಈಸ್ಥಳದಲ್ಲಿ ಕಾಲುವೆ ನೀರು ಒಂದು ಕೆರೆಯಮಾದರಿ ಅಂಟುಕೊಂಡಿದೆ (ಹರಡಿಕೊಂಡಿದೆ) ನೀರಿನಲ್ಲಿ ವಡಕೆ ಬೆಳೆದುಕೊಂಡಿದೆ. ಅಲ್ಲಿ ಇಬ್ಬರೂ ನಿಂತರು. ಸುಬ್ಬಣ್ಣನು ಅಣ್ಣನನ್ನು 'ನಿನ್ನ ತಲೆಯಮೇಲಿರುವ ಚೀಲದಿಂದ ಪಾಪನನ್ನು ಆಚೆಗೆತೆಗೆದು, ಚೀಲಕ್ಕೆ ಅರ್ಧದವರೆವಿಗೂ ಕಲ್ಲು

ತುಂಬಣ್ಣಾ' ಎಂದು ಅಲ್ಲಿ ಗುಡ್ಡು ಗುಡ್ಡೆಯಾಗಿಬಿದ್ದಿದ್ದ ಸುಮಾರು ಗಾತ್ರದ (ಹಿಡಿಗಾತ್ರದವು, ಅಥವಾ ಇನ್ನೂ ಸ್ವಲ್ಪ ದೊಡ್ಡವು) ಕಲ್ಲು ಗುಡ್ಡೆಗಳ ಕಡೆಗೆ ಕೈತೋರಿಸಿದನು. ದೊಡ್ಡವೀರಶೆಟ್ಟಿಯು ಉರಕ್ ಪುರಕ್ ಅನ್ನದೆ ಸುಬ್ಬಣ್ಣನು ಹೇಳಿದಂತೆಯೇ ಚೀಲಕ್ಕೆ ಸುಮಾರು ಅರ್ಧದವರೆವಿಗೂ ಕಲ್ಲುಗಳಿಂದ ತುಂಬಿದನು 'ಈವಾಗೇನ್ ಮಾಡಲಿ ಸುಬ್ಬಣ್ಣ ?'

"ಆ ಪಾಪನ್ನಾಕು ಈವಾಗ'

ಪಾಪನನ್ನೂ ಹಾಕಿದುದಾಯಿತು.

"ಆಯಿತು ಕಣ್ ಸುಬ್ಬಣ್ಣ."

"ಹಾಕಿ ಆಯಿತು?"—ಈವಾಗ ಚೀಲದಪ್ರಾರ್ತ ಅದೇ ಕಲ್ಲು ತುಂಬಿದಬ್ಬಳಸುತ್ತಲಿ ಕೈಗೆತೆಗೆದು ಕೊಂಡು ಚೀಲಹೊಲಿಯಣ್ಣಾ.

"ಅದೂ ಮಾಡಿ ಆಯಿತು" ಕಣಪ್ಪ.

"ಆಯ್ತಾಣ್ಣಾ, ... ರಾಗಿ, ಜೋಳ, ಹುರುಳಿ, ಹುಚ್ಚೆಳ್ಳು ಅಂತ ಜೋಬಿನಲ್ಲಿ ದಡ್ಡು ಹಾಕಿಕೊಂಡು, ಕೊಳಗ ಚೀಲ ಕೈಗೆ ತೆಗೆದುಕೊಂಡು ಊರೂರು ತಿರುಗಿ, ದಿನಸಿ ಖರೀದಿ ಮಾಡಿ ಕೊಳಗ ಕೈಯಿಗೆ ತೆಗೆದುಕೊಂಡು ಅದನ್ನೆಲ್ಲ ಚೀಲಕ್ಕೆ ಅಳೆದು, ಆಮೇಲೆ ದಬ್ಬಳಕ್ಕೆ ಸುತ್ತಲಿ ಪೋಣಿಸಿ, ಚೀಲಗಳನ್ನೆಲ್ಲ ಹೊಲಿದು ಸಾಮಾನಿನವರಿಗೆ ಹಣ ಎಣಿಸಿ ಬಂಡೀಗೆ ಭರ್ತೀಮಾಡಿ, ಊರಿಗೆ ಸಾಗಿಸಿ ಹಜಾರದಲ್ಲಿ ಮೂಟೆಮೇಲೆ ಮೂಟೇನ ಪೇರಿಸುತ್ತಿದ್ದಲ್ಲ ಆ ವ್ಯಾಪಾರ ಚೆಂದ್ವೊ! ಈ ವ್ಯಾಪಾರ ಚಂದ್ವೊ! ... ಎತ್ತಿಕೊಳ್ಳಣ್ಣ ಪಾಪದ ಮೂಟೇನ ನಿನ್ನ ಬೆನ್ನಿಗೆ ...

"ಎತ್ತುವುದಕ್ಕೆ ಆಗುತ್ತೇನಪ್ಪ?"

"ನಾನೆತ್ತಿ ಕೊಡುತ್ತೇನೆ ... ಇಲ್ಲಿ ಮೂಟೇಗೆ ಬೆನ್ನುಕೊಟ್ಟು ನಿಂತ್ಕೊ ಮತ್ತೆ ..."

"ದೊಡ್ಡವೀರಶೆಟ್ಟಿಯು ಪಂಜೆಯನ್ನು ಎತ್ತಿಕಟ್ಟಿಕೊಂಡು ಮೂಟೆಗೆ ಬೆನ್ನು ಕೊಟ್ಟು ಮೇಲುಭಾಗದ ಎರಡು ಮೂಲೆಗಳನ್ನು ಎರಡು ಕೈಗಳಲ್ಲಿ ಹಿಡಿದುಕೊಂಡು ಕುಳಿತ. ಸುಬ್ಬಣ್ಣನು ಕೆಳಗಿನ ಎರಡು ಮೂಲೆಗಳನ್ನೂ ಎರಡು ಕೈಗಳಲ್ಲಿ ಹಿಡಿದು ಬೆನ್ನಿಗೆ ಎತ್ತಿದನು. ದೊಡ್ಡವೀರಶೆಟ್ಟಿಯು ಮೇಲೇಳುವುದು ಅತಿ ಕಷ್ಟವಾಯಿತು. ಮೂಟೆ ಎತ್ತಿಕೊಂಡು 'ಈವಾಗ ಮುಂದೇನು ಮಾಡಬೇಕಪ್ಪ' ಅಂದನು.

"ನೀರಿನೊಳಕ್ಕೆ ಇಳಿ"

"ದೊಡ್ಡವೀರಶೆಟ್ಟಿಯು ಮೂಟೆ ಎತ್ತಿಕೊಂಡು ನೀರಿನೊಳಕ್ಕೆ ಇಳಿದ. ಮೊಣಕಾಲುವರೆವಿಗೂ ನೀರಾಯಿತು, ಮುಂಡಿವರೆವಿಗೂ ನೀರಾಯಿತು .... ಹಿಂದಕ್ಕೆ ತಿರುಗಿ ಸುಬ್ಬಣ್ಣನಕಡೆಗೆ ನೋಡಿದರೆ, ಅವನು ಇನ್ನೂ ಹೋಗು ಎಂದು ಕೈಸನ್ನೆ ಮಾಡಿದ. ಮತ್ತೆ ದೊಡ್ಡವೀರಶೆಟ್ಟಿ ಮುಂದಕ್ಕೆ ಹೋದ .... ತೊಡೆವರೆವಿಗೂ ನೀರಾಯಿತು, ಇನ್ನೂ ಹೋಗಬೇಕು .... ನೀರು ನಡುವಿಗೆ ಬಂದಿತು, ಇನ್ನೂ ಹೋಗಬೇಕು .... ನೀರು ಹೊಟ್ಟೆಗೆ ಬಂದಿತು ಇನ್ನೂ ಇನ್ನೂ ಹೋಗಬೇಕು ನೀರು ಎದೆಗೆ ಬಂದಿತು, ಇನ್ನೂ ಹೋಗಬೇಕು .... ನೀರು ಕತ್ತಿನ ಮಟ್ಟಕ್ಕೆ ಬಂದಿತು. 'ಹು, ಎತ್ತಿಹಾಕು! ಎಂದು ಸುಬ್ಬಣ್ಣ ಸನ್ನೆ ಮಾಡಲು ದೊಡ್ಡವೀರಶೆಟ್ಟಿಯು ಮೂಟೆಯನ್ನು ನೀರಿನಲ್ಲಿ ಹಾಕಿದನು. ವಾಪಸು ಏರಿಯ ಮೇಲಕ್ಕೆ ಬಂದನು. ದೊಡ್ಡವೀರಶೆಟ್ಟಿಯ ಬಟ್ಟೆಬರೆಯೆಲ್ಲ ಒದ್ದೆ. ಮೈಕೈಯೆಲ್ಲ ಮುಳ್ಳುಮುರಿದುಕೊಂಡಿದೆ, ಎರಡು ಕಾಲು ಹಸ್ತಗಳೂ ಮುಳ್ಳಿನಮಯವಾಗಿವೆ .... ಗಡಗಡ ನಡುಗುತ್ತಾನೆ .... ಬಾಯಿಬಿಟ್ಟು ಅಳುತ್ತಾ ಇಲ್ಲ ಅಷ್ಟೆಹೊರತು ಮಿಕ್ಕೆಲ್ಲ ಹಣೇಬರಹವೂ ಆಗಿದೆ ಅವನಿಗೆ.

ತಿರುಗಿ ಬಂದ ದಾರಿಯಲ್ಲೇ ಇಬ್ಬರೂ ಹೊರಟರು. ಸೇತುವೆ ಹತ್ತಿರ ಬಲಕ್ಕೆ ತಿರುಗುವುದಕ್ಕೆ ಬದಲು ಎಡಕ್ಕೆ ತಿರುಗಿಕೊಂಡರು ಬಲಕ್ಕೆ ತಿರುಗಿಕೊಂಡಿದ್ದರೆ ಊರಿಗೆ ಹೋಗುತ್ತಿತ್ತು. ಎಡಕ್ಕೆ ತಿರುಗಿಕೊಂಡು ಅಡ್ಡರಸ್ತೆಗೆ ಬಂದರು. ಅಲ್ಲಿಂದ ಮೈಸೂರು ಕೋಡಳ್ಳಿ ದಾರಿಯಲ್ಲಿ, ಕೋಡಳ್ಳಿ ಕಡೆಗೆ ಹೊರಟರು. ಆ ದಾರಿಯಲ್ಲಿ ಸುಮಾರು ಮುಕ್ಕಾಲು ಮೈಲು ಹೋದಮೇಲೆ ಬಲಕ್ಕೆ ತಿರುಗಿಕೊಂಡು ಸುಮಾರು ಒಂದು ಫರ್ಲಾಂಗ್ ಹೋಗುವಲ್ಲಿ ದೊಡ್ಡೇಗೌಡನಕೊಪ್ಪಲು ಸಿಕ್ಕಿತು. ಆ ಕೊಪ್ಪಲಿನ ಚಾವಡೀಗೆ ಹೋಗಿ ಮಲಗಿಕೊಂಡರು. ತಲೆ ಕೊಡಲೇ ಇಲ್ಲ! ಕೂಗಾಟ ಕೇಳಿಸಿತು. ಇಬ್ಬರೂ ಚಕ್ ಅಂತ ಎಂದು ಕುಳಿತರು ಕೂಗಾಟ ಚೆನ್ನಾಗಿ ಕೇಳಿಸುವುದಾಯಿತು. ಅಲ್ಲಿ ಮಲಗಿದ್ದವರಲ್ಲಿ ಒಬ್ಬ ಎಚ್ಚರಗೊಂಡ. ನೀರಿನಕಡೆಗೆ ಹೋಗಲು ಮೇಲೆದ್ದ. ಅವನನ್ನು ಸುಬ್ಬಣ್ಣನು 'ಏನಯ್ಯ ಗಲಾಟೆ ಅದು?' ಎಂದು ಪ್ರಶ್ನಿಸಿದನು. ಅವನಿದ್ದವನು ಆಕಳಿಸುತ್ತ, ಎಡಗೈನಿಂದ ಎಡತೊಡೆಯನ್ನು ಕೆರೆದುಕೊಳ್ಳುತ್ತ 'ತೆಂಗಿನ ತೋಟದಲ್ಲಿ ಕಪಿ ಅದ್ದರಿಸುತ್ತಾರೆ' ಎಂದು ಉತ್ತರಕೊಟ್ಟು ಆಕಡೆಗೆ ಹೋಗಿ ಕುಳಿತನು. ಇತ್ತ ಇಬ್ಬರೂ ಎದ್ದು ಹೊರಟರು. ಅಲ್ಲಿಂದ ಬನ್ನೂರು ನಾಲ್ಕು ಮೈಲಿಯಾಗುತ್ತದೆ, ಅಲ್ಲಿಗೆ ಹೋದರು ಬೆಳಕು ಹರಿಯಿತು ಅಲ್ಲಿಂದ ವಾಯುವ್ಯಕ್ಕೆ ಮೂರು ಮೈಲಿ ಹೋದರೆ ಹೆಗ್ಗೂರು. ಹೆಗ್ಗೂರಿನಿಂದ ಬೊಮ್ಮನಹಳ್ಳಿ ತೆಂಕಲಾಗಿದೆ. ದೊಡ್ಡಕೆರೆ ಏರಿ ಮೇಲೆ ಬಂದರೆ ಒಂದೂವರೆ ಮೈಲಿ ಆಗುತ್ತೆ .... ಕಾಲುವೆ ಮೇಲೆ ಬಂದರೆ ಬಳಸು ಎರಡು—ಎರಡೂವರೆ ಮೈಲಿ ಆಗುತ್ತದೆ. ಇಬ್ಬರೂನು ಹೆಗ್ಗೂರಿಗೆ ಹೋಗಿದ್ದು, ಅಲ್ಲಿಂದ ಸುಬ್ಬಣ್ಣ ಕೆರೆ ಏರಿ ಮೇಲೆ, ದೊಡ್ಡವೀರಶೆಟ್ಟಿ ಕಾಲುವೆಮೇಲೆ ಬಂದು ಊರುಸೇರಿಕೊಂಡರು.

೧೫

ಬೆಳಿಗ್ಗೆ ಅಷ್ಟೊತ್ತಿಗೇನೆ ತಮ್ಮಯ್ಯ ಎದ್ದು ಕಟ್ಟೆಗೆ ಹೋಗುವ ಪದ್ಧತಿ. ಹಿಂದಿನ ರಾತ್ರಿ ಮಾದಪ್ಪನ ಮನೆಯಲ್ಲಿ ಏನೇನು ನಡೆಯಿತೆಂಬುದು ಗೊತ್ತೆ ಇದೆ. ಬೆಳಗ್ಗೆ ಅಷ್ಟೊತ್ತಿಗೇನೆ ತಮ್ಮಯ್ಯ ಎದ್ದು ಹೊರಗೆ ಬರುವುದನ್ನೇ ಬಾವಿಕಟ್ಟೆಯ ಹತ್ತಿರ ಕಾಯುತ್ತಿದ್ದಳು, ಹ್ಯಾಗೆ ಕಾಯುತ್ತಿದ್ದಳು ಅಂದರೆ:— ಗಂಗಾಧರಪ್ಪನೊ, ಅವನೊ ಇವನೊ ಬಂದರೆ ಚೌರಿಗೆಯನ್ನು ಭಾವಿಗೆಬಿಟ್ಟು ನೀರು ಸೇಯ್ದುಕೊಂಡು ಹೊರಟುಹೋಗಬಹುದೆಂದು, ರಾಟೆಗೆ ಹಗ್ಗಹಾಕಿ ಚೌರಿಗೆ ಕತ್ತಿಗೆ ಹಗ್ಗಬಿಗಿದು, ಅದನ್ನು ಭಾವಿಕಲ್ಲಮೇಲೆ ಇರಿಸಿಕೊಂಡು ತಮ್ಮಯ್ಯನಿಗಾಗಿ ಕಾಯುತ್ತ ನಿಂತಿದ್ದಳು. ಆಗಿಂದಾಗ್ಗೆ ಸುತ್ತಮುತ್ತ ನೋಡಿಕೊಳ್ಳುತ್ತ ಬಹಳ ಎಚ್ಚರಿಕೆಯಿಂದ ಇದ್ದಳು. ದೈವವಶಾತ್ ಎತ್ತಲಿಂದಲೂ ಯಾರೂ ಬರಲಿಲ್ಲ ನಿತ್ಯದಂತೆ ತಮ್ಮಯ್ಯನು ಶಾಲುಹೊದೆದುಕೊಂಡು ಬಾಗಿಲು ತೆಗೆದುಕೊಂಡು ಹೊರಗೆಬಂದು ಮತ್ತೆ ಬಾಗಿಲನ್ನು ಮುಂದಕ್ಕೆ ಹಾಕಿಕೊಂಡು, ಹಂತವಿಳಿದು ದಾರಿಗೆ ಬಂದನು. ಭಾವಿಕಟ್ಟೆಯಬಳಿ ಅವನಿಗಾಗಿಯೇ ಕಾಯ್ದು ನಿಂತಿದ್ದ ಮಾದಪ್ಪನ ಹೆಂಡತಿಯು ಮೈತುಂಬ ಮುಸುಗನ್ನು ಹಾಕಿಕೊಂಡು ಸರ್ರನೆಹೋಗಿ ತಮ್ಮಯ್ಯನ ಕಾಲಮೇಲೆ ಬಿದ್ದಳು. ತಮ್ಮಯ್ಯನು ತಕ್ಷಣ ಹಿಂದಕ್ಕೆ ಸರಿದು, ‘ ಇದೇನಮ್ಮ ನೀನು

ಮಾಡೊ ಕೆಲಸ, ನಿನಗೇನು ಬುದ್ಧಿ ಇದಿಯೋ ಇಲ್ವೊ?.... ಮಾಡೋದನ್ನ ಮಾಡಿಬಿಟ್ಟು ಮನೇಗೆ ಕಲ್ಲುಬೀಳುತ್ತಲೆ ತಮ್ಮಯ್ಯಪ್ಪನಿಗೆ ದಮ್ಮಯ್ಯಾ ಅನ್ನುವುದಕ್ಕೆ ಬಂದೆಯೇನೋ?.... ಹೋಗೋಗು!....ಎದ್ದು ಕೆಲಸಕಾರ್ಯನೋಡು ಹೋಗು!....ನನ್ನ ಕಾಲನ್ನ ಯಾತಕ್ಕೆ ಕಟ್ಕೋಕ್ ಬಂದಿದ್ದೀಯ!....

ತಮ್ಮಯನು ಹೀಗೆ ಗದರಿಸಿಕೊಳ್ಳಲು ಮಾದಪ್ಪನ ಹೆಂಡತಿಯು ಕಣ್ಣೀರು ಒರೆಸಿಕೊಂಡು ನುಡಿದಳು. 'ನೀವು ಏನಾದರೂ ಅನ್ನಿ ತಮ್ಮಯ್ಯಪ್ಪ....ನೀವು ನನಗೆ ಅಣ್ಣನಸಮಾನ, ನನಗೆ ನೀವು ಅಂದ್ರೇಅಂತ ಹೀನಾಯವಿಲ್ಲ....ಅಲ್ಲಿರೋದು ಹಾಗೇ ಇದೆ, ನೀವು ಅನ್ನೊದೂ ಹಾಗೇ ಇದೆ....ಅವರು ತೀರಿಕೊಂಡಮೇಲೆ ನಿಮ್ಮ ಕೇಳದೆ ಮಾಡದೆ ಯಾವುದೊಂದು ಕೆಲಸವನ್ನೂ ಮಾಡುತ್ತಿರಲಿಲ್ಲ. ಎಲ್ಲಾದಕ್ಕೂ ನಿಮ್ಮನ್ನೆ ಮುಂದಾಗಿ ಇಟ್ಕೊಂಡಿದ್ದೆ ಆಮಗ ಮುಂಡೇಮಗಳು ಮಾಡಬಾರದ ಕೆಲಸ ಮಾಡಿಬಿಟ್ಳು, ಅದಕ್ಕೆ ನಾನೇನು ಮಾಡಲಿ....ಪ್ರಾಣಕಳೆದುಕೊಳ್ಳೋಕೆ ಹೊರಟೇ ಇದ್ದೆ. ಸುಬ್ಬಣ್ಣ ತಡೆದುಬಿಟ್ಟ....ನಿನ್ನೆ ರಾತ್ರಿ ನಡೆದುದರಲ್ಲಿ ಪುನಃ ಜನ್ಮ ಇಟ್ಕೊಂಡು ಈ ಭೂಮಿಮೇಲಿರಬೇಕ ನಾನು?.... ಪ್ರಾಣಕಳೆದುಕೊಳ್ಳಬೇಕು ಅನ್ನುವ ಮನಸ್ಸು ಮಾಡಿದೆ. ಈ ಪಾಪಿಷ್ಟರಂಡೆ ಹೀಗಾದಳು....ಇನ್ನು ಆಹೆಣ್ಣುಮಗುವಿನ ಗತಿ ಹ್ಯಾಗೆ ಮುಂದೆ!.... ಅದಕ್ಕೋಸ್ಕರ ನಿಮಗೆ ಒಂದುಮಾತು ತಿಳಿಸಿಬಿಟ್ಟು, ಆಮೇಲೆ ಮುಂದಲ ಕೆಲಸ ಮಾಡೋಣಾಂತ ನಿರ್ಧರಿಸಿಕೊಂಡು ನಿಮಗೆ ಹೇಳಿದ್ದೀನಿ. ನೀವು ಆಗೋದಿಲ್ಲಾ ಅಂದರೆ ನಡುವಿಗೆ ಕಟ್ಟಿಕೊಂಡು ಭಾವಿಗೆ ಬಿದ್ದರೂ ಸರಿಯೆ, ಈ ರಂಡಿಯ ವಶಕ್ಕೆ ಮಾತ್ರ ಆ ಮಗುವನ್ನು ಖಂಡಿತವಾಗಲೂ ಕೊಡುವುದಿಲ್ಲ.

ಮಾದಪ್ಪನ ಹೆಂಡತಿಯ ಮಾತುಗಳನ್ನು ಕೇಳಿ ತಮ್ಮಯ್ಯ ನಿಗೆ ಮನ ಕರಗಿತು. ನೀನು ದುಡುಕಿ ಏನನ್ನೂ ಮಾಡಬೇಡ ನಾಎಲ್ಲ ಸರಿಪಡಿಸುತ್ತೇನೆ....ನೀ ಸುಮ್ಮನಿರುಹೋಗು....ಕೆಟ್ಟವಳು ಅವಳು ಕೆಟ್ಟಳು....ನೀನ್ಯಾಕೆ ಇಷ್ಟೊಂದು ಮನಸ್ಸ ಕೆಡಿಸಿ ಕೊಂಡು ಮಾತನಾಡುತ್ತೀಯ .... ಹೋಗು ನಾನೂನು ಕಟ್ಟೆ ಗ್ಹೋಗಿದ್ದು ಬರ್ತೀನಿ....

ಆಕೆಯು ಭಾವಿಕಟ್ಟೆ ಕಡೆಗೆ ಹೊರಟಳು, ತಮ್ಮಯ್ಯನು ಕಟ್ಟೆಕಡೆಗೆಹೊರಟನು. ಹೊರಟವನು ಮತ್ತೆ ನಿಂತು ಆಕೆಯನ್ನು 'ದುಡುಕಿ ಏನನ್ನೂ ಮಾಡಬೇಡ ಕಣಮ್ಮ....ನಾಬರ್ತೀನಿ....ಮಾತ ನಾಡುತ್ತೇನೆ' ಎಂದುಹೇಳಿ ಹೊರಟ. ಆಕೆಯು ಸೆರಗಿನಿಂದ ಕಣ್ಣೀರು ಒರಿಸಿಕೊಳ್ಳುತ್ತ ಭಾವಿಕಟ್ಟೆಕಡೆಗೆ ಹೊರಟಳು.

ಸುಬ್ಬಣ್ಣ ಊರಿಗೆ ಬಂದಮೇಲೆ ಮಾದಪ್ಪನ ಮನೆಗೆ ಹೋದ ಮಾದಪ್ಪನ ಹೆಂಡತಿಯು ಯಾವುದಾವುದೋ ಮಾತನಾಡಿಕೊಂಡು ಸಂಕಟಪಟ್ಟಳೆ ಹೊರತು, ಅಂದು ಬೆಳಗ್ಗೆ ಆವನ ಅಣ್ಣ ತಮ್ಮ ಯ್ಯನನ್ನು ಕಂಡು ಮಾತನಾಡಿದುದನ್ನು ತಿಳಿಸಲಿಲ್ಲ. ದೊಡ್ಡ ವೀರಶೆಟ್ಟಿಯು ಬಂದಮೇಲೆ ಮತ್ತೆ ಅವನನ್ನು ಇನ್ನೂರು ರೂಪಾಯಿ ಕೇಳಿದ. ಅವನು ಕೊಡಲಾರ ಏನೇನೊ ಸಬೂಬು ಹೇಳಿದ, ಹ್ಯಾಗಾದರು ಮಾಡಿ ತಪ್ಪಿಸಿಕೊಳ್ಳಬೇಕು ಅಂತ, ಸುಬ್ಬಣ್ಣ ಬಿಡಬೇಕಲ್ಲ, ಕೊಟ್ಟಲ್ಲದೆ ಆಗದು....ಬೂದಳ್ಳಿ ಸಿದ್ದೀಗೆ ಕೊಟ್ಟು ಮರ್ಯಾದೆಮಾಡಿ ಕಳುಹಿಸಬೇಕು ಅನ್ನುತ್ತಾನೆ. 'ನಾ ಕೊಟ್ಟನಲ್ಲ ಐನೂರು ರೂಪಾಯಿನವರೆಗು....ಏನು ಮಾಡಿದೆ ಅದ ನ್ನೆಲ್ಲ?' ಎಂದು ಕೇಳುವ ಎದೆಗಾರಿಕೆ ದೊಡ್ಡವೀರಶೆಟ್ಟಿಗೆ ಇಲ್ಲ ವಾಗಿದೆ. ಐವತ್ತು ಕೊಟ್ಟ....ಸುಬ್ಬಣ್ಣ ತಳ್ಳಿಬಿಟ್ಟ, ನೂರಕೊಟ್ಟ ನೂಕಿಬಿಟ್ಟ, ನೂರಐವತ್ತು ಕೊಟ್ಟ....ಮುಟ್ಟಲಿಲ್ಲ, ಕೊನೆಗೆ

ಇನ್ನೂರು ರೂಪಾಯಿಯನ್ನೇ ತೆಗೆದುಕೊಂಡು ಅಣ್ಣನಕಡೆಯಿಂದ ಮಾದಪ್ಪನ ಹೆಂಡತಿಯ ಕೈಯಿಂದಲೂ ಮೂನ್ನೂರು ರೂಪಾಯಿ ಈಸಿಕೊಂಡ. ಒಟ್ಟು ಬಂದ ಐದುನೂರು ರೂಪಾಯಿಗಳಲ್ಲಿ ನಾನೂರ ಐವತ್ತನ್ನ ಹೆಂಡತಿಯ ವಶಕ್ಕೆ ತೆಗೆದುಕೊಂಡುಹೋಗಿ ಕೊಟ್ಟುಬಂದ. ಉಳಿದ ಐವತ್ತು ರೂಪಾಯಿನಲ್ಲಿ ಹತ್ತುರೂಪಾಯಿ ತಾನಿಟ್ಟುಕೊಂಡು, ನಲ್ವತ್ತು ರೂಪಾಯಿಯನ್ನ ಬೂದಳ್ಳಿ ಸಿದ್ದಿಗೆ ಕೊಟ್ಟು ಕಳುಹಿಸಿಕೊಟ್ಟ. ಅವಳು ಹೋಗುವಾಗ ಯಾರಾದರೂ ‘ಏತಕ್ಕಾಗಿ ಬೊಮ್ಮನಹಳ್ಳಿಗೆ ಬಂದಿದ್ದೆ ? ಎಂದು ಕೇಳಿದರೆ ಏನು ಹೇಳುತ್ತೀಯ’ ಎಂದು ಕೇಳಲು, ನನಗೆ ಹೇಳಿಕೊಡಬೇಡ ಸುಬ್ಬಣ್ಣ ನೀನು ?....ಅಷ್ಟುಗೊತ್ತಿಲ್ವ ನನಗೆ....ಹು, ನಾ ಬರ್ತೀನಿ’ ಎಂದು ಹೇಳಿ ಹೊರಟಳು. ಬೊಮ್ಮನಹಳ್ಳಿ ಅಡ್ಡರಸ್ತೆಯಲ್ಲಿ ಕುಳಿತಿದ್ದು, ಮೈಸೂರುಕಡೆ ಬಸ್ಸು ಬಂದಮೇಲೆ ಹತ್ತಿಕೊಂಡು ಕೋಡಳ್ಳಿಗೆ ಹೊರಟುಹೋದಳು.

೧೬

ಮಾದಪ್ಪನ ಮನೆಯಲ್ಲಿ ದೊಡ್ಡವೀರಶೆಟ್ಟಿ, ಅವನ ಮಗನ ಓಡಾಟ ತಪ್ಪಿತು. ಸುಬ್ಬಣ್ಣನ ಓಡಾಟವೂ ಕಮ್ಮಿಯಾಯಿತು. ಅದಕ್ಕೆ ಕಾರಣವಾದರೂ ಇಷ್ಟೇನೆ. ಮಾದಪ್ಪನ ಹೆಂಡತಿಯು ದೊಡ್ಡವೀರಶೆಟ್ಟಿಗಾಗಲಿ, ಅವನ ಮಗನಿಗಾಗಲಿ ಮುಖಕೊಟ್ಟು ಮಾತನಾಡುತ್ತಿರಲಿಲ್ಲ. ಇನ್ನೂ ಅವರನ್ನು ಕಂಡರೆ ಮುಖ ತಿರುಗಿಸಿಕೊಂಡು ಹೊರಟುಹೋಗುತ್ತಿದ್ದಳು. ಹೀಗಾಗಿ ಅವರಿಗೂ ಒಂದು ತರಹಾ ಆಯಿತು. ಅಪ್ಪ ಇದ್ದಾಗ ಮಗ ಬರುವಹಾಗಿಲ್ಲ ಮಗ ಇದ್ದಾಗ ಅಪ್ಪ ಬರುವಹಾಗಿಲ್ಲ–ಯಾರೇ ಬಂದರೂ ಮಾದಪ್ಪನ ಹೆಂಡತಿಯು ಪುರಸ್ಕರಿಸುವುದಿಲ್ಲ. ಹೋಗಲಿ ಮಾದಪ್ಪನ ಮಗಳು ತಾನೆ ಅವರಿಗೆ ಬೇಕಾದವಳು, ಮಾದಪ್ಪನ ಹೆಂಡತಿ ಕಟ್ಟಿಕೊಂಡೇನು ಅಂದರೆ, ಮಗಳಮೇಲೆ ಮಾದಪ್ಪನ ಹೆಂಡತಿಯು ಪೂರ್ಣ ನಿರ್ಬಂಧಗಳನ್ನು ಹಾಕಿರುತ್ತಾಳೆ. ಇದರ ಮೇಲೆ ತಮ್ಮಯ್ಯನು ಬೆಳಿಗ್ಗೆ,ಮಧ್ಯಾಹ್ನ, ರಾತ್ರಿಯಲ್ಲೂ ಬಂದು ನೋಡಿಕೊಂಡು ಹೋಗುತ್ತಿರುತ್ತಾನೆ. ಕೆಲವು ದಿವಸಗಳು—ಹೀಗಾಗಿ ಅವರ ಓಡಾಟವು ದಿನೇ ದಿನೇ ಕಮ್ಮಿಯಾಗಿ, ಕೊನೆಗೆ ನಿಂತು ಹೋದಂತೇ ಆಯಿತು. ಮಾದಪ್ಪನ ಮಗಳು ಕದ್ದು ಬಸುರಾಗಿ ಕೂಸು ಹೆತ್ತ ಪ್ರಸಂಗ ನಡೆದು ನಾಲ್ಕು ತಿಂಗಳಾಗುತ್ತಾ ಬಂತು. ಈಚೆಗೆ ಎರಡು-ಎರಡೂವರೆ ತಿಂಗಳುಗಳಿಂದ ದೊಡ್ಡವೀರಶೆಟ್ಟಿ

ಯಾಗಲಿ ಅವನ ಮಗನಾಗಲಿ, ಮಾದಪ್ಪನ ಮನೆಗೆ ಹೋಗಿ ಬಂದಿರುವುದನ್ನು ಕಂಡೆ ಎಂದು ಹೇಳುವವರೇ ಇಲ್ಲ.

ಮಾದಪ್ಪನ ಮೊಮ್ಮಗಳಿಗೆ ಎಂಟು ವರುಷ ತುಂಬಿ ಒಂಬತ್ತು ನಡೆಯುತ್ತಿತ್ತು. ತಮ್ಮಯ್ಯನು ಮಗನ ಜಾತಕವನ್ನೂ, ಹುಡುಗಿಯ ಜಾತಕವನ್ನೂ ತೆಗೆದುಕೊಂಡುಹೋಗಿ ಮೈಸೂರಿನಲ್ಲಿ ಆಸ್ಥಾನ್ ವಿದ್ವಾ್ಂ ಸೂರ್ಯನಾರಾಯಣ ಜೋಯಿಸರ ಹತ್ತಿರ ತೋರಿಸಿದ. ಎರಡು ಜಾತಕವೂ ಹೊಂದುತ್ತದೆಂದು ಜೋಯಿಸರು ತಿಳಿಸಿದರು. ಅದನ್ನು ಗುರುತುಹಾಕಿಸಿಕೊಂಡು ಊರಿಗೆ ಬಂದು ಮಾದಪ್ಪನ ಹೆಂಡತಿಗೆ ತೋರಿಸಿ, ಜೋಯಿಸರು ಹೇಳಿದ್ದನ್ನೆಲ್ಲಾ ತಿಳಿಸಿದನು. ತಮ್ಮಯ್ಯ ಹೇಳಿದುದಕ್ಕೆಲ್ಲ ಆಕೆಯು ಹೂಗುಟ್ಟುತ್ತಿದ್ದಳು ಅಷ್ಟೆ. ಬರುವ ಆ ಸಲದ ಲಗ್ನದಲ್ಲಿಯೇ ಲಗ್ನದ ಕಾರ್ಯವನ್ನು ಕೂಡಿಸಿಬಿಡಬೇಕೆಂದು ತಿಳಿಸಿದನು. ಅವನ ಮಾತಿಗೆ ಪ್ರತಿ ನುಡಿಯುವವಳೆ ಆಕೆ? .... ಹಾಗೆಯೇ ಆಗಲಿ ಎಂದಳು. ಸದ್ಯ ಹೆಣ್ಣುಮಗಳ ಕಾರ್ಯ ಎಷ್ಟು ಬೇಗನೆ ಆದರೆ ಅಷ್ಟು ಒಳ್ಳೆಯದು ಅನ್ನಿಸಿತ್ತು ಅವಳಿಗೆ. ಇಷ್ಟನ್ನೆಲ್ಲ ಹೇಳಿ ಮಾತನಾಡಿ ಆದಮೇಲೆ ತಮ್ಮಯ್ಯನು ತನ್ನ ಮನೆಗೆ ತಾನು ಹೋದನು.

ತಮ್ಮಯ್ಯ ಆ ಕಡೆ ಎದ್ದುಹೋಗಲೇ ಇಲ್ಲ, ಈ ಕಡೆ ತಾಯಿ ಮಗಳಿಗೆ ಹತ್ತಿತು ಜಗಳ. ತಮ್ಮಯ್ಯನ ಮಗನಿಗೆ ಅವಳ ಮಗಳನ್ನು ಕೊಡುವುದು ಇಷ್ಟವಿರಲಿಲ್ಲ. ದೊಡ್ಡವೀರಶೆಟ್ಟಿ ಮಗನಿಗೇ ಕೊಟ್ಟು ಲಗ್ನ ಮಾಡಬೇಕೆಂದು ಅವಳ ಹಟ.

"ನೀನು ಹಾಳಾದದ್ದು ಸಾಲದು, ಇನ್ನು ಆ ಮಗುವನ್ನೂ ಹಾಳುಮಾಡಬೇಕು ಅನ್ನು ನೀನು ?" 'ಹಾಳಾದರೆ ನಾನು ಹಾಳಾಗುತ್ತೀನಿ .... ನೀಯೇನು ಹಾಳಾಗಬೇಡ .... ನನ್ನ ಮಗ

ಳಿಗೆ ಲಗ್ನ ಮಾಡೋದು ನನಗೆ ಗೊತ್ತಿದೆ .... ನಿನ್ನ ಪಾಡಿಗೆ ನೀನು ಇದ್ದುಬಿಡು ಅಷ್ಟೆ .... ಗೊತ್ತಾಯ್ತು ?

ಮಗಳು ಈ ರೀತಿಯಲ್ಲಿ ತಾಯಿ ಎಂಬುವ ಗೌರವಾನೇ ಇಲ್ಲದೆ, ತೀರಕನಿಷ್ಟವಾಗಿ, ಖಂಡಿತವಾಗಿ ನುಡಿಯಲು ತಾಯಿ ಆದವಳಿಗೆ ರೇಗುವುದಿಲ್ಲವೆ ?

"ನಿನ್ನ ಮಗಳಿಗೆ ಲಗ್ನ ಮಾಡೋದು ನನಗೇನು ಗೊತ್ತು! ನಿನಗೇ ಗೊತ್ತು .... ಯಾಕೇ ಅನ್ನು ನಿನ್ನ ಅನುಕೂಲ ಪ್ರತಿಕೂಲ ನನಗೆ ಗೊತ್ತಾಗುತ್ತಾ ?.... ನೀ ಹೇಳಿದ ಹಾಗೆ ದೊಡ್ಡವೀರಶೆಟ್ಟಿ ಮಗನಿಗೆ ಕೊಟ್ಟು ಲಗ್ನ ಮಾಡಿದರೆ ಈ ಕಡೆ ಅಳಿಯನೂ ಸಿಕ್ಕು ತ್ತಾನೆ, ಆ ಕಡೆ ಬೀಗನೂ ಸಿಗುತ್ತಾನೆ ನಿನಗೆ.... ನಾನು ಹೇಳಿದ ಹಾಗೆ ಆದರೆ ನಿನಗೇನು ಸಿಕ್ಕುತ್ತೆ ?"

ತಾಯಿಯು ಈ ರೀತಿ ಮಾತನಾಡಲು ಮಗಳಿಗೂ ಕೆರಳಿತು. ನೀನು ನಿನಗೆಬೇಕಾದವನ ಮಗನಿಗೆ ಹ್ಯಾಗೆ ಕೊಡಬೇಕು ಅನ್ನು ತ್ತೀಯೋ, ಹಾಗೇನೆ ನಾನೂನು ನನಗೆ ಬೇಕಾದವನ ಮಗಳಿಗೆ ಕೊಡುತ್ತೇನೆ. ಅನ್ನೋದು ಗೊತ್ತಾಯ್ತು ?

ಮಗಳಮಾತು ತಾಯಿಯನ್ನು ಈಟಿಯಿಂದ ಇರಿದಂತಾ ಯಿತು. 'ಏನಂದ್ಯೆ ಚಂಡಾಳಿ! ನನಗೆ ಬೇಕಾದವನ ಮಗನ ಅವನು?' ನನಗೂ ಅವನಿಗೂ ಸಂಬಂಧ ಕಲ್ಪಿಸುತ್ತೀಯ ನೀನು? ಪಾಪಿಷ್ಟರಂಡೆ, ನೀ ಮಾಡಿರೋ ಕೆಲಸದಲ್ಲಿ ನಿನ್ನ ಮುಖ ನೋಡ ಬಹುದಾ ಮಗಳು ಅಂದ್ಕೊಂಡು!

"ಬೇಡ ಬಿಟ್ಟುಬಿಡು, ನಿನ್ನನ್ನ ಯಾರು ನನ್ನ ಮುಖ ನೋಡೂ ಅಂತ ಹೇಳಿದವರು........ ನನ್ನ ಮುಖ ನೋಡೋದು ನಿನಗೂ ಬೇಡ, ನಿನ್ನ ಮುಖ ನೋಡೋದು ನನಗೂ ಬೇಡ ಅಷ್ಟೆ"

"ಅಷ್ಟೇನ ಹಾಗಾದ್ರೆ ?"

"ಅಷ್ಟೇನಾ ಅಂದ್ರೆ .... ಇನ್ನೇನು ಮತ್ತೆ ಅಲ್ಲಿ! .... ಗೌರವಕ್ಕೆ ಗೌರವ, ಮರ್ಯಾದೆಗೆ ಮರ್ಯಾದೆ ...."

ನಿನ್ನ ಗೌರವ ಹಾಳಾಯಿತು! ನಿನಗೆಂತ ಮರ್ಯಾದೆ ಕೊಡೋದು? .... ಅಪ್ಪ ಜೊತೆಗೆ ಮಗ ಇಬ್ಬರ ಹತ್ತಿರಾನೂ ಹೋಗುತ್ತಿದ್ದವಳಿಗೆ ಎಂತ ಮರ್ಯಾದೇನೆ ಕೊಡೋದು? .... ಹೆತ್ತ ಕೂಸಿನ ಗೋಣು ಮರಿದ ಕತ್ತೇರಂಡೇಗೆ ಗೊತ್ತ್ಯಂತೆ, ಇವಳ ಮಗಳ ಲಗ್ನ ಮಾಡೋದು! ....

ಇದೇ ರೀತಿಯಲ್ಲಿ ತಾಯಿ ಮಗಳು ಬಹಳವಾಗಿ ಕೂಗಾಡಿದರು, ಒಬ್ಬರನ್ನೊಬ್ಬರು ಬೈದಾಡಿದರು.

ಮನುಷ್ಯನಾದವನು ಅರಿತೊ ಅರಿಯದೆಯೋ ಪಾಪ ಕೆಲಸಗಳನ್ನ ಮಾಡುತ್ತಿರುತ್ತಾನೆ ಆದರೆ ಜ್ಞಾನಿಯಾದವನು ಯಾವ ಕಾರ್ಯವನ್ನೇ ಆಗಲಿ ಮಾಡುವ ಮುನ್ನ ತಾನು ಮಾಡಲು ಹೋಗುತ್ತಿರುವುದು ಪಾಪಕಾರ್ಯವೋ ಅಥವಾ ಪುಣ್ಯ ಕಾರ್ಯವೊ ಎಂದು ಯೋಚಿಸುತ್ತಾನೆ. ಅದು ಪಾಪ ಕಾರ್ಯವೆಂದು ಗೊತ್ತಾದರೆ ಅಲ್ಲಿಗೇ ಅದನ್ನು ಕೈ ಬಿಡುತ್ತಾನೆ. ಕಾರ್ಯವಲ್ಲಿದ್ದರೂ ಕೂಡ ಆ ಕಾರ್ಯವನ್ನು ಅಷ್ಟಕ್ಕೇ ತೊರೆಯುತ್ತಾನೆ. ಪಾಪಕ್ಕೆ ಅಂಜುತ್ತಾನೆ. ಪಾಪ ಪುಣ್ಯಗಳ ಅರಿವು ನನಗಿಲ್ಲ ಸ್ವಾಮಿ, ನಾನು ಪೂರ್ಣವಾಗಿ ನಿನ್ನನ್ನೇ ನಂಬಿರತಕ್ಕವನು ಆದ್ದರಿಂದ ನಾನು ಏನು ಮಾಡಿದರೂ ಅದೆಲ್ಲ ನಿನ್ನನ್ನೇ ಹೊಂದಿದೆಯಾಗಿ, ಸರಿಯಾದ ದಾರಿಯಲ್ಲಿ ನಡೆಸಬೇಕಾದವನು ನೀನೇ ಎಂದು ದೇವರಲ್ಲಿ ಮೊರೆ ಇಡುತ್ತಾನೆ. ಏಕೆಂದರೆ ಆತ್ಮ ವಿಶ್ವಾಸವಿಲ್ಲದ ವರ್ತನೆಗಿಂತಲೂ, ಆತ್ಮದ್ರೋಹಕ್ಕಿಂತಲೂ, ಆತ್ಮವಂಚನೆಗಿಂತ ಮತ್ತೊಂದು ಘೋರವಾದ ಪಾಪಕಾರ್ಯವಿರಲಾರದು. ಆತ್ಮ ವಿಶ್ವಾಸಿಯಾದವನು ಸರ್ವದರಲ್ಲಿಯೂ ತನ್ನನ್ನು ಕಾಣುತ್ತಾನೆ.

ಅದಕಾರಣ ಯಾರನ್ನೂ ಯಾವ ವಿಧದಲ್ಲಿಯೂ ನೋಯಿಸಲು ಯತ್ನಿಸನು ಮನುಷ್ಯ ತಪ್ಪುವುದು ಸಹಜವೆಂದೂ, ಮನುಷ್ಯ ನಾದವನು ಬರೀ ತಪ್ಪನ್ನೇ, ಪಾಪವನ್ನೇ ಮಾಡುತ್ತಾ ಹೋದರೆ ಅದರಿಂದ ಮಾನವತೆ ನಿವಾರಣೆಯಾಗುತ್ತದೆ. ಮನುಷ್ಯ ನಾಲ್ಕು ದಿವಸ ಉಳಿಯಬೇಕು ಅಂದರೆ ಅವನು ಸತ್ಯಕ್ಕೆ, ನಿಜಕ್ಕೆ, ಶರಣು ಹೋಗಬೇಕು. ಒಮ್ಮೆ ತಿಳಿದೊ, ತಿಳಿಯದೆಯೋ ಪಾಪಕಾರ್ಯ ವೆಸಗಿದರೂ ಮತ್ತೆ ಅದನ್ನೇ ಮುಂದುವರಿಸಿಕೊಂಡು ಹೋಗ ಬಾರದು. ಮಾಡಿದ ಕಾರ್ಯ ಪಾಪವೆಂಬುದು ಗೊತ್ತಾದ ಮೇಲೆಯೂ ಅದನ್ನು ಬಿಡದೇ ಹೋದರೆ ಅದು ರಾಕ್ಷಸ ಸ್ವಭಾವ, ಮನುಷ್ಯ ಸ್ವಭಾವವೆಂದಿಗೂ ಅಲ್ಲ. ತಿಳಿಯದೇ ಮಾಡುವ ಪಾಪಕ್ಕೆ ಪರಮಾತ್ಮನಲ್ಲಿ ಕ್ಷಮೆ ಬೇಡಬಹುದಾದರೂ, ತಿಳಿದು ತಿಳಿದು ಮಾಡುವ ಪಾಪಕ್ಕೆ ಪರಮಾತ್ಮನ ಕ್ಷಮೆ ಸಿಗುವುದಿಲ್ಲ. ನಾಯಿಯೊಂದು ಅಲಗ ನೆಕ್ಕಲು ಹೋಯಿತು. ನಾಲಗೆ ಸ್ವಲ್ಪ ಕುಯ್ಯಿತು, ರಕ್ತ ಬಂದಿತು. ಅದು ಬಹಳ ರುಚಿಯಾಗಿ ಕಂಡಿತು ಅದು ತನ್ನ ರಕ್ತವೇ ಎಂಬುವ ಅರಿವು ಅದಕ್ಕೆ ಇಲ್ಲದೇ ಹೋಯಿತು ರಕ್ತದ ರುಚಿ ಕಂಡ ಆ ನಾಯಿಯು ಮತ್ತೆ ಮತ್ತೆ ಹೀಗೆ ಹಾಗೆ ನಾಲಿಗೆ ಒರಳಿಸಿಕೊಂಡು ನೆಕ್ಕತೊಡಗಿತು. ಕೊನೆಗೆ ನಾಲಿಗೆ ಕತ್ತರಿಸಿ ಕೆಳಗೆ ಬಿತ್ತು. ಆವಾಗ ಗೊತ್ತಾದರೇನು ಬಿಟ್ಟ ರೇನು ? ಹೋದ ನಾಲಿಗೆ ಹೋಗೇ ಹೋಯಿತು ಮತ್ತೆಎಂದಿಗೂ ಬರುವುದಿಲ್ಲ. ತನ್ನ ಹಸಿವಿಗೆ ತಾನೇ ಊಟಮಾಡಿ ಹೇಗೆ ಹಸಿವು ಇಂಗಿಸಿಕೊಳ್ಳಬೇಕೊ ಹಾಗೆಯೇ ತನ್ನ ತಪ್ಪಿಗೂ ತಾನೇ ಅದರ ಫಲಾಫಲಗಳನ್ನು ಅನುಭವಿಸಬೇಕು. ಆದ್ದರಿಂದಮನುಷ್ಯ ತಾನು ತೋಡಿದ ಹಳ್ಳಕ್ಕೆ ತಾನೇ ಬೀಳಬಾರದು. ಯಾವತ್ತೂ ಪಾಪಕ್ಕೆ ಅಂಜಿದವನಾಗಿ, ಪುಣ್ಯದ ಆಶ್ರಯದಲ್ಲಿರು ವವನಾಗಬೇಕು.

ಇಷ್ಟೆಲ್ಲ ಏತಕ್ಕಾಗಿ ಹೇಳಬೇಕಾಯಿತೂ ಅಂದರೆ ಮಾದಪ್ಪನ ಮಗಳು ಪುನಃ ಮೂರುತಿಂಗಳ ಬಸರಿ. ಅಂದು ರಾತ್ರಿ ತಾಯಿ

ಮಗಳಿಗೆ ಜಗಳವಾದಂದಿನಿಂದ ಅವರವರು ಎಷ್ಟೋ ಅಷ್ಟರಲ್ಲೇ ಇದ್ದರು. ಆ ಜಗಳವಾಗಿ ಎರಡು ತಿಂಗಳಿಗೆ ಬಂತು....ಮಗಳು ಗರ್ಭಿಣಿ ಎಂಬುದು ತಾಯಿಗೇ ಗೊತ್ತಾದದ್ದು. ಗೊತ್ತಾದ ಕೂಡಲೆ ಮಗಳ ವಿಷಯದಲ್ಲಿ ಪೂರ್ಣ ಬೇಸರ ಹುಟ್ಟಿತು. 'ಛಿ, ಪಾಪಿಷ್ಟರಂಡೆ .... ನೀನು ಹೆಣ್ಣೇ ಅಲ್ಲ .... ಹೆಣ್ಣಿನ ಜಾತಿಯಲ್ಲಿ ಹುಟ್ಟಲೇ ಬಾರದಿತ್ತು .... ನಿನಗೆ ಪಾಪದ ಭಯ ಅನ್ನುವುದು ಲೇಶಮಾತ್ರವಾದರೂ ಇಲ್ಲವಲ್ಲ .... ಹೆಣ್ಣು ಭೂಮಿ ಮೇಲೆ ಬಂದ ಮೇಲೆ ಹುಟ್ಟಿದಾಗಿನಿಂದ ಕಣ್ಣು ಮುಚ್ಚಿಕೊಳ್ಳುವವರೆವಿಗೂ, ಹೀಗೇಂತ ಒಬ್ಬರಿಂದ ಬೆರಳು ತೋರಿಸಿಕೊಳ್ಳಬಾರದು .... ಈ ವಯಸ್ಸಿಗೆ ಈ ಪಾಪಿಷ್ಟಮುಂಡೆ ಕೀರ್ತಿ ಕಿತ್ತಾಡಿಹೋಯಿತು. ಲೋಕದ ಮೇಲೆ ....' ಅವಳು ನನ್ನ ಮಗಳೂ ಅಲ್ಲ. ನಾನು ಅವಳ ತಾಯೀನು ಅಲ್ಲವೆಂದುಕೊಂಡಳು. 'ತರಿದು ಜಾಕಿದ ಕಾಲನ್ನು ನಾಯಿಯಾದರೂ ತಿನ್ನಲಿ, ನರಿಯಾದರೂ ತಿನ್ನಲಿ' ತನ್ನ ದಾರಿ ತಾನು ನೋಡುವುದು ಉತ್ತಮವೆಂದುಕೊಂಡಳು. ದಿನ ಬೆಳಗ್ಗೆ ಎದ್ದರೆ ಈ ಪಾಪಿಷ್ಟರಂಡೆ ಮುಖದರ್ಶನ ಮಾಡಿ ಕೊಂಡಿರುವುದಕ್ಕಿಂತಲೂ, ಕಣ್ಣುಗಳನ್ನು ಮುಚ್ಚಿಕೊಳ್ಳುವುದು ಲೇಸೆನಿಸಿತು. ಮೊಮ್ಮಗಳ ನೆನಪಾಗಿ 'ಹುಟ್ಟಿಸಿದ ಶಿವನು ಹುಲ್ಲು ಮೇಯಿಸುವುದಿಲ್ಲವೇ.... ಎಂಬತ್ತನಾಲ್ಕುಲಕ್ಷ ಜೀವರಾಶಿ ಯನ್ನು ಸಲಹುವ ಆ ಸ್ವಾಮಿಗೆ ಈ ಮಗು ಹೊರೆಯೆ ?....ನಾನೇ ಇರಬೇಕು .... ಮಾಡಬೇಕು ಅನ್ನುವ ಅಹಂಭಾವದಿಂದ ಏನಾ ಗುತ್ತೆ ! .... ಬಡವರ ಮಕ್ಕಳಿಗೆ ಶಿವನೇ ಆದರಣೇಂತ ಹ್ಯಾಗೊ ಕತ್ತೆ ಮೇದ ಗರಿಕೆಯಂತೆ ಚಿಗರಿಕೊಳ್ಳುತ್ತದೆ ಎಂದು ಸಮಾಧಾನ ಪಟ್ಟುಕೊಂಡಳು. ಪ್ರಾಣವನ್ನು ಕಳೆದುಕೊಳ್ಳಲು ನಿಶ್ಚಯಿಸಿ ದಳು. ಹೇಗೆ ಕಳೆದುಕೊಳ್ಳುವುದು ಎಂದು ಯೋಚಿಸಿದಳು. ಕ್ಷಣಾರ್ಧದಲ್ಲಿ ಒಂದು ಯೋಚನೆ ಹೊಳೆಯಿತು. ಅದೇ ಸರಿ ಎಂದು ತೀರ್ಮಾನಿಸಿಕೊಂಡು ಸುಮ್ಮನಾದಳು.

೧೭

ಮಾದಪ್ಪನ ಮಗಳು ಬೆಳಗ್ಗೆ ಎದ್ದು ನೋಡುತ್ತಾಳೆ ತಾಯಿ ಇಲ್ಲ. ಎಲ್ಲೊ ಹಿತ್ತಲಿಗೆ ಹೋಗಿರಬೇಕೆಂದು ತಿಳಿದಳು. ಅಷ್ಟು ಹೊತ್ತಾಯಿತು, ಇಷ್ಟು ಹೊತ್ತಾಯಿತು ತಾಯಿ ಸುಳಿವೇ ಇಲ್ಲ. ಅವಳಿಗೆ ಗಾಭರಿಯಾಯಿತು. ಮಗಳ ಕೈನಲ್ಲಿ ಹೇಳಿಕಳುಹಿಸಿ ದೊಡ್ಡ ವೀರಶೆಟ್ಟಿಯನ್ನು ಕರೆಯಿಸಿದಳು. ತಾಯಿಯು ಮನೆಯಲ್ಲಿ ಇಲ್ಲವೆಂದಳು. ಅವನಿಗೂ ಗಾಭರಿಯಾಯಿತು. ಹುಡುಗಿಯನ್ನು ಕಳುಹಿಸಿ ಸುಬ್ಬಣ್ಣನನ್ನು ಬರಮಾಡಿದ. ಅವನು ಬಂದಮೇಲೆ ಅವನೊಂದಿಗೆ ವಿಷಯವನ್ನೆಲ್ಲಾ ಹೇಳಲು, ಅವನು ಬಹಳವಾಗಿ ಯೋಚನೆಮಾಡಿದ. ಕೊನೆಗೆ ಮಾದಪ್ಪನ ಮಗಳಿಗೆ ಎಷ್ಟು ತಿಂಗಳು ಎಂದು ತಿಳಿಯುವುದಕ್ಕಾಗಿ ಸುಬ್ಬಣ್ಣ ಮುಂಬಾಗಿಲಿನ ಹತ್ತಿರ ನಿಂತು ಆಕೆಯೊಡನೆ ಮಾತನಾಡುತ್ತಿದ್ದಾಗ, ಈಕೆಯು ಮಾತುಗಳನ್ನು ಕೇಳಿಸಿಕೊಂಡು ಆತ್ಮಹತ್ಯ ಮಾಡಿಕೊಳ್ಳಲು ಭಾವಿಗೆ ಹೋಗುತ್ತಿದ್ದವಳನ್ನು ತಾನು ಕಾಲುಕಟ್ಟಿಕೊಂಡು ತಪ್ಪಿಸಿದ ಬಗೆ ಜ್ಞಾಪಕಕ್ಕೆ ಬಂದಿತು. ಮಾನಿಷ್ಟಳಾದ ಆಕೆಯು ಮಗಳ ದುರ್ನಡವಳಿಕೆ ನೋಡಿ ನೋಡಿ ಸಾಕಾಗಿ ಭಾವಿಗೆಬಿದ್ದು ಕೊಂಡಳೆಂದು ಖಚಿತವಾಗಿ ತಿಳಿದನು. 'ರಾತ್ರಿ ಏನಾದರೂ ತಾಯಿ ಮಗಳು ಜಗಳ ಆಡಿದಿರಾ? ಎಂದು ಕೇಳಿದ. ಅದಕ್ಕೆ ಅವಳು ಅಂಥದ್ದೇನೂ ಇಲ್ಲವೆಂದೂ, ರಾತ್ರಿ ಉಂಡು ಉಟ್ಟು ನಿತ್ಯ

ದಂತೆ ಎಲ್ಲರೂ ಮಲಗಿಕೊಂಡರೆಂದೂ, ಬೆಳಗಾದಾಗ ನೋಡಿದರೆ ಆಕೆ ಪತ್ತೇನೆ ಇಲ್ಲವೆಂದು ಹೇಳಿದಳು. ಸುಬ್ಬಣ್ಣನು ಪತ್ತೆ ಹೇಗೆ ಆಗುತ್ತಾಳವ್ವಾ ಭಾವಿಸೇರಿರೋಳು' ಅಂದ. ಸುಬ್ಬಣ್ಣ ಹೀಗೆ ಹೇಳಲು ಮಾದಪ್ಪನ ಮಗಳಿಗೂ, ದೊಡ್ಡವೀರಶೆಟ್ಟಿಗೂ ಗಾಭರಿ ಯಾಯಿತು. ಕಣ್ಣುಗಳೇ ಕಾಣದಾದವು. ತಲೆಗೇರಿಬಂದು ಬಿಟ್ಟಿತು ಇಬ್ಬರಿಗೂನು.

ಸುಬ್ಬಣ್ಣ ಹೋಗಿ ಅಮ್ಮತ್ತಿ ವೀರಣ್ಣನನ್ನು ಕರೆದುಕೊಂಡು ಬರಲು ಹೋದ. ಅಮ್ಮತ್ತಿ ವೀರಣ್ಣನು ಅಮ್ಮತ್ತಿ ಬಸಪ್ಪನ ಮಗ ಬಸಪ್ಪನವರು ಬೊಮ್ಮನ ಹಳ್ಳಿಯವರೇ ಆದರೂ ಕೊಡಗಿನ ಅಮ್ಮತ್ತಿಯಿಂದ ಕಿತ್ತಳೆಹಣ್ಣು ತಂದು ವ್ಯಾಪಾರಮಾಡುತ್ತಿದ್ದರಿಂದ ವಾರ ಹದಿನೈದುದಿನಕ್ಕೆಲ್ಲ ಅಮ್ಮತ್ತೀಗೆ ಹೋಗಬೇಕಾಗಿತ್ತು. ಅಲ್ಲಿ ಹದಿನೈದು ದಿವಸ, ತಿಂಗಳು ಉಳಿಯಬೇಕಾಗುತ್ತಿತ್ತು. ಹೀಗಾಗಿ ಅವರಿಗೆ ಅಮ್ಮತ್ತಿಯಲ್ಲಿ ಬೊಮ್ಮನಹಳ್ಳಿ ಬಸಪ್ಪ ಎಂದು ಕರೆಯು ತ್ತಿದ್ದರು. ಈಕಡೆ ಅಮ್ಮತ್ತಿ ಬಸಪ್ಪ ಎಂದು ಕರೆಯುತ್ತಿದ್ದರು. ಅವರ ಮಗ ವೀರಣ್ಣನನ್ನು ಅಮ್ಮತ್ತಿ ವೀರಣ್ಣ ಎಂದು ಕರೆಯುತ್ತಾರೆ.

ಸುಬ್ಬಣ್ಣನು ಅಮ್ಮತ್ತಿ ವೀರಣ್ಣನನ್ನು ಕರೆದುಕೊಂಡು ಬರಲು ಹೋದರೆ ಆಗಲೆ ಊರಿಗೆ ಊರೆ ಕೂಗುತ್ತಾ ಇದೆ, 'ನಿನ್ನೆ ರಾತ್ರಿ ಮಾದಪ್ಪನ ಹೆಂಡತಿ ಉಂಡು ಉಟ್ಟು ಮಲಗಿದ್ದು, ಊರೆಲ್ಲ ಸದ್ದು ಅಡಗಿದಮೇಲೆ, ಮನೆಮುಂದಲ ಭಾವಿಗೆ ಬಿದ್ದು ಪ್ರಾಣಕಳೆದು ಕೊಂಡಳಂತೆ' ಅಂತ....ಕೆಟ್ಟಸುದ್ದಿಗಳನ್ನೆ ಹೇಳುವವರೂ ಬೇಕಿಲ್ಲ ಕೇಳುವವರೂ ಬೇಕಿಲ್ಲ, ತಮ್ಮ ಪಾಡಿಗೆ ತಾವೇ ಹಬ್ಬುತ್ತಿರುತ್ತವೆ. ಅವುಗಳು ಹಬ್ಬುವಷ್ಟರಮಟ್ಟಿಗೆ ಒಳ್ಳೆವಿಷಯಗಳು ಹಬ್ಬಲಾರವು. ಸುದ್ದಿ ಹಬ್ಬಿರುವುದನ್ನು ನೋಡಿ ಸುಬ್ಬಣ್ಣನಿಗೆ ಆಶ್ಚರ್ಯವಾಯಿತು.

ಅಮ್ಮತ್ತಿ ವೀರಣ್ಣನನ್ನು ಸುಬ್ಬಣ್ಣ ಕರೆದುಕೊಂಡು ಬರುವಷ್ಟ ರಲ್ಲಿ ಮಾದಪ್ಪನಮನೆಮುಂದೆ ಜನ ಜಾತ್ರೆಸೇರಿದಹಾಗೆ ಸೇರಿಬಿಟ್ಟಿದ್ದಾರೆ. ಆ ಜನಕ್ಕೆಲ್ಲ ಹೇಳಿ ಕಳುಹಿಸಿದವರು ಯಾರು? ಯಾರು ತಾನೆ ಏತಕ್ಕಾಗಿ ಹೇಳಿಕಳುಹಿಸಬೇಕು. ಒಂದು ಅಗಳು ಅನ್ನವ ಕಂಡರೆ ಕಾಗೆ ಕೂಗುವುದಿಲ್ಲವೆ ತನ್ನ ಬಳಗವೆಲ್ಲವನ್ನು, ಕೋಳಿ ಒಂದು ಗುಟುಕಕಂಡರೆ ಕೂಗುವುದಿಲ್ಲವೆ ತನ್ನ ಒಕ್ಕನೆಲ್ಲವನ್ನು, ಹಾಗೆಯೇ ಇಂಥ ನೀರಿಗೆ ಬಿದ್ದೊ, ನೇಣುಹಾಕಿಕೊಂಡು ಸತ್ತು ಕೆಟ್ಟರೆ, ಸತ್ತ ಹೆಣಕ್ಕೆ ಹದ್ದು ಕಾಗೆ ಮುತ್ತಿಕೊಳ್ಳುವಹಾಗೆ, ಕೀತ ಘಾಯಕ್ಕೆ ನೊಣ ಮುತ್ತುವ ಹಾಗೆ ಮುತ್ತಿಕೊಳ್ಳುತ್ತಾರೆ. ಸತ್ತವನ ಸುದ್ಧಿ ಇರಲಿ—ಅವನ ಸುದ್ಧಿ ಆಯಿತಲ್ಲ, ಹಾಗೆ ಸತ್ತವರ ಪರವಾಗಿ ಇರುತ್ತಾರಲ್ಲ ಅವರನ್ನು ಜೀವಸಹಿತ ಕಿತ್ತು, ತಿಂದು ಬಿಡುತ್ತಾರೆ. ಅವರ ಪಾಪಕ್ಕೆ ಪ್ರಾಯಶ್ಚಿತ್ತವಲ್ಲ ಇವರು ಕಿತ್ತು ತಿನ್ನುವುದು. ಇವರಿಗೆ, ಈಪಾಪಿಷ್ಟರಿಗೆ ಆಪಾಪಿಷ್ಟರಿಂದ ಸುಲಿಗೆ ಮಾಡಲು ಅದೊಂದು ಅವಕಾಶ ಅಷ್ಟೆ-

ಅಮ್ಮತ್ತಿ ವೀರಣ್ಣನು ರುಸ್ತುಂ ಈಜುಗಾರ. ಗವೀಮಠದಲ್ಲಿ ದೊಡ್ಡದೊಂದು ಕೊಳ ಇದೆ. ಹತ್ತುಆಳು ಪ್ರಮಾಣದ ಮೇಲಿದೆ ನಾಟು (ಆಳ) ಸುತ್ತ ಕಲ್ಲುಕಟ್ಟಡ ಒಂದೇಕಡೆ ಹಂತ ಇದಕ್ಕೆ. ಅದರ ಪಕ್ಕಕ್ಕೆ ಒಂದು ತೆಂಗಿನಮರ. ಇವನೇನು ಮಾಡೋನು ಗೊತ್ತೆ !....ಬಟ್ಟೆಬರೆಬಿಚ್ಚಿ ಕೆಳಗಡೆ ಇಟ್ಟುಬಿಟ್ಟು ಬರೀ ಒಂದು ಲಂಗೋಟಾದಲ್ಲಿ ಆ ಮರ ಹತ್ತಿಬಿಡೋದು. ಹತ್ತಿಬಿಟ್ಟು ಮಟ್ಟಿ ಮೇಲೆ ಚಕ್ಕಳಮಟ್ಟೆ ಹಾಕ್ಕೊಂಡು ಕುಳಿತುಕೊಂಡು ಬಿಡುವುದು. ಆ ಮಟ್ಟೆಯಿಂದ ಜಾರಿಕೊಂಡು ನೀರಿಗೆ ಬೀಳೋನಲ್ಲ !....ಜೊಳೆಯಲ್ಲಿ ಈಕಡೆಯಿಂದ ಆಕಡೆಯಿಂದ ಸಲೀಸಾಗಿ ಹೋಗಿ ಬಂದು ಬಿಡೋನು....ಇಲ್ಲಿ ಮುಳುಗುತ್ತಿದ್ದ ಅಲ್ಲಿ ಏಳುತ್ತಿದ್ದ. ಮತ್ತೆ

ಅಲ್ಲಿ ಮುಳುಗುತ್ತಿದ್ದ ಇನ್ನೆಲ್ಲೋ ಮೇಲೇ ಏಳುತ್ತಿದ್ದ...ಚೆನ್ನಾಗಿ 'ಧಮ್' ಹಿಡ್ಕೊಳ್ಳೇನು. ವೀರಣ್ಣನನ್ನು ಭಾವಿಗೆ ಇಳಿಸಿದರು ಅವನು ಒಳಗೆ ಇಳಿದು ನೋಡಿದರೆ! ಏನು ಇಲ್ಲ. 'ದಮ್' ಕಟ್ಟಿ ಮುಳುಗಿಬಿಟ್ಟ ಮಾದಪ್ಪನ ಹೆಂಡತಿ ನೆಲಕಚ್ಚಿಬಿಟ್ಟಿದ್ದಾಳೆ. ಕಿತ್ತರೂ ಬರುವುದಿಲ್ಲ. ಅವಳ ಜುಟ್ಟಿಗೆ ಕೈಹಿಡಿದು ಎತ್ತಿದ. ಬಲಗೈನಲ್ಲಿ ಆಕೆಯ ಜುಟ್ಟು ಹಿಡಿದುಕೊಂಡು, ನೀರಿನಲ್ಲೇ ಮೇಲಕ್ಕೆ ಬಂದ. ಕುತ್ತಿಗೆಮಟ್ಟದಲ್ಲಿ ನೀರಿನಲ್ಲಿ ನೀರನ್ನು ತುಳಿದು ಕೊಂಡು ನಿಂತುಕೊಂಡು, ಎಡಗೈಯನ್ನು ಮೇಲೆತ್ತಿ ಹಗ್ಗಬಿಡಲು ಕೂಗಿಕೊಂಡ ಮೇಲಿನಿಂದ ಹಗ್ಗಬಿಡಲು ಅದರ ಬೆಂಬಳಿಯಲ್ಲಿ ಹೆಣದ ಜೊತೆಯಲ್ಲಿ ವೀರಣ್ಣನು ಮೇಲಕ್ಕೆ ಬಂದ. ಹೆಣವನ್ನು ಮಾದಪ್ಪನ ಪಡಸಾಲೆಯಲ್ಲಿ ಮಲಗಿಸಿದರು.

ಬೊಮ್ಮನಹಳ್ಳಿಯು ಕೋಡಹಳ್ಳಿ ಹೋಬಳಿಗೆ ಸೇರಿದ್ದು. ಕೋಡಹಳ್ಳಿಯಲ್ಲಿ ಪೋಲೀಸ್ ಠಾಣೆ ಇದೆ. ಅಲ್ಲಿ ಜಮೇದಾರರು ಇದ್ದಾರೆ. ಗಂಗಾಧರಪ್ಪ ಬೆಳಗ್ಗೆ ಸುದ್ದಿ ಗೊತ್ತಾದಕೂಡಲೆ ಕರೀಂ ಖಾನ್, ಇನ್ನೂ ಒಂದಿಬ್ಬರನ್ನು ಕರೆದುಕೊಂಡು, ಸೈಕಲ್ ಮೇಲೆ ಕೋಡಹಳ್ಳಿಗೆ ಹೋಗಿ, ಜಮೇದಾರರಿಗೆ ಸುದ್ದಿ ಕೊಟ್ಟ. ಅವರೇನು ಮಾಡಿದರು ಇಬ್ಬರು ಕಾನ್‌ಸ್ಟೇಬಲ್‌ಗಳನ್ನು ಜೊತೆಯಲ್ಲಿ ಕರೆದು ಕೊಂಡು ಆ ಕಡೆಯಿಂದ ಬೆಳಗ್ಗೆ ಅಷ್ಟು ಹೊತ್ತಿಗೇನೆ ಮೈಸೂರಿಗೆ ಬರುತ್ತೆ ಒಂದು ಬಸ್ಸು, ಅದರಲ್ಲಿ ಬಂದು ಬೊಮ್ಮನಹಳ್ಳಿ ಅಡ್ಡರಸ್ತೆ ಯಲ್ಲಿ ಇಳಿದರು. ಅವರು ಇನ್ನೂ ಊರೊಳಕ್ಕೆ ಬಂದೇ ಇಲ್ಲ ಆಗಲೆ ಜನಕ್ಕೆ ಜನ ಪೋಲೀಸಿನವರು ಬಂದರಂತೆ! ಪೋಲೀಸಿ ನವರು ಬಂದರಂತೆ! ಅನ್ನೋದು ಶುರುವಾಗಿಹೋಯಿತು.

ಯಾವ ಗಂಗಾಧರಪ್ಪ, ಹೋಗಿ ಹೇಳಿದರೇನು!...ಯಾರು ಹೋಗಿ ರಿಪೋರ್ಟ್ ಮಾಡಿದರೇನು! ಯಾವ ಪೋಲೀಸು ಬಂದ

ರೇನು!....ಕೊನೆಗೆ ಮಿಲಿಟರೀನೆ ಬಂದರೆ ತಾನೆ ಏನು!....ಎಲ್ಲ ಕಾಸಿನ ಮುಂದಿನ ಓಡಾಟ. ದುಡ್ಡು ಅನ್ನುವುದನ್ನ ಸಿಕ್ಕಾಪಟ್ಟೆ ಖರ್ಚುಮಾಡಲು ಶಕ್ತರಾಗಿರುವಾಗ ಯಾರು ಏನೂ ಮಾಡುವು ದಕ್ಕಾಗುವುದಿಲ್ಲ. ಅಂದರೇನೂ ಅಂದರೆ ದುಡ್ಡುಕಾಸು ಚೆನ್ನಾಗಿ ಖರ್ಚಾಗುತ್ತೆ. ಸ್ವಲ್ಪ ಶ್ರಮವೂ ಆಗುತ್ತದೆ....ಆಗದೆ ಎಂದೂ ಇರುವುದಿಲ್ಲ .... ಅಂದರೆ ಒಟ್ಟಿನಲ್ಲಿ ಬಚಾವ್ ಆಗಬಹುದು. ಈ ವಿಷಯದಲ್ಲಿ ಆಗಿದ್ದೂ ಅದೇನೆ.

ದೊಡ್ಡವೀರಶೆಟ್ಟಿಯು ಕಂಟ್ರೋಲ್ ಇದ್ದ ದಿನಸಿಯನ್ನು ಮಾದಪ್ಪನ ಮನೆಯಲ್ಲಿಯೇ ಸ್ಟಾಕ್ ಮಾಡಿದ್ದ. ಮಾದಪ್ಪನ ಮಗಳಿಗೆ ಒಂದು ವಿಧದಲ್ಲಿ ಕಷ್ಟವಾದರೆ ದೊಡ್ಡವೀರಶೆಟ್ಟಿಗೆ ಎರಡುಮೂರುವಿಧದಲ್ಲಿ ಕಷ್ಟವಾಗಿತ್ತು. ಮಾದಪ್ಪನ ಮಗಳಿಂದ ಸುಮಾರು ಸಾವಿರದವರೆವಿಗೂ ಹಣದ ಸುಲಿಗೆಯಾಯಿತು. ಹೆಚ್ಚುಕಮ್ಮಿ ಅದೇ ಪ್ರಮಾಣದಲ್ಲಿ ದೊಡ್ಡವೀರಶೆಟ್ಟಿಯಿಂದಲೂ ಹಣದ ಸುಲಿಗೆ ನಡೆಯಿತು. ಹಾಗೆ ಸುಲಿಗೆಯಾದುದರಲ್ಲಿ ಸುಬ್ಬಣ್ಣನೂ ಒಬ್ಬ ಭಾಗದಾರನೇ ಆಗಿದ್ದ. ಗಂಗಾದರಪ್ಪನ ಸಂಗಡ ಪೋಲೀಸಿಗೆ ದೂರುಕೊಡಲು ಹೋಗಿದ್ದವರಲ್ಲಿ ಗಂಗಾದರಪ್ಪನ ಹೊರತು ಉಳಕೆಯುವರಿಗೂ ಬಾಯಿ ಬೊಣೆದು, ಅವರನ್ನು ಆಪಕ್ಷ ದಿಂದ ಬಿಡಿಸಿ ತಮ್ಮಂತೆ ತೆಗೆದುಕೊಂಡುದಾಯಿತು. ಸುಲಿಗೆ ಯಾದ ಹಣದಲ್ಲಿ ಬಹು ಭಾಗವು ಪೋಲೀಸರಿಗಾಯಿತು. ಮಾದ ಪ್ಪನ ಮನೆಯುವರಿಗೂ, ದೊಡ್ಡವೀರಶೆಟ್ಟಿಗೂ ಎಷ್ಟಾದರೂ ಹಣ ಖರ್ಚಾದರೂ, ಮಾನ ಹೋದರೂ ಪೋಲೀಸಿನವರ ಕೈನಿಂದ ಬಚಾವೆ ಆದರು.

೧೮

ಗಂಗಾಧರಪ್ಪ ಯಾರನ್ನು ಅಂದು ಅಂಗಡಿ ಪಡಸಾಲೆಯಲ್ಲಿ ಗುಂಪುಸೇರಿಸಿದ್ದನೋ ಅವರಲ್ಲಿ ಬಹು ಮಂದಿ ಈ ಪಕ್ಷಕ್ಕೆ ಬಂದರು ಅವರು ಇವರುಗಳಿಗೇನೆ ಪೂರ್ತ ಸಹಾಯಕರಾಗಿ ನಿಲ್ಲುವವರಾದರು. ಉಳಿದವರೂ ಕೂಡ ನಮಗೆ ಯಾರ ತಂಟೆಯೂ ಬೇಡ ಎಂದು ಮೌನ ವಹಿಸಿದರು. ಇದರಿಂದ ಗಂಗಾಧರಪ್ಪನು ತೀರ ದಿಕ್ಕೆಟ್ಟನು. ಒಂದೇ ಮನೆಯಲ್ಲಿ ಒಂದು ಭಾಗದಲ್ಲಿ ಸರ್ವನಂದ ಸಹೋದರ. ಎದುರಿಗೆ ಆಗದ ಜನ, ಇದರ ಮೇಲೆ ಮಾದಪ್ಪನ ಮಗಳು ಕದ್ದು ಬಸುರಾದರೆ ಇವನಿಗೇನು! ತನಗೆ ಆ ಮನೆಯಲ್ಲಿ ಜಾಗಸಿಗಲಿಲ್ಲ ಅಂದುಕೊಂಡು, ಚಿಕ್ಕ ಜುಂಜಪ್ಪನವರ ಮಕ್ಕಳು ಹೋಗುತ್ತ ಬರುತ್ತ ಇದ್ದಾರಲ್ಲ ಅನ್ನುವ ಅಸೂಯೆಯಿಂದ ಸಮಯ ಕಾಯುತ್ತಿದ್ದ.... ಅವಳು ಬಸುರಿ ಅಂದಕೂಡಲೆ ಟಾಂ ಟಾಂ ಮಾಡಿದ. ಆವತ್ತು ನೋಡಿದರೆ ಅವರು ಇವರು ಅಂದುಕೊಂಡು ಕರೆತಂದು ಪಡಸಾಲೆಯಲ್ಲಿ ಮಲಗಿಕೊಂಡಿದ್ದ. ಹೋಗಿ ಪತ್ತೆಮಾಡಿ ಹಿಡಿದು ಅವರನ್ನ ಬೀದಿಗೆ ತೆಗೆದುಕೊಂಡು ಬಂದನೆ? ಇಲ್ಲ ... ಅದೂ ಆಗಲಿಲ್ಲ. ಮನೆ ಹಿಂದುಗಡೆ ಹೋಗಿ ಕಲ್ಲು ಹೊಡೆಯಿಸಿದ. ಒಂದೆರಡು ಕಲ್ಲು ಅಪ್ಪಿತಪ್ಪಿ ಜುಂಜಪ್ಪನ ಮನೆಗೆ ಬೀಳಲು, ತಮ್ಮಯ್ಯ ಕೂಗಿಕೊಂಡು ಹೊರಕ್ಕೆ ಬಂದರೆ ಎಲ್ಲರೂ ದೌಡು ಹೊಡೆದರು. ಧೈರ್ಯವಾಗಿ ನಿಂತು ಗುದ್ದಾಡಿ

ದಂಡಾಯಿತೆ? .... ಎಂದಿಗೂ ಇಲ್ಲ. ಅದು ಹೇಡಿಯ ಕೆಲಸ. ಹೋಗಲಿ ಗಂಗಾಧರಪ್ಪನೇ ಮಾಡಿಸಿದ ಅನ್ನುವುದು ತಮ್ಮಯ್ಯನಿಗೆ ಗೊತ್ತಾಗಲಿಲ್ಲವೆ? .... ಗೊತ್ತಾಯಿತು. ಮಾದಪ್ಪನ ಹೆಂಡತಿ ಭಾವಿಗೆ ಬಿದ್ದರೆ ಇವನಿಗೇನಾಗಬೇಕಿತ್ತು! ಕೋಡಳ್ಳಿಗೆ ಹೋಗಿ ಪೋಲೀಸಿಗೆ ಸುದ್ದಿ ಕೊಟ್ಟು ಅವರನ್ನು ಕರೆತರಬೇಕಿತ್ತು ಏಕೆ? ಅವರು ಬಂದೇನು ಮಾಡಿದರು! .... ಮಾದಪ್ಪನ ಮಗಳಿಗೆ ದೊಡ್ಡ ವೀರಶೆಟ್ಟಿಗೆ ದುಡ್ಡು ಕಾಸು ಖರ್ಚುಮಾಡಿಸಿದ ಹಾಗಾಯಿತು ಅಷ್ಟೆ. ಆದರೆ ಅದ್ಯಾವುದಕ್ಕೂ ಕೈಹಾಕದೆ ತನ್ನ ಪಾಡಿಗೆ ತಾನಿದ್ದಿದ್ದರೆ ಸರ್ವರೀತಿಯಲ್ಲೂ ಅವನಿಗೆ ಯೋಗ್ಯವಾಗಿದ್ದಿತು. ಈಚೆಗೆ ಅಂಗಡಿಯಲ್ಲಿ ನೋಡಿದರೆ ವ್ಯಾಪಾರ ತೀರ ಕಡಿಮೆ .... ಮನೆಯಲ್ಲಿ ಖರ್ಚು ನೋಡಿದರೆ ಜಾಸ್ತಿ, ಅದರಮೇಲೆ ಇವನಿಗೆ ಎಲ್ಲರೂ ಶತ್ರುಗಳೇ ಆಗಿರುವಾಗ ಇವನು 'ಬಡವ ಮುಡಗಿದ ಹಾಗಿರೊ' ಅನ್ನೊ ಹಾಗೆ ಇರಬೇಕಾಗಿತ್ತು. ಇವನು ಯಾರ ಕೈಯಲ್ಲಿ ಮಾದಪ್ಪನ ಮನೆಗೆ ಹಿಂದುಗಡೆಯಿಂದ ಹೊಡೆಯಿಸಿದನೊ, ಅವರೇನೆ ಸಲೀಸಾಗಿ ಮುಂದುಗಡೆಯಿಂದಲೇ ನಡು ಹಗಲಿನಲ್ಲೆ ಇವನ ಮನೆಗೆ ಕಲ್ಲು ಹೊಡೆಯುವವರಾದರು. ಬೀದಿಗೆ ಬಂದು ಅವರನ್ನು ಹೆದರಿಸುವ ಶಕ್ತಿ ಇಲ್ಲ. ಯಾರಿಗಾದರೂ ಒಪ್ಪಿಸೋಣ ಅಂದರೆ ಊರಿನಲ್ಲಿ ಇವನ ಮಾತು ಕೇಳಿಕೊಂಡು ಇವನ ಪರ ನಿಲ್ಲುವವರ್ಯಾರಿದ್ದಾರೆ? ಹಾಗೂನು ಕೋಡಳ್ಳಿಗೆ ಎರಡು ಮೂರು ಸಲ ಹೋಗಿ ಪೋಲೀಸಿನವರಿಗೆ ದೂರು ಕೊಟ್ಟು ಬಂದ, ಪ್ರಯೋಜನವಾಗಲಿಲ್ಲ, ತಮ್ಮಯ್ಯನ ಓಡಾಟ ಮತ್ತೆ ಎಲ್ಲಿಂದ ಬರಬೇಕು.

ಮಾದಪ್ಪನ ಹೆಂಡತಿ ಭಾವಿಗೆ ಬಿದ್ದು ಸಾಯುವುದಕ್ಕೆ ಮಗಳು ಮತ್ತೆ ಗರ್ಭಿಣಿಯಾದುದೇ ಕಾರಣವೆಂದು ಬೇರೆಯವರು ಊಹಿ

ಷದಿದ್ದರೂ, ಸುಬ್ಬಣ್ಣನೇನೋ ಆಕೆ ಪತ್ತೆ ಇಲ್ಲ ಅಂದಾಗಲೆ ಹೊಳೆ ದಿತ್ತು, ಆದರೆ ಕೇಳಲಿಲ್ಲ ಅಷ್ಟೆ. ಅದಕ್ಕೆ ಕಾರಣವಾದರೂ ಇಷ್ಟೆ ಎಂದಿದ್ದರೂ ಆ ಕೇಸು ತನ್ನ ಹತ್ತಿರಕ್ಕೆ ಬರುತ್ತದೆಂಬುದು ಅವ ನಿಗೆ ಚೆನ್ನಾಗಿ ಗೊತ್ತುಂಟು. ಅಂದಹಾಗೇನೆ ಮಾದಪ್ಪನ ಮಗಳು ಸುಬ್ಬಣ್ಣನ ಕೂಡ, 'ಆ ಅಮ್ಮನನ್ನು ಬರಮಾಡಬೇಕಲ್ಲ' ಅನ್ನುವ ದಿವಸ ತಕ್ಷಣದಲ್ಲೆ ಬಂದಿತು.

" ಯಾವ ಅಮ್ಮನನ್ನು ? "

" ಅದೆ, ಮೊದಲು ನನ್ನ ಕೆಲಸ ಮಾಡಿಕೊಟ್ಟಳಲ್ಲ .... ಅವಳೆ ಸಿದ್ದಿ "

" ಓಹೊ, ಅವಳನ್ನಾ ! .... ಯಾಕೆ ? ಪುನಃ ಬಸುರು ಆಗಿದ್ದೀಯ ? "

ನಾಚಿ ತಲೆ ತಗ್ಗಿಸಿ ನಿಂತಳು. ಸುಬ್ಬಣ್ಣನಿಗೇ ಒಂದು ತರಹ ಆಯಿತು ಅವಳು ನಿಂತಿರುವುದು ನೋಡಿ. ಧೈರ್ಯವಾಗಿ ಅವಳೇ ಕೇಳುವವಳಾಗಿ ಹೋದಳಲ್ಲ, ಅಯ್ಯೋ ಪ್ರಪಂಚವೇ ! ಎಂದುಕೊಂಡು ನಿಟ್ಟುಸಿರುಬಿಟ್ಟು, 'ಈ ಸಲವೂ ಅಪ್ಪ, ಮಗ ಇಬ್ಬರೂನು ಉಂಟೊ ಅಥವಾ ಒಬ್ಬನೇನೋ ? "

ಆಕೆಯು ಉತ್ತರವನ್ನು ಕೊಡಲಿಲ್ಲ .... ಸುಮ್ಮನೆ ತಲೆ ತಗ್ಗಿಸಿಕೊಂಡು ನಿಂತುಕೊಂಡಳು. ಇನ್ನೇನು ತಾನು ಹೇಳಿದ್ದು ಸರಿ ಎಂದು ತಿಳಿದುಕೊಂಡ.

ಮೊಟ್ಟಮೊದಲು ಪಾಪದ ಕೆಲಸ ಮಾಡಬೇಕಾದರೆ ಭಯವಾ ಗುತ್ತದೆ. ಹೆಜ್ಜೆಹೆಜ್ಜೆಗೆ ಹೆದರುತ್ತೇವೆ, ಬರು ಬರುತ್ತ ಸಲೀ ಸಾಗಿಹೋಗುತ್ತೆ. ನಿಸ್ಸಂಕೋಚವಾಗಿ, ನಿರ್ಭಯವಾಗಿ ಮಾಡು ತ್ತೇವೆ. ಸತ್ಯದ ಬಾಳನ್ನು ಬಾಳುವವರು ನಿರ್ಭಯಸ್ಥರಾಗಿರು ತ್ತಾರೆ. ಅದು ಕಾರಣ ಇಷ್ಟೆ.

ಆಯುಧಪಾಣಿಗಳಾಗುವುದಿಲ್ಲ ಅಹಿಂಸಾ ಪರಿಪಾಲಕರಾಗಿರುತ್ತಾರೆ. ಸುಳ್ಳಿನ ಬಾಳನ್ನು ಬಾಳುವವರು ಪಾಪದ ದಾರಿಯಲ್ಲಿರುವವರು ಭಯಸ್ತರಾಗಿರುತ್ತಾರೆ, ಅದು ಕಾರಣ. ಆಯುಧಪಾಣಿಗಳಾಗುತ್ತಾರೆ, ಅಹಿಂಸಾ ಪರಿಪಾಲನೆ ಮಾಡಲಾಗುವುದೇ ಇಲ್ಲ ಅವರ ಕೈಯಲ್ಲಿ. ಅದಕ್ಕೆ ಬದಲಾಗಿ ಹಿಂಸಾಕೃತ್ಯಗಳಲ್ಲಿ ನಿರತರಾಗುತ್ತಾರೆ. ತಮ್ಮ ತಪ್ಪನ್ನು ಮುಚ್ಚಿಕೊಳ್ಳುವುದಕ್ಕಾಗಿ, ತಮಗಾಗಿ ಏನುಬೇಕಾದರೂ ಮಾಡಲು ತಯಾರಾಗಿರುತ್ತಾರೆ.

ಸುಬ್ಬಣ್ಣನಿಗೇನಾಗಬೇಕು .... ತನಗೆ ಬರುವ ಸಂಪಾದನೆಯನ್ನು ಅವನು ಏತಕ್ಕಾಗಿ ಬಿಡುತ್ತಾನೆ! ಕೋಡಳ್ಳಿಗೆ ಹೋಗಿ ಬೂದಳ್ಳಿ ಸಿದ್ದಿಯನ್ನು ಕರೆದುಕೊಂಡು ಬಂದ. ಆಕೆಯು ಬಂದು ಮಾದಪ್ಪನ ಮಗಳ ಕಾರ್ಯವನ್ನು ಮಾಡಿಕೊಟ್ಟಳು. ಮಾದಪ್ಪನ ಹೆಂಡತಿಯು ಮಗಳ ದುರ್ನಡವಳಿಕೆಗೆ ಪ್ರಾಣಕಳೆದುಕೊಂಡುದನ್ನು ಕೇಳಿ ಅವಳಿಗೂ ದುಃಖವಾಯಿತು. ಹೋಗುವಾಗ ಮಾದಪ್ಪನ ಮಗಳಿಗೆ ಔಷಧಿಯನ್ನೂ, ಅದನ್ನೂ ಹೇಗೆ ಮಾಡಿ ತೆಗೆದುಕೊಳ್ಳಬೇಕು ಎಂಬುದನ್ನೂ ತಿಳಿಸಿ— ಇನ್ನು ಮುಂದೆ ತನ್ನನ್ನೇನು ಕರೆಯಿಸಬೇಕಾಗಿಲ್ಲವೆಂದೂ, ಆಕೆಯೇ (ಮಾದಪ್ಪನ ಮಗಳೇ) ಅಂಥಾ ಸಂದರ್ಭ (ಬಂದೇ ಬರುತ್ತದೆ) ನಾನು ಹೇಳಿರುವ ಔಷಧಿಯನ್ನು ಮಾಡಿಕೊಳ್ಳಬಹುದೆಂದು ಹೇಳಿ ಹೋದಳು. ತಾನು ಮತ್ತೆ ಬರಲು ಒಪ್ಪಲಿಲ್ಲ. ಮಾದಪ್ಪನ ಮಗಳ ನಡವಳಿಕೆಯು ಆಕೆಗೂ ಅಸಹ್ಯವಾಗಿರಬೇಕು ಅಂತ ಕಾಣುತ್ತೆ.

೧೯

ನಾಗಣ್ಣನು ಮತ್ತೆ ರೋಗಪೀಡಿತನಾದನು. ಈಸಲ ಅವನು ಮೈಸೂರಿಗೆ ಹೋಗಿ ಇಲಾಜ್ ಪಡೆಯಲು ಇಷ್ಟಪಡಲಿಲ್ಲ. ಹೆಂಡತಿಯು ಬೇಕಾದಷ್ಟು ಹೇಳಿದಳು. ಆಕೆಯ ತಂದೆ, ಆಕೆಯ ತಮ್ಮ ಅಂದರೆ ನಾಗಣ್ಣನ ಭಾವಮೈದ ಇಬ್ಬರೂ ಹೇಳಿದರು. ತಮ್ಮಯ್ಯ ಮತ್ತು ಅವನ ಹೆಂಡತಿ ಇಬ್ಬರೂ ಬೇಕಾದಷ್ಟು ಹೇಳಿದರು. ಯಾರು ಎಷ್ಟು ಹೇಳಿದರೂ ಎಲ್ಲವೂ ನಿಷ್ಪ್ರಯೋಜನವಾಯಿತು. ಕ್ಷಯರೋಗ ಬರುವುದು ಗುಣವಾಗುವುದಕ್ಕಲ್ಲ. ತೆಗೆದುಕೊಂಡು ಹೋಗುವುದಕ್ಕೆ, ಅಂಥಾದ್ದರಲ್ಲೂ ನಾಗಣ್ಣನು ತನ್ನ ರೋಗಕ್ಕಾಗಿ ಈಗಾಗಲೆ ಬೇಕಾದಷ್ಟನ್ನು ಖರ್ಚುಮಾಡಿದ್ದ ಗುಣವಾಯಿತು ಎಂದು ಡಾಕ್ಟರು ಹೇಳಿಕಳುಹಿಸಿದ್ದರೂ ಕೂಡ ನಾಗಣ್ಣನು ತಾನು ಇನ್ನು ರೋಗಿಷ್ಟನೆಂದೇ ತಿಳಿದಿದ್ದನು. ಮತ್ತೆ ರೋಗ ಮರಳಿದ್ದು ಬಿಕ್ಕವರಿಗೆ ಆಶ್ಚರ್ಯವಾದರೂ ಅವನಿಗೆ ಮಾತ್ರ ಆಶ್ಚರ್ಯವೇನಲ್ಲ. ತಾನು ಹ್ಯಾಗೂ ಸಾಯತಕ್ಕವನು. ಚಿಕ್ಕ ಪುಟ್ಟ ಹೆಂಡತಿ....ಮಕ್ಕಳಿಲ್ಲ ಮರಿಇಲ್ಲ. ಅಪ್ಪನ ಮನೆ ಇದೆ ಎಂದು ಕೊಂಡರೂ ಕೂಡ ತನ್ನನ್ನು ಕಟ್ಟಿಕೊಂಡಿದ್ದುದಕ್ಕಾದರೂ ನಾಲ್ಕು ಕಾಸಿಟ್ಟು ಸಾಯಬೇಕೆಂಬುದು ಅವನ ಇಚ್ಛೆಯಾಯಿತು ಗುಣವಾಗದ ಖಾಯಿಲೆಗೆ ವೃಥಾ ಹಣವನ್ನು ಸುರಿದು ಏನು ಪ್ರಯೋಜನ?....ಆದ್ದರಿಂದ ಹೇಗೂ ಸಾಯುವವನೇ, ಹೊರತು

ಉಳಿಯುವವನಲ್ಲ....ಆದ್ದರಿಂದ ಔಷದಿಯೂ ಬೇಡ ಏನೂ ಬೇಡ ಎಂದು ನಿರ್ಧರಿಸಿದ. ಕೊನೆಗೆ ಎಲ್ಲರ ಪೂರ್ಣ ಒತ್ತಾಯದಮೇಲೆ ತಮ್ಮೂರಿನ (ಬೊಮ್ಮನಹಳ್ಳಿಯ) ಡಾಕ್ಟರ್ ನರಸಿಂಗರಾಯರ ಕೈನಲ್ಲಿ ಔಷಧಿ ತೆಗೆದುಕೊಳ್ಳಲು ಒಪ್ಪಲಾರದೆ ಒಪ್ಪಿದ.

ತಮ್ಮಯ್ಯ ನಾದಿನಿ ಲಗ್ನ....ಲಗ್ನಕ್ಕೆ ತಮ್ಮಯ್ಯನ ಮನೆಯಲ್ಲಿ ಜಯಣ್ಣನ ಹೊರತು, ಉಳಿದವರೆಲ್ಲ ಹೊರಟರು. ಬಸ್ಸಿಗೆ ಟಿಕೆಟ್ ಬುಕ್ಕಿಂಗ್ ಏಜೆಂಟಾಗಿದ್ದರೂ, ಜಯಣ್ಣ ಹೋಗಬೇಕು ಅಂದಿದ್ದಾರೆ ಹೋಗಬಹುದಿತ್ತು. ಆದರೆ ಅವನಿಗೂ ಮನಸ್ಸಿರಲಿಲ್ಲ. ಆದ್ದರಿಂದ ತಾನು ಟಿಕೆಟ್ ಬುಕಿಂಗ್ ಏಜೆಂಟಾಗಿರುವುದನ್ನು ಒಂದು ನೆಪಮಾಡಿಕೊಂಡ ಅಷ್ಟೆ. ಜಯಣ್ಣನನ್ನು ನಾಗಣ್ಣನ ಮನೆಯಲ್ಲಿ ಊಟಕ್ಕೆ (ಗೊತ್ತುಮಾಡಿ) ಅಂಗಡಿ, ಮನೆ ಕಡೆ ನೋಡಿಕೊಳ್ಳುವುದಕ್ಕೆ ಕಟ್ಟುಮಾಡಿ ಲಗ್ನಕ್ಕೆ ಹೋಗಿದ್ದರು.

ಬೆಳಗ್ಗೆ ಸುಮಾರು ಹತ್ತುಗಂಟೆ ಸಮಯ. ಕಿರುಮನೆಯಲ್ಲಿ ನಾಗಣ್ಣ ಕೆಮ್ಮುತ್ತ ಹಾಸಿಗೆಮೇಲೆ ಪಚ್ಚಮಗ್ಗುಲಾಗಿ ಮಲಗಿದ್ದ. ಕಿರುಮನೆಯಲ್ಲಿಯೆ ಗೋಡೆಬತ್ತಿಗೆ ಕುಳಿತಿದ್ದ ಜಯಣ್ಣ ಫಲಹಾರ ಮಾಡಿ ಮೇಲೆದ್ದ. ಬಾಗಿಲ ಕಸದಮೇಲೆ ಹತ್ತಿದವನನ್ನು ನಾಗಣ್ಣನು ಕಂಡು 'ಎದ್ಯಾಕೊ ಬಾಗಿಲಮೇಲೆ ಹತ್ತಿದೆ?' ಅಂದ. 'ಮೈಸೂರು ಕಡೆ ಬಸ್ಸು ಬರೊಹೊತ್ತಾಯಿತು ಚಿಕ್ಕಪ್ಪ. ಹೋಗಬೇಕು ಅಷ್ಟರ್ಲ್ಲೇಗೆ....ಮೇಲೆ ಪೆಟ್ರೋಲ್ ಕ್ಯಾನಿದೆ.... ತೆಗೆದು ಕೊಳ್ಳುತ್ತೀನಿ' ಎಂದವನೆ....ಮೇಲೇರಿದ.

ತೊಟ್ಟಿಗೆಲ್ಲ ಹಲಗೆಸೇವೆಮಾಡಿತ್ತು. ಜಯಣ್ಣನು ಇರಿಸಿದ್ದ ಕಡೆ ಪೆಟ್ರೋಲ್‌ಕ್ಯಾನಿರಲಿಲ್ಲ. ಅದನ್ನು ಬಗ್ಗಿಕೊಂಡು ಹುಡುಕುತ್ತ ಹುಡುಕುತ್ತ ದೊಡ್ಡವೀಳೆಟ್ಟ ಕಿರುಮನೆ ಇಡೆಗೆ ಬಂದ. ಕಿರುಮನೆಯಲ್ಲಿ ಬೀಳಿಸದ್ದು ಕೇಳಬಂದಿತು. ಎಡಗೈನಲ್ಲಿ ಮುಂಡಿಗೆ

ಹಿಡಿದುಕೊಂಡು ಆಕಡೆಗೆ ನೋಡಿದ. ದೊಡ್ಡವೀರಶೆಟ್ಟಿ ಹೆಂಡತಿ ಸೀರೆಉಟ್ಟುಕೊಳ್ಳುತ್ತಿದ್ದಳು ರವಕೆ, ಬಾಡಿ ಯಾವುದನ್ನೂ ತೊಟ್ಟಿರಲಿಲ್ಲ. ಸೆರಗನ್ನು ತೆಗೆದು ಹೆಗಲಮೇಲೆ ಹೆಸೆದುಕೊಂಡು, ನೆರಿಗೆಹಿಡಿದು ಬಾಳೇಕಾಯಿಹಾಕಿ .... ನೆರಿಗೆಯನ್ನು ನುಲಿದು, ವದರಿ .... ಗಳುವಿನಮೇಲಿದ್ದ ಕುಪ್ಪಸ .... ಬಾಡಿಯನ್ನು ತೆಗೆದು ಕೊಳ್ಳಲು ಆಕಡೆ ತಿರುಗಿದ ಮೇಲಿದ್ದ ಜಯಣ್ಣನನ್ನು ಕಂಡು ಕೊಂಡಳು. ಸರ್‍ರಂತ ಬಾಗಿಲಮರೆ ಸೇರಿದಳು.

ಸ್ವಲ್ಪಹೊತ್ತು ಬಿಟ್ಟುಕೊಂಡು, ಹಾಗೆಯೇ ವಾರೆಕಣ್ಣಿನಿಂದ ಮೇಲೆ ನೋಡಿದಳು. ಜಯಣ್ಣ ಅಲ್ಲೆ ನಿಂತಿದ್ದ, ಮತ್ತು ಆ ಕಿರುಮನೆಯಕಡೆಗೇ ನೋಡುತ್ತ ನಿಂತಿದ್ದ. ಅವಳು ವಾರೆಗಣ್ಣಿನಿಂದ ನೋಡಿದಾಗ ಅವನೂ ಅವಳನ್ನ ಬಿಟ್ಟುಗಣ್ಣುಗಳಿಂದ ನೋಡಿದ. ದೊಡ್ಡವೀರಶೆಟ್ಟಿ ಹೆಂಡತಿಯು ಗೋಡೆಪಕ್ಕದಲ್ಲೆ ಸರಿದುಕೊಂಡು, ಮೂಲೆಗೆ ಹೋದವಳೆ ಗಳುವಿನ ಮೇಲಿದ್ದ ಬಾಡಿ, ಕುಪ್ಪಸ ತೆಗೆದುಕೊಳ್ಳಲು ಕೈಹಿಡಿದಳು. ಕಿರುಮನೆ ಬಾಗಿಲ ಪಕ್ಕಕ್ಕಾದಂತೆ ಮೇಲೆ ಗೋಡೆ ಮೇಲೆ ಜಯಣ್ಣ ಕುಳಿತಿದ್ದುದನ್ನು ಕಂಡಳು. ಕಂಡವಳೆ ಲಜ್ಜೆಯಿಂದ ತಲೆ ತಗ್ಗಿಸಿದಳು ಮೈತುಂಬ ಸೆರಗನ್ನು ಹಾಕಿಕೊಂಡಳು. ಮತ್ತೆ ಮತ್ತೆ ಬಂದು ನಾಲ್ಕಾರು ಸಲ ತಲೆಎತ್ತಿ ನೋಡುವುದು ಮತ್ತೆ ತಲೆತಗ್ಗಿಸುವುದು ಹಾಗೆ ಮಾಡಿದಳು. ಜಯಣ್ಣ ಮಾತ್ರ ಕುಳಿತಲ್ಲಿಂದ ಜಗ್ಗಲಿಲ್ಲ. ಬಿಟ್ಟುಗಣ್ಣುಗಳಿಂದ ಆಕೆಯನ್ನು ಒಂದೇ ಸಮನೆ ನೋಡುತ್ತಿದ್ದ ಆ ವೇಳೆಗೆ ದೊಡ್ಡವೀರಶೆಟ್ಟಿ ಬಂದುಬಿಟ್ಟುದನ್ನ ಕಂಡುಕೊಂಡವನೆ ಜಯಣ್ಣ ಜಾಗಬಿಟ್ಟ' ಪೆಟ್ರೋಲ್‌ಕ್ಯಾನ್ ತೆಗೆದುಕೊಂಡು ಕೆಳಗೆ ಬಂದ. ನಾಗಣ್ಣನು ಎಪ್ಪೊತ್ತೊ ನೀನು ಮೇಲ್ಹೋಗೋದು ಇಡುವುದು ಒಂದುಕಡೆಯಾಗಿ ಹುಡುಕುವುದು ಒಂದುಕಡೆ

ಯಾದರೆ....ಇನ್ನೇನು ಎಂದ ಕೆಮ್ಮು ಶುರುವಾಯಿತು. ಜಯ್ಯಣ್ಣ ಏನನ್ನೂ ಮಾತನಾಡಲಿಲ್ಲ. ಕ್ಯಾನತೆಗೆದುಕೊಂಡು ಹೊರಟ. ನಾಗಣ್ಣನ ಹೆಂಡತಿಯು 'ಈ ಮನೆಯಲ್ಲೆಲ್ಲ ಇದೇ ಆಗ್ಹೋಯ್ತು ಇಷ್ಟೊತ್ನೂನು ಆಡಬ್ಬಾನೆ ಹುಡುಕುತ್ತಾ ಇದ್ಧ ನಿಮ್ಮ ಅಣ್ಣನ ಮಗ ಅಂತ ತಿಳ್ಕೊಂಡಿದ್ದೀರೇನೊ ಅಲ್ವೆ?' ಅಂದಳು.

'ಇನ್ನೇನು ಮಾಡುತ್ತಿದ್ದ ಮತ್ತೆ'

'ನಿಮ್ಮ ಚಿಕ್ಕಣ್ಣನವರ ಕಿರುಮನೆ ಗೋಡೆಮೇಲೆ ಕುಳಿತು ಕೊಂಡು ಇಣಕುತ್ತಿದ್ದ....ಅವರ ಚಿಕ್ಕಪ್ಪಬಂದಿದ್ದನ್ನ ಕಂಡು ಕೊಂಡು ಈ ಕಡೆ ಎದ್ದುಬಂದ ಅಷ್ಟೆ'

'ಲೆ, ಇಲ್ಲವಾದುದನ್ನೆಲ್ಲ ಒಬ್ಬರ ಮೇಲೆ ಹಾಗೆಲ್ಲ ಹೇಳಬಾರದು....'

'ಇಲ್ಲವಾದುದನ್ನು ಯಾಕ್ಹೇಳುತ್ತಾರೆ....ಎಲ್ಲ ಉಂಟಾದು ದನ್ನೆ....ಕಣ್ಣಾರ ಕಂಡಿದ್ದನ್ನೆ ಹೇಳೋದು'

'ನೀನು ಯಾವಾಗ ನೋಡಿದೆ?'

'ಈವಾಗ ಅಪ್ಪಳ ತೆಗೆದುಕೊಳ್ಳುವುದಕ್ಕಾಗಿ ಮೇಲ್ಹತ್ತಿರ ಲಿಲ್ಲವೆ....ಆವಾಗ ನೋಡಿದೆ....'

'ಚ್ .... ಹೋಗ್ಲಿಬಿಡು .... ಅವನು (ದೊಡ್ಡವೀರಶೆಟ್ಟಿ) ಕೇಳಿಸಿಕೊಂಡಾನು.'

ಗಂಗಾದರಪ್ಪನ ತಾಯಿ ಗುಳಘಟ್ಟದ ಅಮ್ಮ ತೀರಿಕೊಂಡಳು ಅವಳಿಗೆ ಅಂಥಾದ್ದೇನು ವಯಸ್ಸಾಗಿರಲಿಲ್ಲ. ಈವತ್ತೆ ಐವ ತ್ತೊಂದು ವರುಷ -ಆಕೆಗೆ ಆಗಲೆ ಅವಳಿಗೆ ಆಯುಸ್ಸು ತುಂಬಿ ಬಂದಿತ್ತೆ? ತುಂಬಂದಿತ್ತೆ ಅಂದರೆ ನಮ್ಮ ನಿಮ್ಮ ಕೈಯಲ್ಲಿದಿಯೆ ಅದು? ನಾವು ಹೇಳಿದ ಹಾಗೆ ಕೇಳುವುದಕ್ಕೆ! ಈವಾಗ ಬಾ ಅಂದರೆ ಈವಾಗ ಹೊರಟುಹೋಗಬೇಕು, ಅದಕ್ಕೇನು ವಾಯಿದೆ

ಇದೆಯೆ? ಎಂದಿಗೂ ಇಲ್ಲ. ಗುಳಘಟ್ಟದಲ್ಲಿ ಹುಟ್ಟಿದವಳು, ಬೆಳೆದಳು....ಸರಗೂರಿಗೆ ಮದುವೆಯಾದಳು. ಆದರೆ ತಿರುಗಿ ಗುಳಘಟ್ಟಕ್ಕೆ ವಾಸಕ್ಕೆ ಬಂದರು. ಚಿಕ್ಕೀರಪ್ಪನವರು ಸತ್ತರು. ಚಿಕ್ಕಜುಂಜಪ್ಪನವರು ದೊಮ್ಮನಹಳ್ಳಿಯಲ್ಲಿ ತಂದಿರಿಸಿದರು. ಇಲ್ಲಿಗೆ ಬಂದಮೇಲೆ ಏನೇನೊ ಕಷ್ಟ ಸುಖ ಎಲ್ಲವನ್ನೂ ಅನುಭವಿಸಿದ್ದಾಯಿತು. ಅನೇಕರ ವಿರೋಧವನ್ನು ಕಟ್ಟಿಕೊಂಡಿದ್ದಾಯಿತು. ಎಷ್ಟು ಜನಕ್ಕೆ ಮದ್ದು ಹಾಕಿದಳು. ಕೊನೆಗೆ ಹೊಟ್ಟೆಯಲ್ಲಿ ಹುಟ್ಟಿದ ಮಕ್ಕಳುಗಳಿಗೆ ಮನೆಗೆ ಬಂದ ಸೊಸೆಯರಿಗೂ ಬಿಡಲಿಲ್ಲ ಇಂದು ನಾಲ್ಕು ಜನರ ಹೆಗಲಮೇಲೆ ಸಲೀಸಾಗಿ ಹೊರಟುಬಿಟ್ಟಳು. ಅವಳ ರುದ್ರಭೂಮಿಯು ದೊಮ್ಮನ ಹಳ್ಳಿಯಲ್ಲಿತ್ತು.

ಗುಳಘಟ್ಟದ ಅಮ್ಮನು ಸತ್ತದಿನ ಮಾತ್ರ ಎದುರುಮನೆಯವರು ಹೆಣಕ್ಕೆ (ಒಪ್ಪಮಾಡಿರಲು) ಹೋಗಿದ್ದರು. ಆರಾಧನೆಗೇ (ತಿಥಿಗೆ) ಮಾತ್ರ ಅವರ್ಯಾರೂ ಹೋಗಲಿಲ್ಲ. ತಾಯಿಯನ್ನು ಕಳೆದುಕೊಂಡು ತಿಂಗಳಾಗಲಿಲ್ಲ, ಮುಚ್ಚಂಜೆಯಲ್ಲಿ ಕೆರೆಕಡೆ ಹೋಗಿದ್ದು ಒಬ್ಬನೇ ಊರಿಗೆ ಬರುತ್ತಿದ್ದ. ಗೂಬೆಯು ಸಲೀಸ್ ಹಾರಿಬಂದು, ಅವನ ಭುಜದಮೇಲೆ ಕುಳಿತುಕೊಂಡಿತು....ಎಂಥ ಅದೃಷ್ಟವಂತ ಇರಬಹುದು! ಮನೆಗೆ ಬಂದವನೆ ಉಟ್ಟಬಟ್ಟೆಸಹಿತವಾಗಿ ತಲೆಯಿಂದ ಸ್ನಾನಮಾಡಿ, ಮಡಿಉಟ್ಟುಕೊಂಡು, ಶಿವಪೂಜೆಮಾಡಿಕೊಂಡು, ದೇವಸ್ಥಾನಕ್ಕೆ ಹೋಗಿ 'ಎಳ್ಳುಬತ್ತಿ' ಹತ್ತಿಸಿಬಂದ. ಇದಾದ ತಿಂಗಳಿಗೆ ಮನೆಯಲ್ಲಿ ಜೇನುಕಟ್ಟಿತು. ನೋಡಿ ಅದೃಷ್ಟ ಕೂಡಿಬಂದರೆ ಹೀಗೆ ಬರಬೇಕು ಅಲ್ಲವೆ? ಅದೃಷ್ಟ ಅಂದರೆ ಕಣ್ಣಿಗೆ ಕಾಣದುದು. ಅದು ಬರುವುದೂ ಕಾಣುವುದಿಲ್ಲ, ಹೋಗುವುದೂ ಕಾಣುವುದಿಲ್ಲ. ಬರುವಾಗ ಹ್ಯಾಗೆ ಬರುತ್ತದೆ ಅಂದರೆ—ತೆಂಗಿನ ಮರ ಎಷ್ಟುಎತ್ತರ, ನಾವು ಬುಡಕ್ಕೆ ಎರೆಯು

ವುದು ಉಪ್ಪುನೀರು ಆದರೆ ಅಷ್ಟು ಎತ್ತರದಲ್ಲಿ ಸಿಹಿನೀರು (ಎಳನೀರು) ಹೇಗೆ ಜಮಾಯಿಸಿತು? ಹಾಗೆ ಅದೃಷ್ಟ ಬರುವ ಕಾಲಕ್ಕೆ. ಹೋಗುವ ಕಾಲಕ್ಕೆ ಆನೆ ಬೇಲದ ಹಣ್ಣು ನುಂಗುತ್ತದೆ. ಕರಟ ಕರಟದಂತೆಯೇ ಇರುತ್ತದೆ, ಒಳಗಡೆ ಹಣ್ಣೇ ಇರುವುದಿಲ್ಲ. ಅದು ಎಲ್ಲಿ ಹೋಯಿತು? ಹ್ಯಾಗೆ ಹೋಯಿತು? ಹ್ಯಾಗೆ ಹೋಯಿತೊ, ಎಲ್ಲಿಗೆ ಹೋಯಿತೋ ಬಲ್ಲವರ್ಯಾರು. ಸಿರಿಯನ್ನು ಸದ್ವೃತ್ತಿಯಿಂದ ಸಂಪಾದನೆ ಮಾಡಿದರೆ ನಾಲ್ಕು ದಿನ ಅದೂ ನಿಲ್ಲುತ್ತದೆ. ಬ್ಲಾಕ್‌ಮಾರ್ಕೆಟ್ ದುಡ್ಡು, ಒಬ್ಬರ ತಲೆ ಹೊಡೆದು ಸಂಪಾದನೆಮಾಡಿದ ದುಡ್ಡು ಎಷ್ಟು ದಿನ ಉಳಿಯಬಲ್ಲದು? ಸಿರಿ ಬಂದ ಕಾಲದಲ್ಲಿ ಹಿಗ್ಗದೆ, ಅನ್ಯಾಯಕ್ಕೆ ಹೋಗದೆ ವಿನಯವಂತನಾಗಿ, ಸನ್ಮಾರ್ಗಿಯಾಗಿದ್ದರೆ ಅಂಥಾವನ ಹತ್ತಿರ ಒಂದು ನಾಲ್ಕು ದಿನ ಸಿರಿ ನಿಲ್ಲುತ್ತದೆ. ಅದಿಲ್ಲದೆ ಸಂಪಾದನೆ ಮಾಡುವುದೂ ದುರ್ಮಾರ್ಗದಿಂದಲೆ ಆಗಿ, ಆಮೇಲೆ ದುರ್ಮಾರ್ಗದಲ್ಲೇ ನಿರತನಾದರೆ, ಎಷ್ಟು ಬೇಗನೆ ಎಷ್ಟು ಮೇಲಕ್ಕೆ ಹೋದನೊ ಅಷ್ಟೇ ಬೇಗನೆ ತಳ ಕಂಡುಬಿಡುತ್ತಾನೆ, ಭೂಗತವಾಗಿಬಿಡುತ್ತಾನೆ.

ಮನೆಯಲ್ಲಿ ಜೇನುಕಟ್ಟಿದಮೇಲೆ ಜೋಯಿಸರಲ್ಲಿ ವಿಚಾರಿಸಿದ ಅವರು ಸ್ವಲ್ಪ ಕಾಲ ಮನೆಯನ್ನು ಬಿಡುವಂತೆ ಹೇಳಿದರು. ಊರಿನೊಳಗೆ ಬಂದು ಮನೆ ನೋಡಿಕೊಂಡು ಮನೆಯನ್ನು ಖಾಲಿಮಾಡಿದ.

° ° ° ° °

ಚಿಕ್ಕ ಜುಂಜಪ್ಪನವರು ತಮ್ಮ ಅಜ್ಜಿಪಾಲಿನೊಂದಿಗೆ ಹೋಗಿ ಮಗಳ ಮನೆಯನ್ನು ಸೇರಿಕೊಂಡಿದ್ದುದು ಸರಿಯಷ್ಟೆ. ಅಲ್ಲಿ ಆ ಅಜ್ಜೀ ಪಾಲನ್ನೇ ವೃದ್ಧಿಮಾಡಿದರು. ಅವರಿಗೂ ಕೊನೆಗಾಲ ಪ್ರಾಪ್ತವಾಯಿತು. ಬೊಮ್ಮನಹಳ್ಳಿ ಸುದ್ದಿ ತಿಳಿದೊಡನೆಯೇ

ನಾಗಣ್ಣನ ಹೊರತು ಉಳಿದ ಮೂವರು ಮಕ್ಕಳೂನು ತಕ್ಷಣ ತಕ್ಷಣ ಹೋದರು ಮೂವರಿಗೂ ಮುಖ ಸಿಕ್ಕಿತು. ಚಿಕ್ಕ ಜುಂಜಪ್ಪನವರು ತಮ್ಮ ಅಜ್ಜಿ ಪಾಲನ್ನು ತಮ್ಮ ಮಗಳಿಗೇ ಕೊಡುವುದಾಗಿಯೂ ಅದಕ್ಕೆ ಗಂಡುಮಕ್ಕಳುಗಳೆಲ್ಲ ಹೃತ್ಪೂರ್ವಕವಾಗಿ ತಮ್ಮ ಒಪ್ಪಿಗೆಯನ್ನು ಕೊಡಬೇಕೆಂದೂ, ಹಾಗೆ ತಮ್ಮ ಒಪ್ಪಿಗೆಯನ್ನು ಕೊಟ್ಟರೆಮಾತ್ರ ನಿರಾಳವಾಗಿ ಪ್ರಾಣಬಿಡುವುದಾಗಿ ತಿಳಿಸಿದರು ಮೂವರೂನು 'ಹಾಗೆ ಆಗಲಿ' ಎಂದು ಕೈಮೇಲೆ ಕೈಹಾಕಿ ಒಪ್ಪಿಕೊಂಡರು. ತಮ್ಮಯ್ಯನು ನಾಗಣ್ಣನ ಪಾಡು ತನ್ನದೇ ಆಗಿರಲಿ ಎಂದು ಹೇಳಿ, ಅವನ ಪರವಾಗಿಯೂ ಒಪ್ಪಿಗೆ ಇತ್ತನು. ಚಿಕ್ಕ ಜುಂಜಪ್ಪನವರು ಲಿಂಗೈಕ್ಯರಾದರು.

ಮಾದಪ್ಪನ ಮಗಳಿಗೆ ಒಂದು ಹೆಣ್ಣುಮಗು ಇರುವುದು ಸರಿಯಷ್ಟೆ. ಅದನ್ನು ತಮ್ಮಯ್ಯನು ತನ್ನ ಮಗನಿಗೆ ತಂದುಕೊಳ್ಳಬೇಕೆಂದಿದ್ದನು ಮಾದಪ್ಪನ ಹೆಂಡತಿಯು ತೀರಿಕೊಂಡಮೇಲೆ ಅವನ ಆ ಆಶೆಗೆ ಪೂರ್ಣವಾಗಿ ಕಲ್ಲುಬಿದ್ದಿತು. ಏಕೆಂದರೆ ಮಾದಪ್ಪನ ಮಗಳಿಗೆ ತಮ್ಮಯ್ಯನ ಮಗನಿಗೆ ತನ್ನ ಮಗಳನ್ನು ಕೊಟ್ಟು ಮಾಡುವುದಕ್ಕೆ ಇಷ್ಟವೇ ಇಲ್ಲ. ಅದೇ ಮಾತಿಗೇ ಅಲ್ಲವೆ ಅವತ್ತೊಂದು ದಿವಸ ತಾಯಿ ಮಗಳಿಗೆ ಜಗಳವಾದುದು? ಮಾದಪ್ಪನ ಮಗಳಿಗೆ ದೊಡ್ಡವೀರಶೆಟ್ಟಿ ಮಗನಿಗೇ ತನ್ನ ಮಗಳನ್ನು ಕೊಟ್ಟು ಲಗ್ನಮಾಡುವುದಾಗಿ ತಾಯಿಯು ಮುಂದೆ ಹೇಳಿಯೇ ಇದ್ದಳು. ಈವಾಗ ತಾಯಿಯೂ ಇಲ್ಲ, ಇನ್ನೇನು ಯಾರ ತಂಟೇನೂ ಇಲ್ಲ. ತಮ್ಮಯ್ಯ ತನ್ನ ಮಗನ ಜಾತಕಕ್ಕೂ ಮಾದಪ್ಪನ ಮೊಮ್ಮಗಳ ಜಾತಕಕ್ಕೂ ಮೈಸೂರಿನಲ್ಲಿ ತೋರಿಸಿಕೊಂಡು ಬಂದಿದ್ದ ಸರಿಬಂದಿತ್ತು. ಈವಾಗ ದೊಡ್ಡವೀರಶೆಟ್ಟಿ

ಮಗನ ಜಾತಕಕ್ಕೂ ಹುಡುಗಿ ಜಾತಕಕ್ಕೂ ತೋರಿಸಲೂ ಇಲ್ಲ ಮಾಡಿಸಲೂ ಇಲ್ಲ. ಕೊನೆಗೆ ಹೆಸರಿನ ಬಲಕ್ಕೂ ನೋಡಲಿಲ್ಲ. ಅದೇ ವರ್ಷದ ಲಗ್ನದಲ್ಲಿ ದೊಡ್ಡವೀರಶೆಟ್ಟಿ ಮಗನಿಗೂ ಮಾದಪ್ಪನ ಮೊಮ್ಮಗಳಿಗೂ ಲಗ್ನಕಾರ್ಯ ಮಾಡಿಯೇಬಿಟ್ಟರು. ಲಗ್ನ ಕಾರ್ಯವು ಮಾದಪ್ಪನ ಮನೆಯಲ್ಲಿಯೇ ನಡೆಯಿತು. ತಮ್ಮಯ್ಯನ ಮನೆಯಿಂದ, ನಾಗಣ್ಣನ ಮನೆಯಿಂದ ಯಾರೂ ಲಗ್ನಕ್ಕೆ ಹೋಗಿರಲಿಲ್ಲ. ಊರಿನಲ್ಲಿ ಜಾತಿಯವರ ಮನೆಗಳಿಗೆಲ್ಲ ಹೇಳಿದ್ದರಾದರೂ ಹೋದವರು ಹೋದರು, ಬಿಟ್ಟವರು ಬಿಟ್ಟರು. ಧಾರೆಗ್ದಾನಕ್ಕೆ ಹುಡುಗನ ಕಡೆ ದೊಡ್ಡವೀರಶೆಟ್ಟಿ ಅವನ ಹೆಂಡತಿ, ಹೆಣ್ಣಿನ ಕಡೆ ಸುಬ್ಬಣ್ಣ ಅವನ ಹೆಂಡತಿ ಕುಳಿತುಕೊಂಡರು ಅಂದರೆ ಅದು ಎಂಥಹ ಪುಣ್ಯದ ಕಲ್ಯಾಣವಾಗಿರಬಹುದೆಂಬುದನ್ನು ಊಹಿಸಬಹುದಲ್ಲವೆ? ಲಗ್ನದಲ್ಲಿ ಹುಡುಗಿಗೆ ಏಳು ತುಂಬಿ ಎಂಟನೇ ವರ್ಷ. ಇನ್ನೂ ಮೈನೆರೆಯದೇ ಇರುವ ಅಂಥ ಚಿಕ್ಕ ಹುಡುಗಿಗೆ ಲಗ್ನವಾದ ಮೇಲೆ ಶೋಭನ (ಪ್ರಸ್ತ) ಮಾಡಿದರಲ್ಲ ಪಾಪಿಷ್ಟ ಮುಂಡೇಮಕ್ಕಳು, ಅದ್ಹೇಗೆ ಮಾಡಿದರೋಂತ?

ಚಿಕ್ಕ ಜುಂಜಪ್ಪನವರು ತೀರಿಕೊಂಡುದಕ್ಕೂ ಈ ಲಗ್ನವಾದುದಕ್ಕೂ ಐದು ತಿಂಗಳು .... ನಾಗಣ್ಣನ ಸ್ಥಿತಿ ವಿಷಮಕ್ಕಿಳಿದ್ಬಿಟ್ಟುಕೊಂಡಿತು. ದಿನೇದಿನೇ ಸವೆದು ನಾರಾಯಣನಾಗಿ, ಕಂಗೆಟ್ಟು ಕಡ್ಡಿಯಾಗಿ ಕೊನೆಗೆ ಒಂದು ದಿವಸ ಕಣ್ಣುಮುಚ್ಚಿಕೊಂಡ. ತಂದೆ ಸತ್ತುದಕ್ಕೂ ಮಗ ಸತ್ತುದಕ್ಕೂ ವರುಷದಮೇಲೆ ಎರಡು ತಿಂಗಳು ನಾಗಣ್ಣ ತೀರಿಕೊಂಡಮೇಲೆ ಅವನ ಆರಾಧನೆ ಕಾರ್ಯವೆಲ್ಲ ಆದ ಮೇಲೆ, ಅವನ ಹೆಂಡತಿಯನ್ನು ಆಕೆಯ ತಂದೆಯವರು ಕರೆದು ಕೊಂಡುಹೋದರು.

• • • • •

ಬೆಳಗಿನಜಾವದಲ್ಲಿ ದೊಡ್ಡವೀರಶೆಟ್ಟಿಯು ಶೆಲಿಗೆ ಟವಲ್ ಸುತ್ತಿಕೊಂಡು ಒಬ್ಬನೇ ಸರಗೂರಿಗೆ ಹೋಗುತ್ತಿದ್ದ. ಅವನ ಮುಂದೆ ಸ್ವಲ್ಪ ದೂರದಲ್ಲಿ ಮೂರು ಜನ ಹೆಂಗಸರು ಮೇಲು ಮುಸುಕು ಹಾಕಿಕೊಂಡು, ತಲೆಯಮೇಲೆ ಗೂಡೆ ಇರಿಸಿಕೊಂಡು ಮಾತನಾಡಿಕೊಂಡು ಹೋಗುತ್ತಿದ್ದರು. ಅವರು ಬಸ್ತರ ಹೆಂಗಸರು, ಬಡವರು, ಎಲೆ ತೋಟದಲ್ಲಿ ಎಲೆ ಕೊಯಿಸಿಕೊಂಡು ಅಲೆ ಮನೆಯಲ್ಲಿ ಕೆಲಸ ಮಾಡುವವರಿಗೆ ಎಲೆ ಕೊಟ್ಟು, ಪ್ರತಿಯಾಗಿ ಬೆಲ್ಲ ತೆಗೆದುಕೊಂಡು, ಆ ಬೆಲ್ಲವನ್ನೂ ಜೊತೆಗೆ ವೀಳೆದೆಲೆಯನ್ನೂ ಊರುಗಳ ಮೇಲೆ ತೆಗೆದುಕೊಂಡು ಹೋಗಿ ರಾಗಿ, ಜೋಳ, ಸಾಮುಗೆಗೆ ಕೊಟ್ಟು .... ಅದನ್ನು ತೆಗೆದುಕೊಂಡುಬಂದು ಜೀವಿಸುವವರು. ಇದೇ ರೀತಿಯಲ್ಲಿ ಗದ್ದೆಯವರು ಗದ್ದೆಯಲ್ಲಿ ಗೆಣಸು ಕಿತ್ತುಕೊಂಡಮೇಲೆ ಕೂಳಿ ಗೆಣಸನ್ನು ಹಾಯ್ದುಕೊಂಡು ಅದನ್ನು ತೆಗೆದುಕೊಂಡು ಜೀವಿಸುವವರೂ ಇದ್ದಾರೆ. ಅಂತೆಯೇ ಬಬ್ಬೆ ಪ್ರೋಣಿಗಳಲ್ಲಿ ಸೋಸಿಬೆರಕೆ ಸೊಪ್ಪು ಗೋಣೀಚೀಲದಲ್ಲಿ ತುಂಬಿಕೊಂಡು ತಲೆಮೇಲೆ ಹೊತ್ತುಕೊಂಡು ಹಳ್ಳಿಗಳಮೇಲೆ ತೆಗೆದುಕೊಂಡು ಹೋಗಿ ದಿನಸಿಗೆ ಕೊಟ್ಟು ಅದರಿಂದ ಬಂದುದರಲ್ಲಿ ಜೀವಿಸುವವರೂ ಇದ್ದಾರೆ. ಕಂಟ್ರೋಲ್ ಕಾಲದಲ್ಲಿ ಇಂಥವರು ಪಾಪ ಹೋಗುವಾಗಲೂ ಬರುವಾಗಲೂ ಕಾಲುವೆಏರಿಗಳ ಮೇಲೆ ಹೋಗಿಬರುತ್ತಿದ್ದರು. ಕಾರಣ ಇಷ್ಟೆ, ಅವರು ಕಾಸಿನವರಲ್ಲ .... ಅಬಲರು .... ಯಾರಾದರೂ ಪೋಲೀಸಿನವಗನ್ನು ಕಂಡರೆ ಸುಮ್ಮನೆ ಗೂಡೆಯನ್ನು ಕಾಲುವೆಗೆ ಹಾಕಿ ಹೊರಟುಬರುತ್ತಿದ್ದರು ಅನೇಕರ ಹೊಟ್ಟೆಮೇಲೆ ಹೊಡೆದು ಕೇವಲ ಲಾಭದಾಸೆಯಿಂದ ಸಾವಿರಾರು ಮೂಟೆಗಳಲ್ಲಿ ಶೇಖರಣೆ ಮಾಡುವ ಲಾಭಬಡುಕರನ್ನ, ಕಾಳಸಂತೆ ಖದೀಮರನ್ನ, ಜನತಾ ದ್ರೋಹಿಗಳನ್ನ .... ಎಂಜಲ ಕಾಸಿಗೆ

ಆಸೆಪಟ್ಟು ಮಾಫಿ ಮಾಡಿದ ಶಾಕಿಬಟ್ಟೆ, ಹಿಡಿ ಕೂಳಿಗಾಗಿ ಪ್ರಾಮಾಣಿಕತೆ ಯಾವುದೋ ತಮ್ಮ ಕೈಗೆ ಎಟಕುವಂತ ಕಸುಬನ್ನು ಮಾಡಿಕೊಳ್ಳುವ, ಮೇಲೆ ಹೇಳಿದಂತಹವರನ್ನು ಹಿಡಿದು ಪೀಡಿಸಿತು. ಅವರ ಸ್ವಾಮಿನಿಷ್ಠೆ, ಕಾರ್ಯದಕ್ಷತೆ ಅಷ್ಟರಮಟ್ಟಿಗಿತ್ತು ಅನ್ನೋಣವೆ ?

ದೊಡ್ಡವೀರಶೆಟ್ಟಿಯು ಮುಂದೆಹೋಗುತ್ತಿದ್ದ ಹೆಂಗಸರನ್ನು ಸವಿಾಪಿಸಿದಂತೆಲ್ಲ. ಅವರು ಮಾತನಾಡಿಕೊಂಡು ಹೋಗುತ್ತಿದ್ದುದು ತನ್ನ ಮನೆಯ ವಿಷಯವೆಂಬುದು ಗೊತ್ತಾಯಿತು. ಹೆಜ್ಜೆ ನಿಧಾನಮಾಡಿ .... ಮಾತು ಕೇಳಿಸಿಕೊಳ್ಳುತ್ತಾ ಅವರ ಹಿಂದೆಯೇ ಹೊರಟ.

" ದೊಡ್ಡವರು ಅನ್ನುತ್ತೀವಿ .... ದುಡ್ಡಿನಲ್ಲಿ ದೊಡ್ಡೋರು ಅಷ್ಟೆ ಹೊರತು .... ಇನ್ನೇನು ಗುಣದಲ್ಲಿ ಬೇರೆ ದೊಡ್ಡವರಲ್ಲ."

" ದುಡ್ಡಿರೋದ್ರಿಂದ ಏನೇ ಮಾಡಿದರೂ ದಭಾಯಿಸಿಕೊಂಡು ಹೋಗುತ್ತಾರೆ .... "

" ನಮ್ಮನ್ನ ಕೀಳುಜನ ಅನ್ತಾರೆ .... ಕೀಳುಜನದ ಹತ್ತಿರ ಹೆಣ್ಣು, ಗಂಡು,ಮುದುಕ, ಮೊಗ, ದೊಡ್ಡವರು, ಚಿಕ್ಕವರು ಸಕಲರಿಗೂ ಕಟ್ಟೆದೆ ಕಾವಲಿದೆ, ದಾರಿತಪ್ಪಿಹೋಗೋಕಾಗೋದಿಲ್ಲ. ಹೋದರೆ ಕುಲದಿಂದ ಆಚೆಗೆ ಹಾಕುತ್ತಾರೆ .... ಮೇಲ್ಜಾತಿ ಅನ್ನೋದು ... ಹೆಣ್ಣಿಗೂ ಕಟ್ಟಿಲ್ಲ .... ಗಂಡಿಗೂ ಕಟ್ಟಿಲ್ಲ ಮೂದೇವಿಗಳಿಗೆ "

" ಬೆಂಗಳೂರು ಮಾದಪ್ಪನ ಮಗಳು ಗಂಡಸತ್ತ ಮುಂಡೆ.... ಅಂಥಾವಳನ್ನ ದೊಡ್ಡವೀರಶೆಟ್ಟಿ, ಅವನ ಮಗ ಇಬ್ಬರೂನು ಕೆಡಿಸಿದರಲ್ಲಾ ಕೆಡಿಸಬಹುದಾ ! ಅವಳು ಕದ್ದು ಬಸರಾಗಿ ಹೆತ್ತ ಮಗುವನ್ನು ಕುಷ್ಠರೋಗದವನೂವೆ ದೊಡ್ಡವೀರಶೆಟ್ಟೀನೂವೆ ತೆಗೆದು

ಕೊಂಡು ಹೋಗಿ ದೊಡ್ಡಕಾವಲಿ ಕೆಳಗಡೆ ಕರೀಂಖಾನ್‌ಸಾಬರ
ಗದ್ದೆಗೆ ತುಳಿದರಂತೆ."

"ಪಾಪಿನನ್ಮಂಡೇಮಕ್ಕಳು.... ಅವಳನ್ನ, ಮಾದಪ್ಪನ ಹೆಂಡತಿ
ಈ ಅನ್ಯಾಯ ನೋಡಲಾರದೆ ಅಲ್ಲೆ ಭಾವೀಗ್ಬಿದ್ದುಕೊಂಡನು.

"ಅದನ್ನ ಅಷ್ಟ್ ಅಷ್ಟಕ್ಕೆ ಸುಮ್ನೆ ಬಿಟ್ರಲ್ಲ?"

"ತಿರುಗ ಮಾದಪ್ಪನ ಮೊಮ್ಮಗಳ, ಆ ಚಿಕ್ಕ ಮೊಗಾನ ....
ಆ ಶಿವರುದ್ರನಿಗೆ ತಂದುಕೊಂಡು, ಶೋಬ್ನನೂ ಮಾಡಿದ್ರಲ್ಲಮ್ಮ
ಮಾಡಿದ್ರಲ್ಲ ಅಂದರೆ! ನೀನು ಮಾಡಬೇಡಿ ಅಂದುಬಿಡಬೋಕೊ
ಬೇಡವೊ"

"ನಾನು ಅಂದುಬಿಟ್ಟಿದ್ರೆ .... ನಡ್ತೆ ಹೋಗೋರ? ....
ಹುಚ್ಚ ...."

"ದೊಡ್ಡವೀರಶೆಟ್ಟಿ ಬೀಗಿತ್ತೀನೆ ಕಂಡರೆ ಬಹಳ ಗೌರವವಾಗಿ
ದ್ದನಂತೆ .... ಅವಳೂ ಅಷ್ಟೇನಂತೆ"

ಈ ಮಾತುಗಳನ್ನೆಲ್ಲ ಕೇಳಿಕೊಂಡು ಹೋಗುತ್ತಿರುವ ದೊಡ್ಡ
ವೀರಶೆಟ್ಟಿಗತಿ ಏನಾಗಬೇಕು! ಏನಾಗುವ್ದೇನು ಆ ಘಂಡನಿಗೆ

"ಈವಾಗ ಇನ್ನೊಂದು ವಿಷ್ಯ ಕೇಳಿದ್ದೀಯ?"

"ದೊಡ್ಡವನ ಮಗ ಇಲ್ವ .... ಜಯಣ್ಣ .... ದೊಡ್ಡವೀರ
ಶೆಟ್ಟಿ ಹೆಂಡತಿ ಸಂಗಡ ಉಂಟಂತೆ ...."

ದೊಡ್ಡವೀರಶೆಟ್ಟಿಗೆ ಸಿಡಿಲು ಹೊಡೆದಂತಾಯಿತು. ಅಲ್ಲೆ
ಕುಕ್ಕರ ಬಡಿದ, ತಲೆಗೆ ಕೈ ಕೊಟ್ಟುಕೊಂಡು ಬೇಕಾದಷ್ಟುಹೊತ್ತು
ಕುಳಿತ ಯೋಚನೆ ಮಾಡುತ್ತ. ಏನು ಯೋಚನೆ ಮಾಡಿದರೆ
ಏನುಫಲ! ತಾನು ಭದ್ರವಾಗಿದ್ದರೆ ತನ್ನ ಹೆಂಡತೀನು ಭದ್ರ ....
ತಾನು ಭದ್ರವಾಗಿದ್ದರೆ ತನ್ನ ಮಗನೂ ಭದ್ರ, ... 'ಎರಡೂ ದದ್ದು
ಹೊರಕ್ಕೆ ಹಾಕ' ಅಂದಂತಾಯಿತು ಅವನ ಬಾಳಾಟ. ಬೆಳಕು ಹರಿ

ಯುತ್ತಾ ಬಂದಿತಾಗಿ ಎದ್ದು ತಲೆಬಗ್ಗಿಸಿಕೊಂಡು ಯೋಚನೆ ಮಾಡುತ್ತಾ ನಿಧಾನವಾಗಿ ಊರಿನಕಡೆಗೆ ಹೊರಟ. ಊರಿಗೆ ಬಂದಮೇಲೆ ಯಾರಲ್ಲಿಯೂ ಆ ವಿಷಯ ಪ್ರಸ್ತಾಪ ಮಾಡಲಿಲ್ಲ. ಯೋಚಿಸಿ ಯೋಚಿಸಿ ಸಾಕಾಕಾಗುತ್ತಿದ್ದ. ಅಂದನಿಂದ ಅವನಿಗೆ ನಿಜವಾಗಿಯೂ ಎಲ್ಲರ ಮೇಲೆಯೂ, ಎಲ್ಲದರ ಮೇಲೆಯೂ ಒಂದು ತರದಲ್ಲಿ ಅಸಹ್ಯ ಹುಟ್ಟಿತು. ಊಟಮಾಡಿದರೆ ಮಾಡದ ಬಿಟ್ಟರೆಬಿಟ್ಟ....ಮಾಡಿದರೂ ಕೂಡ ಅದೇನು ಊಟ....ಮಕ್ಕಳಿಗೂ ಸಾಲುವುದಿಲ್ಲ, ಅಷ್ಟನ್ನು ತಿನ್ನಬೇಕಾದರೂ ಬಹುಪ್ರಯಾಸ.... ....ಯಾರ ಕೂಡಾನು ಮಾತನ್ನೇ ಆಡುವುದಿಲ್ಲ, ಅವರಾಗಿಯೇ ಮಾತನಾಡಿಸಿದರೆ, ಏನೊ ಒಂದು ಹೇಳಿ ಮುಂದೆ ಹೊರಟು ಹೋಗುತ್ತಿದ್ದ. ದೊಡ್ಡಕೆರೆ ಹತ್ತಿರವೊ, ದೊಡ್ಡ ತೋಪಿನಲ್ಲೋ ಮೂರು ಹೊತ್ತೂ ಕಾಲವನ್ನು ಕಳೆಯುವುದಾಯಿತು. ಕೊನೆಗೆ ಅಲ್ಲಿ ಒಂದೊಂದು ರಾತ್ರಿಯನ್ನೂ ಕಳೆಯುವುದಾಯಿತು. ಹೀಗೆ ಹೆಚ್ಚು ಕಮ್ಮಿ ಮೂರು ತಿಂಗಳ ಕಾಲ ಕಳೆದ. ಅಂದು ರಾತ್ರಿ ತೋಪಿನಲ್ಲಿ ಮರ ಒರಗಿಕೊಂಡು ಕುಳಿತಿದ್ದ. ಏಕನಾದದ ಸದ್ದಾಯಿತು, ತತ್ವ ಹಾಡುತ್ತಿರುವುದು ಕೇಳಿಸಿತು.

ಹೆಣ್ಣಿಗಿಚ್ಛೈಸುವರೆ ಮೂಢ! ಇದನು ಕಣ್ಣು ಕಿವಿಗಳಿಂ ಸೋಂಕಬೇಡ | ಹೆಣ್ಣಿಗಿಚ್ಛೈಸುವರೆ ಮೂಢ || ತತ್ವಮುಗಿಯಿತು. ದೊಡ್ಡವೀರಶೆಟ್ಟಿಯು ಆ ತತ್ವದಲ್ಲಿ ಲೀನನಾಗಿದ್ದ. ಕಣ್ಣಿನಲ್ಲಿ ನೀರು ಧಾರಾಕಾರವಾಗಿ ಹರಿಯುತ್ತಿತ್ತು ನಮ್ಮ ಗುರು ಸಿದ್ಧ ನಡಿಗವರ ದೂರವೆನಿಸುವುದು .... ಹೆಣ್ಣಿಗಿಚ್ಛೈಸುವರೆ ಮೂಢ || ಎಂದುಕೊಂಡು ಮೇಲೆದ್ದ. ಊರಕಡೆಗೆ ಹೊರಡಲು ಮನ ಬರಲಿಲ್ಲ, ಮತ್ತೆಲ್ಲಿ ಹೋದನೊ ತಿಳಿಯಲಿಲ್ಲ.

ದೊಡ್ಡವೀರಶೆಟ್ಟಿಗೋಸ್ಕರ ಕೆರೆಕಟ್ಟೆ ಭಾವಿಯನ್ನೆಲ್ಲ ಶೋಧಿಸಿದರು. ಅಕ್ಕಪಕ್ಕದ ಊರುಗಳಲ್ಲೆಲ್ಲಾ ಶೋಧಿಸಿದರು. ತೆಪ್ಪನಾದರು. ದೊಡ್ಡವೀರಶೆಟ್ಟಿ ಹೆಂಡತಿಗೆ ಗಂಡ ಹೊರಟುಹೋದನಲ್ಲಾ ಎಂಬುವ ಯೋಚನೆಯೇ ಇಲ್ಲ .... ಅವಳ ನತ್ತು ಸ್ವಲ್ಪವೂ ತೆಗೆಯಲಿಲ್ಲ, ಮುಖ ಸ್ವಲ್ಪವೂ ಕೆಡಲಿಲ್ಲ. ಆಕೆಗೆ ಯಾರ್‍ಯಾರೊ ಹೇಳಿದರು 'ಅರಶಿನ ಕುಂಕುಮ ಇಕ್ಕೋಬೇಡ, ಬಳೆತೊಡೋದ್ಬೇಡ, ತಾಲಿ ತೆಗೆದುಬಿಡು' ಎಂದು ಯಾರು ಹೇಳಿದರೂ ಪ್ರಯೋಜನವಾಗಲಿಲ್ಲ. ಶಿವರುದ್ರನಿಗೂ ಅವಳಿಗೂ ಮಾತು ಮಾತು ವಿಪರೀತವಾಗಿ ಬೆಳೆದು ಕೊನೆಗೆ ಕೈಕೈ ಕೂಡುವಲ್ಲಿಗೂ ಹೋಯಿತು. ಅವನು ಅವಳ ತಪ್ಪನ್ನು ಎತ್ತಿ ಆಡಿ 'ನೀನು ಹೀಗೆಲ್ಲ ಮಾಡುವ ಹೊತ್ತಿಗೇನೆ ನಮ್ಮ ಅಪ್ಪ ಹೊರಟುಹೋದ' ಅಂದರೆ, ಅವಳು ನಿನ್ನ ಕೇಶೀ ಸುತ್ತ ಹತ್ತಾರೆ ಕೂಗುತ್ತಾ ಇದೆ ನೀಯೇನೊ ಮುಟ್ಟಾಳ ನನಗೆ ಹೇಳೋದು ಅನ್ನುತ್ತಿದ್ದಳು. ಕೇಳಿಕೊಂಡು ತಮ್ಮಯ್ಯ 'ಮುಂಡೆಮಕ್ಕಳ .... ನಾಲ್ಕು ಜನ ನೋಡಿ ನಗೋಹಾಗಾಯ್ತಲ್ಲ...ನಿಮ್ಮ ಬಾಳು' ಎಂದು ತಲೆಗೆ ಕೈಕೊಟ್ಟುಕೊಂಡು ಕೂರುತ್ತಿದ್ದ.

ದೊಡ್ಡವೀರಶೆಟ್ಟಿ ಮನೆಯಲ್ಲಿ ಅವನ ಹೆಂಡತಿಕೈಗೆ ಸಿಕ್ಕಿದ್ದು ಅವಳಿಗೆ, ಶಿವರುದ್ರನ ಕೈಗೆ ಸಿಕ್ಕಿದ್ದು ಅವನಿಗೆ...ಹೀಗೆ ಅವರವರ ಕೈಗೆದಕ್ಕಿದ್ದು ಅವರವರದಾಗುತ್ತಿತ್ತು.

ದೊಡ್ಡವೀರಶೆಟ್ಟಿ ಹೊರಟುಹೋಗಿ ತಿಂಗಳಬಾಯಿತುಂಬಲಿಲ್ಲ ಅವನ ಹೆಂಡತಿಯು ಅವಳಹತ್ತಿರವಿದ್ದ ಚಿನ್ನ ಬಣ್ಣ....ಕಾಸು ಕರೀ ಮಣಿ ತೆಗೆದುಕೊಂಡು, ಜಯಣ್ಣನೊಡನೆ ಪರಾರಿಯಾದಳು.

ಈವಾಗ ತಮ್ಮಯ್ಯನಿಗೆ ತಲೆನೋವು ಶುರುವಾಯಿತು. ತಮ್ಮಯ್ಯ ಸುಮ್ಮನಾದರೂ ಅವನ ಹೆಂಡತಿ ಸುಮ್ಮನಿರುತ್ತಿರಲಿಲ್ಲ. ತಮ್ಮ ಮಗ ಆಕಸುಬಿನವನಲ್ಲವೆಂದೂ, ಆಕೆಯೇ ಏನೋಹಿಕ್ಮತ್ತು ಮಾಡಿ ಅವನನ್ನು ಹೊಡೆದುಕೊಂಡು ಹೋಗಿರುವಳೆಂಬ ಅಭಿಮಾನ ಅವರಿಬ್ಬರನ್ನೂ ಕಾಡುತ್ತಿತ್ತು. ಅಂತು ಅದೇ ಕೊರತೆಯಲ್ಲಿ ಅವರಿಬ್ಬರೂ ಮುಪ್ಪಾಗಹತ್ತಿದರು.

ಮೈನೆರೆಯದೆ ಇರುವ ಮಗಳಿಗೆ ಶೋಬನ ಆಯಿತೂ ಅನ್ನಿಸಿ ಇದರಿಂದ ಲೋಕಾಪವಾದ ತಪ್ಪಿತೂ ಅಂದುಕೊಂಡರೆ ಆಯಿತೆ? ಆ ಅಳಿಯನನ್ನ ಮನೆಯಲ್ಲಿ ಇರಿಸಿಕೊಂಡರೆ, ಅತ್ತೆ ಗಂಡಸತ್ತ ಮುಂಡೆ, ಇನ್ನೂ ಚಿಕ್ಕವಳು, ಅವನಿಗೂ ಅವಳಿಗೂ ಮೊದಲಿನಿಂದಲೂ ಸಂಬಂಧವಿತ್ತು ಅಂದಮೇಲೆ, ದೊಡ್ಡ ಮನೆಯಲ್ಲಿ ಈ ಮೂವರಲ್ಲದೆ ಹೇಳುವವರು ಕೇಳುವವರು ಬೇರೆಯಾರೂ ಇಲ್ಲವೆಂದಮೇಲೆ ಏನಾಗಬಹುದೆಂಬುದನ್ನು ಊಹಿಸಲು ಕಷ್ಟವೆ?

ಮಾದಪ್ಪನ ಮಗಳು ಮತ್ತೆ ಬಸರಾದಳು. ಔಷಧಿ ತನಗೆ ಗೊತ್ತಿದ್ದುದರಿಂದ ಸುಬ್ಬಣ್ಣನನ್ನು ಕಾಡುವುದು ತಪ್ಪಿತು. ತಾನೇ ಮಾಡಿಕೊಂಡಳು. ಆದರೆ ಅದೇನು ವ್ಯತ್ಯಾಸವಾಯಿತೋ ಏನು ವಿಪರೀತಕ್ಕಿಟ್ಟುಕೊಂಡಿತು. ಈ ಸಲ ಸುಬ್ಬಣ್ಣನಿಗೆ ತಿಳಿಸಲಿಲ್ಲ.

ಮಾದಪ್ಪನ ಮೊಮ್ಮಗಳು ಇನ್ನೂ ಎಂಟುವರುಷ ಹುಡುಗಿ ಆದರೂ ಕೂಡ ತನ್ನ ತಾಯಿ ಆಟಪಾಟ ಏನು, ತನ್ನ ಅಜ್ಜಿ ಏತಕ್ಕಾಗಿ ಬಾವಿಗೆಬಿದ್ದು ಸತ್ತಳು ಇವೆಲ್ಲ ತಕ್ಕಮಟ್ಟಿಗಾದರೂ ಗೊತ್ತಾಗದೆ ಇರಲಿಲ್ಲ. ಮೊದಲಿನದೂ ಎಲ್ಲಾದರೂ ಹೋಗಲಿ,

ಮದುವೆಯಾದ ಮೇಲೂ ಗಂಡ ಅನ್ನಿಸಿಕೊಳ್ಳುವವನು ತನ
ತಾಯಿಯ ಕೂಡ ಅತ್ತೆಯೆನ್ನುವುದನ್ನು ಕಾಣದೆ ಅವಳೊಡ
ಪಾಪದ ಸಂಬಂಧವನ್ನು ಮತ್ತೆ ಮುಂದುವರಿಸಿದರೆ, ಅದು
ಹೆಣ್ಣುಮಗುವಿನ ದೃಷ್ಟಿಗೆ ಬಿದ್ದಮೇಲೆ ಆ ಮಗುವಿನ ಮನಸ್ಸಿ
ಮೇಲೆ ಏನೊಂದು ಘಾತವಾಗಿರಬೇಕು!

ಶಿವರುದ್ರನು ಡಾಕ್ಟರ್ ನರಸಿಂಗರಾಯರನ್ನು ಮಾದಪ್ಪ
ಮನೆಗೆ ಕರೆದುಕೊಂಡುಹೋಗಿಬಿಟ್ಟ. 'ಅವರು ಮಾದಪ್ಪ
ಮಗಳಿಗೆ ಔಷಧಿ ಕೊಡತೊಡಗಿದರು. ನಿತ್ಯವೂ ಡಾಕ್ಟರೆ ಮನೆ
ಬಂದು ಆಕೆಯನ್ನು ನೋಡಿಕೊಂಡು, ವಿಷಯ ಕೇಳಿಮಾಡಿ...
ಹೇಳಬೇಕಾದುದನ್ನು ಹೇಳಿ ಔಷಧಿಕೊಟ್ಟು ಹೋಗುತ್ತಿದ್ದರು
ಹಾಗೆ ಮಾಡುವಾಗ ಆಕೆ ಮತ್ತು ಡಾಕ್ಟರ್ ಇಬ್ಬರಹೊರತ
ಬೇರ್ಯಾರೂ ಇರುತ್ತಿರಲಿಲ್ಲ. ಶಿವರುದ್ರನೂ ಇರುತ್ತಿರಲಿಲ್ಲ. ಒಂದ
ವೇಳೆ ಇದ್ದರೂ ಡಾಕ್ಟರು ಮನೆ ಒಳಗೆ ಬಂದರೂ ಅಂದರೆ ಅವನ
ತಲೆತಗ್ಗಿಸಿಕೊಂಡು ಹೊರಗೆಹೋಗತ್ತಿದ್ದ, ಹುಡುಗಿಯು ಅಡಿ
ಮನೆಯನ್ನೊ ಕಿರುಮನೆಯನ್ನೊ ಸೇರಿಕೊಳ್ಳುತ್ತಿತ್ತು. ಹಜಾ
ದಲ್ಲಿ ಡಾಕ್ಟರು ಮತ್ತು ಮಾದಪ್ಪನ ಮಗಳು ಇಬ್ಬರೇ ಇರುತ್ತಿ
ದ್ದರು. ಮಾದಪ್ಪನಮಗಳು ಮೊದಮೊದಲು ಡಾಕ್ಟರ್ ಅವ
ಸಂಗಡ ಅನೇಕ ವಿಷಯಗಳನ್ನು ಹೇಳಲು ನಾಚುತ್ತಿದ್ದಳು
ಹಿಂಜರಿಯುತ್ತಿದ್ದಳು. ಆವಾಗ ಡಾಕ್ಟರು ಹಾಗೆಲ್ಲ, ನಾಚಿ ನಿ
ಬಾರದೆಂದೂ, ಡಾಕ್ಟರ್ ಮುಂದೆ ಏನಿದ್ದರೂ ಸಲೀಸಾಗಿ ನಿಸ್ಸಂಕೋ
ಚವಾಗಿ, ನಿರ್ಭಯವಾಗಿ ಹೇಳುತ್ತಿರಬೇಕೆಂದೂ ಹೇಳಿ ಪ್ರೋತ್ಸಾ
ಮಾಡಿ ಬಾಯಿಬಿಡಿಸುತ್ತಿದ್ದರು. ಬರಬರುತ್ತ ಆಕೆಯು ಡಾಕ್ಟರ
ಕೇಳುವುದಕ್ಕೆ ಮುಂಚಿತವಾಗಿಯೆ, ತಾನೇ ನಾಚಿಕೆ ಗೀಚಿ
ಒಂದೂ ಇಲ್ಲದೆ, ತನಗೆ ಆಗುವುದೆಲ್ಲವನ್ನೂ ಹೇಳಿಕೊಳ್ಳ ತೊಡ

ದಳು. ದಿನೇ ದಿನೇ ರೋಗಕಳೆದು ಉತ್ತಮವಾಗುತ್ತ ಬಂದಂತೆಲ್ಲ ಚೆನ್ನಾಗಿ ಕಾಣಹತ್ತಿದಳು. ಡಾಕ್ಟರ್ ನರಸಿಂಗರಾಯರು ಒಳಗೆ ಬಂದರೆ ಮತ್ತೆ ಹೋಗುವುದು ದಿನ ದಿನಕ್ಕೆ ಹೆಚ್ಚಾಗುತ್ತಾ ಬಂದಿತು ಆಕೆಗೆ ಪೂರ್ತವಾಗಿ ಗುಣವಾಯಿತು. ನಿತ್ಯದಂತೆ ಬಂದ ಡಾಕ್ಟರ್ ಮುಂದೆ ನಿಂತ ಅವಳು, ಅವರ ಚಿತ್ತವನ್ನು ಆಕರ್ಷಿಸಿದಳು. ಅವಳನ್ನೆ ಒಂದೇಸಮನೆ ನೋಡುತ್ತಾ ನಿಂತರು. ಆಕೆಯೂ ಸ್ವಲ್ಪ ಹೊತ್ತು ಡಾಕ್ಟರನ್ನೇ ನೋಡುತ್ತಿದ್ದು ಆಮೇಲೆ ದೃಷ್ಠಿ ಕದಲಿಸಿ ಹೋಗಿ ಕುರ್ಚಿಯನ್ನು ತಂದು ಡಾಕ್ಟರು ಕೂಡಲು ಹಾಕಿದಳು ....ಡಾಕ್ಟರು ಕುರ್ಚಿಯಮೇಲೆಕುಳಿತರೂ ಆಕೆಯಿಂದ ಮಾತ್ರ ತಮ್ಮ ದೃಷ್ಟಿ ಕದಲಿಸಲಿಲ್ಲ. ಆಕೆಯು ಮುಂದೆ ಹೋಗಿ ಎಡಗೈಯನ್ನು ಡಾಕ್ಟರಿಗೆ ಕೊಟ್ಟು ನಿಂತಳು. ಡಾಕ್ಟರ್ ಅವಳ ಎಡಗೈಯನ್ನು ತಮ್ಮ ಬಲಗೈಯಿಂದ ಹಿಡಿದುಕೊಂಡರು. ಆಕೆಯ ಶರೀರದಲ್ಲಿ ವಿದ್ಯುತ್ ಸಂಚಾರವಾದಂತಾಯಿತು. ಆಕೆಯನ್ನು ನೋಡುವುದು ಮಾತ್ರ ತಪ್ಪಲಿಲ್ಲ, ಆಕೆಯು ನಾಚಿ ಮುಖ ತಿರುಗಿಸಿಕೊಂಡಳು. ಡಾಕ್ಟರು ಎದ್ದುನಿಂತು ಆಕೆಯ ಪಕ್ಕಕ್ಕೆ ಹೋಗಿ ತಮ್ಮ ಎಡಗೈಯನ್ನು ತೆಗೆದು ಆಕೆಯ ಬಲಭುಜದಮೇಲೆ ಇರಿಸಿದರು. ಆಕೆಯು ಡಾಕ್ಟರ್‌ಕಡೆ ನೋಡಿದಳು. ಅವರು ತಮ್ಮ ಮುಖವನ್ನು ಆಕೆಯ ಮುಖದ ಕಡೆಗೆ ತರುತ್ತಿದ್ದರು. ಆಕೆಯು ತನ್ನ ಬಲಗೈಯನ್ನು ಬಾಯಮೇಲಿರಿಸಿಕೊಂಡು, ಕೈ ಆಡಿಸಿ ಹಾಗೆಯೇ ಅಡಿಗೆಮನೆಯಕಡೆ ತೋರಿಸುತ್ತ ಮೆತ್ತಗೆ 'ಷ್ ಷ್ ಇಲ್ಲಿ ಬೇಡಿ .... ಹುಡುಗಿ ಅಡಿಗೆಮನೆಯಲ್ಲಿದ್ದಾಳೆ ....' ಎಂದಳು

ಡಾಕ್ಟರು ಕಿರುಮನೆಕಡೆಗೆ ಮುಖದಿಂದ ತೋರಿಸುತ್ತ, 'ಆ ರೂಮಿಗೆ ಹೋಗೋಣ ನಡಿ' ಎಂದರು.

ಡಾಕ್ಟರು ತಮ್ಮ ಬಲಗೈಯ್ನಿಂದ ಹಿಡಿದಿದ್ದ ಆಕೆಯ ಎಡಗೈಯನ್ನು ಬಿಡಲೇ ಇಲ್ಲ. ಅವಳ ಬಲ ಭುಜದ ಮೇಲೆ ಇರಿಸಿದ

ಎಡಗೈ ಹಸ್ತವನ್ನು ತೆಗೆಯಲೂ ಇಲ್ಲ. ಜೋಡಿಯಾಗಿಯೇ ಕಿರುಮನೆ ಕಡೆಗೆ ನಡೆದರು. ಹಾಗೆ ಹೋಗುವಾಗ ಆಕೆ ಮಾತ್ರ ಅಡಿಗೆಮನೆಯ ಕಡೆ ಪದೇ ಪದೇ ನೋಡುತ್ತಿದ್ದಳು. ಬಾಗಿಲನ್ನು ಸಮೀಪಿಸಿದಾಗ ಆಕೆಯು ಬಾಗಿಲನ್ನು ಬಲಗೈನಿಂದ ಹಿಂದಕ್ಕೆ ತಳ್ಳಿದಳು. ಈರ್ವರೂ ಜೋಡಿಯಾಗಿಯೇ ಒಳಗೆಹೋದರು. ಆಕೆಯೇ ಕದವನ್ನು ಹಾಕಿಕೊಂಡಳು.

ಇದೇ ಕಿರುಮನೆಯಲ್ಲಿ ಮಾದಪ್ಪನಮಗಳು ಪ್ರಥಮ ಗಂಡು ಮಗುವನ್ನು ಹಡೆದು, ಅದರ ಗೋಣು ಮುರಿದು ಕೊಂದುದು. ಆಕೆಗೆ ಈವತ್ತು ಡಾಕ್ಟರು ಕಿರುಮನೆ ಕಡೆಗೆ ಮುಖ ಮಾಡಿ 'ಆ ರೂಮಿಗೆ ಹೋಗೋಣ ನಡಿ' ಅಂದಾಗ ಹಿಂದೆ ನಡೆದಿರುವ ಪ್ರಕರಣವು ಜ್ಞಾಪಕಕ್ಕೆ ಬರಬಾರದೆ? ಆ ಕಿರುಮನೆಗೆ ಡಾಕ್ಟರನ್ನು ಕೂಡಲಿಕ್ಕಾಗಿ ಮತ್ತೆ ಪ್ರವೇಶ ಮಾಡಬಹುದೆ? ನಾವೇನೋ ಹೀಗೆಲ್ಲ ಅನ್ನುತ್ತೇವೆ, ಆದರೆ ಕಾಮಕ್ಕೆ ಕಣ್ಣಿಲ್ಲ. ಆ ಸಮಯದಲ್ಲಿ ಯಾವುದೂ ಕಣ್ಣು ಹತ್ತುವುದಿಲ್ಲ. ಆದುದರಿಂದಲೇ ಆಕೆಯು ಡಾಕ್ಟರ ಸಂಗಡ ಕಿರುಮನೆಗೆ ಹೋಗಿ, ತಾನೆ ಕದ ಹಾಕಿಕೊಂಡಳು.

ಆಕೆ ಹೋಗುವಾಗ ಅಡಿಗೆಮನೆ ಕಡೆಗೆ ಪದೇ ಪದೇ ನೋಡಿ ಕೊಂಡು ಹೋಗುತ್ತಿದ್ದುದು ಅಲ್ಲಿರುವ ತನ್ನ ಮಗಳೇನಾದರೂ ನೋಡುತ್ತಿದ್ದಾಳೊ ಏನೊ ಎಂಬ ಶಂಕೆಯಿಂದ. ಆದರೆ ನಿಜಕ್ಕು ಆ ಹುಡುಗಿಯು ಅಡಿಗೆಮನೆ ಬಾಗಿಲಲ್ಲಿಯೇ ನಿಂತುಕೊಂಡು ಡಾಕ್ಟರು ಮತ್ತು ತನ್ನ ತಾಯಿ ಮಾಡಿದುದನ್ನೆಲ್ಲ ಚೆನ್ನಾಗಿಯೇ ನೋಡುತ್ತಿದ್ದಳು. 'ಕಾಮಕ್ಕೆ ಕಣ್ಣಿಲ್ಲ' ಎಂದು ಹೇಳುವಂತೆ ಅತಿ ಕಾಮಿಗಳಾದ ಆ ಈರ್ವರಿಗೂ ಆಕೆ ಕಾಣಿಸಲಿಲ್ಲ ಅಷ್ಟೆ.

ಸ್ವಲ್ಪ ಹೊತ್ತಾದಮೇಲೆ ಕಿರುಬಾಗಿಲನ್ನು ತೆರೆದುಕೊಂಡು ಇಬ್ಬರೂ ಹೊರಬಂದರು. ಡಾಕ್ಟರು ಹೊರಟಮೇಲೆ ಮಾದಪ್ಪನ

ಮಗಳು ತನ್ನ ಮಗಳನ್ನು ಹೆಸರುಹಿಡಿದು ಕೂಗಿದಳು, ಜವಾಬು ಬರಲಿಲ್ಲ, ಮತ್ತೆ ಕೂಗಿದಳು ಆಗಲೂ ಜವಾಬಿಲ್ಲ. ಅಡುಗೆಮನೆ ಬಾಗಿಲಿಗೆ ಹೋಗಿ, ಒಳಗೆ ಬಗ್ಗಿನೋಡುತ್ತಾಳೆ! ಮಗಳು ನೇಣು ಹಾಕಿಕೊಂಡಿದ್ದಾಳೆ! ಮೊಸರು ಕಡೆಯುವ ಮಂತಿನ ಹಗ್ಗವನ್ನೇ ಮೇಲಿನ ಸರ (ಮೇಲ್ಛಾವಣಿಯಲ್ಲಿಹಾಕಿರುವ ಸರ)ಕ್ಕೆ ಬಿಗಿದು ನೇಣುಹಾಕಿಕೊಂಡಿದ್ದಾಳೆ. ಇದನ್ನು ನೋಡಿ ಆಕೆಯು ಚಿಟ್ಟನೆ ಕಿರುಚಿದಳು, ಒಳಗೆ ನುಗ್ಗಿದಳು, ಮಗಳನ್ನು ನೋಡಿದಳು. ಚಿಕ್ಕ ಹುಡುಗಿ ಬಾಯಲ್ಲಿ ಮೊದಲೆ (ಜೊಲ್ಲು) ಹರಿದಿದೆ .... ಬಿಟ್ಟ ಕಣ್ಣು ಬಿಟ್ಟಹಾಗೇ ಇದೆ. ಹೊರಗೆ ಹೋಗಿ ಜನ ಕೂಗಬೇಕು ಎಂದು ಮನಸ್ಸಾಯಿತು. ಆದರೆ ಹಾಗೆ ಮಾಡಲಿಲ್ಲ, ದೃಷ್ಟಿ ಹೊರಳಿಸಿ ನೋಡಿದರೆ ಒಲೆ ಉರಿಯುತ್ತಿದೆ....ಅದರಮೇಲೆ ಪಾತ್ರೆ ಇರಿಸಿದೆ .... ಮುಂದೆ ಹೋಗಿ ಪಾತ್ರೆಗೆ ಮುಚ್ಚಿದ್ದ ಪ್ಲೇಟನ್ನು ಸೆರಗಿನಿಂದ ಎತ್ತಿ ನೋಡುತ್ತಾಳೆ ಅಕ್ಕಿ ಸುರಿದಿದ್ದಾಳೆ ಅಗತಾನೆ ಬೇಯುತ್ತಾ ಇದೆ .... ಮತ್ತೆ ತಟ್ಟೆಯನ್ನು ಮುಚ್ಚಿ .... ಬಾಗಲಿನ ಕಡೆಗೆ ನೋಡುತ್ತಾಳೆ! .... ಬಾಗಿಲಿನಲ್ಲೂ ಒಂದು ಪಾತ್ರೆ ಇರಿಸಿದೆ .... ಮುಚ್ಚಳ ಮುಚ್ಚಿದೆ .... ಮುಚ್ಚಳವೆತ್ತಿ ನೋಡುತ್ತಾಳೆ ಸಾರಿಗೆ ಅಕ್ಕಿ ತೊಳೆದ ನೀರಿನಲ್ಲಿ ಹೆಸರಿಕ್ಕಿದ್ದಾಳೆ, ಮತ್ತೆ ಮಗಳ ಕಡೆಗೆ ನೋಡಿದಳು. ಅವಳನ್ನೇ ನೋಡುತ್ತಾ ನಿಂತಳು .... 'ಮಧ್ಯಾಹ್ನದ ಅನ್ನದ ಋಣ ನಿನಗಿಲ್ಲದೇ ಹೋಯಿತಾ ಮಗಳೆ!! ಎಂದು ಕೂಗಿಕೊಂಡಳು. ಕಣ್ಣಿನಲ್ಲಿ ನೀರು ಕಿತ್ತರಿಯಲಾರಂಭಿಸಿತು. ತಾನು ತಾಯಿಯ ಸಂಗಡ ಜಗಳವಾಡಿದ ಸಂದರ್ಭ ಕಣ್ಣೆದುರಿಗೆ ಕಟ್ಟಿತು.

"ನೀನು ಹಾಳಾದದ್ದು ಸಾಲದು, ಇನ್ನು ಆ ಮಗುವನ್ನೂ ಹಾಳುಮಾಡಬೇಕೂ ಅನ್ನೆ ನೀನು?"

"ನಾನು ಹಾಳಾದರೆ ನಾನು ಹಾಳಾಗುತ್ತೀನಿ....ನೀಯೇನು ಹಾಳಾಗಬೇಡ....ನನ್ನ ಮಗಳಿಗೆ ಲಗ್ನ ಮಾಡೋದು ನನಗೆ ಗೊತ್ತಿದೆ...........ನಿನ್ನ ಪಾಡಿಗೆ ನೀನು ಇದ್ದುಬಿಡು............ಅಷ್ಟೆ ಗೊತ್ತಾಯ್ತ ?"

"ನಿನ್ನ ಮಗಳಿಗೆ ಲಗ್ನ ಮಾಡೋದು ನನಗೇನು ಗೊತ್ತು! ನನಗೆಗೊತ್ತಿಲ್ಲ, ನಿನಗೇಗೊತ್ತು....ಯಾಕೇ ಅನ್ನು, ನಿನ್ನ ಅನುಕೂಲ ಪ್ರತಿಕೂಲ ನನಗೆ ಗೊತ್ತಾಗುತ್ತ ?...ನೀಹೇಳಿದ ಹಾಗೆ ದೊಡ್ಡವೀರಶೆಟ್ಟಿ ಮಗನಿಗೆಕೊಟ್ಟು ಲಗ್ನಮಾಡಿದರೆ ಅಳಿಯನೂ ಸಿಗುತ್ತಾನೆ—ಆಕಡೆ ಬೀಗಾನೂ ಸಿಗುತ್ತಾನೆ ನಿನಗೆ—ನಾನು ಹೇಳಿದ ಹಾಗೆ ಆದರೆ ನಿನಗೇನು ಸಿಕ್ಕುತ್ತೆ ?"

"ನೀನು ನಿನಗೆ ಬೇಕಾದವನ ಮಗನಿಗೆ ಹ್ಯಾಗೆ ಕೊಡಬೇಕು ಅನ್ನುತ್ತೀಯೊ, ಹಾಗೇನೆ ನಾನೂನು ನನಗೆ ಬೇಕಾದವನ ಮಗನಿಗೆ, ನನಗೆ ಬೇಕಾದವನಿಗೆ ಕೊಡುತ್ತೇನೆ ಅನ್ನೋದು ಗೊತ್ತಾಯ್ತು ?¡"

"ಏನಂದ್ಯೆ ಚಂಡಾಳಿ ನನಗೆ ಬೇಕಾದವನ ಮಗನ ಅವನು? ನನಗೂ ಅವನಿಗೂ ಸಂಬಂಧ ಕಲ್ಪಿಸುತ್ತೀಯ ನೀನು ?!.... ಪಾಪಿಷ್ಟರಂಡೆ, ನೀನು ಮಾಡಿರೋ ಕೆಲಸದಲ್ಲಿ ನಿನ್ನ ಮುಖ ದರ್ಶನ ಮಾಡಬಹುದಾ ಮಗಳೂ ಅಂದ್ಕೊಂಡು!"

"ಬೇಡ ಬಿಟ್ಟುಬಿಡು. ನಿನ್ನನ್ನ ಯಾರು ನನ್ನ ಮುಖ ದರ್ಶನ ಮಾಡವ್ವಾ ಅಂತ ಇದ್ದವ್ರು!....ನನ್ನ ಮುಖದರ್ಶನ ನಿನಗೂ ಬೇಡ....ನಿನ್ನ ಮುಖದರ್ಶನ ನನಗೂ ಬೇಡ ಅಷ್ಟೆ

"ಅಷ್ಟೇನ ಹಾಗಾದ್ರೆ"

"ಅಷ್ಟೇನಾ ಅಂದರೆ....ಇನ್ನೇನು ಮತ್ತೆ ಅಲ್ಲಿ!....ಗೌರವಕ್ಕೆ ಗೌರವ....ಮರ್ಯಾದೆಗೆ ಮರ್ಯಾದೆ."

"ನಿನ್ನ ಗೌರವ ಹಾಳಾಯಿತು!....ನಿನಗೆಂತ ಮರ್ಯಾದೆ ಕೊಡೋದು?....ಅಪ್ಪ, ಜೊತೆಗೆ ಮಗ ಇಬ್ಬರ ಹತ್ತಿರಾನು ಹೋಗುತ್ತ ಇದ್ದವಳಿಗೆಂತ ಮರ್ಯಾದೆ ಕೊಡೋದು?!....

ಹೆತ್ತ ಕೂಸನ್ನ ಗೋಣುಮುರಿದ ಕತ್ತೆರಂಡೇಗೆ ಗೊತ್ತಂತೆ ಇವಳ ಮಗಳ ಲಗ್ನ ಮಾಡೋದು!"

ಹಿಂದಲದನ್ನೆಲ್ಲ ನೆನೆದುಕೊಂಡು ಮಾದಪ್ಪನ ಮಗಳ ತಲೆ ಕೆಟ್ಟಿತು- ಕಣ್ಣಿನಲ್ಲಿ ನೀರು ಧಾರಾಕಾರವಾಗಿ ಹರಿಯುತ್ತಿತ್ತು. ಹೌದು ನಾನು ಚಂಡಾಳಿ!....ಪಾಪಿ!....ಮಹಾಪಾಪಿ!....ವ್ಯಭಿಚಾರಿ!....ಅಪ್ಪ....ಮಗ ಇಬ್ಬರನ್ನೂ ಬಳಸಿದವಳು!....ಹೆತ್ತ ಕೂಸನ್ನು ಕೈಯ್ಯಾರ ಕೊಂದವಳು!....ತಾಯಿಯ ದುರ್ಮರಣಕ್ಕೆ ಕಾರಣಳು!....ಇಂದು ಡಾಕ್ಟರ್ ಅನ್ನೂ ಬಳಸಿದವಳು....ನನ್ನನ್ನು ನಮ್ಮ ತಂದೆತಾಯಿಗಳು ಯಾರಿಗೆ ಲಗ್ನ ಮಾಡಿಕೊಟ್ಟಿದ್ದರೊ ಆ ನನ್ನ ಪತಿಗೆ ಹುಟ್ಟಿದ ಹೆಣ್ಣುಮಗುವಿನ ಆತ್ಮಹತ್ಯಕ್ಕೂ ಕಾರಣವಾದವಳು!....ಪಂಚಮಹಾಪಾತಕಿ!....ಹುಟ್ಟಿದ ಮನೆ, ಸೇರಿದ ಮನೆ ಎರಡರ ಹೆಸರನ್ನೂ ಯಕ್ಕುಟ್ಟಿಸಿದ ಕತ್ತೆರಂಡೆ! ನಾನು ಇನ್ನು ಬದುಕಿರಬಾರದು ಈ ಭೂಮಿ ಮೇಲೆ....ಆಗುತ್ತಿರುವ ಅಡಿಗೆಯನ್ನು ಉಣದೆ ಆ ಮಗುವೇ ನೇಣ್ಹಾಕಿಕೊಂಡಿರುವಾಗ, ನಾನಿದ್ದು ಉಣಬೇಕೇನು!?....

ಹೀಗೆಂದವಳೆ ಇನ್ನೊಂದು ಹಗ್ಗ ತೆಗೆದುಕೊಂಡುಬಂದು, ಬಾಗಿಲಮೇಲೆ ಹತ್ತಿ ನಿಂತುಕೊಂಡು, ಮಗಳು ನೇಣುಹಾಕಿಕೊಂಡಿದ್ದ ಸರಕ್ಕೇನೆ, ಭದ್ರವಾಗಿ ಹಗ್ಗಬಿಗಿದು ಕಟ್ಟಿ, ಕೊರಳಿಗೆ ಬೀರಿಕೊಂಡು ನೆಗೆದಳು.

ಮಾದಪ್ಪನ ಮಗಳೊಬ್ಬಳು ಅಪಮಾರ್ಗಕ್ಕಿಳಿದ ಫಲವಾಗಿ ಅರ್ಥಹಾನಿ, ಮಾನಹಾನಿ, ಕೊನೆಗೆ ಪ್ರಾಣಹಾನಿಯಾಗಿ ಬೆಂಗ

ಕೂಡ ಮಾದಪ್ಪನ ಮನೆ ಹೇಳಹೆಸರಿಲ್ಲವಾಗಿಹೋಯಿತು. ಉಳಿ
ಎರಡು ಮನೆಗಳೇನು ಉದ್ಧಾರವಾದವೇನು? ಅದೂ ಇಲ್ಲ
ಬೇಕಾದಹಾಗೆ ಸಂಪಾದನೆ ಮಾಡಿದರು ಆದರೆ ಅದೆಲ್ಲ ಬಸವಣ್ಣ
ವರು ಹೇಳುವಂತೆ 'ಪಾಪಿಮಧನ ಪ್ರಾಯಶ್ಚಿತ್ತಕ್ಕಲ್ಲದೆ ಸತ್ಪಾತ್ರಕ್ಕೆ
ಸಲ್ಲುವುದೇನಯ್ಯ? ...ನಾಯಿಯ ಹಾಲು ನಾಯಿಗಲ್ಲದೆ ಪಂಚಾ
ಮೃತಕ್ಕೆ ಸತ್ಪಾತ್ರಕ್ಕೆ ಸಲ್ಲುವುದೇನಯ್ಯ' ಅಂದಹಾಗಾಯಿತು
ಒಬ್ಬರ ಮನೆಯನ್ನು ನಾವು ಹಾಳುಮಾಡಿದರೆ ನಮ್ಮ ಮನೆ ಉದ್ಧಾ
ರವಾಗುತ್ತದೆಯೆ? ಎಂದಿಗೂ ಇಲ್ಲವಾದ ನಡವಳಿಕೆ ನಮ್ಮದಾ
ದ್ದರೆ, ಅಸತ್ಯವಾದ ಶುದ್ಧವಾದ ನಮ್ಮ ಆಚರಣೆಯು ನಮ್ಮಂ
ಮುಳುಗುವವನ ಹಿಂದೆ ಬೆಂಡು ಇದ್ದಹಾಗೆ ಇರುತ್ತದೆ. ಪಾಪ
ಸುಳಿಯಲ್ಲಿ ಸಿಕ್ಕಿದವರು ಉಳಿದು ಬರುವುದೆಲ್ಲಾದರೂ ಉಂಟೆ
ಎಂದೆಂದೂ ಸಾಧ್ಯವಿಲ್ಲ. ಅವರನ್ನು ಉಳಿಸುತ್ತೇನೆಂದು ಅವರನ್ನು
ಮೇಲಕ್ಕೆ ಎಳೆದುಕೊಳ್ಳಲು ರಟ್ಟೆ ನೀಡಿದರೆ, ಪಾಪದ ಸುಳಿಯ
ಮುಳುಗುತ್ತಿರುವವನು ರಟ್ಟೆ ನೀಡಿದವನನ್ನು ಅವನ ಸಹಿತ ಎಳೆ
ಕೊಳ್ಳುತ್ತಾನೆ ಇಬ್ಬರೂ ಸುಳಿಯಲ್ಲಿ ಸಿಕ್ಕಿ ಮುಳುಗುತ್ತ ಕಂ
ಬಿಡುತ್ತಾರೆ. ಅದು ಮಾತ್ರ ಸತ್ಯ.

ಮಾದಪ್ಪನ ಮನೆ ಅಡಿಗೆಮನೆಯಲ್ಲಿ ತಾಯಿ ಮಗಳ
ಇಬ್ಬರೂ ಒಂದೇ ಸರಕ್ಕೆ ನೇಣುಹಾಕಿಕೊಂಡು ಸತ್ತಿರುವುದ
ಯಾರು ಯಾರಿಗೆ ಸುತ್ತಿಕೊಳ್ಳುತ್ತದೋ ಏನೋ? ...ಸು
ಕೊಳ್ಳಲಿ...ಅನುಭವಿಸಲಿ ... ಪಾಪಕ್ಕೆ ಅಂಜದವರು, ಸತ್ಯ
ಶರಣು ಹೋಗದವರು ಶಿಕ್ಷಾರ್ಹರೇ ಹೌದು!

ಕ್ಕಪೇಟೆ, ಬೆಂಗಳೂರು ಸಿಟಿ.

ಬರಲಿರುವ ಪ್ರಕಾಶನ:

ತಿಳಿಹದಿಗೆ ಬಗೆಗೆಟ್ಟ, ಬದುಕು ಮುರಿದ,

ನೆಲೆಗಾಣದ ಹೆಣ್ಣು ಹೆಣಗಳ ಸಾಲು ಸಾಲು!

— ಸಮಾಜದ ಸಮಾಧಿ ದೇವಸ್ಥಾನದ —

ರೂಪದಲ್ಲಿ ನಿರ್ಮಿತವಾಗುತ್ತಿದೆ.

ಧರ್ಮದ ಹೆಸರಿನಲ್ಲಿ

ಕಾದಂಬರಿಕಾರ:

ಹೆಚ್. ಕೆ. ವಿಜಯನಾರಸಿಂಹ.

ಕಳಾನಿಧಿ ಮುದ್ರಣಾಲಯ, ಚಿಕ್ಕಪೇಟೆ, ಬೆಂಗಳೂರು—೨